ಸುವರ್ಣೋತ್ಸವ ಮಾಲಿಕೆ

ಸ್ವಾತಂತ್ರ್ಯೋತ್ತರ ಭಾರತ

ಅವಲೋಕನ 1947- 1997

ಪ್ರಧಾನ ಸಂಪಾದಕ

ಡಾ|| ಜಿ. ರಾಮಕೃಷ್ಣ

ಸ್ವಾತಂತ್ರ್ಯಕ್ಕೆ ಐವತ್ತು ವರ್ಷ

ವ್ಯಾಸರಾಯ ಬಲ್ಲಾಳ

ನವಕರ್ನಾಟಕ ಪ್ರಕಾಶನದ ೯೪೯ನೇ ಪ್ರಕಟಣೆ

ಸುವರ್ಣೋತ್ಸವ ಮಾಲಿಕೆ

ಸ್ವಾತಂತ್ರ್ಯೋತ್ತರ ಭಾರತ – ಅವಲೋಕನ 1947-1997

ಪ್ರಧಾನ ಸಂಪಾದಕ

ಡಾ॥ ಜಿ. ರಾಮಕೃಷ್ಣ

*

ಸ್ವಾತಂತ್ರ್ಯಕ್ಕೆ ಐವತ್ತು ವರ್ಷ

ಲೇಖಕರು : **ವ್ಯಾಸರಾಯ ಬಲ್ಲಾಳ**

ನವಕರ್ನಾಟಕ ಪ್ರಕಾಶನ

SWAATANTRYAKKE AIVATTU VARSHA
Collection of Articles in Kannada in the series INDEPENDENT INDIA – Perspective 1947-1997, by Vyasaraya Ballala.
Brought out to commemorate the golden jubilee of Independent India.
Chief Editor : Dr. G. Ramakrishna

First Edition : 1998 **Pages : 104** **Price : Rs. 35**

ಮೊದಲನೇ ಮುದ್ರಣ: 1998

ಬೆಲೆ : ರೂ. 35

ಮುಖಪುಟ ವಿನ್ಯಾಸ : ನವಕರ್ನಾಟಕ ಕಲಾವಿಭಾಗ

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001

ಶಾಖೆಗಳು

ಕೆಂಪೇಗೌಡ ವೃತ್ತ	ಕೆ. ಎಸ್. ರಾವ್ ರಸ್ತೆ	ರಾಮಸ್ವಾಮಿ ವೃತ್ತ	ಸ್ಟೇಷನ್ ರಸ್ತೆ
ಬೆಂಗಳೂರು - 9	ಮಂಗಳೂರು-1	ಮೈಸೂರು-24	ಗುಲ್ಬರ್ಗಾ-2

0103980949 **ISBN 81-7302-330-1**

Printed by R. S. Rajaram at Navakarnataka Printers, No. 167 & 168, 10th Main, III Phase, Peenya Industrial Area, Bangalore 560058 and published by him for Navakarnataka Publications (P) Ltd., Embassy Centre, Crescent Road, P. B. 5159, Bangalore 560001 (INDIA). Typeset at Trilok Typesetters (Jain), Chamarajpet, Bangalore 560018

ಅರ್ಪಣೆ

ಆತ್ಮೀಯರಾದ

ಶ್ರೀ ಬಿ. ಎ. ಸನದಿ

ಇವರಿಗೆ

ಮುಂಬಯಿಯ ದೀರ್ಘ ಕಾಲದ

ಒಡನಾಟದ ನೆನಪಿಗೆ

ಪರಿವಿಡಿ

ಎರಡು ಮಾತು

ಒಂದು ರಾಷ್ಟ್ರದ ಇತಿಹಾಸದಲ್ಲಿ 50 ವರ್ಷ ಅಷ್ಟೇನು ಮಹತ್ವದ ಕಾಲ ಖಂಡವೆಂದು ಹೇಳಲಾಗುವುದಿಲ್ಲವಾದರೂ, ಆ ರಾಷ್ಟ್ರದ ರಾಷ್ಟ್ರೀಯವೆನಿಸುವ ಸಂಸ್ಕಾರಗಳನ್ನು ಗುರುತಿಸಲು ಅರ್ಧ ಶತಮಾನವೂ ಹೆಚ್ಚೇ ಎಂದು ಹೇಳಬಹುದು. ನಮ್ಮ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಭಾರತದ ಉಪಖಂಡದಲ್ಲಿ ರಾಷ್ಟ್ರೀಯವೆನಿಸುವ ಅಸ್ಮಿತೆಯನ್ನು ಅಭಿಮಾನದಿಂದ ಸೂಚಿಸಬಹುದಾದ, ಎದ್ದು ಕಾಣುವ, ವೈಶಿಷ್ಟ್ಯಗಳೇನು ಎಂದು ಕೇಳುವ ಪ್ರಶ್ನೆಗೆ ಉತ್ತರ ಹೇಳಲು ಅನುಮಾನಿಸ ಬೇಕಾದ ಸಾಮಾಜಿಕ ಸಂದರ್ಭ ನಮ್ಮದಾಗಿದೆಯೆಂಬ ನೋವೇ ಈ ಕೃತಿಯ ಲೇಖನಗಳಿಗೆ ಮುಖ್ಯ ಪ್ರೇರಣೆ. ವಿಶ್ವದ ಅತ್ಯಂತ ಭ್ರಷ್ಟ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಎದ್ದು ಕಾಣುವುದು ಅಭಿಮಾನ ಸೂಚಕವೆ! 'ಇಂದಿನ ಸಾಮಾಜಿಕ ಸಂದರ್ಭದಲ್ಲಿ ನಾನು ಭಾರತೀಯನೆಂದು ಕರೆಸಿಕೊಳ್ಳಲು ನಾಚಿಕೆ ಪಡುತ್ತೇನೆ' ಎಂದು ನಾಡಿನ ಗೌರವಾರ್ಹ ಹಿರಿಯರು ಹೇಳುವಂತಾದ ಪರಿಸ್ಥಿತಿ ಭಾರತವನ್ನು ತಾಯ್ನಾಡೆಂದು ಗುರುತಿಸುವ ಎಲ್ಲರಲ್ಲಿ ಕೊಡಬಹುದಾದ ನೋವನ್ನು ಗ್ರಹಿಸಿಯೇ ಈ ಸಂಗ್ರಹದ ಲೇಖನಗಳನ್ನು ನಾನು ಬರೆದಿದ್ದೇನೆ.

1996ರಲ್ಲಿ ಪ್ರಕಟವಾದ ನನ್ನ 'ಕಟ್ಟುವೆವು ನಾವು' ಎಂಬ ಚಿಂತನಪರ ಲೇಖನಗಳ ಸಂಗ್ರಹದಲ್ಲಿ 1947ರಲ್ಲಿ ಭಾರತದ ವಿಭಜನೆಗೆ ಕಾರಣವಾದ ಮೌಂಟ್‌ಬ್ಯಾಟನ್ ಯೋಜನೆಯನ್ನು ವಿರೋಧಿಸಿ ಬರೆದ ಲೇಖನದ ಜತೆಗೆ, ಮುಂದೆ 1992 ದಶಂಬರ ಹಾಗೂ 1993 ಜನವರಿಯಲ್ಲಿ ಮುಂಬಯಿಯಲ್ಲಿ ನಡೆದ ಜಾತೀಯ ಹತ್ಯಾಕಾಂಡ ದಿಂದ ನನಗುಂಟಾದ ನೋವಿನ ಹಿನ್ನೆಲೆಯಲ್ಲಿ ಬರೆದ ಲೇಖನವೂ ಸೇರಿದಂತೆ, ಕಾಲಕಾಲಕ್ಕೆ ನಾನು ಮುಂಬಯಿಯ 'ತಾಯಿನುಡಿ' ಹಾಗೂ ಮಣಿಪಾಲದ 'ಉದಯವಾಣಿ', 'ತರಂಗ' ಮೊದಲಾದ ಪತ್ರಿಕೆಗಳಲ್ಲಿ ಬರೆದ ಕೆಲವು ಲೇಖನಗಳನ್ನೂ ಸಂಗ್ರಹಿಸಿ ಪ್ರಕಟಿಸಿದ್ದೆ. 1977ರಲ್ಲಿ ಭಾರತದ ತುರ್ತುಪರಿಸ್ಥಿತಿಯ ಅಧ್ಯಾಯ ಮುಗಿದ ನಂತರ ಜನತಾ ಸರಕಾರ ಅಧಿಕಾರ ವಹಿಸಿಕೊಂಡಾಗ ನಾನು ಬರೆದ ಒಂದು ಲೇಖನ 'ಎರಡು ಅಧ್ಯಾಯ, ಒಂದು ವಿಶ್ಲೇಷಣೆ', 'ಕಟ್ಟುವೆವು ನಾವು' ಸಂಗ್ರಹ ಪ್ರಕಟಿಸುವಾಗ ದೊರಕಲಿಲ್ಲವಾಗಿ ಆ ಲೇಖನದ ವಿಚಾರಗಳ ಪ್ರಸ್ತುತತೆ ಇನ್ನೂ ಮಾಸಿಲ್ಲವೆಂಬ ನಂಬಿಕೆಯಿಂದ ಅದನ್ನು ಈ ಸಂಗ್ರಹದಲ್ಲಿ 'ಅನುಬಂಧ'ವಾಗಿ ಸೇರಿಸಿಕೊಂಡಿದ್ದೇನೆ.

ನಮ್ಮ ಸ್ವಾತಂತ್ರ್ಯ ಹೋರಾಟದ ಕೊನೆಯ ಘಟ್ಟದಲ್ಲಿ ನಮ್ಮ ಹೋರಾಟದ ಕುರಿತ ಭಾವನಾತ್ಮಕ ಸಂಬಂಧವಿದ್ದ ನನಗೆ, ಮೂರು ವರ್ಷ ಕಾಲ ಮುಂಬಯಿಯ

ಒಂದು ರಾಜಕೀಯ ಸಾಪ್ತಾಹಿಕದಲ್ಲಿ ಪತ್ರಿಕೋದ್ಯಮಿಯಾಗಿಯೂ ದುಡಿದಿದ್ದ ನನಗೆ, 50 ವರ್ಷ ಕಳೆದ ಮೇಲೆ ಈ ಸುವರ್ಣೋತ್ಸವದ ಸಂದರ್ಭದಲ್ಲಿ ನಮಗೆ ಅಭಿಮಾನ ಪಡಬಹುದಾದ ರಾಷ್ಟ್ರೀಯವೆನಿಸುವ ಚಾರಿತ್ರವೇನಾದರೂ ಇದೆಯೇ ಎಂಬ ನೋವು ಕಾಡುತ್ತಿರುವುದು ಇಂದು ನಾವೇ ಬೆಳೆಸಿರುವ, ನಮ್ಮ ರಾಷ್ಟ್ರೀಯ ಸಂಸ್ಕಾರಗಳೇನೋ ಎಂದು ಗುರುತಿಸಬಹುದಾದ ಎರಡು ರೋಗಗಳಿಂದ – ಜಾತೀಯತೆ ಮತ್ತು ಭ್ರಷ್ಟಾಚಾರ. ಈ ಸಂಗ್ರಹದ ಲೇಖನಗಳೆಲ್ಲ ಈ ಕುರಿತ ವಿಶ್ಲೇಷಣೆಯೇ ಆಗಿದೆ.

ನಾನು ಈ ಲೇಖನಗಳನ್ನು ಬರೆಯುತ್ತಿದ್ದ ಸಂದರ್ಭದಲ್ಲಿ 'ನವಕರ್ನಾಟಕ ಪ್ರಕಾಶನ'ದ ಮಿತ್ರರಾದ ಶ್ರೀ ಆರ್. ಎಸ್. ರಾಜಾರಾಮ್ ಮತ್ತು ಅವರ ಸಹಚರರು ಈ ಲೇಖನಗಳನ್ನು ಬರೆದು ಮುಗಿಸುವಂತೆ ಪ್ರೋತ್ಸಾಹಿಸಿದವರು, ಮುಂದೆ ಪ್ರಕಟಣೆಗೂ ನೆರವಾದವರು. ಅವರು ನನ್ನ ವಿಚಾರ ತೋರುತ್ತಲೇ ಬಂದಿರುವ ಪ್ರೀತಿ ಅಭಿಮಾನಗಳೇ ಈ ಕೃತಿ ಅವರ ಸುವರ್ಣೋತ್ಸವ ಮಾಲಿಕೆಯಲ್ಲಿ ಪ್ರಕಟವಾಗಲು ಮುಖ್ಯ ಕಾರಣ. 'ನವಕರ್ನಾಟಕ'ದ ಎಲ್ಲ ಬಂಧುಗಳಿಗೂ ಇದಕ್ಕಾಗಿ ನಾನು ಅತ್ಯಂತ ಕೃತಜ್ಞ. ಡಾ॥ ಜಿ. ರಾಮಕೃಷ್ಣ ಅವರು ನಾಡಿನ ಪ್ರಮುಖ ಬುದ್ಧಿಜೀವಿ. ಆಳವಾದ ವೈಚಾರಿಕತೆ, ಪಕ್ವವಾದ ಸಾಮಾಜಿಕ ಚಿಂತನೆ, ವೈಜ್ಞಾನಿಕವೆನಿಸುವ ದೃಷ್ಟಿಕೋನ ಇವುಗಳಿಂದ ನಮ್ಮ ಸಾಮಾಜಿಕ ಆಶಯಗಳಿಗೆ, ಪರಿವರ್ತನೆಗಳಿಗೆ, ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿರುವವರು. ಅವರು ತಮ್ಮ ಚಿಕಿತ್ಸಕ ದೃಷ್ಟಿಯ ತಿಳಿವಳಿಕೆಯಿಂದ ಈ ಕೃತಿಯ ಆಶಯವನ್ನು ಪರಿಚಯಿಸುತ್ತ ಶುಭಾಶಯದ ಎರಡು ಮಾತು ಬರೆದಿದ್ದಾರೆ. ಅವರಿಗೆ ನಾನು ತುಂಬ ಕೃತಜ್ಞ. ಈ ಸಂಗ್ರಹದ ಮೊದಲ ಲೇಖನ 'ಸಂಚಯ' ಎಂಬ ಸಾಹಿತ್ಯಕ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರ ಸಂಪಾದಕರಿಗೂ ನಾನು ಕೃತಜ್ಞ.ಅತ್ಯಲ್ಪ ಅವಧಿಯಲ್ಲಿ ಈ ಕೃತಿಯನ್ನು ಸುಂದರವಾಗಿ ಮುದ್ರಿಸಿ ತಮ್ಮ ಸ್ವಾತಂತ್ರ್ಯ ಸುವರ್ಣೋತ್ಸವ ಮಾಲಿಕೆಯಲ್ಲಿ ಪ್ರಕಟಿಸಿರುವ ನವಕರ್ನಾಟಕ ಬಳಗದ ಎಲ್ಲ ಬಂಧುಗಳಿಗೂ ನನ್ನ ಕೃತಜ್ಞತೆ ಸಲ್ಲಬೇಕು.

ವ್ಯಾಸರಾಯ ಬಲ್ಲಾಳ

1064, ಉತ್ತರಾಯಣ
ಕುಮಾರಸ್ವಾಮಿ ಬಡಾವಣೆ
ಮೊದಲನೆಯ ಹಂತ
ಬೆಂಗಳೂರು-560 078

ಓದುಗರೊಂದಿಗೆ....

ನಾವು ರಾಜಕೀಯವಾಗಿ ಸ್ವಾತಂತ್ರ್ಯವನ್ನು ಹೊಂದಿ ಐದು ದಶಕಗಳು ಕಳೆದಿವೆ. ಈ ಅವಧಿಯಲ್ಲಿ ನಡೆದಿರುವ ಚುನಾವಣೆಗಳಿಗೆ ಲೆಕ್ಕವಿಲ್ಲ. ಪಂಚಾಯಿತಿಯಿಂದ ಪಾರ್ಲಿಮೆಂಟ್‌ವರೆಗೆ ಪ್ರತಿವರ್ಷ ಒಂದಲ್ಲ ಒಂದು ದೊಡ್ಡ ಚುನಾವಣೆ ಇದ್ದೇ ಇದೆ. ಈಗಂತೂ 'ಜೋತಾಡುವ ಲೋಕಸಭೆ' ಎಂಬ ಹೆಸರಿನಲ್ಲಿ ಸದಾ ''ಮುಂದಿನ ಚುನಾವಣೆ ಯಾವಾಗ'' ಎನ್ನುವ ಪರಿಸ್ಥಿತಿ ಇದೆ. ಹಿಂದೆಯೂ ಲೋಕಸಭೆ ಎರಡು ಮೂರು ಬಾರಿ ಜೋತಾಡುವ ಲಕ್ಷಣಗಳನ್ನು ಹೊಂದಿದ್ದಿತು. ಆದರೂ ಅದು ಬೇಗ ಬೇಗ ಕುಸಿದು ಬಿದ್ದಿರಲಿಲ್ಲ. ರಾಜಕೀಯ ಸ್ವಾತಂತ್ರ್ಯವೆಂದರೆ ಬಹುಶಃ ಆಗಿಂದಾಗ್ಗೆ ಮತ ಚಲಾಯಿಸುವ ಹಕ್ಕನ್ನು ಪಡೆಯುವುದು ಎಂಬರ್ಥ ಈಗ ನಮ್ಮಲ್ಲಿ ವ್ಯಾಪಕವಾಗಿ ಚಾಲ್ತಿಯಲ್ಲಿದೆ.

ಚುನಾವಣೆಗಳ ಸ್ವರೂಪ ಹೇಗೆ ಪರಿವರ್ತನಗೊಳ್ಳುತ್ತಿದೆಯೆಂಬುದನ್ನು ಅಂಕಿ-ಸಂಖ್ಯೆಗಳ ಆಧಾರದಿಂದ ನಿರೂಪಿಸಬೇಕಾಗಿಲ್ಲ. ಉಮೇದುವಾರರನ್ನು ಹಿಡಿಯುವುದೇ ಕಷ್ಟವೆನಿಸುತ್ತಿದ್ದ ಸಾಮಾನ್ಯ ಕಾಲೇಜು ಅಧ್ಯಾಪಕ ಸಂಘಗಳ ಚುನಾವಣೆಗಳು ಸಹ ಈಚಿನ ದಿನಗಳಲ್ಲಿ ಧಾಂ-ಧೂಂ ಎಂದು ನಡೆಯುವ ಸನ್ನಿವೇಶ ನಮ್ಮದಾಗಿದೆ. ಕೋಟಿಗಳೆಂದರೆ ಕೆಲವು ಸಾವಿರಗಳೇನೋ ಎಂಬಂತೆ ಹಣ ಹರಿಯಬಿಡುವ ಜನ ಲೋಕಸಭಾ ಚುನಾವಣೆಗಳಲ್ಲಿ ಕೆಲವು ಪಕ್ಷಗಳ ಅಧಿಕೃತ ಅಭ್ಯರ್ಥಿಗಳಾಗುವುದು ಈಗ ಸರ್ವೇಸಾಮಾನ್ಯ. ಹಾಗೆ ಹರಿಯಬಿಡಲು ಅಶಕ್ತನಾಗಿದ್ದರೆ ಅವನು ತನ್ನ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದರೂ ಚುನಾವಣೆಗಳಲ್ಲಿ ಉಮೇದುವಾರನಾಗಲಾರ. ಇದಕ್ಕೆ ಹೊರತಾದ ಪಕ್ಷಗಳು ಹಾಗೂ ವ್ಯಕ್ತಿಗಳು ಇಲ್ಲವೇ ಇಲ್ಲವೆಂದಲ್ಲ. ಆದರೆ ಚುನಾವಣಾ ವೆಚ್ಚದ ಸಮುದ್ರದಲ್ಲಿ ಇದು ಎಲ್ಲಿ ಗಣನೆಗೆ ಬಂದೀತು!

ಇಷ್ಟೆಲ್ಲಾ ಹಣ ಎಲ್ಲಿಂದ ಬರುತ್ತದೆ? ಉದ್ಯೋಗ, ಕೃಷಿ, ಸೇವಾಕ್ಷೇತ್ರಗಳು, ಮುಂತಾದ ವಿಭಾಗಗಳಲ್ಲಿ ಹೇರಳವಾಗಿ ಲಾಭ ಮಾಡಿಕೊಂಡಿರುವವರಾದರೆ ಅದೊಂದು ರೀತಿ; ಆದರೆ ಚುನಾವಣಾ ಕಣದಲ್ಲಿ ಸೆಣಸಾಡುವವರೆಲ್ಲ ಈ ಹಿನ್ನೆಲೆಗಳಿಂದ ಬಂದಿರುತ್ತಾರೆಂದು ಭಾವಿಸಲಾಗದು. ಅವರಲ್ಲಿ ಎಷ್ಟೋ ಜನ ರಾತ್ರೋರಾತ್ರಿ ಶ್ರೀಮಂತರಾಗುವಂತಹವರು. ಶ್ರೀಮಂತರಾಗಬಾರದೆಂದು ಯಾರೂ ಹೇಳುವುದಿಲ್ಲ; ಆದರೆ ಹೇಗೆ ಮತ್ತು ಎಷ್ಟು ಜಾಗ್ರತೆ ಆಗಬಹುದೆಂಬ ಜಿಜ್ಞಾಸೆ ಮುಖ್ಯವಾದುದು. ವ್ಯಕ್ತಿತ್ವದ ಘನತೆಯುಳ್ಳವರು 'ಬಾಯ್ದಂಬುಲಕೆ ಕೈಯಾನುವರೆ' ಎಂದು ಕುಮಾರ ವ್ಯಾಸನು ಕೃಷ್ಣನ ಬಾಯಲ್ಲಿ ಹೇಳಿಸಿದ್ದಾನೆ. ನಮ್ಮಲ್ಲಿ ಎಂತಹ ವಿಪರ್ಯಾಸ

ವಿದೆಯೆಂದರೆ 'ಬಾಯ್ದಂಬುಲಕ್ಕೇ ಕೈಯಾನುವವರ' ಘನತೆಗೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕುತ್ತುಂಟಾಗಿಲ್ಲ. ಉದಾತ್ತ ಮೌಲ್ಯಗಳ ಪ್ರತಿಪಾದನೆ ಮಾಡುತ್ತಲೇ ಸಾರ್ವಜನಿಕ ಆಸ್ತಿಯನ್ನು ಲಪಟಾಯಿಸುವವರ ಬಗ್ಗೆ ಜನಸಾಮಾನ್ಯರಿಗೆ ಇನ್ನೂ ಅಸಹ್ಯ ಉಂಟಾಗಿಲ್ಲ. ತಮಗೂ ಅಂತಹ ಅದ್ಭುತ ಅವಕಾಶ ಎಂದು ದೊರಕುತ್ತದೋ ಎಂದು ತವಕದಿಂದ ಕಾದು ನಿಂತಿರುವವರಿಗೆ ಅಸಹ್ಯ ಹೇಗೆ ತಾನೆ ಉಂಟಾದೀತು!

ಇದನ್ನು ಪ್ರಸ್ತಾಪ ಮಾಡಿದ್ದು ನಮ್ಮ ದೇಶದಲ್ಲಿ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರದ ಮೂಲದ ಬಗ್ಗೆ ಗಮನ ಸೆಳೆಯುವುದಕ್ಕಾಗಿ. ಪ್ರತಿಯೊಂದು ಹಂತದಲ್ಲೂ ಲಂಚವು ಪ್ರಮುಖ ಸ್ಥಾನ ಪಡೆದಿರುವ ಸಂದರ್ಭದಲ್ಲಿ ವ್ಯಕ್ತಿಯ ಸ್ವಾಭಿಮಾನ ಸೊನ್ನೆಯೆಂದೇ ಹೇಳಬೇಕು. ಯಾವ ನಾಚಿಕೆಯೂ ಇಲ್ಲದ ಅಯೋಗ್ಯ ಮಾತ್ರ ಲಂಚವನ್ನು ಒಂದು ಸಾಮಾಜಿಕ ಅರ್ಬುದ ರೋಗವಲ್ಲವೆಂದು ಹೇಳಲು ಸಾಧ್ಯ. ''ಇಂತಿಷ್ಟು ಕೊಟ್ಟರೆ ಇಂತಿಂತಹ ಹೇಸಿಗೆಯ ಕೆಲಸ ಮಾಡಲು ನಾನು ಸಿದ್ಧನಿದ್ದೇನೆ,'' ಎಂಬುದು ವೈದಿಕ ಸಾಹಿತ್ಯದ ಕಾಲದಿಂದ ನಡೆದುಬಂದಿರುವ ಒಂದು ದುಷ್ಟಪದ್ಧತಿ. ಇದನ್ನು ''ಅಜೀಗರ್ತ ಸಂಸ್ಕೃತಿ'' ಎಂದು ಕರೆಯಬಹುದು. ಐತರೇಯ ಬ್ರಾಹ್ಮಣವೆಂಬ ಗ್ರಂಥದಲ್ಲಿ ಬರುವ ಹರಿಶ್ಚಂದ್ರೋಪಾಖ್ಯಾನದ ಒಂದು ಪಾತ್ರ ಅಜೀಗರ್ತನದು. ಅವನು ಶುನಶ್ಶೇಪನ ತಂದೆ. ಅವನೇನೂ ಕಡುಬಡವನಲ್ಲ; ಆದರೂ ಬಾಚಿಕೊಳ್ಳುವ ದುರಾಸೆ ಅವನದು. ತನ್ನ ಮಗನನ್ನು ನೂರೋ ಸಾವಿರವೋ ಸುವರ್ಣಗಳಿಗೆ ಮಾರಿದ್ದು ಸಾಲದೆಂಬಂತೆ ಅವನನ್ನು ಯಜ್ಞದಲ್ಲಿ ಕಂಭಕ್ಕೆ ಕಟ್ಟಿಹಾಕಲು ಇಷ್ಟು ಕೊಡು, ಅವನ ತಲೆ ಕಡಿಯಲು ಇಷ್ಟು ಕೊಡು, ಎಂದು ಕೈಚಾಚುವವನು ಅವನು. ನಮ್ಮ ವಿಧಾನಸೌಧದಂತಹ ಭವ್ಯ ಕಟ್ಟಡಗಳಲ್ಲಿ ಈ ಪೀಳಿಗೆಯ ಕ್ರಿಮಿಗಳು ಸಾವಿರಾರು ತುಂಬಿಕೊಂಡಿವೆ. ಎನ್ರಾನ್, ಕೊಜೆಂಟ್ರಿಕ್ಸ್, ಪೆಪ್ಸಿ, ಪೀತ್ಸಾ, ಕೆಂಟಕಿ, ಕಾರ್ಗಿಲ್, ಮುಂತಾದ ವಿಷಜಂತುಗಳು ನಮ್ಮನ್ನು ಕೊಲ್ಲಲು ಸುತ್ತುವರಿಯಲು ಸಾಧ್ಯವಾಗಿರುವುದು ಇಂತಹ ಅಜೀಗರ್ತ ಸಂತತಿಯವರಿಂದಲೇ.

ಇಲ್ಲಿ ರಾಷ್ಟ್ರದ ಪರಂಪರೆ, ವ್ಯಕ್ತಿತ್ವ, ಸಾಧನೆ, ಆಕಾಂಕ್ಷೆ, ಮುಂತಾದುವಕ್ಕೆ ಪ್ರಾಶಸ್ತ್ಯವಿಲ್ಲ. ರಕ್ಷಣಾ ಸಚಿವಾಲಯದ ಯಾವುದೇ ಗುಪ್ತ ಸಮಾಚಾರಗಳನ್ನು ಅಥವಾ ಭೂಪಟಗಳನ್ನು ಹೊರಗಿನವರಿಗೆ ಮಾರುವ ಬೇಹುಗಾರನಿಗೆ ವ್ಯಕ್ತಿತ್ವವೇನು, ಸಂಸ್ಕೃತಿಯೇನು? ಅವನಿಗೆ ಜಾತಿ, ಮತ, ಮುಂತಾದ ಕಟ್ಟುಗಳೂ ಇಲ್ಲ! ಬೇರೆ ಸಂದರ್ಭಗಳಲ್ಲಿ ತನ್ನತನವನ್ನು ಗುರುತಿಸಿಕೊಳ್ಳುವುದು ಇಂತಹ ವಿಭಜಕ ಸೂತ್ರಗಳಿಂದ; ಅಂದರೆ, ಸಮಷ್ಟಿ ಪ್ರಜ್ಞೆಯು ಅವನಿಗೆ ನೈತಿಕ ಅಡಿಪಾಯವನ್ನು ಒದಗಿಸುವುದಿಲ್ಲ. ದೇಶ ಮತ್ತು ಸಮುದಾಯದ ಗೊಡವೆ ನನಗೇಕೆ; ನಾನುಂಟು, ನನ್ನ ಕೋಟಿಗಳುಂಟು, ಎಂಬುದು ಅವನ ಜೀವನಸಾರ ಸಂಗ್ರಹ. ಇಂತಹ ವಾತಾವರಣದಲ್ಲಿ ನಾಗರಿಕನ ಜವಾಬ್ದಾರಿ ಮತ್ತು ಪರಸ್ಪರ ಹೊಂದಾಣಿಕೆಯ ಮಾತೇ ಬರುವುದಿಲ್ಲ. ''ಯಾರೊಬ್ಬರು

ಹಿಂದುಳಿಯದಿರಿ, ಸೇರಿಸಿಕೊಳ್ಳಿರಿ ಹಸುಳೆಗಳ,'' ಎಂಬ ಸಾಮುದಾಯಿಕ ಪ್ರಜ್ಞೆಗೆ ಬೇಕಾದ ತಳಹದಿಯ ರಚನೆಗೆ ನಾವು ಇಂಬುಕೊಟ್ಟಿಲ್ಲದಿರುವುದು ಒಂದು ದುರಂತ, ಎಂದಷ್ಟೇ ಹೇಳಬಹುದು.

ನಾವು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಹೆಣಗಿದ್ದಾದರೂ ಏಕೆ? ಖಾಸಗಿಯಲ್ಲಿ ಅತಿ ಖಾಸಗಿತನವನ್ನು ಬೆಳೆಸಿ ಕೆಲವರು ಕೊಬ್ಬುವಂತೆ ಮಾಡಲು ಸರ್ವಥಾ ಅಲ್ಲವೆಂಬುದು ಗಾಂಧೀಜಿಯವರ 'ಸರ್ವೋದಯ' ಕಲ್ಪನೆಯಲ್ಲಿ, ಭಗತ್ ಸಿಂಗ್‌ರಂತಹ ದಿಟ್ಟ ಹೋರಾಟಗಾರರ ಉದ್ದೇಶಗಳಲ್ಲಿ, ಮತ್ತು ವೈಜ್ಞಾನಿಕ ಸಮಾಜವಾದಕ್ಕಾಗಿ ನಿರಂತರ ಶ್ರಮಿಸುವ ದುಡಿಯುವ ಜನರ ಪ್ರತೀಕ್ಷೆಗಳಲ್ಲಿ ಸ್ಪಷ್ಟವಾಗಿದೆ. ಆದರೆ ನಮ್ಮ ವ್ಯವಸ್ಥೆಯು ರಾಚನಿಕವಾಗಿ ಅಂತಹ ಆಶಯಗಳ ಈಡೇರಿಕೆಗೆ ಸಮರ್ಥವಾಗಿವೆಯೆ? ನನ್ನ ವೈಯಕ್ತಿಕ ನೈತಿಕ ಮತ್ತು ಸಾಮಾಜಿಕ ಪ್ರಜ್ಞೆಯು ಸಮುದಾಯದ ಹಿತಕ್ಕೆ ವಿರೋಧವಾದುದೆಂದು ಸಿದ್ಧವಾಗಿದ್ದರೆ ಅದನ್ನು ಪರಿವರ್ತಿಸಲು ಇರುವುದು ಎರಡೇ ಮಾರ್ಗಗಳು: (ಅ) ನನ್ನ ವ್ಯಕ್ತಿತ್ವವು ಯಾವ ಪರಿಸರದಿಂದ ರೂಪಿತವಾಗಿದೆಯೋ ಆ ಪರಿಸರವನ್ನು ಬದಲಾಯಿಸುವ ಜೊತೆಗೆ ವೈಯಕ್ತಿಕವಾಗಿ ಸಾಂಸ್ಕೃತಿಕ ಪ್ರಜ್ಞೆಯು ನನ್ನಲ್ಲಿ ರೂಪುಗೊಳ್ಳುವಂತೆ ಮಾಡುವುದು; ಮತ್ತು (ಆ) ಅದರಿಂದಲೂ ನಿರೀಕ್ಷಿತ ಬದಲಾವಣೆ ನನ್ನಲ್ಲಿ ಉಂಟಾಗದಿದ್ದರೆ ಬಲವಂತವಾಗಿ ನನ್ನನ್ನು ಸಮಾಜವಿರೋಧಿ ಚಟುವಟಿಕೆಗಳಲ್ಲಿ ತೊಡಗದಂತೆ ನಿರ್ಬಂಧಿಸುವುದು.

ಇವೆರಡರಲ್ಲಿ ಯಾವ ಮಾರ್ಗ ಆರಿಸಿಕೊಳ್ಳುತ್ತೇವೆಂದರೂ ನಮಗೆ ಸುಗಮವೆನಿಸ ಬಹುದಾದ ಯೋಜನೆ ಅಥವಾ ಸಾಧನೆಗಳಿಲ್ಲ. ಶಿಕ್ಷಣ, ಸಾಂಸ್ಕೃತಿಕ ಸಂವೇದನೆ, ವೈಭವೀಕೃತವಲ್ಲದ ವಸ್ತುನಿಷ್ಠ ಇತಿಹಾಸದ ಪಾಠ, ಭವಿಷ್ಯ ಸಮಾಜದ ಕಲ್ಪನೆಯ ಬಗೆಗೆ ಆಸ್ಥೆ ಮತ್ತು ಗೌರವ, ಜೊತೆಯವರ ನಡುವೆ ಸಹನೆ, ಪರಸ್ಪರ ಸಹಾನುಭೂತಿ, ಇತ್ಯಾದಿಗಳು ಮೊದಲನೆಯ ಮಾರ್ಗದ ಅನುಸರಣೆಗೆ ಅಗತ್ಯವಾದ ಸಾಧನೆಗಳು. ಇಡೀ ಜನಸಮುದಾಯದ ಏಳಿಗೆಯನ್ನು ಸಮಾನತ್ವದ ನೆಲೆಯಲ್ಲಿ ಕಲ್ಪಿಸಿಕೊಡುವ ಸಂವಿಧಾನ, ವರ್ಗಭಿನ್ನತೆಯ ಆಧಾರದ ಮೇಲೆ ನಿಲ್ಲದ ನ್ಯಾಯದ ಸಂರಚನೆ, ಕಾನೂನು ಪರಿಪಾಲನೆಯಲ್ಲಿ ಸ್ತರಗಳನ್ನು ಮಾನ್ಯ ಮಾಡದ ಪದ್ಧತಿ, ಮುಂತಾದುವು ಎರಡನೆಯ ಮಾರ್ಗಕ್ಕೆ ಬೇಕಾಗುವ ಕನಿಷ್ಠ ಸಿದ್ಧತೆಗಳು.

ನಮ್ಮ ಕಳಪೆಯ ಅಸ್ತಿತ್ವವನ್ನು ಕಂಡು ಮರುಗಿದರೆ ಅಥವಾ ಖಿನ್ನಗೊಂಡರೆ ವಸ್ತುಸ್ಥಿತಿಯ ಬದಲಾವಣೆ ಉಂಟಾಗುವುದಿಲ್ಲ. ನಮ್ಮ ಅಸ್ತಿತ್ವವು ಬದಲಾಗದಂತಹ ಯಾವುದೋ ಪ್ರಖರವಾದ ಪ್ರಾರಬ್ಧವು ನಮ್ಮನ್ನು ಬಾಧಿಸುತ್ತಿದೆಯೆಂದು ಭಾವಿಸುವುದಾದರೆ ಪದೇ ಪದೇ ನಮ್ಮನ್ನೇ ನಾವು ಛೇಡಿಸಿಕೊಂಡು ವ್ಯಥೆಪಡಬೇಕಾದ ಅಗತ್ಯವಿಲ್ಲ. ನಾವಿರುವುದಕ್ಕಿಂತ ಭಿನ್ನವಾಗಿರಲು ನಮಗೆ ಸಾಧ್ಯವೆಂಬ ನಂಬಿಕೆಗೆ ಕಳೆದ

ಕೆಲವು ದಶಕಗಳ ವಿದ್ಯಮಾನಗಳೇ ಪುರಾವೆಯನ್ನೊದಗಿಸುತ್ತವೆ. ಉತ್ತಮ ಪ್ರಜ್ಞೆ ಮತ್ತು ಕ್ರಿಯೆಗಳು ಕ್ರಮೇಣ ನಶಿಸಿವೆಯೆಂಬುದು ನಿಜವಾದರೆ ಅವನ್ನು ಬೇರೊಂದು ಪ್ರಕ್ರಿಯೆಯಿಂದ ಗುಣಾತ್ಮಕವಾಗಿ ಪರ್ಯಾಯದ ರಚನೆಯತ್ತ ಬೆಳೆಯುವಂತೆ ಮಾಡಲು ಸಹ ಸಾಧ್ಯವಿರಬೇಕು. ಸದ್ಯದ ಮತ್ತು ಸ್ವಂತದ ಹಿತವನ್ನು ಮಾತ್ರ ಗಣನೆಗೆ ತೆಗೆದುಕೊಂಡು ತಮ್ಮ ತಮ್ಮ ವೃತ್ತಿಗಳಲ್ಲಿ ವಂಚನೆಗೆ ಎಡೆಮಾಡಿಕೊಡುತ್ತಿರುವವರ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಅವರ ಈ ಪ್ರವೃತ್ತಿಯು ಅವರನ್ನೇ ಧ್ವಂಸ ಮಾಡುತ್ತದೆಂಬುದನ್ನು ಮರೆಯಬಾರದು. ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲೋ ಸಾರಿಗೆ ಸಂಸ್ಥೆಯಲ್ಲೋ ಕೆಲಸ ಮಾಡುತ್ತಿರುವವರು ತಮ್ಮ ಸ್ವಾರ್ಥ ಮತ್ತು ಭಾನಸ ಕಾರ್ಯವಿಧಾನಗಳಿಂದ ತಮ್ಮ ಮಕ್ಕಳನ್ನು ನೇಣುಹಾಕುತ್ತಿದ್ದಾರೆ. ತಾವು ಅನುಭವಿಸುವ ಸೌಲಭ್ಯಗಳು ತಮ್ಮ ಮುಂದಿನ ಪೀಳಿಗೆಗೆ ಇಲ್ಲವಾಗುವಂತೆ ತಮ್ಮ ಕಾರ್ಯ ಕ್ಷೇತ್ರಗಳನ್ನು ಖಾಸಗಿ ಕೈಗಳಿಗೆ ವರ್ಗಾಯಿಸುವುದು ಮಕ್ಕಳನ್ನು ನೇಣು ಹಾಕುವುದಕ್ಕೆ ಸಮಾನವಾದುದು. ಸಾರ್ವಜನಿಕರನ್ನು ವಿಶ್ವಾಸದಿಂದ ನೋಡುವ ಬದಲು ತಿರಸ್ಕಾರ ಮತ್ತು ದರ್ಪಗಳಿಂದ ನಡೆಸಿಕೊಳ್ಳುವ ಸಾರ್ವಜನಿಕ ವಲಯಗಳ ಕೆಲಸಗಾರರು ಒಂದು ರೀತಿಯಲ್ಲಿ ಜನತೆಯ ಶತ್ರುಗಳು, ಪ್ರಜಾಪ್ರಭುತ್ವದ ಹಂತಕರು ಮತ್ತು ಖಾಸಗಿತನದ ಗುಲಾಮರು. ಇದೇ ಮಂದಿ ಚಾವಟಿ ಏಟುಗಳು ತಿನ್ನುವಂತಹ ಪರಿಸ್ಥಿತಿಯಲ್ಲಿದ್ದರೆ ನಿರ್ವಂಚನೆಯಿಂದ ಕೆಲಸ ಮಾಡಬೇಕಾಗುತ್ತದೆಂಬುದನ್ನು ಅರಿತಿದ್ದಾರೆ. ಸಂಘಟಿತ ರಾಗುವುದು ಉತ್ತಮ ಪರ್ಯಾಯದ ಸೃಷ್ಟಿಗಾಗಿಯೇ ಹೊರತು ಬೇಜವಾಬ್ದಾರಿತನದ ವರ್ತನೆಗೆ ಬೆಂಬಲ ಪಡೆಯುವುದಕ್ಕಾಗಿ ಅಲ್ಲವೆಂಬುದನ್ನು ಸ್ವತಃ ಸಂಘಟನೆಗಳೇ ಇಂತಹವರಿಗೆ ಮನವರಿಕೆ ಮಾಡಿಕೊಡಬೇಕು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಆಮಿಷಗಳು ಅಷ್ಟಾಗಿರಲಿಲ್ಲ ವಾದ್ದರಿಂದ ಸಾಮಾನ್ಯವಾಗಿ ನೈತಿಕತೆಯನ್ನು ಮೀರಿ ನಡೆಯುವ ಸಂದರ್ಭಗಳು ಹೆಚ್ಚಾಗಿರಲಿಲ್ಲ. ಆಗಲೂ ವಸಾಹತು ಯಜಮಾನನ ಪರವಾಗಿ ನಿಂತವರು ಅಗಾಧವಾದ ಸಂಖ್ಯೆಯಲ್ಲಿದ್ದರೆಂಬುದನ್ನು ಮುಚ್ಚಿಡಲಾದೀತೆ? ಹಾಗೆ ಬ್ರಿಟಿಷರ ಪರವಾಗಿ ನಿಂತವರು ಕಡಿಮೆ ಇದ್ದಿದ್ದರೆ ಸ್ವಾತಂತ್ರ್ಯ ಸಂಗ್ರಾಮವು ಉಗ್ರ ವಾಗಿರುತ್ತಿರಲಿಲ್ಲ ಮತ್ತು 1947ರವರೆಗೂ ನಡೆಯಬೇಕಾಗಿರಲಿಲ್ಲ. ಇಂದು ಸ್ವಾಭಿಮಾನ ಕಡಿಮೆಯಾಗಿದೆ ಮತ್ತು ಭ್ರಷ್ಟತನ ಹೆಚ್ಚಾಗಿದೆಯೆಂದು ದುಃಖಿಸುವಾಗ ಹಿಂದಿನ ವಾಸ್ತವಿಕ ಸಂಗತಿಗಳನ್ನು ಮರೆಮಾಚಿಕೊಳ್ಳಬಾರದು. ಅಂದಿನ ಸ್ವಾತಂತ್ರ್ಯಹರಣದ ಸ್ವರೂಪಕ್ಕಿಂತಲೂ ಮಾರ್ಮಿಕವಾದ ಸನ್ನಿವೇಶ ಇಂದಿನದು. ಅಂದು ವಸಾಹತುಶಾಹಿಯನ್ನು ಖಂಡತುಂಡವಾಗಿ ವಿರೋಧಿಸುತ್ತಿದ್ದವರಲ್ಲಿ ಎಷ್ಟೋ ಮಂದಿ ಇಂದು ಅದರ ಅಪರರೂಪವನ್ನು ಸ್ವಾಗತಿಸುತ್ತಿದ್ದಾರೆ. ಹೀಗಾಗಿ ನಮ್ಮ ಸ್ವಾತಂತ್ರ್ಯದ ವ್ಯಾಖ್ಯೆ ಕ್ಷೀಣಿಸುತ್ತಿದೆ ಮತ್ತು ರಾಷ್ಟ್ರನಿಷ್ಠೆಯ ಅರ್ಥವ್ಯಯವಾಗುತ್ತಿದೆ. ಹೊಸ ವ್ಯಕ್ತಿತ್ವದ

ಆವಿರ್ಭಾವವು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇಂದಿನಷ್ಟು ತುರ್ತಾಗಿ ಎಂದೂ ಬೇಕಾಗಿರಲಿಲ್ಲವೇನೋ ಎನಿಸುತ್ತದೆ.

ಆದರತ್ತ ಹೆಜ್ಜೆ ಹಾಕಲು ದಾರಿದೀಪವಾಗಿ ಪ್ರಸ್ತುತ ಲೇಖನಗಳ ಸಂಗ್ರಹ ಯಥೋಚಿತವಾಗಿ ಕೆಲಸ ಮಾಡುತ್ತದೆಂಬ ನಿರೀಕ್ಷೆ ನಮ್ಮದು. ಚಿಂತನೆ ಮತ್ತು ಕ್ರಿಯೆಗಳಿಗೆ ನಮ್ಮನ್ನು ತೊಡಗಿಸಲು ಈ ಸಂಗ್ರಹದ ವಿಚಾರಗಳು ಪ್ರೇರಕ ಶಕ್ತಿಗಳಾಗಲೆಂದು ಆಶಿಸುತ್ತೇವೆ. ಮಾನ್ಯ ಶ್ರೀ ವ್ಯಾಸರಾಯ ಬಲ್ಲಾಳರು ಹೆಸರಾಂತ ಲೇಖಕರು ಮತ್ತು ತತ್ತ್ವವೇತ್ತರು. ಅವರ ಕಾದಂಬರಿಗಳು ಮತ್ತು ಲೇಖನಗಳು ಕನ್ನಡಿಗರಿಗೆ ಸುಪರಿಚಿತವಾಗಿವೆ. ಶ್ರೀಮಂತ ವ್ಯಕ್ತಿತ್ವಕ್ಕೆ ಸುವಿಖ್ಯಾತರಾದವರು ಅವರು. ಅಂತಹ ಉನ್ನತ ಶ್ರೇಣಿಯ ಲೇಖಕರು ನಮ್ಮ ''ಸ್ವಾತಂತ್ರ್ಯೋತ್ತರ ಭಾರತ'' ಸುವರ್ಣೋತ್ಸವ ಮಾಲಿಕೆಗೆ ತಮ್ಮ ಲೇಖನ ಸಂಗ್ರಹವನ್ನು ನೀಡಿರುವುದು ಹೆಮ್ಮೆಯ ವಿಷಯ. ಈ ಮಾಲಿಕೆಯ ಆಶಯಕ್ಕೆ ಪೂರಕವಾದ ಉತ್ಕೃಷ್ಟ ಸಂಗ್ರಹವಿದೆಂದು ಓದುಗರು ಸ್ವೀಕರಿಸುತ್ತಾರೆಂಬ ಭರವಸೆ ನನಗಿದೆ.

ಮಾರ್ಚ್ 23, 1998 — ಜಿ. ಆರ್.

ಸ್ವಾತಂತ್ರ್ಯ ಸುವರ್ಣೋತ್ಸವ ಮಾಲಿಕೆಯ ಕೃತಿಗಳು

ಪ್ರತಿಯೊಂದರ ಬೆಲೆ ರೂ. 35

1. ಭಾರತಕ್ಕೊಂದು ಬದಲು ದಾರಿ — ಬಿ. ವಿ. ಕಕ್ಕಿಲ್ಲಾಯ
2. ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು — ಬಿ. ವಿ. ಕಕ್ಕಿಲ್ಲಾಯ
3. ಸಾಮಾಜಿಕ ಚಳವಳಗಳು — ಡಾ॥ ಆರ್ಕೆ. ಮಣಿಪಾಲ
4. ಅಂತರರಾಷ್ಟ್ರೀಯ ನೆಲೆಯಲ್ಲಿ ಭಾರತ — ಸಿ. ಆರ್. ಕೃಷ್ಣರಾವ್
5. ಇತಿಹಾಸದ ಅಧ್ಯಯನ ಅಂದು-ಇಂದು — ಡಾ॥ ಎಚ್. ಎಸ್. ಗೋಪಾಲರಾವ್
6. ಜನಾರೋಗ್ಯ — ಡಾ॥ ಸಿ. ಆರ್. ಚಂದ್ರಶೇಖರ್, ಡಾ॥ ಎಮ್. ಎಸ್. ರಾಜಣ್ಣ
7. ಸ್ವಾತಂತ್ರ್ಯೋತ್ತರ ಕೃಷಿರಂಗ — ವೈ. ವಿ. ಕೃಷ್ಣರಾವ್ (ಅನು : ಕೆ. ಎಲ್. ಗೋಪಾಲಕೃಷ್ಣ ರಾವ್)
8. ಶತಮಾನದ ಅಂಚಿನಲ್ಲಿ ಶಿಕ್ಷಣ — ಡಾ॥ ಕೆ. ಕೆ. ಥೇಕೆಡತ್ (ಅನು : ಡಾ॥ ಕೆ. ಎಲ್. ಗೋಪಾಲಕೃಷ್ಣಯ್ಯ)
9. ಆರ್ಥಿಕತೆಯ ಸವಾಲುಗಳು — ಕಮಲ ನಯನ ಕಾಬ್ರ (ಅನು : ಜಿ. ಎಂ. ಕೃಷ್ಣಮೂರ್ತಿ)
10. ಸ್ವಾತಂತ್ರ್ಯಕ್ಕೆ ಐವತ್ತು ವರ್ಷ — ವ್ಯಾಸರಾಯ ಬಲ್ಲಾಳ
11. ಮಾಧ್ಯಮ ಮತ್ತು ಸ್ವಾತಂತ್ರ್ಯ — ಜಿ. ಎನ್. ಮೋಹನ್
12. ಮಹಿಳಾ ಚಳುವಳಿಯ ಮಜಲುಗಳು — ಎನ್. ಗಾಯತ್ರಿ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂಚೆ ಪೆಟ್ಟಿಗೆ 5159
ಬೆಂಗಳೂರು - 560 001

ರಾಷ್ಟ್ರನಿಷ್ಠೆ

ರಾಜ್ಯದ ಆಡಳಿತೆಯನ್ನು ದಕ್ಷತೆಯಿಂದ ನಡೆಸಬೇಕಾಗಿರುವ ಹಲವಾರು ಐಎಎಸ್ ಅಧಿಕಾರಿಗಳ ಮನೆಗಳಿಗೆ ಆದಾಯ ತೆರಿಗೆಯ ಅಧಿಕಾರಿಗಳ ಧಾಳಿ; ವರಮಾನಕ್ಕನುಗುಣವಿರದ ಕೋಟಿಗಟ್ಟಲೆ ಹಣ ಸಂಪಾದಿಸಿದ ದಾಖಲೆ. ಈ ಅಧಿಕಾರಿಗಳನ್ನು ತಕ್ಷಣ ಅಮಾನತ್ತಲ್ಲಿಡಲು ರಾಜ್ಯಪಾಲರ ನಿರ್ಧಾರ. ಬೋಫರ್ಸ್, ಸ್ಟೆಂಟ್ ಕಿಟ್ಸ್, ಹವಾಲಾ, ಮೇವು, ಆಯುರ್ವೇದ, ಯೂರಿಯಾ ಎಲ್ಲ ಹಗರಣಗಳೇ. ಇವುಗಳ ಮೂಲಕ ಪ್ರತಿಷ್ಠಿತರೆನಿಸಿಕೊಳ್ಳುವ ಯಾರು ಯಾರೋ ಕೊಳ್ಳೆ ಹೊಡೆದ ಹಣದ ಲೆಕ್ಕವೆಲ್ಲ ಕೋಟಿಗಳಲ್ಲೆ. ಇಂದಿರಾ ಗಾಂಧಿಯವರ 'ಗರೀಬೀ ಹಠಾವೊ' ಮಂತ್ರವನ್ನು ಅಕ್ಷರಶಃ ಪಾಲಿಸಿಕೊಂಡವರು ಆ ಮಂತ್ರವನ್ನು ಉಚ್ಚರಿಸುತ್ತ ಬಂದವರೇ ಎಂದು ಸಾಬೀತು ಗೊಳಿಸುವ 'ಅಮೀರ' ವರ್ಗ ಕೋರ್ಟುಗಳ ಬಾಗಿಲು ಕಾಯುವ ಪರಿಸ್ಥಿತಿ ನಮ್ಮ ಸ್ವಾತಂತ್ರ್ಯದ ಐವತ್ತು ವರ್ಷಗಳ ಇತಿಹಾಸಕ್ಕೆ ಹಿಡಿದಿರುವ ಕನ್ನಡಿ. ಸ್ವಿಜರ್‌ಲೇಂಡ್‌ನಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಪ್ರವಾಸೀ ತಂಡದ ಜತೆಗೆ ಪ್ರಯಾಣಿಸುತ್ತಿದ್ದಾಗ, ಒಂದು ಹೋಟೆಲಿನಲ್ಲಿ ಮೊದಲೇ ಕಾದಿರಿಸಿದ್ದ ಕೋಣೆಗಳನ್ನು ನಮ್ಮ ತಂಡಕ್ಕೆ ಕೊಡಲು ಹೋಟೆಲಿನ ವ್ಯವಸ್ಥಾಪಕರು ಅನುಮಾನಿಸಿದ್ದು, ಎರಡು ದಿನಗಳ ಹಿಂದೆ ಅದೇ ಹೋಟೆಲಿನಲ್ಲಿದ್ದ ಒಂದು ಭಾರತೀಯ ತಂಡದ ಅಸಭ್ಯ ವರ್ತನೆಯಿಂದಾಗಿ. ಅವರ ಆಕ್ಷೇಪ : ಭಾರತೀಯರು ದನಿಯೇರಿಸಿ ಮಾತನಾಡುತ್ತಾರೆ, ಎಲ್ಲೆಂದರಲ್ಲಿ ನೀರು ಚೆಲ್ಲುತ್ತಾರೆ, ಸಭ್ಯ ನಡೆವಳಿಕೆ ತಿಳಿಯದಂತೆಯೇ ವರ್ತಿಸುತ್ತಾರೆ ಎಂಬುದಾಗಿತ್ತು. ಒಂದು ತಂಡದ ಆಕ್ಷೇಪಾರ್ಹವೆನಿಸಬಹುದಾದ ನಡತೆಯಿಂದಾಗಿ ಒಂದು ಜನಾಂಗವನ್ನೆ ಅವಮಾನಿಸುವುದು ಶಿಷ್ಟ ಸಂಸ್ಕೃತಿಯಲ್ಲ ಎಂದು ನಾನೆಂದಿದ್ದೆ. ನಮ್ಮ ತಂಡಕ್ಕೆ ಮತ್ತೆ ಜಾಗ ದೊರಕಿದರೂ ನನ್ನನ್ನು ಕಾಡುವ ಪ್ರಶ್ನೆ ಭಾರತೀಯರ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು, ರಾಷ್ಟ್ರೀಯವೆನಿಸಬೇಕಾದ ಅಸ್ಮಿತೆಯನ್ನು ಯಾವ ಯಾವ ಮಾನದಂಡಗಳಿಂದ ಅಳೆಯಬೇಕು ಎಂಬುದೇ. ದೇಶದ ಹೊರಗೆ ಹೋಗಬೇಕಾದಾಗ ಪಡೆಯುವ ಪಾಸ್‌ಪೋರ್ಟ್‌ನ ಹೊರತಾಗಿ ನಮಗೆ ಪ್ರಾಮಾಣಿಕವೆನಿಸುವ ಈ ಉಪಖಂಡದ ಸಂಸ್ಕೃತಿಯನ್ನು ಸೂಚಿಸುವ ಯಾವ ಅಸ್ಮಿತೆಯೂ ಇಲ್ಲವೇ! ರಾಷ್ಟ್ರೀಯವೆನಿಸುವ ಸಾಂಸ್ಕೃತಿಕ ಪರಿಕಲ್ಪನೆಗಳೆಲ್ಲ ಪೊಳ್ಳು ಎನ್ನುವ ಬುದ್ಧಿಜೀವಿ ಹಣೆಪಟ್ಟಿ ಕಟ್ಟಿಕೊಂಡವರೂ ನಮ್ಮಲ್ಲಿ ಸಾಕಷ್ಟು ಜನ ಇದ್ದಾರೆ. 'ಸಂಸ್ಕೃತಿ' ಪದಕ್ಕೆ ತಮ್ಮ ತಿಳಿವಳಿಕೆಯ ಮಿತಿಯಲ್ಲಿ ಅರ್ಥ ಹೊರಡಿಸಿ ವೈವಿಧ್ಯತೆ, ಬಹುಮುಖೀ ಸಂಸ್ಕೃತಿಗಳೇ ಭಾರತೀಯ ಅಸ್ಮಿತೆಯನ್ನು ಅರ್ಥಪೂರ್ಣವಾಗಿಸಿವೆ ಎನ್ನುವವರೂ ಇದ್ದಾರೆ. ಇವೆಲ್ಲ ಒಂದಕ್ಕೊಂದು ಪೂರಕವಾಗಿ ನಮ್ಮ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು ಬಲಪಡಿಸಬೇಕೇ, ಸಮನ್ವಯವೇ ನಮ್ಮ ಜನಜೀವನದ

ತಿರುಳಾಗಿ ರಾಷ್ಟ್ರೀಯ ಅನನ್ಯತೆಯನ್ನು ಪ್ರತಿಬಿಂಬಿಸಬೇಕೇ ಎಂದು ಅವರು ಹೆಚ್ಚು ಯೋಚಿಸುವುದಿಲ್ಲ. ಭಾರತೀಯ ನಾಗರಿಕತ್ವದ ತಳಹದಿ ಯಾವುದಿರಬೇಕೆಂದೂ ಅವರು ಯೋಚಿಸುವುದಿಲ್ಲ. ನಾವು ಐವತ್ತು ವರ್ಷಗಳ ಹಿಂದೆ, ಆಗಸ್ಟ್ 14, 1947ರ ಮಧ್ಯರಾತ್ರಿಗೆ ಕೇಳಿದ, ಪಂಡಿತ್ ನೆಹರು ಅವರು ಮಾಡಿದ, ಸಮಗ್ರ ಭಾರತವನ್ನು ಪುಳಕಿತಗೊಳಿಸಿದ 'ನಾವು ಈ ಮಧ್ಯ ರಾತ್ರಿಗೆ ಭವಿಷ್ಯತ್ತಿನೊಂದಿಗೆ ಸಂಪರ್ಕ ಸಾಧಿಸಲಿದ್ದೇವೆ' ಎಂಬ ಭಾಷಣ, ಈಗ ಇತಿಹಾಸದ, ಪ್ರಾಯಶಃ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮರೆತು ಬಿಡಬೇಕಾದ ಸನ್ನಿವೇಶ. ಈ ಐವತ್ತು ವರ್ಷಗಳಲ್ಲಿ ನಾವು ಭವಿಷ್ಯತ್ತನ್ನು ಭೆಟ್ಟಿಯಾಗಿರುವುದು ಭಾರತದ ರಾಷ್ಟ್ರೀಯವೆನಿಸಬೇಕಾದ ನಾಗರಿಕ ಪ್ರಜ್ಞೆಯಿಂದಲ್ಲ, ವರ್ತಮಾನಕ್ಕಷ್ಟೆ ಅಂಟಿಕೊಂಡ ನಮ್ಮ ನಮ್ಮ ಸ್ವಾರ್ಥದ ಪರಿಧಿಯಲ್ಲಿ. ಈ ಸ್ವಾತಂತ್ರ್ಯದ ಹೆಸರಿನಲ್ಲಿ ಏನೇನನ್ನು ದಕ್ಕಿಸಿಕೊಂಡರೆ ನಮ್ಮ ಹಾಗೂ ನಮ್ಮವರೆನಿಸಿ ಕೊಳ್ಳುವವರ ಭವಿಷ್ಯ ಹೇಗೆ ಸುಧಾರಿಸಬಹುದು ಎಂಬ ಏಕೈಕ ಚಿಂತನೆಯಿಂದ.

ಈಗ ಕೆಲವು ವರ್ಷಗಳ ಹಿಂದೆ ಮುಂಬಯಿಯ ದಾದರ್ ವಿಭಾಗದ ಒಂದು ಕಾಲ್ದಾರಿಯಲ್ಲಿ ತರಕಾರಿ ಮಾರುತ್ತಿದ್ದ ಒಬ್ಬ ಮುದುಕನೊಡನೆ ಒಂದು ರೂಪಾಯಿಯ ಸೊಪ್ಪಿನ ಪುಡಿ ಕಟ್ಟುಗಳನ್ನು ಖರೀದಿಸಿದ್ದೆ. ಆತ ಕಟ್ಟುಗಳನ್ನು ಎಣಿಸುತ್ತಿದ್ದಾಗ ''ನಿನ್ನ ಕಟ್ಟುಗಳ ಲೆಕ್ಕ ಸರಿಯಾಗಿದೆಯೇ ?'' ಎಂದು ತುಸು ಅಧಿಕ ಪ್ರಸಂಗದ್ದೆನಿಸಬಹುದಾದ ಪ್ರಶ್ನೆ ಕೇಳಿದ್ದೆ. ಆಗ ಬಂದ ಉತ್ತರವನ್ನು ನಾನು ಈ ಲೇಖನ ಬರೆಯುವಾಗ ನೆನಸಿಕೊಳ್ಳುತ್ತಿದ್ದೇನೆ. 'ಸಾಬ್ ಹಮ್ ಮಹಾರಾಷ್ಟ್ರೀಯನ್ ಆದ್ಮಿ ಸಾಬ್.' 'ನಾನು ಮಹಾರಾಷ್ಟ್ರೀಯ ನಾಗರಿಕ; ಲಾಭಕ್ಕಾಗಿ ಲೆಕ್ಕದಲ್ಲಿ ವಂಚನೆ ಮಾಡುವವನಲ್ಲ' ಎಂದಿದ್ದ. ಐವತ್ತು ವರ್ಷ ಕಾಲ ಮುಂಬಯಿಯಲ್ಲಿ ಕಳೆದಿದ್ದ ನಾನು ಅವನ ಮಾತಿನಲ್ಲೂ ಸತ್ಯವಿದೆಯೆಂದು ತಿಳಿದಿದ್ದೆ. ಬಹುರಾಷ್ಟ್ರೀಯ ಕಂಪೆನಿಗಳಿಂದ ಹಿಡಿದು ಪುಟ್ಟ ಚಿಲ್ಲರೆ ತರಕಾರಿ ಮಾರುವವರೂ ವ್ಯಾಪಾರವನ್ನು ಕೈಗೊಳ್ಳುವುದು ಲಾಭೈಕ ದೃಷ್ಟಿಯಿಂದ. ಅದು ಸಾರ್ವಜನಿಕ ಸೇವೆಯೆಂದಲ್ಲ. ಇಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ವಂಚನೆಯೂ ವ್ಯಾಪಾರ ನೀತಿಯಾಗುವುದಿದೆ. ಇದು ವಿಶ್ವ ವ್ಯಾಪಿ ವ್ಯಾಪಾರ ನೀತಿಗನುಗುಣ ವಾಗಿದೆಯಾದ ಕಾರಣ ನನ್ನ ಉದಾಹರಣೆ ಒಂದು ವರ್ಗದ ವ್ಯವಹಾರ ನೀತಿಯನ್ನಷ್ಟೆ ಸೂಚಿಸಬಹುದು. 'ನಾನು ಮಹಾರಾಷ್ಟ್ರೀಯ – ನನ್ನ ವ್ಯಾಪಾರ ನೀತಿಯಲ್ಲಿ ವಂಚನೆಗೆ ಸ್ಥಾನವಿಲ್ಲ.' ಎಂಬ ಒಬ್ಬ ಬಡಪಾಯಿ ತರಕಾರಿ ಮಾರುವವನ ಮಾತು ಸಂಸ್ಕೃತಿ ಸೂಚಕ ವಾಗುವುದರಿಂದ ಅದು ರಾಷ್ಟ್ರೀಯ ಅನನ್ಯತೆಗೆ ಪೂರಕವಾಗುವಂಥದು. ಮುಂಬಯಿಯ ವ್ಯಾಪಾರೀ ವರ್ಗದಲ್ಲಿ ಮಹಾರಾಷ್ಟ್ರೀಯರ ಪಾಲು ಶೋಚನೀಯವೆನಿಸುವಷ್ಟು ಕಡಮೆ ಎನ್ನುವುದೂ ಸತ್ಯ. ತುಸು ಸ್ಪಷ್ಟವಾಗಿ ಹೇಳುವುದಾದರೆ ವ್ಯಾಪಾರ ನೀತಿಯಲ್ಲಿ ಪ್ರಾಮಾಣಿಕತೆಗೆ ಬೆಲೆ ಕಡಿಮೆ. ಈ ನೀತಿಯಲ್ಲಿ ಸ್ವಾರ್ಥಕ್ಕಷ್ಟೆ ಪ್ರಾಧಾನ್ಯ. ಹೀಗಿರುವುದ ರಿಂದ 'ನಾನು ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದವನು' ಎಂದು ಬಡಪಾಯಿ ಚಿಲ್ಲರೆ ವ್ಯಾಪಾರಿ ಹಾಗೆ ಹೇಳಿದಾಗ ನೆನೆಸಿಕೊಂಡ ತನ್ನ ಪ್ರಾಮಾಣಿಕತೆಗೂ ತನ್ನ ರಾಜ್ಯಕ್ಕೂ ಇರುವ ಸಂಬಂಧವನ್ನು ನಾವು ನಮ್ಮ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ

ಮೇಲೂ ಭಾರತೀಯ ಪರಿಸರದ ಹಿನ್ನೆಲೆಯಲ್ಲಿ ನೆನೆಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂಬ ನೋವೇ ನಮ್ಮ ರಾಷ್ಟ್ರೀಯ ಅನನ್ಯತೆಯ ಗುಣಗಳನ್ನು ಐವತ್ತು ವರ್ಷಗಳಾದ ಮೇಲೂ ಶೋಧಿಸುವುದು ಕಷ್ಟದ ಕೆಲಸವೆಂಬ ಚಿಂತನೆಗೆ ಎಡೆ ಮಾಡಿಕೊಟ್ಟಿದೆ.

ದಕ್ಷಿಣ ಕೊರಿಯಾ ಎರಡನೆಯ ಮಹಾಯುದ್ಧದ ಹಾಗೂ ಐವತ್ತರ ದಶಕದ ಕೊರಿಯಾ ಅಂತರ್ಯುದ್ಧದ ನಂತರ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಹೊಂದಿದ ಒಂದು ರಾಷ್ಟ್ರ. ಸದ್ಯ ದಕ್ಷಿಣ ಕೊರಿಯಾ ವಾಣಿಜ್ಯ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ನಮ್ಮನ್ನು ನಾಚಿಸಬೇಕಾದಂಥದು. 1997ರ ಆದಿಯಲ್ಲಿ ಅಲ್ಲಿ ನಡೆದ ಕಾರ್ಮಿಕರ ಮುಷ್ಕರವೂ ಕಾರ್ಮಿಕರ ಐಕ್ಯದ ಒಂದು ಅಭೂತಪೂರ್ವ ಘಟನೆ. ಜಾಗತಿಕ ವಾಣಿಜ್ಯ ಕ್ಷೇತ್ರಗಳಲ್ಲಿ ಆಗಿರುವ, ಆಗುತ್ತಿರುವ ಬದಲಾವಣೆಗಳಿಂದಾಗಿ, ಅಲ್ಲಿನ ಸರ್ಕಾರ ತನ್ನ ವರಮಾನದ ದೃಷ್ಟಿಯಿಂದ ರಫ್ತು ಮಾಡುವ ಸರಕುಗಳು ಇದಿರಿಸಬೇಕಾಗಿ ಬರುತ್ತಿರುವ ಬಹು ರಾಷ್ಟ್ರೀಯ ಕಂಪೆನಿಗಳ ಸ್ಪರ್ಧೆಯ ದೃಷ್ಟಿಯಿಂದ ಕಾರ್ಮಿಕರ ಹಿತಗಳಿಗೆ ಸಂಬಂಧಿಸಿದ ಕಾಯಿದೆಗಳಲ್ಲಿ ಬದಲಾವಣೆ ತರಲು ನಿರ್ಧರಿಸಿ ಕಾಯಿದೆ ರೂಪಿಸಿದಾಗ ಕಾರ್ಮಿಕರು ಎಚ್ಚತ್ತು ತಮ್ಮ ಕೆಲಸದ ಭದ್ರತೆಯ ಪ್ರಶ್ನೆಯನ್ನು ಸರಕಾರ ಕಡೆಗಣಿಸಿದೆಯೆಂದು ಮುಷ್ಕರ ಹೂಡಲು ನಿರ್ಧರಿಸಿದರು. ಈ ಮುಷ್ಕರ ಮುಂದುವರಿಯುತ್ತಿದ್ದಂತೆ ಜನವರಿ ತಿಂಗಳ ಕೊನೆಗೆ ಟಿ.ವಿ. 'ಬಿತ್ತರಿಸಿದ ಸುದ್ದಿಯಂತೆ' ದೇಶದ ಸಂದಿಗ್ಧ ವರಮಾನ ಪರಿಸ್ಥಿತಿಯನ್ನು ಗಮನಿಸಿ ಮುಷ್ಕರವನ್ನು ಸದ್ಯ ನಿಲ್ಲಿಸಲಾಗಿತ್ತು. 'ನನ್ನ ಹಕ್ಕುಗಳಿಗಾಗಿ ಹೊಡೆದಾಡುವ ನಾನು ನನ್ನ ದೇಶ ಬದುಕಿ ಉಳಿದರೆ ಮಾತ್ರ ನಾನೂ ಉಳಿದೇನು' ಎಂಬ ಕೊರಿಯಾದ ಸೋಲ್ ನಗರದ ಕಾರ್ಮಿಕರ ನಿಲುಮೆಯಲ್ಲಿ ನಾನು ರಾಷ್ಟ್ರೀಯ ಅಸ್ಮಿತೆಯನ್ನು ಕಾಣುತ್ತೇನೆ. ವ್ಯಷ್ಟಿ ಸಮಷ್ಟಿಗಳ ಸಂಬಂಧ ಯಾವ ರೀತಿಯದಿರಬೇಕು ಎಂಬ ನಾಗರಿಕ ಪ್ರಜ್ಞೆಯನ್ನೂ ಕಾಣುತ್ತೇನೆ. ರಾಷ್ಟ್ರೀಯ ಅಸ್ಮಿತೆಗೆ ದೇಶದ ಎಲ್ಲ ರಾಜ್ಯಗಳ ಎಲ್ಲ ಭಾಗಗಳ ಕಾರ್ಮಿಕರ ಐಕ್ಯವೂ ಒಂದು ಉದಾಹರಣೆ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಎಲ್ಲ ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ಸಂಘಟನೆ ಗಳು ನೆನಪಿಡಬೇಕಾದದ್ದು ಕಾರ್ಮಿಕರ ಹಿತ ರಕ್ಷಣೆಗೆ ಸಂಬಂಧಿಸಿದ ಕಾಯಿದೆಗಳೆಲ್ಲ ರೂಪುಗೊಳ್ಳಲು ಸಾಧ್ಯವಾಗಿರುವುದು ನಮ್ಮ ಸ್ವಾತಂತ್ರ್ಯದಿಂದ ಎಂಬುದನ್ನು. ಹೀಗಿರುವುದರಿಂದ ನಾಡಿನ ಸ್ವಾತಂತ್ರ್ಯ ನಮ್ಮ ಹಿತರಕ್ಷಣೆಯ ಒಂದು ಸಾಧನವೆಂಬ ಸತ್ಯವನ್ನು ನೆನಪಿಸಿಕೊಂಡಾಗ ರಾಷ್ಟ್ರೀಯ ಅಸ್ಮಿತೆಯ ಪ್ರಜ್ಞೆಯ ಮಹತ್ವದ ಅರಿವಾದೀತು. 'ನನ್ನ ದೇಶ ನನಗಾಗಿ ಏನನ್ನು ಮಾಡಿದೆ ಎನ್ನುವುದಕ್ಕಿಂತಲೂ ನಾನು ನನ್ನ ದೇಶಕ್ಕಾಗಿ ಏನನ್ನು ಮಾಡುತ್ತಿದ್ದೇನೆ ಎನ್ನುವುದು ಮುಖ್ಯ' ಎಂದು ಸಾರಿರುವ ಹಿರಿಯ ಮುತ್ಸದ್ದಿಗಳ ಮಾತು ನಮಗೆ ನೆನಪಿಗೆ ಬರುವುದೇ ಇಲ್ಲ. ಇಂದು ದೇಶದ ಎಲ್ಲ ಕಡೆಗಳಲ್ಲಿ ಖಾಸಗೀಕರಣದ ಮಾತುಗಳು ಕೇಳಿ ಬರುತ್ತಿರುವುದೇಕೆ ಎಂದು ನಾವು ಆಳವಾಗಿ ಯೋಚಿಸಿದಾಗ ಕಂಡುಬರುವ ಸತ್ಯ ಬೊಟ್ಟಿಟ್ಟು ತೋರಿಸುವುದು ನಮ್ಮ ಅಪ್ರಾಮಾಣಿಕವಾದ ಕಾಯಕ ನಿಷ್ಠೆಯನ್ನು. 'ಕಾಯಕವೇ ಕೈಲಾಸ' ಎಂದು ನಾವು ಮಾತಿಗಾಗಿ ಹೇಳಬಹುದು. ವೇದಿಕೆಯ ಮೇಲಿಂದ ಕೂಗಬಹುದು. ಆದರೆ ನಮ್ಮ ನಿತ್ಯ

ಜೀವನದಲ್ಲಿ ನಮ್ಮ ನಮ್ಮ ಸ್ವಾರ್ಥವೇ ಕಾಯಕವೆನಿಸುವಾಗ ಸರಕಾರದ ಭದ್ರತೆಯ ರಕ್ಷಣೆಯಿರುವ ಕೆಲಸಗಳಲ್ಲಿ ಶ್ರದ್ಧೆ, ಕರ್ತವ್ಯ, ನಿಷ್ಠೆಗಳಿಗೆ ಮಹತ್ವ ಬರುವುದಿಲ್ಲವೆಂದೇ, ನಮ್ಮ ಸಾಮಾಜಿಕ ಹಿತಚಿಂತನೆಯ ದೃಷ್ಟಿಯಿಂದ ಆರಂಭಿಸಿದ ಬಹುಪಾಲು ಉದ್ಯಮಗಳು ರೋಗಗ್ರಸ್ತವಾಗಿರುವುದು, ಅಥವಾ ತಮ್ಮ ಬೆಳವಣಿಗೆಗೆ ಅಗತ್ಯವೆನಿಸುವ ಲಾಭಾಂಶವನ್ನು ಪಡೆಯಲು ಅಸಮರ್ಥವಾಗಿರುವುದು.

ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಆದರ್ಶವಾಗಿದ್ದುದು ಅಂದಿನ ಸೋವಿಯತ್ ರಾಜ್ಯದ ಆಡಳಿತ ವ್ಯವಸ್ಥೆ. ನಮ್ಮ ಅರ್ಥವ್ಯವಸ್ಥೆಯನ್ನು ಸರಕಾರೀ ಸ್ವಾಮ್ಯದ ಬೃಹತ್ ಉದ್ಯಮಗಳ ಮೂಲಕ (commanding heights) ಸಮೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ಆದರ್ಶ ನಮ್ಮ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂರವರಿಗಿತ್ತು. ಉಕ್ಕು, ಎಣ್ಣೆ, ವಿದ್ಯುತ್, ಖನಿಜ ಮುಂತಾದವೆಲ್ಲ ಸರಕಾರದ ಸ್ವಾಮ್ಯದಲ್ಲಿ ದೇಶದ ಪ್ರಗತಿಗೆ ಅತ್ಯಗತ್ಯವಾಗಿರುವ ಪೂರಕ ಸೌಲಭ್ಯಗಳನ್ನು (Infrastructure) ಒದಗಿಸುವಂತಿರಬೇಕು, ದೇಶೀಯ ಉದ್ಯಮಗಳೇ ದೇಶದ ಆರ್ಥಿಕ ಸ್ಥಿತಿಯನ್ನು ಸುಭದ್ರ ರೀತಿಯಲ್ಲಿಡಲು ಸಮರ್ಥವಾಗಿರಬೇಕು ಎಂಬ ವಿಚಾರಗಳೆಲ್ಲ ಸರಕಾರೀ ಸ್ವಾಮ್ಯದ ಉದ್ದೇಶಗಳಲ್ಲಿ ಸೇರಿಕೊಂಡಿವೆ. ಇದಕ್ಕಾಗಿ ತಂತ್ರಜ್ಞಾನದಲ್ಲಿ ಮುಂದುವರಿದ ದೇಶಗಳ ನೆರವು ಅಗತ್ಯವಿತ್ತೆಂದೇ ಸೋವಿಯೆತ್ ರಷ್ಯಾ, ಜರ್ಮನಿ, ಇಂಗ್ಲೆಂಡುಗಳ ಸಹಕಾರ ಉಕ್ಕಿನ ಕ್ಷೇತ್ರದಲ್ಲಿ ಅಗತ್ಯವೆನಿಸಿ ಆ ರೀತಿಯ ಸಹಕಾರವನ್ನು ದೊರಕಿಸಿಕೊಳ್ಳಲಾಯಿತು. ಎಣ್ಣೆಯ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಹಿಡಿತದಿಂದ ತಪ್ಪಿಸಿಕೊಳ್ಳುವುದು ತುಂಬಾ ಪ್ರಯಾಸದ ವಿಚಾರವಾಗಿತ್ತಾದರೂ ಸೋವಿಯೆತ್ ರಷ್ಯಾದ ಆರಂಭದ ನೆರವು, ಅಂದಿನ ಭಾರತದ ರಾಜಕಾರಣಿಗಳ ಸಾಹಸ ಪ್ರವೃತ್ತಿ, ಕೆಲವು ನಿಷ್ಣಾತ ಐಎಎಸ್ ಅಧಿಕಾರಿಗಳ ರಾಷ್ಟ್ರದ ಕುರಿತ ಕಾಳಜಿ ಇವೆಲ್ಲ ಸರಕಾರ ಸ್ವಾಮ್ಯದ ಭಾರತದ ತೈಲೋದ್ಯಮ ಕಳೆದ ಐವತ್ತು ವರ್ಷಗಳಲ್ಲಿ ಸಾಧಿಸಿದ ಬೆರಗುಗೊಳಿಸುವ ಸಾಧನೆಯನ್ನು ಪರಿಚಯಿಸಿದೆ. ಆದರೆ ಇದೇ ರೀತಿಯ ಸಾಧನೆ ಯಾಗಲೀ ವ್ಯವಹಾರದ ಯಶಸ್ಸಾಗಲೀ ಹೆಚ್ಚಿನ ಸರಕಾರ ಸ್ವಾಮ್ಯದ ಉದ್ಯಮಗಳಿಗೆ ಬಂದಿಲ್ಲ. ಪ್ರತಿಶತ ಎರಡಕ್ಕಿಂತ ಹೆಚ್ಚಿರದ ಲಾಭಾಂಶ, ನಷ್ಟದಲ್ಲೇ ಮುಂದುವರಿ ಯುತ್ತಿರುವ ಹಲವಾರು ಉದ್ಯಮಗಳು ದೇಶವನ್ನು ಸಮೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ಮಾತಂತಿರಲಿ ರಾಷ್ಟ್ರದ ಹಾಗೂ ರಾಜ್ಯಗಳ ಬೊಕ್ಕಸಕ್ಕೆ ಹೊರೆಯಾಗುವಂಥ ಪರಿಸ್ಥಿತಿ ಯಾಕೆ ಉದ್ಭವಿಸಿದೆ!

ಸಮುದಾಯದ ಬದುಕಿಗೂ ನಮ್ಮ ಬದುಕಿಗೂ ಹೊಂದಿಕೆ ಇರಬೇಕು ಎನ್ನುವ ತಿಳಿವಳಿಕೆ ಹಾಗೂ ನಾಗರಿಕ ಪ್ರಜ್ಞೆ, ಇವುಗಳ ಕೊರತೆ ಇದಕ್ಕೆ ಮುಖ್ಯ ಕಾರಣ. ಸ್ವಾರ್ಥವು ಸಹಜವೆನಿಸುವ ಒಂದು ಮಾನವ ಪ್ರವೃತ್ತಿ. ಆದರೆ ಈ ಸ್ವಾರ್ಥವನ್ನು ಹಿಡಿತದಲ್ಲಿಡುವ ನೈತಿಕ ಪ್ರಜ್ಞೆ ಮಾಯವಾದಾಗ ಸಮುದಾಯ ಜೀವನಕ್ಕೆ ಅಗತ್ಯ ವೆನಿಸುವ ಒಂದು ಅಸ್ಮಿತೆ ರೂಪುಗೊಳ್ಳುವುದಿಲ್ಲ. ನಮ್ಮ ಸ್ವಾತಂತ್ರ್ಯದ ಐವತ್ತು ವರ್ಷಗಳ ದೊಡ್ಡ ದುರಂತ ಇದು. ನಾನು, ನನ್ನ ನಾಡು, ನನ್ನ ದೇಶ ಇವು ಹೊಂದಿಕೊಂಡು

ರೂಪಿಸುವ ರಾಷ್ಟ್ರೀಯ ಅಸ್ಮಿತೆ ಮಾತ್ರ ರಾಷ್ಟ್ರವನ್ನು ಕಟ್ಟುವ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲುದು. 'ಬೀಸಿದ ಮುಂಡೆಗೆ ಮುಕ್ಕಿದ್ದೇ ಲಾಭ' ಎನ್ನುವ ಗಾದೆಯ ಮಾತಿನಂತೆ ನಮ್ಮ ನಡೆವಳಿಕೆಯಾದರೆ ಯಾವ ಸಂಸ್ಥೆಯನ್ನೂ ಕಟ್ಟಲಾಗುವುದಿಲ್ಲ. ಒಂದು ರಾಷ್ಟ್ರದ ಸಮುದಾಯ ಜೀವನದಲ್ಲಿ ಪ್ರತಿಫಲಿಸುವ ಸಂಸ್ಕಾರಗಳನ್ನೂ ಅನನ್ಯತೆಯನ್ನೂ ಜಾಹೀರುಪಡಿಸುವ ಅಸ್ಮಿತೆಯನ್ನು ಇತರರಿಗೆ ಪರಿಚಯಿಸಲು ಸಾಧ್ಯವಾಗುವುದಿಲ್ಲ.

ದಕ್ಷಿಣ ಕೊರಿಯಾದ ಸೋಲ್ ನಗರದ ಕಾರ್ಮಿಕ ಮುಷ್ಕರದ ಉದಾಹರಣೆಯನ್ನು ಹಿಂದೆ ಸೂಚಿಸಿದ್ದು ಇದೇ ಕಾರಣಕ್ಕಾಗಿ. ನಮ್ಮ ಕಾಯಕದಲ್ಲಿ ನಿಷ್ಠೆ ಎಲ್ಲಿರಬೇಕು, ಯಾವ ಪ್ರಮಾಣದಲ್ಲಿರಬೇಕು ಎಂಬುದರ ಗೊಡವೆ ನಮಗೆ ಇರದೆ ಹೋಗುವಾಗ ಸಾಮುದಾಯಿಕ ಪ್ರಗತಿಯಾಗಲೀ ನಾವು ಹೆಮ್ಮೆ ಪಟ್ಟುಕೊಳ್ಳಬೇಕಾದ ಅಸ್ಮಿತೆಯಾಗಲೀ ಕನಸಿನ ಮಾತಾಗುತ್ತದೆ. ನಮ್ಮ ನಾಡು 50 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಅಳೆಯುವ ಮಾನದಂಡಗಳನ್ನು ನಿರ್ಧರಿಸುವಾಗ ಪ್ರಾಮಾಣಿಕವಾದ ಕಾಯಕ ನಿಷ್ಠೆ ಮಹತ್ವದ ಪಾತ್ರವಹಿಸುತ್ತದೆ ಎಂಬುದನ್ನು ನಾವು ಯೋಚಿಸುವುದೇ ಇಲ್ಲ. ಉತ್ಪಾದನಾ ಸಾಮರ್ಥ್ಯದ ಪ್ರಗತಿ, ಬಜೆಟ್ ಖೋತಾ, ದಾರಿದ್ರ್ಯ ರೇಖೆಗೆ ಸಂಬಂಧಿಸಿದ ಅಂಕೆ ಸಂಖ್ಯೆಗಳು, ಇವೇ ರಾಷ್ಟ್ರದ ಸಾಮರ್ಥ್ಯದ ಯೋಗ್ಯತೆಯ ಸೂಚಕಗಳಲ್ಲ. ಒಬ್ಬ ಕಾರ್ಮಿಕನ ಅಥವಾ ಕರ್ಮಚಾರಿಯ, ಯಾಕೆ ಒಬ್ಬ ಸಾಮಾನ್ಯ ನಾಗರಿಕನ ಕರ್ತವ್ಯ ನಿಷ್ಠೆ ಆತನ ಕೌಟುಂಬಿಕ ಸ್ವಾರ್ಥದ ಪರಿಧಿಯಿಂದ ಹೊರ ಬರುವುದಿಲ್ಲವಾದರೆ ಆತನ ಸಮುದಾಯದ ಕುರಿತ ಚಿಂತನೆ ಪ್ರಾಮಾಣಿಕವಾಗಲು ಸಾಧ್ಯವಿಲ್ಲ. ಇನ್ನು ಕೆಲಸ ನಿರ್ವಹಿಸುವ ಹೊಣೆ ಹೊತ್ತ ಅಧಿಕಾರಿಗಳ ಚಿಂತನೆಯೂ ತಮ್ಮ ಕೌಟುಂಬಿಕ ಅಥವಾ ಅಧಿಕಾರ ವರ್ಗದ ಸ್ವಾರ್ಥದಿಂದ ಮುಂದುವರಿಯುವುದಿಲ್ಲವಾದರೆ ಯಾವುದೇ ವ್ಯವಸ್ಥೆಯ ಯಶಸ್ಸೂ ರಾಷ್ಟ್ರ ಜೀವನದ ಗೌರವವನ್ನು ಹೆಚ್ಚಿಸುವ ಸಾಧ್ಯತೆ ಕಡಿಮೆ. ಇನ್ನು ಇಂತಹ ಉದ್ಯಮಗಳನ್ನೋ ಅಥವಾ ಯಾವುದೇ ಸಾರ್ವಜನಿಕವೆನಿಸುವ ವ್ಯವಸ್ಥೆಯನ್ನೋ ನಡೆಸಿಕೊಂಡು ಹೋಗುವ ಹೊಣೆ ಹೊತ್ತಿರುವವರ ಚಿಂತನೆ, ವ್ಯವಸ್ಥೆಯ ಸ್ವಾರ್ಥದ ಪರಿಧಿಯನ್ನು ದಾಟಿ ಸಮುದಾಯದ ಹಿತವನ್ನೂ ಗಮನಿಸುವುದಿಲ್ಲವೋ, ಆಗ ವ್ಯಾಪಕವಾದ ರಾಷ್ಟ್ರಕ್ಕೆ ಅನ್ವಯಿಸಬಹುದಾದ ಅಸ್ಮಿತೆಯ ಸ್ವರೂಪ ಕಾಣಿಸುವುದೇ ಇಲ್ಲ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ದೇಶೀಯ ಉದ್ಯಮಗಳು ಬೆಳೆಯಬೇಕು, ಎಲ್ಲ ಕ್ಷೇತ್ರಗಳಲ್ಲೂ ನಾವು ನಮ್ಮ ರಾಷ್ಟ್ರೀಯ ಸಾಧನೆಯ ಹಿರಿಮೆಯನ್ನು ಸಾರಬೇಕು ಎನ್ನುವ ಅಪೇಕ್ಷೆ ಇಂದಿನ ಉದಾರೀಕೃತ ಉದ್ಯಮ ನೀತಿ ಹಾಗೂ ವಿಶ್ವ ವ್ಯಾಪಾರಾರ್ಹತೆ (globalisation)ಗಳ ಸಂದರ್ಭದಲ್ಲಿ ಯಾವ ರೀತಿ ಚಡಪಡಿಕೆಗೆ ಗುರಿಯಾಗಿದೆ ಎಂಬುದಕ್ಕೆ ಟಿಪ್ಪಣಿ ಅನಗತ್ಯ. ನಾವು ಏನನ್ನಾದರೂ ಹೇಗಾದರೂ ಮಾರಿದ್ದನ್ನು ಕೊಳ್ಳುವ ಗ್ರಾಹಕ ವರ್ಗದ ಅಜ್ಞಾನದ ಲಾಭವನ್ನು ಪಡೆಯಬೇಕು ಎನ್ನುವ ಸ್ವಾರ್ಥದ್ದೇ ಮೇಲುಗೈಯಾಗಿರುವುದೂ, ಕಾರ್ಮಿಕ, ಅಧಿಕಾರಿ, ಆಡಳಿತೆ ಮೂರು ಹಂತಗಳಲ್ಲೂ ತಮ್ಮ ತಮ್ಮ ಸ್ವಾರ್ಥದ್ದೇ

ಮೇಲುಗೈಯಾಗುತ್ತಿರುವಾಗ ರಾಷ್ಟ್ರನಿಷ್ಠೆ ಯಾರಿಗೆ ಬೇಕು.

ಕಾರ್ಮಿಕ ಸಂಘಟನೆ ಅಗತ್ಯವಾಗುವುದು ಅವರ ಹಿತಗಳೆಲ್ಲ ಲಾಭ ಬಡಕರ ಶೋಷಣೆಗೆ ಗುರಿಯಾಗುವಾಗ ಪ್ರತಿಭಟಿಸುವ ದಾರಿ ಬೇಕೆಂದು. ಇಲ್ಲಿ ಕಾರ್ಮಿಕ ಸಮುದಾಯದ ಹಿತವೇ ಸಾರ್ವಭೌಮವೆನಿಸುವುದೂ ಸರಿಯೆ. ಖಾಸಗಿ ಒಡೆತನದ ಉದ್ಯಮಗಳಲ್ಲಿ ಆಡಳಿತೆಯ ಸ್ವಾರ್ಥವೇ ಮುಖ್ಯವಾಗುವಾಗ ಇಂತಹ ಪ್ರತಿಭಟನೆ ಅನಿವಾರ್ಯವಾಗಿ ಪ್ರಬಲ ಕಾರ್ಮಿಕ ಸಂಘಟನೆ ಆಡಳಿತೆಯ ಸ್ವಾರ್ಥ ಪ್ರೇರಿತ ಚಟುವಟಿಕೆಗಳನ್ನು ನಿಯಂತ್ರಿಸಲು ಸಹಕಾರಿಯಾಗುವುದಿದೆ. ಆದರೆ ಸರಕಾರ ಸ್ವಾಮ್ಯದ ಉದ್ಯಮಗಳು ಸಮುದಾಯದ ಹಿತದಿಂದ ರೂಪಿಸಲ್ಪಟ್ಟಿರುವಾಗ ಇಲ್ಲಿ ಕಾರ್ಮಿಕರು ಸಮುದಾಯದ ಹಿತವನ್ನು ಅಲಕ್ಷಿಸಿ, ತಮ್ಮ ರಾಷ್ಟ್ರೀಯವೆನಿಸಬಹುದಾದ ಅಸ್ಮಿತೆಯ ಯೋಚನೆಯನ್ನೂ ಮಾಡದೆ ಕಾರ್ಮಿಕ ವರ್ಗದ ಸ್ವಾರ್ಥವನ್ನಷ್ಟೆ ಸಂಘಟನೆಯ ಸಾಮರ್ಥ್ಯದ ಆಯುಧವನ್ನಾಗಿ ಬಳಸುವುದು ಸರಿಯೇ ಎಂಬ ಪ್ರಶ್ನೆಯನ್ನು ಕೇಳದಿರಲಾಗುವುದಿಲ್ಲ.

ರಾಜ್ಯ ಮಟ್ಟದಲ್ಲಿ ಸರಕಾರ ಸ್ವಾಮ್ಯದ ಎರಡು ಪ್ರಮುಖ ಸಂಸ್ಥೆಗಳು ಸಾರಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಸಂಬಂಧಪಟ್ಟಂಥವು. ರಾಷ್ಟ್ರ ಮಟ್ಟದಲ್ಲಿ ನಾಡಿನ ಬ್ಯಾಂಕುಗಳನ್ನೆಲ್ಲ ಸಮುದಾಯದ ಸಾರ್ವತ್ರಿಕ ಹಿತಕ್ಕೆ ಒಳಪಡಿಸಬೇಕು ಎಂದು ಹಿಂದಿನ ಪ್ರಧಾನಿ ಇಂದಿರಾ ಗಾಂಧಿಯವರು ನಿರ್ಧರಿಸಿದ ಬ್ಯಾಂಕುಗಳ ರಾಷ್ಟ್ರೀಕರಣ, ಇವು ಸಮುದಾಯದ ಹಿತವನ್ನು ಯಾವ ರೀತಿ ಸುಧಾರಿಸಿವೆ ಅಥವಾ ಕಡೆಗಣಿಸಿವೆ ಎಂಬ ವಿವೇಚನೆ ನಮ್ಮ ಸ್ವಾತಂತ್ರ್ಯದ 50 ವರ್ಷಗಳು ಕೊನೆಗೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಸ್ತುತ.

ಸಮುದಾಯದ ಹಿತವೇ ಸಾರ್ವಭೌಮವೆಂದು ಈ ಮೂರರ ಸ್ವಾಮ್ಯವನ್ನು ಸರಕಾರ ವಹಿಸಿಕೊಂಡ ಮೇಲೆ ರಾಷ್ಟ್ರದ ಸಮಗ್ರಹಿತದ ಚಿಂತನೆ ದೂರವೇ ಉಳಿದು ಈ ಮೂರರಲ್ಲೂ ' ಖಾಸಗೀಕರಣದ ಮಾತು ಇಂದು ಕೇಳಿ ಬರುತ್ತಿರುವುದರ ಕಾರಣವೇನು ? ರಾಷ್ಟ್ರ ಹಾಗೂ ರಾಜ್ಯದ ಬೊಕ್ಕಸಗಳಿಗೆ ಹೊರೆಯಾಗುವಂತೆ ಇವು ಕಾರ್ಯನಿರ್ವಹಿಸುವ ಅವಸ್ಥೆಯೇಕೆ ಬಂತು ?

ಸರಕಾರ ಸ್ವಾಮ್ಯವಿರುವ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕನಿಗೆ ಕೌಟುಂಬಿಕ ಸ್ವಾರ್ಥವನ್ನು ಪೋಷಿಸಲು ಸಹಾಯ ಮಾಡುವ ಎರಡು ಮುಖ್ಯ ಸೌಲಭ್ಯಗಳಿವೆ. ಮೊದಲನೆಯದು ತನ್ನ ಕೆಲಸ ಒದಗಿಸುವ ಭದ್ರತೆ. ಎರಡನೆಯದು ಈ ಭದ್ರತೆ ಯಿಂದಾಗಿಯೇ ತನ್ನ ದುಡಿಮೆಯಲ್ಲಿ ನಿಷ್ಠೆ ಇದ್ದರೂ ಇಲ್ಲದಿದ್ದರೂ ಸರಿಯೆ, ತನ್ನನ್ನು ಪ್ರಶ್ನೆಗೆ, ಶಿಕ್ಷೆಗೆ ಅದೂ ಕೆಲಸ ಕಳೆದುಕೊಳ್ಳಬಹುದಾದಂಥ ಶಿಕ್ಷೆಗೆ ಒಳಪಡಿಸುವುದು ಸುಲಭವಲ್ಲವೆನ್ನುವ ಧೈರ್ಯ. ಇದಕ್ಕೂ ಹೆಚ್ಚಾಗಿ ತನ್ನ ಸಂಘಟನೆಯ ಶ್ರೀರಕ್ಷೆ ತನ್ನನ್ನು ಎಂತಹ ಸಂಕಟದಿಂದಲೂ ಪಾರು ಮಾಡಬಹುದು ಎನ್ನುವ ನಂಬಿಕೆ. ಇಂಥಲ್ಲಿ ಸಂಸ್ಥೆಯ ಹಿತ ಗೌಣವಾಗುತ್ತದೆ. ಈ ಸಂಸ್ಥೆಗಳು ರಾಷ್ಟ್ರೀಯವೆನಿಸುವ ಸಂಸ್ಕಾರಗಳನ್ನು ರೂಪಿಸಬೇಕಾದಂಥವು ಎಂಬ ಚಿಂತನೆಯೂ ಗೌಣವಾಗುತ್ತದೆ. 'ನನ್ನ ದೇಶ ನನಗೆ

ಕೊಡಬೇಕಾದುದಷ್ಟೆ ಮುಖ್ಯ – ನಾನು ಪ್ರತಿಯಾಗಿ ಕೊಟ್ಟರೂ ಕೊಡದಿದ್ದರೂ ನಡೆದೀತು' ಎನ್ನುವ ಜೀವನಕ್ರಮ ಸಹಜವಾಗುತ್ತದೆ.

ಅಭದ್ರತೆಯ ಭಯವಿರುವ ಖಾಸಗೀ ಉದ್ಯಮಗಳಲ್ಲಿ ಪ್ರಬಲ ಕಾರ್ಮಿಕ ಸಂಘಟನೆ ಇದ್ದರೂ ಕಾರ್ಮಿಕರ ಉತ್ಪಾದನಾ ಪ್ರಮಾಣ ಹೆಚ್ಚು ಎನ್ನಲು ಯಾವ ಅಧ್ಯಯನದ ನೆರವೂ ಅನಗತ್ಯ. ಇಲ್ಲಿ ಕಾರ್ಮಿಕರ ಉಸ್ತುವಾರಿ ನಡೆಸಬೇಕಾದ ಅಧಿಕಾರಿ ವರ್ಗವೂ ತಮ್ಮ ಅಭದ್ರತೆಯ ಭಯದಿಂದ ಸ್ವಾರ್ಥದ ರೇಖೆಯನ್ನು ದಾಟಿಯೇ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿಯೂ ಇದೆ. ಆಡಳಿತೆಗಂತೂ ಲಾಭೈಕ ದೃಷ್ಟಿಯು ಉದ್ಯಮದ ಸ್ವಾರ್ಥವನ್ನು ಪೋಷಿಸಬೇಕಾದ ಪರಿಸ್ಥಿತಿಯಲ್ಲಿ ಕೆಲಸಗಾರರ ಅಭದ್ರತೆ ದುಡಿಮೆಯ ಪೂರ್ಣ ಲಾಭ ಪಡೆಯುವ ಪ್ರಬಲ ಸಾಧನವಾಗುತ್ತದೆ. ಇಲ್ಲಿ ನನಗೆ ನೆನಪಾಗುವುದು ಪ್ರಸಿದ್ಧ ಆಂಗ್ಲ ಲೇಖಕ ಆಲ್ಡಸ್ ಹಕ್ಸ್ಲಿಯವರ ಮಾತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನಡೆವಳಿಕೆಯನ್ನು ನಿಯಂತ್ರಿಸಿಕೊಳ್ಳುವುದು ತನ್ನ ಹಿಂದೆ ಒಬ್ಬ ಪೋಲಿಸನಿದ್ದಾನೆ ಎಂಬ ತಿಳಿವಳಿಕೆಯನ್ನಿರಿಸಿಕೊಂಡೇ ಎಂದು. ಇದು ಒಂದು ಮನಃಶಾಸ್ತ್ರೀಯ ಸತ್ಯ.

ನಾವು ನಮ್ಮ ಸ್ವಾತಂತ್ರ್ಯದ ಐವತ್ತು ವರ್ಷಗಳಲ್ಲಿ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗದಿರುವುದಕ್ಕೆ ಸರಕಾರದ ಹಾಗೂ ಸರಕಾರ ಸ್ವಾಮ್ಯದ ಹೆಚ್ಚಿನ ಉದ್ಯಮಗಳಲ್ಲಿ ಕಾರ್ಮಿಕರು ಹಾಗೂ ಅಧಿಕಾರಿಗಳು ತಮ್ಮ ಸ್ವಾರ್ಥದ ಲಕ್ಷ್ಮಣ ರೇಖೆಯನ್ನು ದಾಟಲು ಮುಂದಾಗದಿರುವುದೇ ಮುಖ್ಯ ಕಾರಣ. ಕಾರ್ಮಿಕ ಚಳವಳದ ಆದರ್ಶಗಳಿರುವುದೇ ವಿಶ್ವವ್ಯಾಪಿ ಕಾರ್ಮಿಕ ಸಂಘಟನೆಗಳ ಬಂಧುತ್ವ ಸಹಕಾರಗಳಲ್ಲಿ. ಆದರೆ ಪ್ರಜಾಪ್ರಭುತ್ವವನ್ನು ಅಂಗೀಕರಿಸಿರುವ ರಾಷ್ಟ್ರಗಳಲ್ಲಿ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳನ್ನು ರೂಪಿಸಲು ಸಾಧ್ಯವಾಗದಾಗ ಕಾರ್ಮಿಕ ಸಂಘಟನೆಗಳೂ ಅವರ ಮೂಲಭೂತ ಸೌಕರ್ಯಗಳ ಹೊರತಾದ ಯಾವ ಆದರ್ಶ ವನ್ನೂ ಸಾಧಿಸುವುದಿಲ್ಲ. ಪ್ರಜಾಪ್ರಭುತ್ವವೂ ಅದರ ನಿಜವಾದ ಅರ್ಥದಲ್ಲಿ ಯಶಸ್ವಿ ಯಾಗುವುದಿಲ್ಲ. ಭಾರತದ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಸಂಘಟಿತ ಕಾರ್ಮಿಕರ ಜೀವನಸ್ತರ ಸುಧಾರಿಸಲು ಬಹುಮಟ್ಟಿಗೆ ಸಾಧ್ಯವಾಗಿರುವುದು ಸಂಘಟಿತ ಹೋರಾಟದ ಸ್ವಾರ್ಥದಿಂದ ಹಾಗೂ ನೆಹರೂ ಯುಗದಿಂದ ನಾವು ನೆಚ್ಚಿಕೊಂಡು ಬಂದಿರುವ ಸಾರ್ವಜನಿಕ ಹಿತರಕ್ಷಣೆಯ ರಾಜ್ಯದ (welfare state) ಪರಿಕಲ್ಪನೆಗಳಿಂದ.

ಆದರೆ ಸದೃಢ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದ ಹೊಣೆಯರಿತ ನಾಗರಿಕ ಪ್ರಜ್ಞೆಯ ಕೊರತೆ ಕಾರ್ಮಿಕ ವರ್ಗದಲ್ಲಿ ಮಾತ್ರವಲ್ಲ, ದೇಶ ವ್ಯಾಪಿಯಾಗಿ ಎಲ್ಲೆಡೆ ಕಂಡುಬರುತ್ತಾ ಗುಂಪಿನ, ಜಾತಿಯ, ಸಮೂಹದ ಹಿತಕ್ಕಿಂತ ಹೆಚ್ಚಿನದೆನಿಸುವ ಪ್ರಜ್ಞೆ ಎಲ್ಲಿ, ಯಾಕೆ ಬೇಕು ಎಂದು ಕೇಳುವಂತಹ ಪರಿಸ್ಥಿತಿಯನ್ನು ತಂದೊಡ್ಡಿದೆ.

ಸಾರ್ವತ್ರಿಕವಾದ ಶಿಕ್ಷಿತ ಜನ ಸಮುದಾಯದ ನಾಗರಿಕ ಪ್ರಜ್ಞೆ ರಾಷ್ಟ್ರ ಪ್ರಜ್ಞೆಯನ್ನು ಪೋಷಿಸಬೇಕಾದಂಥದು. ಸಾರ್ವತ್ರಿಕವಾಗಿ ಸಾರ್ವಜನಿಕರಿಗೆ ಅನ್ವಯವಾಗುವ ರಾಷ್ಟ್ರ ಪ್ರೇಮದ ವಿವೇಚನೆಯನ್ನು ಬದಿಗಿರಿಸಿ ಸಂಘಟನೆಯ ಬಲವುಳ್ಳ ಕಾರ್ಮಿಕ ವರ್ಗದ

ರಾಷ್ಟ್ರಪ್ರೇಮವನ್ನು ವಿವೇಚಿಸುವಾಗ ನಾವು ಕಾಣುವುದೇನು? ರಾಷ್ಟ್ರದ ಹಿತ ದೃಷ್ಟಿಯಿಂದಲೇ ರಾಷ್ಟ್ರೀಕರಣ ಮಾಡಲಾದ ಬ್ಯಾಂಕಿಂಗ್ ಮತ್ತು ವಿಮಾ ವ್ಯವಸ್ಥೆಗಳಲ್ಲಿ ನಾವು ಸಾಧಿಸಿರುವ ಪ್ರಗತಿಯನ್ನೂ ನಾವು ಸಾಧಿಸಬಹುದಾಗಿದ್ದ ಪ್ರಗತಿಯನ್ನೂ ವಿವೇಚಿಸಿದಾಗ ಇಂದು ಮತ್ತೆ ಖಾಸಗೀಕರಣದ ಮಾತು ಪ್ರಸ್ತುತವೆನಿಸುವುದೇಕೆ ಎಂದು ಯೋಚಿಸುವಂತಾಗುತ್ತದೆ. ರಾಷ್ಟ್ರನಿಷ್ಠೆಯನ್ನು ಅತ್ಯಂತ ಸಮರ್ಪಕವೆನಿಸುವ ರೀತಿಯಲ್ಲಿ ತಮ್ಮ ಕರ್ತವ್ಯನಿಷ್ಠೆಯಲ್ಲಿ ಪ್ರಕಟಿಸಿ 'ಉತ್ಕೃಷ್ಟತೆ'ಯನ್ನು ಅರಸುವುದು ನಮ್ಮ ಗುರಿ ಎಂದು ತಿಳಿಯದ ಈ ವ್ಯವಸ್ಥೆಗಳ ನೌಕರ ವರ್ಗ ತಮ್ಮ ಸ್ವಂತ ಹಾಗೂ ಸಂಘಟಿತ ಕಾರ್ಮಿಕ ವರ್ಗದ ಹಿತಕ್ಕಿಂತ ಹೆಚ್ಚಿನ ಹಿತವಿಲ್ಲವೆಂದು ತಿಳಿಯುತ್ತ ಬಂದಿರುವುದರಿಂದ ಈ ವ್ಯವಸ್ಥೆಗಳು ಸಾಧಿಸಬಹುದಾಗಿದ್ದ ಪ್ರಗತಿಯನ್ನೂ ರಾಷ್ಟ್ರೀಯ ಸ್ತರದ ಅಸ್ಮಿತೆಯನ್ನೂ ಸಾಧಿಸಿಲ್ಲ. ಈ ಸ್ಥಿತಿಗೆ ಕಾರ್ಮಿಕ ವರ್ಗವಷ್ಟೆ ಕಾರಣವಲ್ಲವೆಂಬ ಮಾತು ನಿಜವಾದರೂ ಇವರ ಕರ್ತವ್ಯನಿಷ್ಠೆ ರಾಷ್ಟ್ರ ಪ್ರಜ್ಞೆಯ ಹಿನ್ನೆಲೆಯಲ್ಲಿ ಪ್ರಕಟವಾಗಿಲ್ಲವೆನ್ನುವ ಸತ್ಯವನ್ನು ಇದಿರಿಸಬೇಕಾದಾಗ ಮಾತ್ರ ಖಾಸಗೀಕರಣದ ಪ್ರಸ್ತುತತೆ. ರಾಷ್ಟ್ರ ಚಿಂತನೆಯ ಕರ್ತವ್ಯ ನಿಷ್ಠೆ ಇವರದಾಗಿದ್ದರೆ ಬೆಳಕಿಗೆ ಬರುತ್ತಲೇ ಇರುವ ನೂರಾರು ವಂಚನೆಯ ಪ್ರಕರಣಗಳು, ಅಧಿಕಾರಿ ವರ್ಗ ಶಾಮಿಲಾಗಿರುವ ಅವ್ಯವಹಾರ ಪ್ರಕರಣಗಳು, ಅದಕ್ಷ ಕಾರ್ಯನಿರ್ವಹಣೆಯಿಂದ ರೋಸಿ ಹೋಗಿರುವ ಗ್ರಾಹಕ ವರ್ಗ ಇಂಥವನ್ನೆಲ್ಲ ಇದಿರಿಸುವ ಪ್ರಸಂಗ ಬರುತ್ತಿರಲಿಲ್ಲ. ಸರಕಾರ ಸ್ವಾಮ್ಯದ ಉದ್ಯಮಗಳಲ್ಲಿ ಭದ್ರತೆ ಸುರಕ್ಷಿತ, ಆ ಕಾರಣ ಕರ್ತವ್ಯ ನಿಷ್ಠೆ ದುಡಿಮೆಯಲ್ಲಿ ಮಹತ್ವ ಸ್ಥಾನ ಪಡೆಯುವ ಅಗತ್ಯವಿಲ್ಲವೆಂಬ ತಿಳಿವಳಿಕೆ ಇಂತಹ ಸ್ಥಿತಿಯನ್ನು ಪೋಷಿಸುತ್ತದೆ. ಅಧಿಕಾರ ನಿರ್ವಹಿಸ ಬೇಕಾದವರು ಸರಕಾರ ಸ್ವಾಮ್ಯದ ಕಾರಣದಿಂದ ಒಳಗಾಗಬೇಕಾದ ರಾಜಕೀಯ ಹಸ್ತಕ್ಷೇಪವೂ ತಮ್ಮ ತಮ್ಮ ಸ್ವಾರ್ಥವನ್ನು ಪೋಷಿಸುವ ಯಾವ ನಿರ್ಧಾರವೂ ತಪ್ಪು ಎನಿಸಿಕೊಳ್ಳಲಾರದು ಎಂಬ ತಿಳಿವಳಿಕೆಯನ್ನು ಮೂಡಿಸಿ ಸಂಸ್ಥೆಯ ವ್ಯವಹಾರದ 'ಉತ್ಕೃಷ್ಟತೆ' ಒಂದು ಆದರ್ಶವಾಗಿಯೇ ಉಳಿಯುತ್ತದೆ. ಈಗ ಪ್ರಕಟವಾಗುತ್ತಿರುವ ಖಾಸಗೀಕರಣದ ವಿರೋಧವೂ ಕರ್ತವ್ಯನಿಷ್ಠೆಯ ಮೌಲ್ಯಮಾಪನ ಮಾಡುವ ಪರಿಸ್ಥಿತಿಯಲ್ಲಿ ಆಗಿರುವ, ಆಗುತ್ತಿರುವ ಲೋಪದೋಷಗಳಿಂದಾಗಿ ತಮ್ಮ ಸ್ವಾರ್ಥವಷ್ಟೇ ಅಲ್ಲ, ಕೆಲಸದ ಭದ್ರತೆಯೂ ಪ್ರಶ್ನಾರ್ಹವೆನಿಸೀತು ಎಂಬ ಭಯದ ಕಾರಣದಿಂದಾಗಿ. ಇಂದಿನ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಡೆಯುತ್ತಿರುವ ವಂಚನೆಯ ಪ್ರಕರಣಗಳನ್ನು, ವ್ಯವಹಾರದಲ್ಲಿ ನಡೆಯುತ್ತಿರುವ ಲಂಚದ ಪ್ರಕರಣಗಳನ್ನು ತಡೆಯುವ ಅಥವಾ ಬಹಿರಂಗಗೊಳಿಸುವ ಸಾಮರ್ಥ್ಯ ಕಾರ್ಮಿಕ ಸಂಘಟನೆಗಳಿಗಿಲ್ಲವೆ! ಕರ್ತವ್ಯ ನಿಷ್ಠೆಗೆ ಯಾವ ಕಾರಣದಿಂದಲೂ ಅಪಚಾರವಾಗಬಾರದು ಎಂದು ನೌಕರ ವರ್ಗಕ್ಕೆ ನಿರ್ದೇಶನ ಕೊಡುವ ಸಾಮರ್ಥ್ಯ ಕಾರ್ಮಿಕ ಸಂಘಟನೆಗಳಿಗಿಲ್ಲವೆ! ಇದೆ. ಆದರೆ ತಮ್ಮ ನೌಕರರಲ್ಲೆ ಆಗುತ್ತಿರುವ ವಂಚನೆಯ ಪ್ರಕರಣಗಳನ್ನು ಶೋಧಿಸಿ ಬೆಳಕಿಗೆ ತರುವ ನೈತಿಕ ಹೊಣೆಗಾರಿಕೆ ಮಾತ್ರ ಇಲ್ಲ. ತಾವು ದುಡಿಯುವ ವ್ಯವಸ್ಥೆ, ರಾಷ್ಟ್ರದ ಪ್ರಗತಿಯನ್ನು ಸೂಚಿಸಬಹುದಾದ ಸಾಧನ. ಅದರ ಉತ್ಕೃಷ್ಟ ವ್ಯವಹಾರದ ನೀತಿ ರಾಷ್ಟ್ರಕ್ಕೇ

ಮಾದರಿಯಾಗಬೇಕು, ನಮ್ಮ ಸ್ವಾರ್ಥ ಏನಿದ್ದರೂ ಅದು ಪ್ರಕಟವಾಗಬೇಕಾದುದು ಈ ಹಿನ್ನೆಲೆಯಲ್ಲಿ ಮಾತ್ರ ಎಂಬ ತಿಳಿವಳಿಕೆ ಬೆಳೆಯುವಂತಾದರೆ ಖಾಸಗೀಕರಣದ ಮಾತು ಉದ್ಭವಿಸಲಾರದು.

ಇನ್ನು ರಾಜ್ಯಗಳು ಅಧಿಕಾರ ಸೂತ್ರ ವಹಿಸಿಕೊಂಡಿರುವ ಎರಡು ವ್ಯವಸ್ಥೆಗಳನ್ನು ಉದಾಹರಣೆಗೆಂದು ತೆಗೆದುಕೊಳ್ಳೋಣ : ಸಾರಿಗೆ ಮತ್ತು ವಿದ್ಯುತ್ ಉತ್ಪಾದನೆ ಮತ್ತು ಸರಬರಾಜು. ನಾವಿಲ್ಲಿ ಗಮನಿಸಬೇಕಾದುದು ಇವೆರಡೂ ಸಾರ್ವಜನಿಕ ಹಿತರಕ್ಷಣೆಯ (welfare state) ಪರಿಕಲ್ಪನೆಗಳಿಂದ ಪ್ರೇರಿತವಾದಂಥವು ಎಂದರೆ, ಈ ವ್ಯವಸ್ಥೆಗಳು ತಮ್ಮ ಕಾರ್ಯ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ ನಷ್ಟವನ್ನು ಅನುಭವಿಸಬೇಕಾಗಿ ಬಂದರೂ ಅದು ಸಾರ್ವಜನಿಕ ಹಿತದೃಷ್ಟಿಯಿಂದ ಸಹನೀಯ ಎಂಬ ತಪ್ಪು ಕಲ್ಪನೆ. ತಪ್ಪು ಕಲ್ಪನೆಯೆನ್ನಲು ಕಾರಣವಿಷ್ಟೆ. ಸಾರ್ವಜನಿಕ ಹಿತಕ್ಕಾಗಿ ಸರಕಾರ ಕೊಡಮಾಡುವ ಸಹಾಯ (subsidy) ಒಂದಲ್ಲ ಒಂದು ರೀತಿಯಿಂದ ಸಾರ್ವಜನಿಕ ಹಿತಕ್ಕಾಗಿ ಮರಳಲೇಬೇಕು ಎಂಬ ನಿರ್ಧಾರವಿದ್ದು ಅದಕ್ಕಾಗಿ ಅಗತ್ಯವಿರುವ ಉಪಾಯಗಳನ್ನು ಯೋಚಿಸಿಕೊಂಡಾಗ ಮಾತ್ರ ಆ ಸಹಾಯಕ್ಕಾಗಲೀ ಅದರಿಂದ ಲಾಭ ಪಡೆಯುವ ವ್ಯವಸ್ಥೆಗಾಗಲೀ ಅರ್ಥ ಬಂದೀತು. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ಕೃಷಿರಂಗ ಸ್ವಲ್ಪ ಮಟ್ಟಿಗೆ ಭೂ ಸುಧಾರಣೆಯ ಕಾರ್ಯಕ್ರಮಗಳಿಂದ, ಹೆಚ್ಚಿಗೆ ಸರಕಾರದ ತೆರಿಗೆಯ ಮನ್ನಾ ಹಾಗೂ ಸಬ್ಸಿಡಿ ನೀತಿಯಿಂದ ಹಾಗೂ ಕೃಷಿ ವಿಜ್ಞಾನ ಒದಗಿಸಿರುವ ಸುಧಾರಿತ ಅಂಶಗಳಿಂದ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. 50 ವರ್ಷಗಳಲ್ಲಿ ಆಹಾರ ಉತ್ಪಾದನೆಯಲ್ಲಿ ನಾವು ಸಾಧಿಸಿರುವ ಪ್ರಗತಿ ನಮ್ಮ ಜನಸಂಖ್ಯೆಯಲ್ಲಿ ಆಗುತ್ತಲೇ ಬಂದಿರುವ ಹೆಚ್ಚಳವನ್ನು ಗಮನಿಸಿದಾಗ ಅದ್ಭುತವೆನಿಸುವಂಥದು. ಆದರೆ ಈ ಸರಕಾರದ ಸಹಾಯದಿಂದ ಉಂಟಾಗಿರುವ ಪ್ರಯೋಜನಗಳನ್ನು ಗಮನಿಸಿ ಆ ಸಹಾಯದ ಅರ್ಧಾಂಶವನ್ನಾದರೂ ಸಾರ್ವಜನಿಕ ಹಿತಕ್ಕಾಗಿ ಮರಳಿ ಪಡೆಯಬೇಕು ಎನ್ನುವ ನಿರ್ಧಾರವಿರದಿರುವುದರಿಂದ ಈ ಸಹಾಯ ಪಡೆಯುವ ಕೃಷಿ ಸಮುದಾಯ 'ಸಹಾಯ' ತನ್ನ ಹಕ್ಕು ಎಂಬ ತಪ್ಪು ಕಲ್ಪನೆಯನ್ನು ಬೆಳೆಸಿಕೊಳ್ಳುವಂತಾಗಿ ಸಾರ್ವಜನಿಕ ಬೊಕ್ಕಸಕ್ಕೆ ಇದೂ ಒಂದು ಹೊರೆಯಾಗುತ್ತದೆ. ಇಲ್ಲಿ ನಾವು ನೆನೆಪಿಡಬೇಕಾದುದು ಕೃಷಿ ಕ್ಷೇತ್ರ ಇನ್ನೂ ಖಾಸಗೀ ವಲಯದಲ್ಲಿದೆ ಎಂಬುದನ್ನು.

ಸಾರಿಗೆ ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆಗಳ ಸ್ಥಿತಿಯಲ್ಲಿ ಇಂದು ಕೇಳುತ್ತಿರುವ ಖಾಸಗೀಕರಣದ ಮಾತುಗಳು ಯಾಕೆ ಬರುತ್ತಿವೆ ಎಂದು ವಿವರಿಸಲಷ್ಟೆ ಮೇಲಿನ ಉದಾಹರಣೆ. ಕರ್ನಾಟಕ ಸಾರಿಗೆ ಸಂಸ್ಥೆ ಕೋಟಿಗಟ್ಟಲೆ ನಷ್ಟವನ್ನನುಭವಿಸುತ್ತಿರುವುದರಿಂದ ಖಾಸಗೀಕರಣ ಅದಕ್ಕೆ ಪರಿಹಾರವೆನಿಸಬಹುದು ಎಂಬ ತಿಳಿವಳಿಕೆ ಬೆಳೆಯುತ್ತಿರುವುದರಿಂದ ಈ ರೀತಿಯ ಚಿಂತನೆ. ಹಿಂದೆ ಖಾಸಗೀ ವ್ಯವಸ್ಥೆಗಳಿಂದ ಸಾರ್ವಜನಿಕ ಹಿತರಕ್ಷಣೆಯಾಗದು, ಅಂತಹ ಆದರ್ಶ ಸರಕಾರದ ಕರ್ತವ್ಯ ನೀತಿಯಲ್ಲಿ ಬರುವುದರಿಂದ ರಾಷ್ಟ್ರೀಕರಣ ಅಗತ್ಯವೆಂದು ಸಾರಿಗೆ ವ್ಯವಸ್ಥೆಯನ್ನು ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸರಕಾರವೇ ವಹಿಸಿಕೊಂಡಿರುವುದು. ಈಗ ಆಗಿರುವುದೇನು ! ಸರಕಾರ

ಸ್ವಾಮ್ಯದ ಕೆಲಸಗಾರರಿಗೆ ಅವರವರ ವೈಯಕ್ತಿಕ ಹಾಗೂ ಕೌಟುಂಬಿಕ ಸ್ವಾರ್ಥವನ್ನು ಕಾದುಕೊಂಡು ಬರಲು ಕೆಲಸದ ಭದ್ರತೆಯನ್ನು ಒದಗಿಸಿರುವುದು. ಖಾಸಗೀ ವಲಯದಂತೆ ಯಾವ ಕೆಲಸಗಾರನನ್ನೂ ಅನ್ಯಾಯ ಅದಕ್ಷತೆಗಳಿಗಾಗಿ ಕೆಲಸದಿಂದ ತೆಗೆಯುವುದು ಕಷ್ಟ ಸಾಧ್ಯವೆನ್ನುವಂತಹ ರಕ್ಷಣೆ. ಇದಕ್ಕೆ ಕಾರ್ಮಿಕ ಸಂಘಟನೆಗಳ ಬೆಂಬಲವೂ ಇರುವಾಗ ಈ ವ್ಯವಸ್ಥೆಯನ್ನು ಲಾಭದ ಮಾತಂತಿರಲಿ, 'ಸಾರ್ವಜನಿಕ ಹಿತ'ಗಳಿಂದಲೂ ರಕ್ಷಿಸುವುದು ಕಷ್ಟದ ಮಾತಾಗುವಂತೆ ಇಂದಿನ ಪರಿಸ್ಥಿತಿ ಇದೆ. ಈ ವ್ಯವಸ್ಥೆಯನ್ನು ನಿರ್ವಹಿಸುವಾಗ 'ಸೋರಿ' ಹೋಗುವ ಮಾತು ಆಗಾಗ ಕೇಳಿ ಬರುತ್ತಿದೆ. ಇದನ್ನು ತಡೆಗಟ್ಟುವ ಉಪಾಯಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ ಎಂದು ಯಾರೂ ಯೋಚಿಸುವುದಿಲ್ಲ. ಸುಖ ಪ್ರಯಾಣ, ದಕ್ಷ ಕಾರ್ಯನಿರ್ವಹಣೆ, ಇವುಗಳಿಂದ ಯಶಸ್ವಿಯಾಗಿ ಈ ವ್ಯವಸ್ಥೆಯನ್ನು ನಿರ್ವಹಿಸುವಂತಾದರೆ ಆಗಾಗ ದೇಶದ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಮಾಡಲೇಬೇಕಾದ ಪ್ರಯಾಣದ ದರ ಏರಿಕೆಯನ್ನು ಸಾರ್ವಜನಿಕರು ವಿರೋಧಿಸಲಾರರು. ವಿರೋಧಿಸಿದರೂ ನ್ಯಾಯವಾದ ಕಾರಣಗಳನ್ನು ಕೊಟ್ಟು ಈ ವಿರೋಧದ ಕಾವು ತಣ್ಣಗಾಗುವಂತೆ ಮಾಡುವುದು ಸಾಧ್ಯ. ಆದರೆ, ಅಧಿಕಾರದ ಸೂತ್ರ ವಹಿಸಿರುವ ರಾಜಕೀಯ ಶಕ್ತಿಗಳ ರಾಷ್ಟ್ರನಿಷ್ಠೆಗೆ ಹೊರತಾದ ಭ್ರಷ್ಟ ಚಿಂತನೆ, ಕೆಲಸಗಾರರ ಅದಕ್ಷತೆ ಹಾಗೂ ಅವರ ಸಮುದಾಯದ 'ಭ್ರಷ್ಟ' ಚಿಂತನೆ ಇವುಗಳಿಂದ ಸೋರಿ ಹೋಗುವ ವ್ಯವಸ್ಥೆಯ ಆದಾಯವನ್ನು ನಮ್ಮ ರಾಷ್ಟ್ರೀಯವೆನಿಸಬೇಕಾದ ಪರಿಕಲ್ಪನೆಗಳಿಂದ ನೋಡುವಾಗ, ಉತ್ಕೃಷ್ಟ ಸೇವೆ ರಾಷ್ಟ್ರನಿಷ್ಠೆಗೆ ಪೂರಕವೆನಿಸುವ ತಿಳಿವಳಿಕೆ ಇದ್ದು ಪ್ರಾಮಾಣಿಕವೆನಿಸುವ ಕರ್ತವ್ಯನಿಷ್ಠೆಯನ್ನು ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ಪಾಲಿಸಿಕೊಂಡು ಬಂದರೆ ಖಾಸಗೀಕರಣದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಾವು ಕಾಣುತ್ತಿರುವ 'ಒಮ್ಮೆ ರಾಷ್ಟ್ರೀಕರಣ ಮತ್ತೊಮ್ಮೆ ಖಾಸಗೀಕರಣ' ಎಂಬ ಆಡಳಿತೆಯ ಇತಿಹಾಸದ ತಿರುವುಗಳನ್ನು ಸಹಿಸಬೇಕಾದ ಅಗತ್ಯ ಕಂಡುಬರುತ್ತಿರಲಿಲ್ಲ.

ಒಳ್ಳೆಯ ಸೇವೆಗೆ ಮಾದರಿಯೆಂದು ನಾನು ಮುಂಬಯಿ ಮಹಾನಗರದ ಸಾರಿಗೆ ವ್ಯವಸ್ಥೆಯಾದ ಬಿ.ಇ.ಎಸ್.ಟಿ. ಸಂಸ್ಥೆಯ ಉದಾಹರಣೆ ಕೊಡಲಿಚ್ಛಿಸುತ್ತೇನೆ. ಈ ಸಂಸ್ಥೆಯ ವ್ಯವಹಾರದ ಲಾಭ ನಷ್ಟದ ಸಂಖ್ಯಾ ವಿವರ ಈ ಲೇಖನ ಬರೆಯುವ ಸಂದರ್ಭದಲ್ಲಿ ಲೇಖಕನಿಗೆ ದೊರಕಿಲ್ಲವಾದರೂ ಈ ಸಾರಿಗೆ ವ್ಯವಸ್ಥೆಯ ಸೇವೆಯ ಉತ್ಕೃಷ್ಟತೆ ಅನುಭವವೇದ್ಯವಾಗುವಂಥದು. ಪ್ರತಿವರ್ಷ ಅವರು ಆಚರಿಸುವ ಬಿ.ಇ.ಎಸ್.ಟಿ. ದಿನಾಚರಣೆಯಂದು ಸಂಸ್ಥೆ ಜಾಹೀರುಪಡಿಸುವ ವ್ಯವಸ್ಥೆಯ ಸಾಧನೆಯ ವಿವರಗಳು ಅಭಿಮಾನ ಮೂಡಿಸುವಂಥವು. ರಾಜ್ಯ ಸ್ವಾಮ್ಯದ ಈ ವ್ಯವಸ್ಥೆಯಲ್ಲಿ ಟಿಕೇಟು ಪಡೆಯದೆ ಪ್ರಯಾಣಿಸುವುದು ಸಾಧ್ಯವೇ ಇಲ್ಲ. ಸಾಧ್ಯವಾದರೂ ಸಿಕ್ಕಿಬಿದ್ದಾಗ ಅನುಭವಿಸಬೇಕಾಗಿ ಬರುವ ದಂಡ ಅವಮಾನಗಳು ಅಸಹ್ಯ ಎನಿಸುವಂತೆ ಅಲ್ಲಿ ಮೇಲ್ವಿಚಾರಣೆಯಿದೆ. ಬಸ್ಸು ನಿಲುಗಡೆಯ ಸ್ಥಾನಗಳಲ್ಲಿ ಹಠಾತ್ತಾಗಿ ಕಾಣಸಿಗುವ ಪರಿಶೀಲಕ ಸಿಬ್ಬಂದಿಗೆ ಬಸ್ಸಿನ ಕಂಡಕ್ಟರ್ ವರ್ಗವೂ ಪ್ರಯಾಣಿಕರೂ ಹೆದರಿಕೊಳ್ಳುವ

ಸ್ಥಿತಿ ಉಂಟಾಗಿರುವುದು ಸೇವೆಯ ದಕ್ಷತೆಯ ಕಾರಣದಿಂದಾಗಿ. ಮುಂಬಯಿ ಮಹಾನಗರ ಸಾರಿಗೆ ವ್ಯವಸ್ಥೆಯು ಪ್ರತಿದಿನ ಲಕ್ಷಗಟ್ಟಲೆ ಜನರ ಪ್ರಯಾಣಕ್ಕೆ ನೆರವಾಗುವ ಸಂಸ್ಥೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅಲ್ಲಿನ ಕಾರ್ಮಿಕ ವರ್ಗಕ್ಕೂ ಭದ್ರತೆ ಹಾಗೂ ಸಂಘಟನೆಯ ಬಲದ ನೆರವು ಎರಡೂ ಇವೆ. ಸರಕಾರದ ಅಂಗ ಸಂಸ್ಥೆಯ ಈ ವ್ಯವಸ್ಥೆಗೆ ಈ ದಕ್ಷತೆ ಹೇಗೆ ಬಂತು ಎಂದು ಯೋಚಿಸುವಾಗ ಇಲ್ಲಿ ಒತ್ತಾಯಪೂರ್ವಕ ವಾಗಿಯಾದರೂ ಕರ್ತವ್ಯನಿಷ್ಠೆಯನ್ನು ಪ್ರಚೋದಿಸುವ ಕಾರ್ಯನಿರ್ವಹಣಾ ನೀತಿ ಇದೆಯೆಂಬುದನ್ನು ನಾವು ಗಮನಿಸಬೇಕು. ಮುಂಬಯಿಯ ಸಾರಿಗೆ ವ್ಯವಸ್ಥೆಯನ್ನು ಮುಂಬಯಿಯನ್ನು ಸಂದರ್ಶಿಸಿದ ಯಾವ ನಾಗರಿಕನೂ ಅಲ್ಲಗಳೆಯುವುದಿಲ್ಲ. ನಾಗರಿಕ ಪ್ರಜ್ಞೆಯಿಂದ ತಾನಾಗಿಯೇ ಬರಬೇಕಾದ ಕರ್ತವ್ಯನಿಷ್ಠೆ ಇಲ್ಲಿ ಒತ್ತಾಯದಿಂದಲೂ, ಮುಂಬಯಿಯ ಜೀವನಕ್ರಮದಿಂದಲೂ ಬರುತ್ತಿರುವ ಕಾರಣ 'ಅದಕ್ಷತೆ'ಯ ಮಾತು ಅಥವಾ ಖಾಸಗೀಕರಣದ ಮಾತು ಮುಂಬಯಿಯಲ್ಲಿ ಬರುತ್ತಿಲ್ಲ.

ಕರ್ನಾಟಕದ ಸಾರಿಗೆ ವ್ಯವಸ್ಥೆಯಲ್ಲಿ ಏನಾಗುತ್ತಿದೆ? ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಕರ, ಬಸ್ಸುಗಳ ಸಂಖ್ಯೆಯ ಪ್ರಗತಿ ಆಗುತ್ತಲೇ ಇದೆಯಾದರೂ ದಕ್ಷ ಕಾರ್ಯನಿರ್ವಹಣೆ ಯಶಸ್ವಿಯಾಗಿದ್ದರೆ ಟಿಕೇಟು ಪಡೆಯದೆ ಪ್ರಯಾಣಿಸಲು ಸಾಧ್ಯವಾಗುವ, ಕಂಡಕ್ಟರನಿಗೆ ಸ್ವಲ್ಪ ಹಣ ಕೊಟ್ಟು ಟಿಕೇಟು ಬೇಡದೆ ಪ್ರಯಾಣಿಸಲು ಸಾಧ್ಯವಾಗುವ, ಕಂಡಕ್ಟರರ ದುರ್ವರ್ತನೆಯ ಬಗ್ಗೆ ದೂರುವ ಹಲವಾರು ಪತ್ರಗಳು ಆಗಿಂದಾಗ ನಮ್ಮ ದೈನಿಕಗಳಲ್ಲಿ ಪ್ರಕಟವಾಗುವ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಕೆಲಸಗಾರರ ವೈಯಕ್ತಿಕ ಹಾಗೂ ಕೌಟುಂಬಿಕ ಸ್ವಾರ್ಥ ವ್ಯವಸ್ಥೆಯಿಂದ ಸೋರಿ ಹೋಗುವ ಹಣಕ್ಕೆ ದಾರಿ ತೋರಿಸುತ್ತಿರಲಿಲ್ಲ. ಇದರಂತೆಯೇ ಅಧಿಕಾರಿ ವರ್ಗದಲ್ಲೂ ಅದಕ್ಕೂ ಮೇಲಿನ ರಾಜಕೀಯ ಹಸ್ತಕ್ಷೇಪದಿಂದಾಗಿಯೂ ಬಸ್ಸುಗಳ ಬಿಡಿ ಭಾಗಗಳ ಖರೀದಿಯಲ್ಲಿ ಕಾರ್ಯನಿರ್ವಹಣೆಯ ವಿಧಿವಿಧಾನಗಳಲ್ಲಿ ಸರಕಾರದ ಹಣ ಸೋರಿಹೋಗುವುದಷ್ಟೇ ಅಲ್ಲ, ಸಾಧ್ಯವಾಗಬಹುದಾದ ಆದಾಯಕ್ಕೂ ತಡೆ ತರುವ ದಾರಿಗಳ ಕುರಿತು ಕಳವಳ ವ್ಯಕ್ತಪಡಿಸುವ ಅವಕಾಶ ಬರುತ್ತಿರಲಿಲ್ಲ. ಕಾರ್ಯದಕ್ಷತೆ, ಸರಕಾರ ಸ್ವಾಮ್ಯದ ವ್ಯವಸ್ಥೆ ನಿರೀಕ್ಷಿಸಲೇಬೇಕಾದ ಪ್ರಾಮಾಣಿಕವಾದ ರಾಷ್ಟ್ರದ ಹಿತ ನನ್ನ ಹಿತವೂ ಹೌದು ಎನ್ನುವ ನಾಗರಿಕ ಪ್ರಜ್ಞೆ ಕೆಲಸಗಾರರಿಂದ ಆರಂಭಿಸಿ ಅಧಿಕಾರದ ಎಲ್ಲ ಹಂತಗಳ ತನಕ ವ್ಯಾಪಿಸದೆ ಹೋಗುವಾಗ ಸೋರಿಕೆಯ ನಷ್ಟವಷ್ಟೇ ಅಲ್ಲ, ಅದಕ್ಷ ಕಾರ್ಯನಿರ್ವಹಣೆಯ ನಷ್ಟವೂ 'ಖಾಸಗೀಕರಣ'ದ ಮಾತುಗಳಿಗೆ ಎಡೆ ಮಾಡಿ ಕೊಡುತ್ತದೆ. ಇದನ್ನು ವಿರೋಧಿಸುವ ಕಾರ್ಮಿಕ ಸಂಘಟನೆಗಳ ಮಾತುಗಳು ಬೆಲೆ ಕಳೆದುಕೊಳ್ಳುವುದು ಇಂತಹ ಸೋರುವಿಕೆಯನ್ನು ತಡೆಗಟ್ಟುವ ಸಾಮರ್ಥ್ಯ ತಮಗಿದ್ದೂ ಅದನ್ನು ನೋಡಿಯೂ ನೋಡದಂತೆ ತಮ್ಮ ನಾಗರಿಕ ಪ್ರಜ್ಞೆಯಲ್ಲೂ ಕೊರತೆ ಇದೆ ಎಂದು ತೋರಿಸಿಕೊಡುವಾಗ. ಬೆಂಗಳೂರಿನ ಶಹರದ ಸಾರಿಗೆಯನ್ನು ನಿರ್ವಹಿಸುವ ಬಿ.ಟಿ.ಎಸ್. ಅಧಿಕಾರಿಗಳು ಮುಂಬಯಿಯ ಬಿ.ಇ.ಎಸ್.ಟಿ. ಸಂಸ್ಥೆಯ ಕಾರ್ಯ ವಿಧಾನದ ಅನುಕರಣೆಯನ್ನು – ಟಿಕೇಟು ಕೊಡುವ ವ್ಯವಸ್ಥೆ, ಪ್ರಯಾಣಿಕರು

ಬಸ್ಸುಗಳನ್ನು ಹತ್ತುವ ಇಳಿಯುವ ರೀತಿ, ಪ್ರಯಾಣಿಸಬಹುದಾದ ಪ್ರಯಾಣಿಕರ ಮಿತಿ, ಟಿಕೇಟು ಪಡೆಯದೆ ಪ್ರಯಾಣಿಸುವವರ 'ಚೆಕಿಂಗ್' ವ್ಯವಸ್ಥೆ ಇವನ್ನೆಲ್ಲ ಏಕೆ ಅನುಸರಿಸುತ್ತಿಲ್ಲವೆಂಬ ಆಶ್ಚರ್ಯ ಈ ಲೇಖಕನಿಗಿದೆ.

ವಿದ್ಯುತ್ ಸರಬರಾಜು ವ್ಯವಸ್ಥೆಯ ಕಾರ್ಯನಿರ್ವಹಣೆ ಇನ್ನೊಂದು ರೀತಿಯದು. ಹೆಚ್ಚುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ಉತ್ಪಾದನೆ ಕಡಿಮೆಯಾಗಿ ಈ ವ್ಯವಸ್ಥೆ ಕಂಗೆಡುತ್ತಿದೆ ಎಂಬ ಮಾತು ನಿಜವಾದರೂ ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಗೆ ಕೊಟ್ಟ ಪ್ರಾಶಸ್ತ್ಯ ಕಡಿಮೆ ಎಂಬ ಸತ್ಯವನ್ನು ಗಮನಿಸಿದರೂ ಈ ವ್ಯವಸ್ಥೆಯ ಕಾರ್ಯದಕ್ಷತೆಯ ಬಗ್ಗೆ ಅನುಮಾನ ಮೂಡುವಂತೆ ಸೋರಿ ಹೋಗುತ್ತಿರುವ ವಿದ್ಯುತ್ ಶಕ್ತಿಯ ಗಮನಾರ್ಹ ಅಂಶದ ಬಗ್ಗೆ ಚರ್ಚೆಯಾಗುವ ಪರಿಸ್ಥಿತಿ ಬಂದಿದೆ. ಈ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುತ್ತಿಲ್ಲವೆಂದು ಖಾಸಗೀಕರಣದ ಮಾತುಗಳೂ ಕೇಳಿಬರುತ್ತಿವೆ. ಕೊಜೆಂಟ್ರಿಕ್ಸ್ ಯೋಜನೆಗಳಂತಹ ಯೋಜನೆಗಳ ಅನುಷ್ಠಾನ ನಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯ ಎಂದು ರಾಜಕೀಯ ಸೂತ್ರ ವಹಿಸಿದವರು ಹೇಳುತ್ತಿರುವಾಗ ಪರಿಸರವಾದಿಗಳು ಸೋರಿ ಹೋಗುತ್ತಿರುವ ವಿದ್ಯುತ್ ಉತ್ಪಾದನೆಯ ಗಮನಾರ್ಹ ಅಂಶವನ್ನು ತಡೆಗಟ್ಟಲು ಯಾಕೆ ಸಾಧ್ಯವಾಗುತ್ತಿಲ್ಲ ಎಂದು ಕೇಳುತ್ತಿದ್ದಾರೆ. ಈ ಸೋರಿ ಹೋಗುವ ವಿಧಾನಗಳಾವುವು ? ಸಾಗಾಟದಲ್ಲಿ ನಷ್ಟವಾಗುವ ವಿದ್ಯುತ್, ಇದು ನಮ್ಮ ರಾಜ್ಯದಲ್ಲಿ ಇತರ ರಾಜ್ಯಗಳಿಗಿಂತ ಕಡಿಮೆ ಪ್ರಮಾಣದಲ್ಲಿದೆ ಎಂಬ ಚರ್ಚಾಸ್ಪದವಾದ ಹೇಳಿಕೆಯೊಂದಿದೆ. ಆದರೆ ಸೋರಿ ಹೋಗುವ ಇತರ ವಿಧಾನಗಳನ್ನು ತಡೆಗಟ್ಟುವ ಯೋಗ್ಯ ಕಾರ್ಯನೀತಿಯನ್ನು ರೂಪಿಸಿಕೊಂಡಿದ್ದೇವೆ ಎಂದು ಯಾರೂ ಹೇಳುವುದಿಲ್ಲ. ಬಳಕೆದಾರರು ಹಾಗೂ ಕೆಳಸ್ತರದ ಕೆಲಸಗಾರರು ಕೂಡಿಕೊಂಡು ದುರ್ವ್ಯವಹಾರ ನೀತಿಯಿಂದ – ಮೀಟರ್‌ಗಳ ಅಸಮರ್ಪಕ ಬಳಕೆ, ಕಿಂಚಿತ್ ಹಣದಾಸೆಗೆ ನೇರವಾಗಿ ದಾಖಲೆಯಿರದೆ ವಿದ್ಯುತ್ ಒದಗಿಸುವುದು, ಕೃಷಿಕರಿಗಾಗಿ ಕೊಡುವ ವಿದ್ಯುತ್‌ನ ದುರ್ಬಳಕೆ - ನೌಕರ ವರ್ಗಕ್ಕೆ ದೊರಕುವ ಉಚಿತ ವಿದ್ಯುತ್ ಸೌಲಭ್ಯದ ದುರ್ಬಳಕೆ ಇವೆಲ್ಲ ವಿದ್ಯುತ್ ಹಾಗೂ ಅದರಿಂದ ದೊರಕಬೇಕಾದ ಆದಾಯ ಸೋರಿ ಹೋಗುವ ದಾರಿಗಳು.

ಭಾರತದ ಉತ್ತರದ ರಾಜ್ಯಗಳಲ್ಲಿ ಸೋರಿಹೋಗುವ ವಿದ್ಯುತ್‌ನ ಪ್ರಮಾಣ ಇನ್ನಷ್ಟು ಹೆಚ್ಚು ಎಂಬ ವಾದವನ್ನೂ ನಾವು ಕೇಳುತ್ತಿದ್ದೇವೆ. ಎಂದರೆ ಸೋರಿಹೋಗಲು ನೆರವಾಗುವುದು ಸಾರ್ವತ್ರಿಕವಾದ ಒಂದು ನೀತಿ ಎಂಬ ಭಾವನೆ ಬೆಳೆಯಲು ಕಾರಣವಾಗಿರುವುದು ಪ್ರಜಾಪ್ರಭುತ್ವದಲ್ಲಿ ಆ ವ್ಯವಸ್ಥೆಯನ್ನು ಪೋಷಿಸಬೇಕಾದ ನಾಗರಿಕ ಪ್ರಜ್ಞೆಯ ಕೊರತೆಯನ್ನೇ ಬಿಂಬಿಸುತ್ತದೆ. ಬೀದಿಯಲ್ಲಿ ಎಂಜಲನ್ನು ಕಂಡ ಕಂಡಲ್ಲಿ ಉಗುಳುವುದೂ ನಮ್ಮ ಮನೆಯೊಳಗೆ ಅದೇ ರೀತಿ ಉಗುಳುವುದೂ ಒಂದೇ ಎಂದು ತಿಳಿದಾಗ ನಾಗರಿಕ ಪ್ರಜ್ಞೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನನ್ನ ರಾಷ್ಟ್ರದ, ನನ್ನ ರಾಜ್ಯದ ಸಾರ್ವಜನಿಕ ಹಿತ ನನ್ನ ಕರ್ತವ್ಯ ಎಂಬ ತಿಳಿವಳಿಕೆ ಇದ್ದಾಗ ಮಾತ್ರ ಯಾವುದೇ ವ್ಯವಸ್ಥೆಯಲ್ಲಿ ಅಕ್ರಮ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ. ಇದ್ದರೂ ಅವು ಬೇಗನೇ

ಬೆಳಕಿಗೆ ಬಂದು ಶಿಕ್ಷೆಯ ದಾರಿ ನೋಡುವ ಪ್ರಕರಣಗಳಾಗುತ್ತವೆ. ಹೀಗಿದ್ದಲ್ಲಿ ಖಾಸಗೀಕರಣ ಒಳ್ಳೆಯದೇ ರಾಷ್ಟ್ರೀಕರಣ ಒಳ್ಳೆಯದೇ ಎಂಬ ಚರ್ಚೆಯೂ ಉದ್ಭವಿಸುವುದಿಲ್ಲ. ಪ್ರಜಾಪ್ರಭುತ್ವವನ್ನು ಪೋಷಿಸಿ ಉಳಿಸಬೇಕಾದ ನಾಗರಿಕ ಪ್ರಜ್ಞೆ, ಒಂದೇ ಪ್ರಾಮಾಣಿಕವಾದ ತಿಳಿವಳಿಕೆಯಿಂದ ಬರಬೇಕು, ಇಲ್ಲವೇ ಸರ್ವಾಧಿಕಾರ ಪ್ರವೃತ್ತಿಯ ಆಡಳಿತೆ ವಿಧಿಸಬಹುದಾದ ಶಿಕ್ಷೆಯ ಭಯದಿಂದ ಬರಬೇಕು. ಇವೆರಡೂ ಇರದ ತ್ರಿಶಂಕು ಸ್ಥಿತಿ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮಗೆ ಅನುಭವವೇದ್ಯವಾಗಿದೆ. ನಾಡಿನ ಹಿರಿಯ ಸಾಹಿತಿ ಶಿವರಾಮ ಕಾರಂತರು ಯಾವಾಗಲೂ ಹೇಳುತ್ತಿದ್ದಂತೆ ನಾವು ದೊಡ್ಡವರಾದರೆ ಮಾತ್ರ ನಮ್ಮ ನಾಡು ದೊಡ್ಡದಾದೀತು.

ನಾಗರಿಕ ಪ್ರಜ್ಞೆ

ಐದು ಸಾವಿರ ವರ್ಷಗಳ ನಾಗರಿಕತೆಯ ಇತಿಹಾಸ ನಮ್ಮದೆಂದು ಕೊಚ್ಚಿಕೊಳ್ಳುವ ನಾವು, ಸಿಂಧೂಕೊಳ್ಳದ ನಾಗರಿಕತೆಯ ಉತ್ತರಾಧಿಕಾರಿಗಳೆಂದು ಹೇಳಿಕೊಳ್ಳುವ ನಾವು, ಹರಪ್ಪಾ ಮೊಹೆಂಜೊದಾರೊ ಸಾಂಸ್ಕೃತಿಕ ಅವಶೇಷಗಳು ನಮ್ಮವೆಂದು ಇತಿಹಾಸದ ನೆನಪು ಮಾಡಿಕೊಳ್ಳುವ ನಾವು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ನಾಗರಿಕತೆ ನಾವು ಕಟ್ಟಿಕೊಂಡ ಜಾತಿ ವ್ಯವಸ್ಥೆಯ ಮಿತಿಗಳನ್ನು ದಾಟುವಷ್ಟು ಶಕ್ತವಾಗಿದೆಯೇ ಎಂಬ ಅನುಮಾನ ಮೂಡುವಂತಹ ಪರಿಸ್ಥಿತಿಯನ್ನು ಇದಿರಿಸಬೇಕಾಗಿದೆ.

ಸಂಯುಕ್ತ ರಾಜ್ಯ ಅಮೆರಿಕ ಹೊಸ ನಾಡಾಗಿ, ವಲಸೆ ಬಂದ ಹತ್ತು ಹಲವು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಜನರಿಂದ ರೂಪಿತವಾದ ಒಂದು ಮಿಶ್ರ ಸಂಸ್ಕೃತಿಯನ್ನು ರೂಪಿಸಿಕೊಂಡು ಇನ್ನೂರು ವರ್ಷಗಳಲ್ಲೇ ಸಂಪತ್ತು ಸಮೃದ್ಧಿಗಳ ರಾಷ್ಟ್ರವಾಗಿ ವಿಶ್ವದ ರಾಜಕಾರಣವನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆದುಕೊಂಡಿರುವುದು ಇಂದು ಐತಿಹಾಸಿಕ ಸತ್ಯ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ, ಅಮೆರಿಕನ್ ನಾಗರಿಕತೆಯ ಹಿಂದಿರುವ ಬಲ ಪಂಥೀಯ ಆದರ್ಶಗಳೇನೇ ಇರಲಿ, ವಿಶ್ವದ ಎಲ್ಲಾ ಭಾಗಗಳಿಂದ – ಭಾರತವೂ ಸೇರಿದಂತೆ – ರಾಷ್ಟ್ರೀಯ ಪರಿಕಲ್ಪನೆಗಳ ಆದರ್ಶ, ವಾಸ್ತವಗಳ ಮಿತಿಯನ್ನು ದಾಟಿ, ಸಾವಿರಾರು ಜನರನ್ನು ತನ್ನೆಡೆ ಸೆಳೆಯುವ ಚುಂಬಕ ಶಕ್ತಿಯನ್ನು ಅದು ಸಾಧಿಸಿಕೊಂಡದ್ದಾದರೂ ಹೇಗೆ? ಒಂದು ಮುಖ್ಯವಾದ ಕಾರಣ ಅದರ ಸಮೃದ್ಧಿ ಸಂಪತ್ತುಗಳು. ಇವು ರೂಪಿಸುವ ಜೀವನ ವಿಧಾನ. ಇನ್ನೂರಕ್ಕೂ ಬಹಳಷ್ಟು ಹೆಚ್ಚು ವರ್ಷಗಳ ಇತಿಹಾಸವಿರದ ಈ ನಾಡಿನಲ್ಲಿ ರೂಪಿತವಾಗಿರುವ ರಾಷ್ಟ್ರೀಯ ಅಸ್ಮಿತೆಯ ತಳಹದಿ ಎಲ್ಲಿದೆ. ಆ ನಾಡಿನ ಸಂಪತ್ತಿನಂತೆ ಅದೂ ಸಮೃದ್ಧವಾಗಿದೆಯೆ ಅದು ರಾಷ್ಟ್ರಾಭಿಮಾನದ ಭಾವುಕತೆಯನ್ನು ಪ್ರಚೋದಿಸುವಷ್ಟು ಶಕ್ತಿಯುತವಾಗಿದೆಯೆ. ಯುರೋಪಿನ, ಇತಾಲಿಯನ್, ಸ್ಪಾನಿಶ್, ಫ್ರೆಂಚ್, ಜರ್ಮನ್, ಐರಿಶ್ ಮೊದಲಾದ ಮೂಲಗಳಿಂದ ಬಂದಂಥ, ಏಕರೂಪದ ಧಾರ್ಮಿಕ ಹಿನ್ನೆಲೆಯಿಂದ ಹೆಚ್ಚು ಮಟ್ಟಿಗೆ ಬಂದಂಥವರಾದರೂ ವೈವಿಧ್ಯಪೂರ್ಣ ಸಾಂಸ್ಕೃತಿಕ ಅಸ್ಮಿತೆಗಳಿಗೆ ಪಕ್ಕಾಗಿದ್ದು ವಲಸೆ ಬಂದಂಥ ಜನ, ಅಮೆರಿಕದ ರಾಷ್ಟ್ರೀಯ ಅಸ್ಮಿತೆಯನ್ನು ರೂಪಿಸುವುದಾಗಲೀ, ಅದಕ್ಕೆ ಹೊಂದಿಕೊಳ್ಳುವುದಾಗಲೀ ಸಾಧ್ಯವೇ ಎಂಬ ವಿಚಾರಗಳನ್ನೆಲ್ಲ ಈ ಲೇಖನವನ್ನು ಕಾಡಿರುವುದು ನಮ್ಮ ಸ್ವಾತಂತ್ರ್ಯದ 50 ವರ್ಷಗಳ ಇತಿಹಾಸದ ಚಿಂತನೆ ನಡೆಸುವಾಗ.

1984ರ ಲಾಸ್ ಎಂಜಲೀಸ್ ನಗರದಲ್ಲಿ ನಡೆದ ಒಲಿಂಪಿಕ್ ಪಂದ್ಯಗಳನ್ನು ಅಮೆರಿಕನ್ ಟಿ.ವಿ. ಜಾಲಗಳ ಮೂಲಕ ನೋಡುವ ಅವಕಾಶ ಈ ಲೇಖಕನಿಗೆ ಒದಗಿತ್ತು. ಅಮೆರಿಕದ ಇಂದಿನ ಶ್ರೀಮಂತಿಕೆಯ ಹೆಚ್ಚಿನ ಪಾಲನ್ನು

ಅನುಭವಿಸುತ್ತಿರುವವರು ಯೂರೋಪಿನಿಂದ ವಲಸೆ ಬಂದು ನೆಲೆ ನಿಂತ ಬಿಳಿಯರೇ. ದೀರ್ಘ ಕಾಲದ 'ಸಿವಿಲ್ ರೈಟ್ಸ್' ಚಳವಳದಿಂದ ರೂಪುಗೊಂಡ ಕಾಯಿದೆಗಳ ಆಧಾರದಿಂದ ಸಮಾನತೆ ಅಲ್ಲಿ ಎಲ್ಲರಿಗೂ ಇದೆಯಾದರೂ, ಬಿಳಿ ಕರಿಯರ ಜನಾಂಗ ದ್ವೇಷದ ಕುರುಹುಗಳನ್ನು ಇನ್ನೂ ಅಲ್ಲಿ ಕಾಣಬಹುದು. ಅಮೆರಿಕನ್ ಸಮಾಜ ಜೀವನದಲ್ಲಿ ಸಮಷ್ಟಿಯ ಬದುಕಿನಲ್ಲಿ ಇವರೆಲ್ಲ ಬೆರೆತು ರೂಪಿಸಿದ ರಾಷ್ಟ್ರೀಯ ಅಸ್ಮಿತೆಯ ಆದರ್ಶವನ್ನು ಕೊಂಡಾಡಬೇಕು ಎನ್ನುವುದು ಧಾರ್ಷ್ಟ್ಯದ ಮಾತಾಗುತ್ತದೆ. ಇಂದಿಗೂ ಸಮುದ್ರ ತಟದ ಸ್ವಚ್ಛಂದ ವಿಹಾರದಲ್ಲಿ ಬಿಳಿಯರೂ ಕರಿಯರೂ ಯಾವ ಭೇದಭಾವವಿರದೆ ಬೆರೆಯುವುದು ತೀರ ಅಪರೂಪವಾಗಿ. ಹೀಗಿದ್ದೂ ಲಾಸ್ ಎಂಜಲೀಸ್ ಒಲಿಂಪಿಕ್ ಪಂದ್ಯಗಳಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಕರಿಯರು ಪದವಿ ಪಡೆಯಲು ವೇದಿಕೆಯೇರಿದಾಗ ಅಮೆರಿಕದ ರಾಷ್ಟ್ರಗೀತೆ ಹಾಡಿದ ಸಂದರ್ಭಗಳಲ್ಲಿ ಭಾವುಕರಾಗಿ ಕಣ್ಣಿಂದ ನೀರಿಳಿಸುತ್ತಿದ್ದುದನ್ನು ನಾನು ಕಂಡಿದ್ದೇನೆ. ಬಿಳಿಯರ ಕರಿಯರ ಭಾವೈಕ್ಯ (integration) ಪೂರ್ತಿಯಾಗಿ ಸಾಧಿತವಾಗಿದೆ ಎನ್ನಲು ಅನುಮಾನಿಸಬೇಕಾದ ನಾಡಲ್ಲಿ, ವ್ಯಕ್ತಿ, ಸಮುದಾಯ, ರಾಷ್ಟ್ರ ಜೀವನ ಇವುಗಳನ್ನು ಒಂದುಗೂಡಿಸುವ ಶಕ್ತಿ ಬರೇ ಇನ್ನೂರು ವರ್ಷಗಳ ಇತಿಹಾಸವಿರುವ ನಾಡಿಗೆ ಹೇಗೆ ಬಂತು, 5000 ವರ್ಷಗಳ ನಾಗರಿಕತೆಯ ಇತಿಹಾಸವಿರುವ ನಮಗೇಕೆ ಸಾಧ್ಯವಾಗಿಲ್ಲ ಎಂದು ಯೋಚಿಸುವಾಗ ನಮ್ಮ ನಾಗರಿಕತೆಯ ಇತಿ ಮಿತಿಗಳನ್ನು ತಿಳಿಯುವ ಕುತೂಹಲ ಉಂಟಾಗುತ್ತಿದೆ. ನಮ್ಮ ಸ್ವಾತಂತ್ರ್ಯದ ಅರ್ಥಾತ್ ನಮ್ಮ ಆತ್ಮವಿಶ್ವಾಸದ ಸಂಕಲ್ಪ ಶಕ್ತಿಯನ್ನು ಸೂಚಿಸುವ ನಮ್ಮ ರಾಷ್ಟ್ರಧ್ವಜ ಸಂಕೇತಿಸುವುದು ಅಶೋಕನ ಧರ್ಮಚಕ್ರವನ್ನು. ಹಾಗೆಯೇ ಬಿಳಿಯ ಶಾಂತಿಪ್ರಿಯತೆ, ಹಸುರಿನ ಜೀವನೋತ್ಸಾಹ, ಕೇಸರಿಯ ಸಂಯಮ ಸಹಿಷ್ಣುತೆಗಳನ್ನು. ಸ್ವಾತಂತ್ರ್ಯಪೂರ್ವದ ಹೋರಾಟದ ಕಾಲದಲ್ಲಿ ಹೋರಾಟದ ಸಂಕಲ್ಪ ಶಕ್ತಿಯ ಸಂಕೇತವಾಗಿದ್ದುದು ಗ್ರಾಮ ಜೀವನವನ್ನೂ ಸ್ವಾವಲಂಬನೆಯನ್ನೂ ಸಂಕೇತಿಸುವ ಚರಕಾ. ರಾಷ್ಟ್ರಧ್ವಜ ಬೆಳೆದು ಬಂದ ಇತಿಹಾಸವೇ ಅದರ ಕುರಿತ ಗೌರವವನ್ನೂ, ಅಭಿಮಾನವನ್ನೂ ಭಾವುಕತೆಯ ಮಟ್ಟಕ್ಕೂ ಬೆಳೆಸಬೇಕಾಗಿದ್ದ ನಮ್ಮ ನಾಗರಿಕ ಪ್ರಜ್ಞೆ ಸ್ವಾತಂತ್ರ್ಯದ 50 ವರ್ಷಗಳಲ್ಲಿ ರಾಷ್ಟ್ರಧ್ವಜ, ರಾಷ್ಟ್ರಗೀತೆಗಳಿಗೆ ಯಾವ ರೀತಿಯ ಗೌರವವನ್ನು ತೋರಿಸುತ್ತಿದೆ ಎಂದು ಚಿಂತಿಸಿದಾಗ ನಮ್ಮ ರಾಷ್ಟ್ರೀಯ ಅಸ್ಮಿತೆ ಒಂದು ಮರೀಚಿಕೆಯೇ ಎಂಬ ಸಂದೇಹವೂ ಬಾರದಿಲ್ಲ.

ರಾಷ್ಟ್ರೀಯ ಅಸ್ಮಿತೆಯ ಹಿನ್ನೆಲೆಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೂ ರಾಷ್ಟ್ರಗೀತೆಯನ್ನು ಹಾಡುವುದಕ್ಕೂ ಶಾಸನದ ವ್ಯಾಪ್ತಿಗೊಳಪಟ್ಟ ಕೆಲವು ನಿಯಮಗಳಿವೆ. ಇವು ಉತ್ತಮ ನಾಗರಿಕ ಲಕ್ಷಣಗಳಿಂದ ಪ್ರೇರಿತವಾದಂಥವು. ಆದರೆ ಮುಂಬಯಿ ನಗರದಲ್ಲಿ ಸ್ವಾತಂತ್ರ್ಯಪೂರ್ವದ ತುಂಬ ನಿಷ್ಠಾವಂತ ಕಾಂಗ್ರೆಸಿಗರಾಗಿದ್ದ ಶ್ರೀವರದ ಎಂಬುವರು ಸ್ವಾತಂತ್ರ್ಯ ಬಂದಮೇಲೆ ರಾಷ್ಟ್ರಧ್ವಜವನ್ನು ಸರಿಯಾದ ಕ್ರಮದಲ್ಲಿ ಹಾರಿಸಲಿಲ್ಲವೆಂದು ಸಂಬಂಧಿಸಿದವರ ಮೇಲೆ ಕ್ರಮ ಜರುಗಿಸಲು ದೂರು ಸಲ್ಲಿಸಿದ್ದು ಎಷ್ಟೋ ಬಾರಿ. ಈಗಲೂ ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೂ

ಸಾಮಾನ್ಯವಾಗಿ ಧ್ವಜವಂದನೆ ಒಂದು ಒತ್ತಾಯದ ಕಾರ್ಯಕ್ರಮವೆನ್ನುವಂಥ ನಿರುತ್ಸಾಹದ ಪ್ರತಿಕ್ರಿಯೆ ಸಾಮಾನ್ಯರಲ್ಲೂ ಇದೆಯೆಂಬ ಬೇಸರದ ಪರಿಸ್ಥಿತಿಯನ್ನು ನಾವು ಇದಿರಿಸುತ್ತಿದ್ದೇವೆ. ಸಾರ್ವಜನಿಕ ಧ್ವಜವಂದನೆಯ ಸನ್ನಿವೇಶಗಳಲ್ಲೂ ಗೌರವ ಪೂರ್ವಕ ಎರಡು ನಿಮಿಷ ಕಾಲ ಸ್ತಬ್ಧರಾಗಿ ನಿಲ್ಲುವುದೂ ಸಾಧ್ಯವಿಲ್ಲವೇನೋ ಎಂಬಂಥ ನಡೆವಳಿಕೆ ನಮ್ಮದು. ಸ್ವಾತಂತ್ರ್ಯ ದಿನದಂದು, ಪ್ರಜಾಪ್ರಭುತ್ವ ದಿನದಂದು ಪುಟ್ಟ ಮಕ್ಕಳು ಕಾಗದದ ಧ್ವಜ ಹಿಡಿದು ಆಡುವ ಸಂತೋಷ ಕೂಡ ನಮಗೆ ಮಕ್ಕಳಾಟಿಕೆ ಯೆಂದು ತೋರುವ ಪರಿಸ್ಥಿತಿ ನಮ್ಮ ರಾಷ್ಟ್ರೀಯ ಅಸ್ಮಿತೆಗೆ ಹಿಡಿದಿರುವ ಕನ್ನಡಿ.

ರಾಷ್ಟ್ರಗೀತೆಯ ಕುರಿತು ನಾವು ತೋರುತ್ತಿರುವ ಗೌರವವೂ ಒತ್ತಾಯ ಪ್ರಜ್ಞೆಯಿಂದಷ್ಟೆ ಬರಬೇಕಾಗಿದೆಯೇ ಎಂಬ ಸಂದೇಹವನ್ನು ಮುಂದುವರಿಸಿಕೊಂಡೇ ಬಂದಿದ್ದೇವೆ. ಸ್ವಾತಂತ್ರ್ಯ ಬಂದ ಹೊಸತಿನಲ್ಲಿ ಮಹಾರಾಷ್ಟ್ರದಲ್ಲಿ – ಆಗಿನ ಮುಂಬಯಿ ರಾಜ್ಯ – ಸಿನೆಮಾ ಮಂದಿರಗಳಲ್ಲಿ ಪ್ರದರ್ಶನ ಮುಗಿಯುವಾಗ ರಾಷ್ಟ್ರಗೀತೆಯನ್ನು ನುಡಿಸಬೇಕೆಂಬ ಆಜ್ಞೆ ಮಾಡಲಾಗಿತ್ತು. ಸಿನೆಮಾ ವೀಕ್ಷಿಸುವ ಮಧ್ಯಮ ವರ್ಗದ ಪ್ರೇಕ್ಷಕರಾಗಲೀ (ಸುಶಿಕ್ಷಿತರೆನಿಸಿಕೊಳ್ಳುವವರು) ಇತರರಾಗಲೀ ಈ ಆಜ್ಞೆಗೆ ಮರ್ಯಾದೆ ಕೊಡದ ರೀತಿಯಲ್ಲಿ ಎದ್ದು ನಿಲ್ಲದೆ ಅವಸರವಸರವಾಗಿ ಚಿತ್ರಮಂದಿರದಿಂದ ಹೊರಬೀಳುತ್ತಿದ್ದುದರಿಂದ ಈ ಆಜ್ಞೆಯನ್ನು ಹಿಂದೆಗೆದುಕೊಳ್ಳಬೇಕಾಯಿತು. ಇನ್ನು ಶಿಕ್ಷಣ ಸಂಸ್ಥೆಗಳಲ್ಲೂ ರಾಷ್ಟ್ರಗೀತೆಯನ್ನು ಸಾಮೂಹಿಕವಾಗಿ ಹಾಡುವಾಗ, ಇದನ್ನು ಕಡ್ಡಾಯವಾಗಿ ಹಾಡಬೇಕಾದ ಶಿಕ್ಷೆ ಎಂಬ ರೀತಿಯಲ್ಲಿ 'ಯಾಕೆ ಬೇಕು?' ಎಂಬ ರೀತಿಯಲ್ಲೆ ಹಾಡುವುದು ರಾಷ್ಟ್ರಾಭಿಮಾನದ ಸಂಸ್ಕೃತಿಯನ್ನು ಮೂಡಿಸುವುದರಲ್ಲಿ ನಮ್ಮ ಯಶಸ್ಸು ಸೀಮಿತ ಎಂಬುದನ್ನು ತೋರಿಸುತ್ತಿದೆ. ಇನ್ನು ನಮ್ಮ ಮಂತ್ರಿ ಮಾಗಧರು ವೇದಿಕೆಯನ್ನಲಂಕರಿಸಿ ರಾಷ್ಟ್ರಗೀತೆ ಹಾಡಬೇಕಾದಂತಹ ಸನ್ನಿವೇಶಗಳಲ್ಲಿ ವೇದಿಕೆಯ ಮೇಲಿರುವವರೂ, ಕೆಳಗಿರುವವರೂ ಪ್ರತಿಕ್ರಿಯಿಸುವ ರೀತಿ ನಾಚಿಕೆಯನ್ನುಂಟು ಮಾಡುವಂಥದು. ಕೆಲವರು ಬೇಕೋ ಬೇಡವೋ ಎಂದು ತುಟಿಗಳನ್ನು ಮಾತ್ರ ಅಲುಗಾಡಿಸುತ್ತಾರೆ. ಕೆಲವರು ಅಷ್ಟನ್ನೂ ಮಾಡುವುದಿಲ್ಲ. ಇದು ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ ಮೇಲೂ ಬದಲಾಗಿಲ್ಲ. ಆರಾಮವಾಗಿ ಟಿ.ವಿ. ನೋಡುತ್ತಿರುವವರೂ ರಾಷ್ಟ್ರಾಧ್ಯಕ್ಷರಾಗಲೀ ಪ್ರಧಾನ ಮಂತ್ರಿಗಳಾಲೀ ಭಾಷಣ ಮಾಡಿದ ಸಂದರ್ಭಗಳಲ್ಲಿ ರಾಷ್ಟ್ರಗೀತೆ ಕೇಳಿದಾಗ ಎದ್ದು ನಿಲ್ಲುವವರೆಷ್ಟು ಮಂದಿ! ಕಾರಣಗಳೇನಿರಬಹುದು? ಭಾರತದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಬೆಳೆಯುತ್ತಲೇ ಇರುವ ಮಧ್ಯಮ ವರ್ಗ, ಇಂದು ಸಾಮಾನ್ಯ ಅಂದಾಜಿನಂತೆ 15 ಕೋಟಿಗೂ ಹೆಚ್ಚು. ಇವರಲ್ಲಿ ಶಿಕ್ಷಣದ ಪ್ರಮಾಣ ಗಮನಾರ್ಹವಾಗಿದೆ. ನಮ್ಮ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳೆಲ್ಲ ಇಂಗ್ಲಿಷ್ ಶಿಕ್ಷಣದಿಂದಲೂ, ಪಾಶ್ಚಿಮಾತ್ಯ ಚಿಂತನ ವಿಧಾನಗಳಿಂದಲೂ ಪ್ರಭಾವಿತವಾಗಿವೆಯಾದರೂ ನಮ್ಮ ಮಧ್ಯಮ ವರ್ಗ ರಾಷ್ಟ್ರೀಯ ಅಸ್ಮಿತೆಯ ನೆರವು ಪಡೆಯಲಿಚ್ಛಿಸುವುದು ತಮ್ಮ ಸುಖ ಜೀವನದ ಸ್ವಾರ್ಥವನ್ನು ಪೋಷಿಸಬಹುದಾದ ಸ್ವಾರ್ಥದ ಪರಿಧಿಯಲ್ಲೆ. ಮಹಾತ್ಮಾ ಗಾಂಧಿಯವರು ಹುತಾತ್ಮರಾದ ಜನವರಿ 30

ರಂದು 11 ಗಂಟೆಗೆ ಸೈರನ್ ಬಾರಿಸಿದಾಗ ಎರಡು ನಿಮಿಷ ಕಾಲ ಮಾಡುತ್ತಿದ್ದ ಯಾವ ಕೆಲಸವನ್ನೂ ಬಿಟ್ಟು ಎದ್ದು ನಿಂತು ನಾಡಿನ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರಿಗೆ ಮೌನ ಪ್ರಾರ್ಥನೆ ಸಲ್ಲಿಸಬೇಕು ಎಂದು ನಿರ್ಧರಿಸಲಾಗಿತ್ತು. ಇದೊಂದು ಕಾಟಾಚಾರದ ನಿರ್ಬಂಧ ಎನ್ನುವಷ್ಟರ ಮಟ್ಟಿಗೆ ನಾವು ಈ ಕಾರ್ಯಕ್ರಮವನ್ನು ತಿರಸ್ಕರಿಸುತ್ತಿಲ್ಲವೆ! ಸ್ವಾತಂತ್ರ್ಯಪೂರ್ವದಲ್ಲಿ 'ವಂದೇ ಮಾತರಂ' ಗೀತೆಗೆ ಸಾರ್ವತ್ರಿಕವಾಗಿ ದೊರಕುತ್ತಿದ್ದ ಗೌರವ ಸ್ವಾತಂತ್ರ್ಯ ಬಂದ ಮೇಲೆ ಮಾಯವಾಗುವ ಸನ್ನಿವೇಶ ಏಕೆ ಉಂಟಾಗಿದೆ. ಅದನ್ನು ಶಾಸನ ಸಭೆಗಳಲ್ಲಿ ಹಾಡಬೇಕೋ ಬೇಡವೋ ಎಂಬ ವಿವಾದಗಳನ್ನು ಸೃಷ್ಟಿಸುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ಮಾತನ್ನು ನಾವು ಟಂಕಿಸಿದ್ದು ಸ್ವಾತಂತ್ರ್ಯ ಬಂದ ಮೇಲಲ್ಲ. ದೀರ್ಘ ಕಾಲ ನಮ್ಮ ರಾಷ್ಟ್ರದ ಸಂಸ್ಕಾರದಲ್ಲಿ (ethos) ಬೆರೆತುಕೊಂಡಿದ್ದ ಅದನ್ನು ವಿವಾದಕ್ಕೇಕೆ ಗುರಿ ಮಾಡಬೇಕು. ಇಂದು 'ವಂದೇ ಮಾತರಂ' ಹಾಡಿನ ಕೆಲವು ಸಾಲುಗಳನ್ನಷ್ಟೆ ನಾವು ಹಾಡುತ್ತಿರುವುದು; ಬಂಕಿಂ ಅವರ ಇಡಿಯ ಪದ್ಯವನ್ನಲ್ಲ. ಈ ಹಾಡುವ ಸಾಲುಗಳಲ್ಲಿ ಜನ್ಮಭೂಮಿಯನ್ನು ತಾಯಿಯೆಂದು ಗೌರವಿಸುವ ಭಾವವಷ್ಟೆ ಪ್ರಕಟವಾಗುತ್ತಿರುವುದು. ಬೇರೆ ಧರ್ಮದ ಲೇಪ ಏನೂ ಇಲ್ಲ. ಆದರೂ ಇದು ಧಾರ್ಮಿಕ ನಂಬಿಕೆಗಳಲ್ಲಿ ತಲೆ ಹಾಕುತ್ತಿದೆಯೆಂಬ ಆರೋಪದ ಸಮರ್ಥನೆಗೆಂದು ಇದನ್ನು ದೂರವಿಡಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಧರ್ಮನಿರಪೇಕ್ಷತೆ ಒಂದು ಮುಖ್ಯ ಸೂತ್ರ. ರಾಜಕಾರಣ ಧರ್ಮದ ಗೊಂದಲದಲ್ಲಿ ತೊಡಗಿಸಿಕೊಳ್ಳುವಂತಿಲ್ಲ. ಹಾಗೆಯೇ ಯಾವುದೇ ಧರ್ಮ ಕೂಡ ರಾಷ್ಟ್ರನಿಷ್ಠೆಯ ಪರಿಕಲ್ಪನೆಗಳಲ್ಲಿ ತಲೆ ಹಾಕುವುದು ಸರಿಯೇ ಎಂದು ನಾವು ಕೇಳುವುದೂ ಇಲ್ಲ. 'ವಂದೇ ಮಾತರಂ'ನ ಪ್ರಸ್ತಾಪ ಒಂದೇ ಕಾರಣಕ್ಕಾಗಿ. ಅದು ನಮ್ಮ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬ್ರಿಟಿಷರ ಆಡಳಿತೆಯ ವಿರುದ್ಧ ಹೋರಾಡುವ ಸಂಕಲ್ಪ ಶಕ್ತಿಯನ್ನು ಉಂಟುಮಾಡಿದ ಗೀತೆ. ಇದನ್ನು ಮರೆತಾಗ ನಾವು ಇತಿಹಾಸವನ್ನೇ ಮರೆಯುತ್ತೇವೆ. ನಮ್ಮ ರಾಷ್ಟ್ರೀಯ ಹೋರಾಟದ ಮೂಲ ನೆಲೆಗಳನ್ನು ನೆನಪಿಸಿಕೊಳ್ಳದ ನಾವು ರಾಷ್ಟ್ರೀಯ ಅಸ್ಮಿತೆಯನ್ನು ಉಳಿಸಿಕೊಳ್ಳುವ, ಬೆಳೆಸಿಕೊಳ್ಳುವ ಮಾತು ಉದ್ಭವಿಸುವುದಿಲ್ಲ.

ನಮ್ಮ ಶಿಕ್ಷಣದ ಸಂಸ್ಕಾರ ಪಡೆದ ಜನಸಮುದಾಯ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳಿಗೆ ಕಳೆದ 50 ವರ್ಷಗಳಲ್ಲಿ ಪ್ರತಿಕ್ರಿಯಿಸುತ್ತ ಬಂದಿರುವ ರೀತಿ ಹೀಗಾದರೆ, ಉಳಿದ ಶಿಕ್ಷಣದ ಯಾವ ಸಂಸ್ಕಾರವನ್ನೂ ನಮ್ಮ ಆಡಳಿತೆಯಿಂದ ದೊರಕಿಸಿಕೊಳ್ಳಲು ಕಳೆದ 50 ವರ್ಷಗಳಲ್ಲಿ ಅಸಮರ್ಥರಾದ ಕೋಟಿಗಟ್ಟಲೆ ಹಳ್ಳಿಗರ ಪಾಡೇನು. ಇವರಲ್ಲಿ ಬಹಳಷ್ಟು ಜನ – ನಾವು ದಾರಿದ್ರ್ಯರೇಖೆಯಿಂದ ಕೆಳಗಿರುವವರು ಎಂದು ಅಂಕೆ ಸಂಖ್ಯೆಗಳಿಂದ ಸ್ಪಷ್ಟಪಡಿಸುತ್ತಿರುವಂಥವರು – ರಾಷ್ಟ್ರಧ್ವಜವನ್ನು ಪ್ರಾಯಶಃ ನೋಡಿಯೂ ಇಲ್ಲ, ರಾಷ್ಟ್ರಗೀತೆಯನ್ನು ಕೇಳಿಯೂ ಇಲ್ಲ. ನಾಳಿನ ಊಟದ ಚಿಂತೆಯೇ ಮುಖ್ಯವಾಗಿ, ಬೀಸುತ್ತಿರುವ ಆಧುನಿಕತೆಯ ಹಾಗೂ ಆಧುನಿಕವೆನಿಸುವ ವಿಚಾರಗಳ

ಗಾಳಿಯನ್ನು ಇದಿರಿಸಲಾಗದೆ ತತ್ತರಿಸುತ್ತ ತಮ್ಮ ಅಲ್ಪ ತೃಪ್ತಿಯ ನೋವನ್ನೂ ಇನ್ನಷ್ಟು ನೋವಿಗೆ ಒಳಪಡಿಸಬಹುದಾದ ಜೀವನ ರೀತಿಯನ್ನು ಬೇರೆಯವರಲ್ಲಿ ಕಾಣುವಾಗ ತಮ್ಮಲ್ಲಿ ಇದ್ದುದನ್ನು ಉಳಿಸಿಕೊಳ್ಳುವುದು ಹೇಗೆ, ಇತರರಂತೆ ಬದುಕುವುದು ಹೇಗೆ ಎಂಬ ಯೋಚನೆ ಬೆಳೆಯುತ್ತಿರುವುದರಿಂದಾಗಿಯೇ ನಾವು ಬೋಡೋ, ಜಾರ್ಖಂಡ್, ಉತ್ತರಖಂಡ್ ಮೊದಲಾದ ಸಮಸ್ಯೆಗಳನ್ನು ಈ 50 ವರ್ಷಗಳಲ್ಲಿ ಇದಿರಿಸ ಬೇಕಾಗಿರುವುದು. ಇದರ ಇನ್ನೊಂದು ಹಂತದಲ್ಲಿ ನಮ್ಮ ಜೀವನವನ್ನು ನಮಗೆ ಬೇಕಾದಂತೆ ಸುಧಾರಿಸಲು ಇರಬೇಕಾದ ಅಧಿಕಾರದ ಸ್ವಾರ್ಥ ನಮ್ಮ ಪಾಲಿಗೆ ಬರುವ ವಿಧಾನಗಳೇನು ಎಂಬ ಚಿಂತನೆಯಿಂದಲೇ ನಾವು ಪಂಜಾಬ್, ಅಸ್ಸಾಂ – ಹಾಗೆಯೇ ಕಾಶ್ಮೀರ ಕೂಡ – ಸಮಸ್ಯೆಗಳನ್ನು ಇದಿರಿಸಬೇಕಾಗಿ ಬಂದಿರುವುದು. ಇಂಥಲ್ಲಿ ಸಮಗ್ರ ಭಾರತಕ್ಕೆ ಅನ್ವಯವಾಗುವ ರಾಷ್ಟ್ರೀಯವೆನಿಸುವ ಅಸ್ಮಿತೆ ಅಭಿಮಾನಗಳನ್ನು ಬೆಳೆಸಿ ಕೊಳ್ಳುವ ಮಾತೇ ಉದ್ಭವಿಸುವುದಿಲ್ಲ. ಇನ್ನು ಶಿಕ್ಷಣದ ಸಂಸ್ಕಾರವೇ ಇರದ ಪ್ರತಿಶತ ಐವತ್ತಕ್ಕೂ ಹೆಚ್ಚು ಜನರ ಬದುಕಿಗೆ ಅವರ ನಿತ್ಯ ಜೀವನವೊಂದೇ ಸತ್ಯ. ರಾಷ್ಟ್ರೀಯವೆನಿಸುವ ಸಂಸ್ಕಾರಗಳ ನೆನಪು ಬರುವುದು, ವೋಟಿನ ಬೇಟೆಗೆಂದು ರಾಜಕಾರಣಿಗಳು ಬರುವಾಗ. ಅವರು ಕೊಡುವ ಆಮಿಷಗಳ – ಸೀರೆ, ಧೋತಿ ಮುಂತಾದವು – ಅಲ್ಪ ತೃಪ್ತಿಯಲ್ಲಿ ಅವರು ರಾಷ್ಟ್ರವನ್ನು ನೋಡುವವರು. ವೋಟಿನ ಸಂದರ್ಭದಲ್ಲಿ ಮಾತ್ರ ಪಡೆಯಬಹುದಾದ ಇಂತಹ ಅಲ್ಪ ಸಂತೋಷವನ್ನು ಕೊಡುವ ಆಮಿಷಗಳ – ಕೆಲವೆಡೆ ಮದ್ಯ ಕೂಡ – ಜೀವನದ ಪ್ರಬಲ ಆಕರ್ಷಣೆಗಳೆನಿಸುವುದನ್ನು ನಾವು ಸ್ವಾತಂತ್ರ್ಯದ 50 ವರ್ಷಗಳಲ್ಲಿ ಸಾಕಷ್ಟು ನೋಡಿದ್ದೇವೆ.

ಈ ಸ್ಥಿತಿಗೆ, – ನಾಗರಿಕ ಪ್ರಜ್ಞೆಯ ಕೊರತೆಗೆ – ಕಾರಣಗಳನ್ನು ಹುಡುಕುವಾಗ ನಮಗೆ ಕಾಣುವ ಸತ್ಯಗಳಲ್ಲಿ ಮುಖ್ಯವಾದುದು, ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದುದು ರಾಷ್ಟ್ರೀಯ ಅಸ್ಮಿತೆಯ ನೆನಪು ತಂದುಕೊಳ್ಳುವ ಶಿಕ್ಷಣದ ಸಂಸ್ಕಾರ ಪಡೆದ ಜನ ಸಮುದಾಯ. ಈ ನಿಟ್ಟಿನಲ್ಲಿ ನಾವು 50 ವರ್ಷ ಕಾಲ ಎಡವಿದ್ದೇವೆ. ನಮ್ಮ ಎಂಟು ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕೆ ದೊರಕಿರುವ ಪ್ರಾಶಸ್ತ್ಯವನ್ನು, ಅದಕ್ಕೆ ಯೋಜಿಸಲಾಗಿರುವ ಆರ್ಥಿಕ ಮಿತಿಯನ್ನು ಗಮನಿಸಿದಾಗ ಈ ಸತ್ಯ ನಿಚ್ಚಳವಾಗಿ ಪ್ರಕಟವಾಗುತ್ತದೆ. ನಮ್ಮ ಸಂವಿಧಾನಕ್ಕೆ ಮಾತಿನ ಮರ್ಯಾದೆ ಕೊಡುವ ನಾವು ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಅದು ನಿಗದಿಪಡಿಸಿರುವ ಅವಧಿಯನ್ನು ಮರೆಯುತ್ತೇವೆ. 'ಗರೀಬೀ ಹಠಾವೊ' ಎಂದು 50 ವರ್ಷಗಳಲ್ಲೂ ಉಸುರುತ್ತಲೇ ಬಂದಿರುವ ನಾವು ಶಿಕ್ಷಣದ ಸಂಸ್ಕಾರವಿರದ ಗರೀಬೀ ನಿವಾರಣೆ ಇನ್ನಷ್ಟು ಸಮಾಜ ಕಂಟಕರನ್ನೇ ನಿರ್ಮಿಸೀತು ಎಂದು ತಿಳಿಯಲು ಏಕೆ ಸಾಧ್ಯವಾಗುತ್ತಿಲ್ಲ. ಅಷ್ಟೆಯೇ, ಇಂದು ನಮ್ಮನ್ನು ಭೂತದಂತೆ ಕಾಡುತ್ತಿರುವ ಜಾತೀಯತೆಯ ಸಮಸ್ಯೆಗೂ ಶಿಕ್ಷಣದ ಸಂಸ್ಕಾರದಲ್ಲಿ ಉತ್ತರವಿದೆ ಎಂಬ ಸಾಮಾನ್ಯ ತಿಳಿವಳಿಕೆಯೂ ಏಕೆ ಸಾಧ್ಯವಾಗುತ್ತಿಲ್ಲ. ಕಾರಣ ಒಂದೇ. ನಮ್ಮ ಸಂವಿಧಾನ ನಿರ್ಮಾಪಕರು ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯನ್ನು ರಕ್ಷಿಸಿಕೊಂಡು ಬರುವ ವಿಧಿ ವಿಧಾನಗಳನ್ನು ಸೂಚಿಸಿರುವರಾದರೂ ಪ್ರಾಮಾಣಿಕವೆನಿಸ

ಬಹುದಾದ ರಾಷ್ಟ್ರಪ್ರೇಮವನ್ನು ಕುದುರಿಸಬಹುದಾದ ಕರ್ತವ್ಯ ಸಂಹಿತೆಯನ್ನೇನೂ ಅದರಲ್ಲಿ ನಮೂದಿಸಿಲ್ಲ. ಪ್ರಜಾಪ್ರಭುತ್ವ ಪ್ರಜೆಗಳದೇ ಪ್ರಭುತ್ವವಾಗಿರಬಹುದು. ಆದರೆ ಅದನ್ನು ರಕ್ಷಿಸಬಹುದಾದ ಒಂದು ಸಾಂಸ್ಕೃತಿಕ ಅನನ್ಯತೆ, ಸಾರ್ವತ್ರಿಕವಾಗಿ ಎಲ್ಲ ಪ್ರಜೆಗಳಿಗೂ ಅನ್ವಯವಾಗಬಹುದಾದ ಅನನ್ಯತೆ ಇದ್ದರೇನೇ ಅದು ಗಮನಾರ್ಹ ವೆನಿಸುವುದು. ಜನಸಂಖ್ಯೆಯ ದೃಷ್ಟಿಯಿಂದ ವಿಶ್ವದಲ್ಲೇ ಅತ್ಯಂತ ದೊಡ್ಡ ಲೋಕಸತ್ತಾತ್ಮಕ ವ್ಯವಸ್ಥೆ ಎಂದಷ್ಟಕ್ಕೆ ಅದು ಮಾದರಿ ವ್ಯವಸ್ಥೆಯಾಗುವುದು ಸಾಧ್ಯವಿಲ್ಲವೆನ್ನುವಂತೆ ಭಾರತದ ಲೋಕಸತ್ತೆಯಲ್ಲಿ ಅಧಿಕಾರದ ಹಂಚಿಕೊಳ್ಳುವಿಕೆಯ ಅಧ್ಯಯನ ನಡೆಸಿ ದವರಲ್ಲಿ ಭಾರತದ ವಿಘಟಿತವೆನಿಸುವ ಸಾಮಾಜಿಕ ವ್ಯವಸ್ಥೆಯಲ್ಲಿ – ಮುಖ್ಯವಾಗಿ ಜಾತೀಯತೆಯಿಂದಾಗಿಯೇ – ಅದರ ಯಶಸ್ಸು ಅಪಯಶಸ್ಸುಗಳ ಬಗ್ಗೆ ಭಿನ್ನ ಭಿನ್ನ ನಿಲುವುಗಳನ್ನು ತಳೆದಿದ್ದಾರೆ. ಅದರ ಚರ್ಚೆ ಈ ಲೇಖನದ ಉದ್ದೇಶವಲ್ಲವಾದರೂ, ಭಾರತೀಯ ಲೋಕಸತ್ತೆಯ, ಅದರ ಸಾಮಾಜಿಕ ವ್ಯವಸ್ಥೆಯ ಸಮಸ್ಯಾತ್ಮಕವೆನಿಸುವ ಪರಸ್ಪರ ಸಂಘರ್ಷಕ್ಕೆ ಎಡೆ ಮಾಡಿಕೊಡಬಹುದಾದ ವೈವಿಧ್ಯವನ್ನು ರಾಷ್ಟ್ರನಿಷ್ಠೆಯ ಸಾಂಸ್ಕೃತಿಕ ಅನನ್ಯತೆಗೆ ಒಳಪಡಿಸುವ ಯಾವ ಪ್ರಯತ್ನವನ್ನೂ ಸ್ವಾತಂತ್ರ್ಯದ ನಂತರದ ನಮ್ಮ ಆಡಳಿತೆ ಪರಿಣಾಮಕಾರಿಯಾಗಿ ಮಾಡಿಲ್ಲವೆಂದೇ ಹೇಳಬೇಕಾಗುವುದು.

ಮೆಕಾಲೆ ರೂಪಿಸಿದ ಶಿಕ್ಷಣ ವ್ಯವಸ್ಥೆ ಬ್ರಿಟಿಷ್ ಸರಕಾರದ ಆಡಳಿತೆಯ ಹಿತ ದೃಷ್ಟಿಯಿಂದ ಅದನ್ನು ಪೋಷಿಸಬಹುದಾದ ಇಂಗ್ಲೀಷು ಶಿಕ್ಷಣ ಪಡೆದ ಭಾರತೀಯರ ಮಧ್ಯಮ ವರ್ಗವನ್ನು ಹುಟ್ಟು ಹಾಕಿದ್ದು ಈ ಶಿಕ್ಷಣ ನೀತಿಯ ಪರಿಣಾಮವಾದರೂ ಅದಕ್ಕೆ ತೀರ ವ್ಯತಿರಿಕ್ತವೆನಿಸುವ ಪರಿಣಾಮಗಳನ್ನು – ಪಾಶ್ಚಿಮಾತ್ಯ ಪರಿಕಲ್ಪನೆಗಳಿಂದ ಪ್ರಭಾವಿತವಾದ ಸ್ವಾತಂತ್ರ್ಯದ ಹಂಬಲವನ್ನು, ಪ್ರೇರೇಪಿಸಿ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಚಾಲನೆ ಕೊಟ್ಟಿದ್ದು ಈಗ ಇತಿಹಾಸ. ಆದರೆ ಸ್ವಾತಂತ್ರ್ಯ ಬಂದ ಮೇಲೆ ಈ ಶಿಕ್ಷಣ ವಿಧಾನವನ್ನು ಆಮೂಲಾಗ್ರ ಬದಲಾಯಿಸಿ ನಮ್ಮ ವಿವಿಧ ಧರ್ಮಗಳ, ವಿವಿಧ ರೀತಿಯ ಆಚರಣೆಗಳ, ವಿವಿಧ ಪ್ರಾದೇಶಿಕವೆನಿಸುವ ಜೀವನ ಕ್ರಮಗಳ ಹಿನ್ನೆಲೆಯನ್ನು ಅರಿತುಕೊಂಡು, ಈ ಬಹುಮುಖಿ (Pluralistic) ಸಾಮಾಜಿಕ ಜೀವನದ ಮೂಲ ಸತ್ವ ಕೆಡದಂತೆ, ಆದರೆ ರಾಷ್ಟ್ರದ ಅನನ್ಯತೆಯನ್ನು ಪೋಷಿಸುವ ಸಾಂಸ್ಕೃತಿಕ ಅಸ್ಮಿತೆಗೆ ಪೂರಕ ವಾಗುವಂತೆ ವಿಕೇಂದ್ರೀಕೃತ ಶಿಕ್ಷಣ ನೀತಿಯನ್ನು ರೂಪಿಸಲು ನಾವು ಅಸಮರ್ಥ ರಾಗಿದ್ದೇವೆಂದೇ ಇಂದು ಹಿಂದುಳಿದವರು, ಬುಡಕಟ್ಟಿನ ಜನರು, ಜಾತಿ ವ್ಯವಸ್ಥೆಯ ವಿವಿಧ ಪದರುಗಳಿಗೆ ಸೇರಿದವರು, ಸೇರದವರು, ಮತಾಂತರ ಹೊಂದಿಯೂ ಹಿಂದುಳಿದವರಾಗಿ ಇರಬಯಸುವವರು ಎಂದೆಲ್ಲ ರೀತಿಯ ವರ್ಗೀಕೃತ ಸಾಮಾಜಿಕ ಚಿಂತನೆಯನ್ನೇ ಕಾಣುತ್ತಿರುವುದು. ಇಂದು ವಸಾಹತುಶಾಹಿ ಸಾಂಸ್ಕೃತಿಕ ಹಿಡಿತದ ವಿರುದ್ಧ ಕೂಗೆಬ್ಬಿಸುವವರೂ ಸ್ವಾತಂತ್ರ್ಯ ಬಂದ ತರುಣದಲ್ಲೆ ನಾವು ವಸಾಹತುಶಾಹಿ ವ್ಯವಸ್ಥೆಯನ್ನು ಪೋಷಿಸುವ ಶಿಕ್ಷಣ ಕ್ರಮವನ್ನು ಆಮೂಲಾಗ್ರವಾಗಿ ಬದಲಿಸಬೇಕಿತ್ತೆಂದು ಹೇಳಲು ಅನುಮಾನಿಸುತ್ತಿರುವುದೂ, ಇಂಗ್ಲೀಷಿನ ಹೊರತಾದ ರಾಷ್ಟ್ರಭಾಷೆ ಇರಬೇಕಿತ್ತೆಂದು ಹೇಳಲು ಅನುಮಾನಿಸುತ್ತಿರುವುದು, ಒಂದೇ ಒಂದು ಕಾರಣದಿಂದ –

ಇಂಗ್ಲೀಷು ಆಧುನಿಕ ಜಗತ್ತಿನ ವಿದ್ಯಮಾನಗಳಿಗೆ ಬೆಳಕಿಂಡಿಯಾಗಿರುವುದರಿಂದ ಅದನ್ನು ಯಾವ ರೀತಿಯಿಂದಲೂ ದೂರವಿಡುವುದು ಸರಿಯಲ್ಲವೆಂದು.

ಇದರಿಂದ ಆಗಿರುವುದೇನು. ಬ್ರಿಟಿಷರಿಗೆ ಭಾರತೀಯವೆನಿಸುವ ನಾಗರಿಕ ಪ್ರಜ್ಞೆ ಅವರ ಅಧಿಕಾರದ ಅಸ್ತಿತ್ವಕ್ಕೆ ಕುಠಾರಪ್ರಾಯವೆನಿಸಬಹುದೆಂಬ ಭಯವಿತ್ತು. ಭಾರತೀಯ ಜನಜೀವನದ ವೈವಿಧ್ಯದಲ್ಲಿ ಬಿರುಕುಗಳಿದ್ದಷ್ಟು ಅವರ ಆಡಳಿತೆಯ ಸ್ವಾರ್ಥಕ್ಕೆ ಸಹಕಾರಿಯಾಗಬಹುದೆಂಬುದನ್ನು ಅವರು ತಿಳಿದಿದ್ದುದರಿಂದಲೇ ಹಿಂದೂ-ಮುಸ್ಲಿಂ ಸಮಸ್ಯೆಯ ಅಸಹ್ಯ ಸ್ವರೂಪವನ್ನು ನಾವು ಕಾಣುವಂತಾದುದು. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ನಾವು ನಮ್ಮ ಸಾಮಾಜಿಕ ವ್ಯವಸ್ಥೆಯ ಭಿನ್ನ ರೂಪಗಳಲ್ಲಿ ಸಮನ್ವಯಕ್ಕೆ ಸಹಕರಿಸಬಹುದಾದ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನಗಳನ್ನು ಪರಿಣಾಮಕಾರಿಯಾಗಿ ಮಾಡಲಿಲ್ಲವೆಂದೇ ಇಂದು ಮೀಸಲಾತಿಯ ಆದರ್ಶದಿಂದ ಹಿಂದುಳಿದವರು, ಅತ್ಯಂತ ಹಿಂದುಳಿದವರು, ಅನುಸೂಚಿತ ಜಾತಿಯವರು, ಇತರ ಹಿಂದುಳಿದ ವರ್ಗದವರು, ಎಂದೆಲ್ಲ ನಮ್ಮ ಸಮಾಜದ ಸ್ವರೂಪವನ್ನು ಬ್ರಿಟಿಷರು ಬಿಟ್ಟು ಹೋದಂತೆ ಮುಂದುವರಿಸಿಕೊಂಡು ಬಂದಿದ್ದೇವೆ. ನಮ್ಮ ರಾಜಕಾರಣಿಗಳ ಅಧಿಕಾರದ ಸ್ವಾರ್ಥಕ್ಕಾಗಿಯೂ, ನಮ್ಮ ಲೋಕಸತ್ತೆಯನ್ನು ಪೋಷಿಸುವ ಚುನಾವಣೆಗಳಲ್ಲಿ ವೋಟಿನ ಬೇಟೆಗಾಗಿಯೂ ಜಾತಿ ವ್ಯವಸ್ಥೆಯಿಂದ ವಿಘಟಿತವಾದ ಭಾರತೀಯ ಸಮುದಾಯ ಜೀವನವನ್ನು ಸಮುದಾಯದ ಉದ್ಧಾರದ ಮಾತು ಹೇಳುತ್ತ ಅದೇ ರೀತಿ ಮುಂದುವರಿಸಿಕೊಂಡು ಬಂದಿದ್ದೇವೆ. ರಾಷ್ಟ್ರೀಯ ಅಸ್ಮಿತೆಯನ್ನು ಪೋಷಿಸುವ, ಸ್ವಾಭಿಮಾನಕ್ಕೆ ಕಾರಣವಾಗುವ ರಾಷ್ಟ್ರಭಾಷೆಯ ಕುರಿತ ನಮ್ಮ ಚಿಂತನೆಯೂ ಗೋಜಲು ಗೋಜಲಾಗಿಯೇ ಇದೆ. ಇದರ ವಿಷಮ ಪರಿಣಾಮವಾಗಿ ಇಂದು ಗುಂಪು ಗುಂಪುಗಳೆಲ್ಲ ತಮ್ಮ ತಮ್ಮ ಹಿತರಕ್ಷಣೆಯ ಸ್ವಾರ್ಥದ ಪರಿಧಿಯಿಂದ ಮುಂದುವರಿದು ಭಾರತೀಯವೆನಿಸುವ ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಿಲ್ಲ.

ಗಾಂಧೀಜಿಗೆ ಇದರ ಅರಿವಿತ್ತು. ನಮ್ಮ ಜಾತಿ ವ್ಯವಸ್ಥೆಯ ಕಳಂಕವೆನಿಸಿರುವ ಅಸ್ಪೃಶ್ಯತೆಯ ವಿರುದ್ಧ ಅವರು ಉಂಟು ಮಾಡಿದ ರಾಷ್ಟ್ರೀಯ ಜಾಗೃತಿ, ರಾಷ್ಟ್ರೀಯ ಸ್ವಾತಂತ್ರ್ಯದ ಕುರಿತು ಸಂಘಟಿಸಿದ ಜಾಗೃತಿಯಷ್ಟೇ ಪರಿಣಾಮಕಾರಿಯಾಗಿತ್ತು. ಅಸ್ಪೃಶ್ಯತೆಯ ವಿರುದ್ಧ ಅವರು ಮಾಡಿದ ಹೋರಾಟ ಭಾರತೀಯತ್ವದ ಹಿನ್ನಲೆಯಲ್ಲೆ ಆಗಿತ್ತು. ಅವರ ಭಾರತೀಯ ಅಸ್ಮಿತೆಯನ್ನು ಮರೆಯದೆ ನಮ್ಮ ಸಮಾಜ ಜೀವನದಲ್ಲಿ ಅಸ್ಪೃಶ್ಯರೆನಿಸಿಕೊಂಡವರಿಗೆ ಇತರರಿಗೆ ಸಿಗುವಂತಹ ಹಾಗೂ ನ್ಯಾಯವಾಗಿ ಸಿಗಬೇಕಾದ ಗೌರವ ಸಿಗುತ್ತಿಲ್ಲವೆಂದೆ ಗಾಂಧೀಜಿ ಪ್ರಾಮಾಣಿಕವಾಗಿ ಅವರ ಏಳಿಗೆಗಾಗಿ ಶ್ರಮಿಸಿದ್ದರು. ತಾನು ದಿಲ್ಲಿಯಲ್ಲಿರುವ ಸಂದರ್ಭಗಳಲ್ಲಿ ಗಾಂಧೀಜಿ ನೆಲೆಸುತ್ತಿದ್ದುದು ಭಂಗೀ ಕಾಲನಿಯಲ್ಲಿ. ಅವರ ರಾಜಕೀಯ ಸಹಚರರಲ್ಲಿ ಠಕ್ಕರ್ ಬಾಪಾ ಮೊದಲಾದವರು ಮುಖ್ಯರೆಂಬುದನ್ನು ನಾವು ಮರೆಯುತ್ತೇವೆ. 'ಯಂಗ್ ಇಂಡಿಯಾ' ದಂತೆ ಅವರ 'ಹರಿಜನ' ಪತ್ರಿಕೆಯೂ ಅವರ ವಿಚಾರಗಳ ವಾಹಕವಾಗಿತ್ತು.

ಅಸ್ಪೃಶ್ಯರೆಂದು ನಮ್ಮ ಜಾತಿ ವ್ಯವಸ್ಥೆ ಹೊರಗಿರಿಸಿದ ಜನರನ್ನು 'ಹರಿಜನ' ರೆಂದು, ದೇವರ ಪ್ರೀತಿಯ ಜನರೆಂದು ಕರೆದವರೂ ಅವರೇ. ಆದರೆ ನಮ್ಮ ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳಲ್ಲಿ ಈ 'ಹರಿಜನ' ಶಬ್ದವನ್ನು ಅಸ್ಪೃಶ್ಯ ಶಬ್ದವೆಂದು ಪರಿವರ್ತಿಸು ವುದರಲ್ಲಿ ನಾವು ಯಶಸ್ವಿಗಳಾಗಿದ್ದೇವೆ. ಶಾಸನ ಸಭೆಗಳಲ್ಲಿ ಕೂಡ ಈ ಶಬ್ದ ತಿರಸ್ಕಾರವನ್ನು ಸೂಚಿಸುವುದೆಂಬ ಆಶ್ಚರ್ಯಕರ ನಿರ್ಣಯಕ್ಕೆ ನಾವು ತಲುಪಿದ್ದೇವೆ. ಬದಲಾಗಿ ನಾವು ಉಪಯೋಗಿಸುವ 'ದಲಿತ' ಶಬ್ದಕ್ಕೆ ನಿಘಂಟಿನಲ್ಲಿ ದೊರಕುವ ಅರ್ಥಕ್ಕೂ, ನಾವು ಈ ಶಬ್ದವನ್ನು ಒಂದು ಜಾತಿ ವ್ಯವಸ್ಥೆಗೆ ಹೊಂದಿಸಿ ಹೊರಡಿಸುವ ಅರ್ಥಕ್ಕೂ ಹೆಚ್ಚು ಸಂಬಂಧವಿಲ್ಲ ಎಂಬುದನ್ನೂ ಮರೆಯುತ್ತೇವೆ.

ಈ ಸಂದರ್ಭದಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಅಕ್ಟೋಬರ್ 25, 1996 ರಂದು ಸಂಯುಕ್ತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮೋಹಿತ್ ಸೇನ್ ಎಂಬುವರು ಬರೆದು ಪ್ರಕಟಿಸಿದ ಒಂದು ಲೇಖನದ ಕೆಲವು ಸಾಲುಗಳನ್ನು ಉದ್ಧರಿಸುವುದು ಅಪ್ರಸ್ತುತವೆನಿಸದು.

"However sacrilegious it may sound to some, the so called untouchables, backward castes and the rest followed Mahatma Gandhi in vastly greater numbers than they did Ambedkar during the freedom struggle. And Gandhiji gave honour and dignity to a far larger number of them than did Ambedkar, Jyothiba Phule or anybody else for that matter. This was because, while appreciating the specific disabilities of scheduled and other so called lower castes, he also saw the greater element of their identity i.e. that they were Indians."

ಗಾಂಧೀಜಿಯವರ ಪ್ರತ್ಯೇಕ ಮತದಾನ ಕ್ಷೇತ್ರಗಳ ಕುರಿತ ವಿರೋಧವನ್ನು ನಾವು ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಗಮನಿಸಬೇಕು. ಹೀಗೆಂದ ಮಾತ್ರಕ್ಕೆ ಇಂದು ದಲಿತರೆಂದು ಕರೆಸಿಕೊಳ್ಳುವವರ ಶೋಷಣೆ – ಮುಖ್ಯವಾಗಿ ಅವರ ಬಡತನ ಅಜ್ಞಾನಗಳ ಶೋಷಣೆ – ಸವರ್ಣೀಯರೆಂದು ಕರೆಸಿಕೊಳ್ಳುವವರಿಂದ ಆಗುತ್ತಿದ್ದುದನ್ನು ಪ್ರತಿಭಟಿಸಲು, ಅವರಲ್ಲಿ ಆತ್ಮಾಭಿಮಾನವನ್ನು ಮೂಡಿಸಲು, ಅವರು ಇತರ ಭಾರತದ ನಾಗರಿಕರಂತೆ ಸರಿಸಮಾನರಾಗಿ ನಮ್ಮ ಸಂವಿಧಾನದ ರಕ್ಷಣೆ ಪಡೆಯಲು ಅರ್ಹರಾಗಿದ್ದು ಆ ಸಂವಿಧಾನವನ್ನು ರಕ್ಷಿಸುವ 'ನಾಗರಿಕ ಪ್ರಜ್ಞೆ' ಯನ್ನು ಬೆಳೆಸಿಕೊಳ್ಳಲು ಡಾ. ಅಂಬೇಡ್ಕರ್, ಜ್ಯೋತಿಭಾ ಫುಲೆ ಮೊದಲಾದವರು ಮಾಡಿರುವ ಮಹತ್ವದ ಕೆಲಸವನ್ನು ಕಡೆಗಣಿಸಿದಂತಾಗುವುದಿಲ್ಲ. ಅವರೆಲ್ಲ ಭಾರತೀಯ ಅನನ್ಯತೆಗೆ ಹೊಂದಿ ಕೊಳ್ಳಬಾರದೆಂದು ಎಲ್ಲೂ ಹೇಳಿಲ್ಲ. ಆದರೆ ಇಂದು ಹಿಂದುಳಿದವರನ್ನು ಒಂದು ಪ್ರತ್ಯೇಕವೆನಿಸುವ ಜಾತಿ ವರ್ಗಕ್ಕೆ ಸೇರಿಸಿದಂತೆ ಅವರ ಉದ್ಧಾರದ ಮಾತುಗಳನ್ನು ನಾವು ಆಡುವಾಗ ವೈಷಮ್ಯ ಸಂಘರ್ಷಗಳಿಗೇ ಒತ್ತು ಕೊಡುವಾಗ ಸಾಮಾಜಿಕ ಸಂಸ್ಕಾರಗಳು ಸಮನ್ವಯದ ಸಂಸ್ಕೃತಿಯ ಹಾದಿಯಲ್ಲಿ, ರಾಷ್ಟ್ರಾಭಿಮಾನದ ಹಿನ್ನೆಲೆಯಲ್ಲಿ,

ಮುಂದುವರಿಯುವುದು ಕಷ್ಟ. ಡಾ. ಅಂಬೇಡ್ಕರ್ ಅವರು ಮೂರು ರೀತಿಗಳಲ್ಲಿ ತೀರ ಹಿಂದುಳಿದ ವರ್ಗಗಳ ಶೋಷಣೆಯನ್ನು ಕೊನೆಗೊಳಿಸಲು ಸಾಧ್ಯ ಎಂದು ತಿಳಿದಿದ್ದರು. ಚಮ್ಮಾರರೇ ಮೊದಲಾದ ರೀತಿಯ ಜೀವನಕ್ರಮವನ್ನು ನೆಚ್ಚಿಕೊಂಡು ತೀರ ಶೋಷಣೆಗೊಳಗಾಗುತ್ತಿರುವವರು ತಮ್ಮ ಪಾರಂಪರಿಕ ಉದ್ಯೋಗಗಳನ್ನು ಬಿಟ್ಟುಕೊಡಬೇಕು, ಬೌದ್ಧ ಧರ್ಮವನ್ನು ಅವಲಂಬಿಸಬೇಕು, ಅಸ್ಪೃಶ್ಯತೆಯನ್ನು ವಿರೋಧಿಸಬೇಕು ಎಂಬುದು ಅವರ ನಿಲುವಾಗಿತ್ತು. ಈ ರೀತಿಯ ಪರಿವರ್ತನೆಯ ಆಶಯಗಳ ಹಿಂದೆ ಇವರೆಲ್ಲರ ಜೀವನಸ್ತರ ಸುಧಾರಿಸಿ, ಇವರೆಲ್ಲ ಶಿಕ್ಷಣದ ಸಂಸ್ಕಾರವನ್ನು ಪಡೆದು ಇತರ ನಾಗರಿಕರಂತೆ ಸಮಾನ ಅವಕಾಶಗಳನ್ನು ಪಡೆಯಲು ಅರ್ಹರಾಗಿ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಗುರುತಿಸಿಕೊಳ್ಳಬೇಕು ಎಂಬ ಕಳಕಳಿ ಅವರಿಗಿತ್ತು. ಇಂದು ಶಿಕ್ಷಣದ ಸಂಸ್ಕಾರ ಪಡೆದು, ದಲಿತರೆಂದೆನಿಸಿಕೊಳ್ಳುವವರು ಅಧಿಕಾರದ ದಂಡ ಶಕ್ತಿಯನ್ನು ಹಿಡಿದು ಐಎಎಸ್ ಅಧಿಕಾರಿಗಳಾಗಿ ಬಂದಾಗ, ಅವರನ್ನು ತಿರಸ್ಕರಿಸುವ ಸಾಹಸವನ್ನು ಸವರ್ಣೀಯರೆನಿಸಿಕೊಳ್ಳುವವರು ಮಾಡುವುದಿಲ್ಲ. ಹಾಗೆ ಮಾಡುವುದು ಅವರ ಸ್ವಾರ್ಥಕ್ಕೆ ಧಕ್ಕೆ ತರಬಹುದು ಎಂಬ ಭಯದಿಂದಾಗಿ. ಅವರಿಗೆ ತಾವಲ್ಲದಿದ್ದರೂ ತಮ್ಮ ಪೂರ್ವಜರು ದೀರ್ಘಕಾಲ ಮಾಡುತ್ತಿದ್ದ ಶೋಷಣೆಯ ನೆನಪೂ ಬರುವುದಿಲ್ಲ. ನಾವು ಈ ಸತ್ಯಕ್ಕೆ ಹೆಚ್ಚು ಮಹತ್ವ ಕೊಡದೆ, ಹಿಂದುಳಿದವರೆಲ್ಲ ಈ ಜಾತೀಯತೆಯ ವಿಷ ವರ್ತುಲದೊಳಗೇ ಇದ್ದು ಸರಕಾರದ ಕೃಪಾಶ್ರಯದ ಮೀಸಲಾತಿ ಮತ್ತಿತರ ಸೌಲಭ್ಯಗಳಿಂದ ಮಾತ್ರ ಮುಂದುವರಿಯುವುದು ಸಾಧ್ಯ ಎನ್ನುವುದು ಎಷ್ಟು ಸರಿ ಎಂದು ಚಿಂತಿಸಬೇಕಾದ ಕಾಲ ಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ತಂದ ಕ್ರಾಂತಿಯಿಂದ ಅಸ್ಪೃಶ್ಯತೆಯ ಕುರಿತ ವಿರೋಧ ನಾಶವಾಗಿ 'ದಯವೇ ಧರ್ಮದ ಮೂಲವಯ್ಯಾ' ಎಂಬ ಮಾತು ನಿಜವಾಗಬೇಕಿತ್ತು. ಆದರೆ ಆಮೇಲೆ ನಾವು ಸೃಷ್ಟಿಸಿರುವುದು ಪ್ರತ್ಯೇಕವೆನಿಸುವ ಒಂದು ಜಾತಿ ವಿಭಾಗವನ್ನೆ. ಈಗ 'ದಲಿತ' ಶಬ್ದದ ಸಹಜ ಅರ್ಥವನ್ನು ಮರೆಸಿ ಪ್ರತ್ಯೇಕ ಜಾತಿಯ ಗುಂಪೊಂದನ್ನು ನಿರ್ಮಿಸಿ ಜಾತೀಯತೆಯ ನಿವಾರಣೆಯಾಗುವುದೆಂಬ ತಿಳಿವಳಿಕೆ ತಂದುಕೊಳ್ಳುವಾಗ ನಮಗೆ ಡಾ. ಅಂಬೇಡ್ಕರರ ಒಂದು ಮಾತೇ ಎಚ್ಚರಿಕೆಯ ಗಂಟೆಯಾಗಬೇಕು. 'ಇತಿಹಾಸದಿಂದ ಪಾಠ ಕಲಿಯದವರು ಇತಿಹಾಸವನ್ನು ಸೃಷ್ಟಿಸುವುದಿಲ್ಲ.' ಮಂಡಲ್ ವರದಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಮ್ಮ ಸರ್ವೋಚ್ಚ ನ್ಯಾಯಾಲಯ ಕೊಟ್ಟ ತೀರ್ಪಿನಲ್ಲಿ ನಮೂದಿಸಲಾದ 'cream layer concept' ಎಂದರೆ, ತಮ್ಮ ಆರ್ಥಿಕ ಉನ್ನತಿಯನ್ನು ಸಾಧಿಸಿಕೊಂಡಿರುವವರ ಪರಿವಾರಗಳನ್ನು ಈ ಮೀಸಲಾತಿಯ ಸೌಲಭ್ಯದಿಂದ ಹೊರಗಿಡಬೇಕು ಎನ್ನುವ ನಿರ್ಣಯ, ದಲಿತರೆನ್ನಿಸಿಕೊಳ್ಳುವವರ ನಾಯಕತ್ವ ವಹಿಸಿರುವ ರಾಜಕಾರಣಿಗಳಿಗೆ ಅಪಥ್ಯವೆನಿಸಿ, ಅದನ್ನು ಕಡೆಗಣಿಸಬೇಕು, ಶಾಸನದ ಮೂಲಕ ಅದನ್ನು ತೆಗೆದುಹಾಕಬೇಕು ಎನ್ನುವ ಚಿಂತನೆ ಪ್ರಕಟವಾಗುತ್ತಿರುವಾಗ ಜಾತಿ ವ್ಯವಸ್ಥೆಯನ್ನು ಬಲಪಡಿಸುವ ಇಚ್ಛೆಯೇ ತೋರಿಬರುತ್ತಿದೆಯೆಂದು ತಿಳಿಯದಷ್ಟು ನಾವು ಅಜ್ಞರಾಗಬೇಕೆ.

ಹೀಗೆ ಹೇಳಿದ ಮೇಲೆ, ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ಜಾತಿ ವ್ಯವಸ್ಥೆಯ ಕಪಿಮುಷ್ಟಿಯಿಂದಲೂ, ಆಂಗ್ಲ ಭಾಷೆಯ ಶಿಕ್ಷಣ ಸೌಲಭ್ಯದಿಂದ ಬಾಬೂ ಸಂಸ್ಕೃತಿಯನ್ನು ನೆಚ್ಚಿಕೊಂಡು ಅಶಿಕ್ಷಿತರ ಅಜ್ಞಾನವನ್ನು ತಿರಸ್ಕಾರದಿಂದ ನೋಡುವ ನಮ್ಮ ಸುಶಿಕ್ಷಿತರೆನಿಸಿಕೊಳ್ಳುವ ಹಲವರು ನಡೆಸುತ್ತಿರುವ ಅಪ್ರತ್ಯಕ್ಷ ವರ್ಗ ವೈಷಮ್ಯದಿಂದಲೂ ಬಹುಸಂಖ್ಯಾತರಾದ ದೀನ ದಲಿತರ (ಶಬ್ದದ ನಿಜವಾದ ಅರ್ಥದಲ್ಲಿ ದಲಿತರೆನಿಸಿ ಕೊಳ್ಳುವವರು) ಸುಧಾರಣೆ ಹೇಗೆ ಸಾಧ್ಯವಾಗಬಹುದಿತ್ತು, ಆಗಬೇಕು ಎಂಬ ಕೆಲವು ವಿಚಾರಗಳನ್ನು ಮಂಡಿಸದಿದ್ದರೆ ಹಿಂದೆ ಬರೆದ ಮಾತುಗಳು ಅಪಕ್ವ ಚಿಂತನೆಯಿಂದ ಪ್ರೇರಿತವಾದಂಥವು ಎಂಬ ಆರೋಪಕ್ಕೆ ಗುರಿಯಾಗಬಹುದು.

ನಮ್ಮ ಸಂವಿಧಾನ ರೂಪಿಸಿರುವ ಪ್ರಜಾಪ್ರಭುತ್ವದ ಆದರ್ಶದ ಹಿಂದೆ ಫ್ರೆಂಚ್ ರಾಜ್ಯ ಕ್ರಾಂತಿಯ, ಅಮೆರಿಕದ ಸ್ವಾತಂತ್ರ್ಯ ಹೋರಾಟದ, ಬ್ರಿಟಿಷ್ ಪಾರ್ಲಿಮೆಂಟರಿ ಪದ್ಧತಿ ಬೆಳೆದು ಬಂದ ರೀತಿಗಳ ಕುರಿತ ಚಿಂತನೆಯಿತ್ತು. ನೆಹರೂ ಯುಗದಲ್ಲಿ ನಮ್ಮ ಸ್ವತಂತ್ರ ಆಡಳಿತ ವ್ಯವಸ್ಥೆಯನ್ನು ರೂಪಿಸತೊಡಗಿದಾಗ ನಮಗೆ ಆದರ್ಶವಾಗಿ ಕಂಡದ್ದು ಸೋವಿಯೆತ್ ರಾಜ್ಯ ವ್ಯವಸ್ಥೆ. ಅದಕ್ಕೆ ಕಾರಣವೂ ಇದೆ. ಸಮಾನಾವಕಾಶಗಳ ಲೋಕಸತ್ತೆಯನ್ನು ಬಯಸಿ ದಾರಿದ್ರ್ಯ ನಿವಾರಣೆ ಸಾಧ್ಯವೆಂದು ತಿಳಿದ ನಾವು ಆದಷ್ಟು ಬೇಗ ಬಡತನ ಅಜ್ಞಾನಗಳ ನಿವಾರಣೆಯಾಗಬೇಕು, ಇದು ಸಾಮ್ಯವಾದ ಸಿದ್ಧಾಂತಗಳ ಮೂಲಕ ಸಾಧ್ಯ ಎಂದು ತಿಳಿದುದು ಸರಿಯೆ. ಆದರೆ ಹಿಂದೂಗಳೇ ಬಹುಸಂಖ್ಯಾತ ರಾಗಿದ್ದರೂ, ಜಾತಿ ವ್ಯವಸ್ಥೆಯಿಂದ ವಿಘಟಿತವೆನಿಸುವ ಜೀವನ ಕ್ರಮವನ್ನು ಅನುಸರಿಸು ತ್ತಿರುವ, ಹತ್ತಾರು ಜಾತಿ ಉಪಜಾತಿಗಳು, ಆದಿವಾಸಿ, ಬುಡಕಟ್ಟು ಗುಂಪುಗಳು, ಅಸ್ಪೃಶ್ಯ ರೆಂದು ಕರೆಯಿಸಿಕೊಂಡು ಶೋಷಣೆಗೊಳಗಾದವರು ಇವರಿಗೆಲ್ಲ ಸಾಮಾನ್ಯವಾಗಿ, ಸಾರ್ವತ್ರಿಕವಾಗಿ ಅನ್ವಯಿಸಬಹುದಾದ ರಾಷ್ಟ್ರೀಯ ಅಸ್ಮಿತೆ ಭಾರತೀಯವೆನಿಸಲು ಯಾವ ಯಾವ ದಾರಿಗಳನ್ನು ಅನುಸರಿಸಿದರೆ ಯೋಗ್ಯ ಎಂದು ಸರಿಯಾಗಿ ಚಿಂತಿಸಿದ್ದೇವೆಯೇ ಎಂಬ ಸಂದೇಹ ಬರುವಂತೆ ನಾವು ಸ್ವಾತಂತ್ರ್ಯದ 50 ವರ್ಷಗಳನ್ನು ಕಳೆದಿದ್ದೇವೆ. 'ಹಾವು ಸಾಯಬಾರದು, ಕೋಲು ಮುರಿಯಬಾರದು' ಎನ್ನುವಂತಹ ನಿಲುಮೆಯಿಂದ ಯಾವ ಕ್ರಾಂತಿಕಾರಕ ಬದಲಾವಣೆಯೂ ಸಾಧ್ಯವಾಗುವುದಿಲ್ಲ. ದೇಶದಾದ್ಯಂತ ಕಾಂಗ್ರೆಸ್ ಸರಕಾರಗಳು, ಇದರಿಂದಾಗಿ ಕೇಂದ್ರೀಕೃತವೆನಿಸುವ ಆಡಳಿತ ಪದ್ಧತಿ ಇವುಗಳಿಂದಾಗಿ ಆಮೂಲಾಗ್ರ ಸುಧಾರಣೆಗಳನ್ನು ತರಬಹುದಾಗಿದ್ದ ಬದಲಾವಣೆಗಳು ಸಾಧ್ಯವಿದ್ದವು. ಆದರೆ ನಾವು ತರಲಿಲ್ಲ. ಸಮುದಾಯಕ್ಕೂ ರಾಷ್ಟ್ರಕ್ಕೂ ಸಂಬಂಧವನ್ನು ಕಲ್ಪಿಸುವ ಸಾಮಾನ್ಯ ನೀತಿ ಸಂಹಿತೆಯನ್ನು ತರಲು ಅತ್ಯಂತ ಪ್ರಶಸ್ತವಾಗಿದ್ದ ಕಾಲ ಸ್ವಾತಂತ್ರ್ಯ ಬಂದಾಗ. ಧರ್ಮದಿಂದಲೇ ರಾಷ್ಟ್ರೀಯ ಅಸ್ಮಿತೆ ಎಂಬ ವಾದಕ್ಕೆ ಪುರಸ್ಕಾರ ಕೊಟ್ಟು ದೇಶ ಇಬ್ಭಾಗವಾದಾಗ ಆ ನೋವು ಕ್ರಾಂತಿಕಾರಕ ಬದಲಾವಣೆಗಳಿಗೆ ಅನುಕೂಲವಾಗಿತ್ತು. ಆದರೆ ಈಗ ಐವತ್ತು ವರ್ಷಗಳು ಕಳೆದ ಮೇಲೆ ಇದು 'ಬೇಕೇ – ಬೇಡವೇ' ಎಂಬ ಚರ್ಚೆಯಲ್ಲಿ ನಾವು ಮುಂದುವರಿ ಯುತ್ತಿದ್ದೇವೆ. 'ಭಾಕ್ರಾ ನಂಗಲ್' ನಂತಹ ಬೃಹತ್ ಯೋಜನೆಗಳು ಆಧುನಿಕ

ದೇವಾಲಯಗಳು ಎಂದು ಕರೆದ ನೆಹರೂರವರ ಆದರ್ಶದ ಹಿಂದೆ ಬಡತನ ನಿವಾರಣೆಯ ಕಳಕಳಿಯಿತ್ತು, ನಿಜ. ಆದರೆ ಅದೇ ವೇಗದಲ್ಲಿ ನಮ್ಮ ಜನತೆಯ ಅಜ್ಞಾನ ನಿವಾರಣೆಗೆ ಶಿಕ್ಷಣದ ಸಂಸ್ಕಾರ ಅಗತ್ಯ ಎಂದು ಈ ಮಹತ್ಕಾರ್ಯಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸುವ, ಕಡ್ಡಾಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರುವ ಕೆಲಸಗಳು ಸಾಧ್ಯವಾಗಲಿಲ್ಲ. ಹತ್ತು ಹಲವು, ಕೆಲವು ಅರ್ಥಪೂರ್ಣ, ಕೆಲವು ಅರ್ಥಹೀನ, ನಂಬಿಕೆಗಳಿಂದ ಒಡೆದಿರುವ ನಮ್ಮ ಸಾಮಾಜಿಕ ಜೀವನದ ವಿವಿಧ ಘಟಕಗಳನ್ನು ರಾಷ್ಟ್ರನಿಷ್ಠೆಯ ಸಮುದಾಯ ಚಿಂತನೆಗೆ ಎಳೆದು ತರುವ ಶಿಕ್ಷಣ ಕ್ರಮ ಯಾವ ರೀತಿಯದಿರಬೇಕು ಎಂಬ ಚಿಂತನೆಯೂ ನಡೆಯಲಿಲ್ಲ. ಕಡ್ಡಾಯವಾದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸ್ವಾತಂತ್ರ್ಯ ಬಂದ ತರುಣದಲ್ಲೆ ಸಾಧ್ಯ ವಾಗಿದ್ದಿದ್ದರೆ ಮುಂದಿನ ಯುವ ಪೀಳಿಗೆಗೆ ರಾಷ್ಟ್ರೀಯ ಸಂಸ್ಕಾರಗಳ ತಿಳಿವಳಿಕೆ ನೀಡಲು ಸಾಧ್ಯವಾಗಬಹುದಿತ್ತು. ದೀನ ದಲಿತರಿಗೂ ನಮ್ಮ ಸಾಮಾಜಿಕ ಬಿರುಕುಗಳ ತಿಳಿವಳಿಕೆ ಸಾಧ್ಯವಾಗಿ ಅವರು ತಮ್ಮ ಚಿಂತನಶೀಲತೆ, ಕರ್ತೃತ್ವ ಶಕ್ತಿಗಳ ನೆರವು ಪಡೆದೇ ಜಾತೀಯತೆಯ ವಿಷದ ಕುರಿತು ಎಚ್ಚರವಹಿಸಲು ಸಾಧ್ಯವಾಗಬಹುಧಿತ್ತು. ಇನ್ನು ಅಂತಹ ಶಿಕ್ಷಣವೂ ಸಂಘರ್ಷವನ್ನು ದೂರವಿರಿಸಿದ, ಸಮನ್ವಯ ಸ್ವರೂಪದ ಒಂದು ರಾಷ್ಟ್ರೀಯವೆನಿಸುವ ಸಾಂಸ್ಕೃತಿಕ ಅಸ್ಮಿತೆಯನ್ನು ಮೈಗೂಡಿಸಿಕೊಳ್ಳುವ ಪಠ್ಯ ಕ್ರಮದಿಂದ ಬರಬೇಕಾಗಿತ್ತು. ಪ್ರಥಮ ಭಾಷೆಯಾಗಿ ತಾಯ್ನುಡಿಯೂ, ರಾಷ್ಟ್ರದ ಸಂಪರ್ಕ ಭಾಷೆಯಾಗಿ ಹಿಂದಿಯೂ, ಮಾಧ್ಯಮಿಕ ತರಗತಿಗಳಿಂದ ಐಚ್ಛಿಕ ಭಾಷೆಯಾಗಿ ಇಂಗ್ಲೀಷೂ ಪಾಠ್ಯ ಕ್ರಮದಲ್ಲಿ ಸೇರಿಕೊಂಡು ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದ ತಾಯ್ನುಡಿಯ ಸಂಸ್ಕಾರ ರಾಷ್ಟ್ರೀಯವೆನಿಸುವ ಅಸ್ಮಿತೆಯನ್ನು ರೂಪಿಸುವಲ್ಲಿ ನೆರವು ನೀಡಬಹುದಿತ್ತು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ 'ಜಾತಿ'ಗೆ ಪ್ರಾತಿನಿಧ್ಯವಿಲ್ಲವೆಂಬ ಗಟ್ಟಿ ನಿಲುವನ್ನು ಆರಂಭದಲ್ಲೇ ತಳೆದಿದ್ದರೆ, ಎಲ್ಲಿ ಕೂಡ 'ಜಾತಿ'ಯನ್ನು ಸೂಚಿಸುವ ಅಗತ್ಯವೇ ಇಲ್ಲವೆಂಬ ಪರಿಸ್ಥಿತಿ ಇದ್ದಿದ್ದರೆ ಇಂದಿನ 'ಖೋಟಾ ಪ್ರಮಾಣಪತ್ರ'ಗಳ ಹಾವಳಿಯನ್ನು ಇದಿರಿಸಬೇಕಾಗುತ್ತಿರಲಿಲ್ಲ. ಒಂದು ಪ್ರಬಲ ಆಕ್ಷೇಪ ಇದರಿಂದ ಹಿಂದುಳಿದವರು, ಹಿಂದೆಯೇ ಉಳಿಯಬಹುದು ಎಂಬುದೇ. ಆದರೆ ಹಿಂದುಳಿದ ವರನ್ನು ಕಡ್ಡಾಯ ಶಿಕ್ಷಣ ಕ್ರಮದಿಂದ ಅವರ ಜೀವನಸ್ತರ ಸುಧಾರಿಸಿಕೊಂಡು ಮುಂದೆ ಬರಲು ಸಾಧ್ಯವಾಗುವಂತೆ, ಸಹಜೀವನದ ಹಾಸ್ಟೆಲ್ ಸೌಕರ್ಯ, ಪ್ರತಿಯೊಂದು ಹಳ್ಳಿಯಲ್ಲೂ ಶಿಕ್ಷಣಾನುಕೂಲತೆ, ಪ್ರತಿಭೆಯನ್ನು ಪ್ರೋತ್ಸಾಹಿಸಲೆಂದೆ ವಿಶೇಷ ಶಿಕ್ಷಣ, ಉಪಾಧ್ಯಾಯ ವೃತ್ತಿಗೆ ಪ್ರತಿಭೆ ಇದ್ದವರನ್ನೆ ಆಯ್ಕೆ ಮಾಡುವ ಕಾರ್ಯ ಯೋಜನೆ, ಇವೆಲ್ಲ ಜಾತೀಯತೆಯನ್ನು ಒಡೆಯುವ ಸಾಧನಗಳಾಗಬಹುದಿತ್ತು.

ಭಾರತೀಯ ಜೀವನ ಶೈಲಿಯಲ್ಲಿ ದೀರ್ಘ ಕಾಲದಿಂದ ಕುಲ ಕಸುಬು ಮಹತ್ವದ ಪಾತ್ರ ವಹಿಸಿದೆ. ಅಸ್ಪೃಶ್ಯತೆಯ ಕಳಂಕವನ್ನು ಹೊತ್ತುಕೊಳ್ಳಬೇಕಾಗಿ ಬಂದರೂ ಭಾರತೀಯ ಸಮಾಜ ಜೀವನದಲ್ಲಿ ಪಾರಂಪರಿಕವಾಗಿ ಒಂದೇ ವೃತ್ತಿಯನ್ನು ನೆಚ್ಚಿ ಕೊಳ್ಳುವ ಸಂಪ್ರದಾಯವಿದೆ. ಆದರೆ ಶತ ಶತಮಾನಗಳಿಂದ ಉಚ್ಚ ನೀಚ ಎಂಬ

ಸಂಸ್ಕಾರವೂ ಜತೆಗೆ ಬೆಳೆದು ಬಂದುದರಿಂದ, ಪಾಶ್ಚಾತ್ಯ ದೇಶಗಳಲ್ಲಿರುವ ವೃತ್ತಿ ಗೌರವದ ಸಂಸ್ಕಾರ ನಮ್ಮ ಜಾಯಮಾನಕ್ಕೆ ಹೊಂದಿಕೊಳ್ಳುತ್ತಿಲ್ಲವೇನೋ ಎಂಬಂತೆಯೇ ನಾವು ನಡೆದುಕೊಂಡು ಬಂದಿದ್ದೇವೆ.

ಹಿಂದಿನ ರಾಜ ಮಹಾರಾಜರ ಕಾಲದಲ್ಲಿ 'ಸೇವಕ'ರಿದ್ದಿಲ್ಲವೆಂದಲ್ಲ. ಈ ಊಳಿಗಮಾನ್ಯ ಪದ್ಧತಿ ಬ್ರಿಟಿಷರ ಕಾಲದಲ್ಲಿ ಒಂದು ಕಲೆಯಂತೆ ಪರಿಣತಗೊಂಡು ಪೇದೆ, ಸಿಪಾಯಿ, ಹಮಾಲ, ಬೇರರ್, ಕೂಲಿ ಎಂದೆಲ್ಲ ಹೆಸರಿಸಿ ಅಂಥವರಿಗೆಲ್ಲ ಕೀಳರಿಮೆಯ ಪಾಠ ಕಲಿಸಿಕೊಟ್ಟು, ತಮ್ಮ ತಾರತಮ್ಯ ಜ್ಞಾನವನ್ನು ಪ್ರದರ್ಶಿಸಿದ್ದೂ, ಜನಾಂಗ ಪ್ರಜ್ಞೆಯಿಂದ ಭಾರತೀಯರನ್ನು ತಾವಾಗಿ ನಿರ್ಮಿಸಿಕೊಂಡ ಸಂಘ ಸಂಸ್ಥೆಗಳಿಂದ ದೂರವಿರಿಸಿದ್ದೂ ಈಗ ಇತಿಹಾಸ. ಈ ಉಚ್ಚ ನೀಚ ತಾರತಮ್ಯವನ್ನು ತೊರೆಯುವ, ವೃತ್ತಿ ಗೌರವವನ್ನು ಪೋಷಿಸುವ ಪ್ರಯತ್ನಗಳನ್ನು ನಾವು 50 ವರ್ಷಗಳಲ್ಲಿ ಮಾಡಿಲ್ಲ. ಈಗ ಐದನೆಯ ವಿತ್ತ ಆಯೋಗ ಈ 'ಪೇದೆ' ಗಳ ಸಂಖ್ಯಾಸಂಪತ್ತನ್ನು ಇಳಿಸಬೇಕು ಎಂದು ಸಲಹೆ ಮಾಡಿದೆಯಂತೆ. ಯಾವ ಕಚೇರಿಯಲ್ಲೂ ಕಾಯಕ ನಿಷ್ಠೆಯ ಸಂಕಲ್ಪ ಶಕ್ತಿ ಇದ್ದಲ್ಲಿ ಪೇದೆಗಳ ಆವಶ್ಯಕತೆ ಇರುವುದಿಲ್ಲ. ನಾವು ಬ್ರಿಟಿಷರ ಆಡಳಿತೆಯಿಂದ ಮುಕ್ತರಾಗಿದ್ದರೂ ಅವರ ಆಡಳಿತೆಯ ನೀತಿಯನ್ನು ತುಂಬ ಗೌರವ ದಿಂದ ಸ್ವೀಕರಿಸಿದ್ದೇವೆಂದೇ ಸೇವಕರನ್ನೂ, ಸಮಾನ ಗೌರವದ ಹೃದಯವಂತಿಕೆಯಿಂದ ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಬ್ರಿಟಿಷರು ಗುಲಾಮಗಿರಿಯ ಸಂಕೇತವೂ ಆಗಬಹುದೆಂಬಂತೆ ಟಂಕಿಸಿದ ಪತ್ರ ವ್ಯವಹಾರದ your most obedient servant. 'ನಿಮ್ಮ ಅತ್ಯಂತ ವಿಧೇಯ ಸೇವಕ' ಎಂಬ ಶಬ್ದಗಳಲ್ಲಿ ಬೆರೆತಿರುವ ಕೀಳರಿಮೆ ಇಂದು ಅವೇ ಶಬ್ದಗಳಲ್ಲಿ ಸೂಚಿಸಲ್ಪಡುತ್ತಿಲ್ಲವಾದರೂ ಸೇವಕ ಸಹಜವಾದ ಅತಿ ವಿನಯವನ್ನು ತೋರಿಸುವ 'ಸರ್' ಎಂಬ ಶಬ್ದದ ಬಳಕೆ ಸಾರ್ವತ್ರಿಕ. ನಮ್ಮ ವರ್ಣಾಶ್ರಮ ಪದ್ಧತಿಯ ಅನಿಷ್ಟವೆನಿಸಿದ 'ಶೂದ್ರ'ರೆಂದು ಪರಿಗಣಿಸುವವರನ್ನೆಲ್ಲ ಹೆಚ್ಚಾಗಿ ಏಕವಚನದ ಸಂಬೋಧನೆಗೆ ಒಳಪಡಿಸುವ ದೀರ್ಘ ಕಾಲದ ನಮ್ಮ ಸಂಸ್ಕಾರವೂ ಸೂಚಿಸುವುದು ಊಳಿಗಮಾನ್ಯ ಪದ್ಧತಿಯನ್ನೇ. ನಮ್ಮ ರಾಜಕೀಯ ಜೀವನದಲ್ಲಂತೂ ಸ್ವಾರ್ಥಕ್ಕಾಗಿ ಸಾಷ್ಟಾಂಗ ನಮಸ್ಕಾರ ಮಾಡುವ ಪ್ರವೃತ್ತಿಯನ್ನು ನಾವು ಕಲೆಯಂತೆ ಬೆಳೆಸಿ ಕೊಂಡಿದ್ದೇವೆ. ಬ್ರಿಟಿಷರಿಗೆ ವರ್ಣದ್ವೇಷದ ಸಂಸ್ಕಾರ ಅಪರಿಚಿತವಲ್ಲ. ಅಮೆರಿಕದಲ್ಲಿ ಬಿಳಿ-ಕರಿಯ ವರ್ಣದ್ವೇಷ ಪೂರ್ತಿ ಅಳಿದಿದೆಯೆಂದು ಹೇಳುವಂತಿಲ್ಲವಾದರೂ ಈ 'ಸರ್' ಸಂಬೋಧನೆಗೆ ಮಹತ್ವವಿಲ್ಲ. ಬಹುರಾಷ್ಟ್ರೀಯವೆನಿಸುವ ಬ್ರಿಟಿಷ್ ಮತ್ತು ಅಮೆರಿಕಾಗಳ ಕಂಪೆನಿಗಳಲ್ಲೂ ನಾವು ಈ ವ್ಯತ್ಯಾಸವನ್ನು ಗುರುತಿಸಬಹುದು. ಅಮೆರಿಕನ್ ಕಂಪೆನಿಗಳಲ್ಲಿ ಅತ್ಯುಚ್ಚ ಅಧಿಕಾರಿಯನ್ನೂ ಅವರ ಹೆಸರಿನಿಂದಲೇ ಸಂಬೋಧಿಸುವುದು ಶಿಷ್ಟಾಚಾರಕ್ಕೆ ಹೊರತು ಎಂದು ತಿಳಿಯಲಾಗುವುದಿಲ್ಲ. ಅವರು ವಿದಾಯ ಹೇಳ ಬೇಕಾದ ಸಂದರ್ಭಗಳಲ್ಲೂ ಅತ್ಯುನ್ನತ ಅಧಿಕಾರಿಗಳೂ ಕೆಳಮಟ್ಟದ ಕೆಲಸದಲ್ಲಿರು ವವರ ಕೈ ಕುಲುಕಿ ವಿದಾಯ ಹೇಳುವುದಿದೆ. ನಾವು ಮಾತ್ರ ಈ ತಾರತಮ್ಯ ಜ್ಞಾನವನ್ನು ಇರಿಸಿಕೊಂಡು ಸೇವಕ ವೃತ್ತಿಯಲ್ಲಿರುವವರಿಗೆ ಏಕವಚನ ಸಂಬೋಧನೆಯ

ತಿರಸ್ಕಾರವನ್ನು ಸೂಚಿಸಲು ಮರೆಯುವುದಿಲ್ಲ. ಹಾಗೆಂದು ಅಂತಹ ಸೇವಕರೇ ವಿದ್ಯಾರ್ಹತೆಯಿಂದ ಅಧಿಕಾರ ಗಳಿಸಿ ಪ್ರಭುಗಳಾಗಿ ಬಂದಾಗ ಅಥವಾ ರಾಜಕೀಯದಲ್ಲಿ ಮುಂದೆ ಬಂದಾಗ ಅವರ ಕಾಲು ಹಿಡಿಯುವುದು ಅವಮಾನವೆಂದು ತಿಳಿಯುವುದೂ ಇಲ್ಲ. ಶಿಕ್ಷಣ – ಅದರಲ್ಲೂ ಇಂಗ್ಲೀಷು ಶಿಕ್ಷಣ – ವಂಚಿತರಾಗಿ ಸಮಾಜ ಜೀವನಕ್ಕೆ ಉಪಯುಕ್ತವೆನಿಸುವ ಇತರ ವೃತ್ತಿಗಳನ್ನು ಅವಲಂಬಿಸಿರುವವರನ್ನು ಸಮಾನ ಗೌರವದಿಂದ ನೋಡಲು ಈ 50 ವರ್ಷಗಳಲ್ಲೂ ನಮಗೆ ಸಾಧ್ಯವಾಗಿಲ್ಲವೆನ್ನುವುದೂ ನಮ್ಮ ಸಾಮಾಜಿಕ ಜೀವನದ ಅಸ್ತವ್ಯಸ್ತತೆಯನ್ನು ಎತ್ತಿ ತೋರಿಸುತ್ತಿದೆ.

ಪ್ರಜಾಪ್ರಭುತ್ವದ ಸಂವಿಧಾನ ಒದಗಿಸಿರುವ ಸಮಾನಾವಕಾಶಗಳು ಸಮಾನ ಗೌರವವನ್ನೂ ಅಪೇಕ್ಷಿಸುತ್ತವೆ. ರಾಷ್ಟ್ರದ ಸಮುದಾಯ ಜೀವನದಲ್ಲಿ ಈ ತಿಳಿವಳಿಕೆ ಇದ್ದಾಗ ಮಾತ್ರ ನಾಗರಿಕ ಪ್ರಜ್ಞೆ ಜಾಗೃತವಾಗಿ ರಾಷ್ಟ್ರಪ್ರಜ್ಞೆಯನ್ನೂ ಪ್ರಚೋದಿಸುತ್ತದೆ. ಆಗ ಮಾತ್ರ ರಾಷ್ಟ್ರೀಯ ಸಾಂಸ್ಕೃತಿಕ ಅಸ್ಮಿತೆ ರೂಪುಗೊಳ್ಳಲು ಸಾಧ್ಯ. ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೂ ನಾವು ಅಶಿಕ್ಷಿತ ರೈತರನ್ನು, ಹಳ್ಳಿಗರನ್ನು, ಸೇವಕರನ್ನು, ಕೂಲಿ ಕೆಲಸ ಮಾಡಿಕೊಂಡಿರುವವರನ್ನು, ಕಾರ್ಮಿಕರನ್ನು, ಟ್ಯಾಕ್ಸಿ, ರಿಕ್ಷಾ ಚಾಲಕರನ್ನು ಏಕವಚನದ ತಿರಸ್ಕಾರದ ಸಂಬೋಧನೆಗೆ ಗುರಿಮಾಡಿ ನಮ್ಮ ಮಧ್ಯಮ ವರ್ಗದ ಪೊಳ್ಳು ಸಂಸ್ಕಾರಗಳನ್ನು ಪ್ರದರ್ಶಿಸುವುದನ್ನು ಬಿಟ್ಟಿಲ್ಲ. ಇಂತಹ ನಡೆವಳಿಗೆ ಸಮಾನಾವಕಾಶಗಳ ಲೋಕಸತ್ತೆಯನ್ನು ಬಲಪಡಿಸುವಂತಿಲ್ಲ. ವೃತ್ತಿ ಗೌರವ ವೃತ್ತಿಯಿಂದ ಬರುವುದಿಲ್ಲ, ಸಿರಿವಂತಿಕೆಯಿಂದ ಮಾತ್ರ ಬರುವಂಥದು ಎಂಬ ನಮ್ಮ ಲೋಕಜ್ಞಾನವನ್ನು ಪ್ರದರ್ಶಿಸುತ್ತ ಲೋಕಸತ್ತೆಯ ವಿಚಾರ ಮಾತನಾಡುವುದು ಅಪ್ರಾಮಾಣಿಕವಾದ ನಡೆವಳಿಕೆ. ನಮ್ಮ ಜಾತಿ ವ್ಯವಸ್ಥೆಯ ತಾರತಮ್ಯಗಳೂ ನಮ್ಮ ಜೀವನ ಶೈಲಿಯಲ್ಲಿ ಬೆರೆತುಕೊಂಡು ನಮ್ಮ ಸಮುದಾಯ ಜೀವನವನ್ನು ಕಲುಷಿತಗೊಳಿಸಿರುವುದರಿಂದ, ಸಾಮುದಾಯಿಕ ಸಂಸ್ಕಾರಗಳು ಪ್ರಾಮಾಣಿಕ ನಾಗರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಅರಳುವ ಅವಕಾಶಗಳೇ ಬರುತ್ತಿಲ್ಲ. ಬ್ರಿಟಿಷರು ನಮ್ಮ ಅಜ್ಞಾನದ ಹುಳುಕುಗಳನ್ನು ಸರಿಯಾಗಿ ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿ ಕೊಂಡಂತೆ ನೆಹರೂ ಯುಗದ ನಂತರದ ಆಡಳಿತೆಗೆ ಸಂಬಂಧಿಸಿದವರೆಲ್ಲ ಅಧಿಕಾರದ ಸ್ವಾರ್ಥಕ್ಕಾಗಿ ನಮ್ಮ ಸಮಾಜ ಜೀವನದ ವೈಷಮ್ಯಗಳನ್ನು ಉಪಯೋಗಿಸಿಕೊಳ್ಳುವುದು ಯೋಗ್ಯವೆಂದು ಬಗೆದು ಜಾತಿ ವ್ಯವಸ್ಥೆಯನ್ನು ರಾಜಕೀಯ ಅಧಿಕಾರದ ಸ್ವಾರ್ಥಕ್ಕಾಗಿ ಬಳಸಿಕೊಂಡಿರುವುದರಿಂದಲೇ ಅನುಸೂಚಿತ ಜಾತಿಯಿಂದಾಗಿ ಹಿಂದುಳಿದವರು, ಅಂತ್ಯಜರೆಂದು ಕರೆಸಿಕೊಂಡು ದಲಿತರಾದವರು, ಸವರ್ಣೀಯರಲ್ಲದ ಇತರ ಹಿಂದುಳಿದ ವರ್ಗಗಳವರು, ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಪಾರ್ಸಿಗಳು ಎಂದೆಲ್ಲ ವಿಭಜಿಸಿ ಇಂಥವರನ್ನೆಲ್ಲ ಅಧಿಕಾರ ಹಿಡಿಯುವ ಸಾಧನವೆನಿಸಿದ 'ವೋಟುಗಳ' ಗುಂಪುಗಳಾಗಿ ತಿಳಿಯುವಂತಾದುದು. ಹಿಂದುಳಿದವರನ್ನು ಮುಂದೆ ತಂದು ಅವರ ಜೀವನಸ್ತರವನ್ನು ಸುಧಾರಿಸಿ ಉತ್ತಮ ನಾಗರಿಕರನ್ನಾಗಿಸುವುದು ಬರೇ ಸರಕಾರದ ಕೆಲಸಗಳ ಮೀಸಲಾತಿ ಯಿಂದಲ್ಲ ಎಂದು ತಿಳಿಯದೆಯೇ ನಾವು 50 ವರ್ಷಗಳನ್ನು ಕಳೆದಿದ್ದೇವೆ. ಹಿಂದುಳಿದ ವರಿಗೂ ನಮ್ಮ ಪ್ರಜಾಪ್ರಭುತ್ವದ ಸಮಾನಾವಕಾಶಗಳ ಅರ್ಥ ತಿಳಿಯುವಂತೆ, ಸ್ವಾತಂತ್ರ್ಯ

ಬಂದೊಡನೆಯೇ ಅವರನ್ನು ರಾಷ್ಟ್ರವಾಹಿನಿಗೆ ಎಳೆದು ತರುವ ಕೆಲಸ ಸಾಧ್ಯವಾಗ ಬೇಕಾಗಿದ್ದುದು ಮೊದಲು ಶಿಕ್ಷಣದಿಂದ, ಆಮೇಲೆ ವೃತ್ತಿ ಗೌರವವನ್ನೂ, ಸ್ವಾಭಿಮಾನವನ್ನೂ ಬೆಳೆಸಿಕೊಳ್ಳುವ ಕರ್ತವ್ಯ ಸಂಹಿತೆಯಿಂದ, ಪ್ರಾಮಾಣಿಕವಾದ ಕರ್ತವ್ಯ ನಿಷ್ಠೆಯ ಉದಾಹರಣೆಗಳಿಂದ, ಭೂಮಿಯ ಒಡೆತನದ ಹಕ್ಕು ನ್ಯಾಯವಾಗಿ ಸಿಗುವಂತಹ ಭೂ ಸುಧಾರಣೆಯಿಂದ, ಆದಿವಾಸಿ ಹಾಗೂ ಬುಡಕಟ್ಟು ಜನರ ಕೈ ಕಸುಬುಗಳಿಗೆ ಆಧುನಿಕ ಮಾರುಕಟ್ಟೆಯ ಸಂಪರ್ಕ ತರುವುದರಿಂದ, ಸಾಮಾನ್ಯವಾಗಿ ತಾರತಮ್ಯವನ್ನು ಉಂಟುಮಾಡುವ ಎಲ್ಲ ಪ್ರವೃತ್ತಿಗಳನ್ನು ಅಪರಾಧಗಳೆಂದು ಪರಿಗಣಿಸಿ ಶಿಕ್ಷಿಸುವ ದಂಡ ಸಂಹಿತೆಯಿಂದ, ಸಹ ಜೀವನವನ್ನು ಪ್ರೋತ್ಸಾಹಿಸುವ ವೃತ್ತಿ ಶಿಕ್ಷಣ ಕೇಂದ್ರಗಳು, ವಸತಿ ಗೃಹಗಳು ಮುಂತಾದವುಗಳಿಂದ, ನಮ್ಮ ಜಾನಪದ ಸಂಸ್ಕಾರಗಳನ್ನು ಜಾತೀಯತೆಯ ಹಿಡಿತದಿಂದ ಬಿಡಿಸಿ, ಸಮುದಾಯ ನೆಚ್ಚಿಕೊಳ್ಳಬೇಕಾದ ಸಂಪ್ರದಾಯಗಳೆಂದು ತಿಳಿಸುವ ಕೂಟ ಜೀವನದ ಉತ್ಸವಗಳಿಂದ, ಮಾಧ್ಯಮಿಕ ಶಿಕ್ಷಣ ಮುಗಿದಾಗ ಹಾಗೂ ಪದವಿ ಶಿಕ್ಷಣದ ಕೊನೆಗೆ ಕಡ್ಡಾಯವಾದ ಹಾಗೂ ಜಾತೀಯತೆಯನ್ನು ಅಳಿಸುವ ಸಹ ಜೀವನಕ್ಕೆ ನೆರವಾಗುವಂತಹ ಮಿಲಿಟರಿ ಅಥವಾ ತತ್ಸಮ ವ್ಯವಸ್ಥೆಯ ಒಂದು ವರ್ಷಕ್ಕೆ ಕಡಿಮೆಯಿರದ ಸೇವೆಯಿಂದ, ಹಳ್ಳಿ ಪಟ್ಟಣಗಳ ಅಂತರವನ್ನು ಕಡಮೆ ಮಾಡುವ ರೀತಿಯ ಹಳ್ಳಿಗಳ ಸಮುದಾಯ ಜೀವನದ ಆವಶ್ಯಕತೆಗಳು ಹೆಚ್ಚಿಸುವ ಶಾಲೆ, ಕುಡಿಯುವ ನೀರಿನ ಸಂಪರ್ಕ, ಚೊಕ್ಕ ವಸತಿ, ನಿರ್ಮಲ ಜೀವನದ ಎಲ್ಲ ಸೌಲಭ್ಯಗಳು, ಗ್ರಂಥಾಲಯ ಸಾಮಾಜಿಕ ಚಟುವಟಿಕೆಗಳಾಗಿ ಸಮುದಾಯ ಭವನ ಇಂಥವನ್ನೆಲ್ಲ ಆದ್ಯತೆಯ ಕಾರ್ಯಕ್ರಮಗಳಾಗಿ ನಿರ್ವಹಿಸುವುದರಿಂದ. ಹೀಗಾದಾಗ ಹಳ್ಳಿ ಹಳ್ಳಿಗಳಲ್ಲೂ ಮಣ್ಣಿನ ಪ್ರೀತಿಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ಮುಂದುವರಿದು ರಾಜ್ಯನಿಷ್ಠೆಗೂ, ರಾಷ್ಟ್ರನಿಷ್ಠೆಗೂ ಸಹಕಾರಿಯಾಗಬಲ್ಲವು. ಇವೆಲ್ಲ ಹೇಳುವಷ್ಟು ಸುಲಭವಲ್ಲ ಎನ್ನುವ ತಿಳಿವಳಿಕೆ ಈ ಲೇಖಕನಿಗಿದೆ. ಆದರೆ ನಾವು ಭಾಕ್ರಾನಂಗಲ್, ಭಿಲ್ಲಾ, ರೂರ್ಕೆಲಾ, ಮೊದಲಾದ ಯೋಜನೆಗಳಿಗೆ ಕೊಟ್ಟಂತಹ ಮಹತ್ವವನ್ನೇ ಗಾಂಧೀಜಿಯವರ ಗ್ರಾಮರಾಜ್ಯದ ಕನಸುಗಳಿಗೂ ಆರಂಭದಲ್ಲೇ ಕೊಟ್ಟು ನಮ್ಮ ಜಾತಿ ವ್ಯವಸ್ಥೆಯ ಉಚ್ಚ ನೀಚ ತಾರತಮ್ಯ ಪ್ರಜಾಪ್ರಭುತ್ವಕ್ಕೆ ಸಲ್ಲ ಎಂದು ರಾಷ್ಟ್ರದ ಸಮುದಾಯ ಜೀವನದ ಪುನರ್ನಿರ್ಮಾಣದ ಇಚ್ಛಾ ಶಕ್ತಿಯನ್ನು ಪ್ರಕಟಿಸಿದ್ದರೆ, ಇಂದಿನ ಗೋಳನ್ನು ಇದಿರಿಸಬೇಕಾದ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ನಾವು ವರ್ಗ ಪ್ರಜ್ಞೆಯಿಂದಲೇ ಪ್ರೇರಿತವಾದ ಉಚ್ಚ ನೀಚ ತಾರತಮ್ಯ ಪ್ರವೃತ್ತಿಯನ್ನು ನೆಚ್ಚಿಕೊಂಡು ಹಳ್ಳಿಗರ ಹಾಗೂ ಪಟ್ಟಣಿಗರ ನಡುವಿನ ಕಂದಕವನ್ನು ಹೆಚ್ಚಿಸುತ್ತಲೇ ಇರಲು ಇನ್ನೊಂದು ಕಾರಣ ಇಂಗ್ಲೀಷಿನ ಹಿಡಿತ ಎಂಬ ಬೇಸರವನ್ನೂ ಇಲ್ಲಿ ಪ್ರಕಟಿಸಬೇಕಾಗಿದೆ. ಇಂಗ್ಲೀಷು ಬಲ್ಲವರೆಲ್ಲ ಆಧುನಿಕ ಸವರ್ಣೀಯರೆನಿಸಿಕೊಂಡು ತಮ್ಮ ನೆಲದ ಎಲ್ಲ ಸಂಸ್ಕಾರಗಳಿಗೆ ಪರಕೀಯರಾಗುತ್ತಿರುವ ಸನ್ನಿವೇಶವನ್ನು ನಾವು ಇದಿರಿಸುತ್ತಿದ್ದೇವೆ. ಇಂಥವರ ನಾಗರಿಕ ಪ್ರಜ್ಞೆ ಹೆಚ್ಚಾಗಿ ಸುತ್ತುತ್ತಿರುವುದು ಇಂಗ್ಲೀಷು ಬಲ್ಲ ಸಮುದಾಯದ ಎರವಲು ತಂದ ಸಾಂಸ್ಕೃತಿಕ ಪರಿಕಲ್ಪನೆಗಳ ಪರಿಧಿಯಲ್ಲೆ. ತಾಯ್ನುಡಿಯನ್ನು ದೂರವಿಟ್ಟಾಗ ಮಾತ್ರ ತಾವು ಇಂಗ್ಲೀಷು

ಪರಿಚಯಿಸುವ ಸಂಸ್ಕಾರಗಳನ್ನು ರೂಢಿಸಿಕೊಳ್ಳಲು ಯೋಗ್ಯತೆ ಇರುವಂಥವರು ಎಂದು ತಿಳಿಯುತ್ತಿರುವ ಇವರಂಥವರಿಂದ ರಾಷ್ಟ್ರಪ್ರೇಮವನ್ನು ಪ್ರಚೋದಿಸುವ ನಾಗರಿಕ ಪ್ರಜ್ಞೆಯನ್ನು ಅಪೇಕ್ಷಿಸುವುದೇ ತಪ್ಪೇನೋ ಎಂಬಂತೆ ಇವರ ನಡೆವಳಿಕೆ. 'ಅಯ್ಯೋ ಕನ್ನಡವೇ, ಅದನ್ನು ಯಾರು ಓದುತ್ತಾರೆ?' ಎಂದ ಕನ್ನಡಿಗರನ್ನು ನಾನು ಕಂಡಿದ್ದೇನೆ. 'ಕನ್ನಡ ಪತ್ರಿಕೆಗಳನ್ನು ನಮ್ಮ ಮನೆಗೆ ತರಬೇಡಿ' ಎಂದ ಕನ್ನಡಿಗರನ್ನೂ ನಾನು ಕಂಡಿದ್ದೇನೆ. ಇವರ ತಿಳಿವಳಿಕೆಗೆ ಕನಿಕರ ಪಡುವುದು ಸರಿಯಲ್ಲ. ಇಂದು ಇಂಗ್ಲೀಷು ಮಾಧ್ಯಮದ ಹುಚ್ಚಿನಿಂದ ನಮ್ಮ ರಾಷ್ಟ್ರೀಯವೆನಿಸಬಹುದಾದ ಸಂಸ್ಕಾರಗಳಿಗೆ ತೀರ ಅಪರಿಚಿತವೆನಿಸುವ ತ್ರಿಶಂಕುಗಳ ತಂಡವನ್ನು ನಾವು ಬೆಳೆಸುತ್ತಿರುವುದರಿಂದ ರಾಷ್ಟ್ರೀಯ ಅಸ್ಮಿತೆ ಇಂಥವರಲ್ಲಿ ಎಲ್ಲಾದರೂ ಕಂಡರೂ ಅದು ಸಿನಿಕತನದಿಂದ ಕೂಡಿ ರಾಷ್ಟ್ರದ ಎಲ್ಲ ಸಮಸ್ಯೆಗಳಿಗೆ ಉತ್ತರ ಹೇಳಲು ಇಂಗ್ಲೀಷು ಬಲ್ಲವರು ಮಾತ್ರ ಸಮರ್ಥರು ಎಂಬ ನಿಲುವನ್ನೂ ಕಾಣುತ್ತೇವೆ. ಹತ್ತು ಹಲವು ಕ್ಷುಲ್ಲಕವೆನಿಸಬಹುದಾದ ಕಾರಣಗಳಿಗಾಗಿಯೂ 'ವೋಟು'ಗಳ ಸ್ವಾರ್ಥಕ್ಕಾಗಿಯೂ ನಮ್ಮ ಸಂವಿಧಾನವನ್ನು ಸಾಕಷ್ಟು ಬಾರಿ ತಿದ್ದುಪಡಿ ಮಾಡಿರುವ ರಾಜಕೀಯ ಆಡಳಿತೆಯನ್ನು ಚುಕ್ಕಾಣಿ ಹಿಡಿದವರು ಎಲ್ಲ ರಾಜ್ಯಗಳಲ್ಲಿ ಕಡ್ಡಾಯವಾಗಿ ಪ್ರಾದೇಶಿಕ ಭಾಷೆಗಳಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಒದಗಿಸಲೇಬೇಕು ಎಂಬ ತಿದ್ದುಪಡಿ ತರಲು ಅಸಮರ್ಥರಾಗಿರುವುದೂ ನಮ್ಮ ನಾಗರಿಕ ಪ್ರಜ್ಞೆ ಹಾಗೂ ರಾಷ್ಟ್ರಪ್ರೇಮಗಳ ತಿಳಿವಳಿಕೆ ತಂದುಕೊಳ್ಳಲೂ ಸಹಕಾರಿಯಾಗಿಲ್ಲ.

ನಮ್ಮೆಲ್ಲ ಸಾಮಾಜಿಕ ಅನಿಷ್ಟಗಳಿಗೆ ಜನಸಂಖ್ಯೆಯ ಹೆಚ್ಚಳದ ಒಂದು ಕಾರಣವನ್ನು ಕೊಡುವುದು ತೀರ ಸಾಮಾನ್ಯ. ಒತ್ತಾಯದ ಸಂತಾನ ನಿಯಂತ್ರಣಕ್ಕಿಂತಲೂ ಶಿಕ್ಷಣದ ಸಂಸ್ಕಾರದಿಂದ ಬರುವ ತಿಳಿವಳಿಕೆ ಹೆಚ್ಚು ಪ್ರಯೋಜನಕಾರಿ ಎಂದು ನಾವು ತಿಳಿಯದೆ ಹೋದುದು ಒಂದು ದುರಂತ. ಜನಸಂಖ್ಯೆಯ ಮಾನದಂಡದಿಂದ ಮಾತ್ರ ಒಂದು ಪ್ರಜಾಪ್ರಭುತ್ವ ಯಶಸ್ವಿಯೆನಿಸುವುದಿಲ್ಲ. ಆ ಜನಸಮುದಾಯ ರಾಷ್ಟ್ರನಿಷ್ಠೆಯನ್ನು ಪ್ರಚೋದಿಸುವ ನಾಗರಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿರಬೇಕು. ಭಾರತ ಭಿನ್ನ ಭಿನ್ನ ಭಾಷಾವಲಯಗಳ, ಭಿನ್ನವೆನಿಸುವ ಆಚಾರ ವಿಚಾರಗಳ, ಹಲವಾರು ಜಾತಿಗಳ, ಮತಾವಲಂಬಿಗಳ ಸಂಗಮನಾಡು. ಆದರೆ ಎಲ್ಲ ಭಿನ್ನತೆಗಳ ನಡುವೆಯೂ ಭಾರತದ ಭೌಗೋಲಿಕ ಪರಿಸರ ಹಾಗೂ ಐತಿಹಾಸಿಕ ಗತಿ ಇವು ರೂಪಿಸಿದ ಒಂದು ಭಾರತೀಯ ಅಸ್ಮಿತೆಯನ್ನು ಇಚ್ಛೆ ಇರುವವರು ಗುರುತಿಸಲು ಸಾಧ್ಯ. ಸಂಸ್ಕಾರಗಳು ಬೇರೆ ಬೇರೆ ರೀತಿಯವಿರಬಹುದು. ಆದರೆ ಭಾರತದ ಭೂಗೋಳ, ಇತಿಹಾಸ, ಇವೆರಡೂ ಪರಿಚಯಿಸುವುದು ಸಮನ್ವಯದ ಸಂಸ್ಕೃತಿಯನ್ನು. ಲೋಕಸತ್ತೆಯನ್ನು ಪೋಷಿಸುವ ನಮ್ಮ ನಾಗರಿಕ ಪ್ರಜ್ಞೆ ಬೆಳೆಯಬೇಕಾದುದು ಈ ಹಿನ್ನೆಲೆಯಲ್ಲಿ. ನಾಗರಿಕ ಪ್ರಜ್ಞೆ ಒಂದು ಪರಿಣಾಮಕಾರಿ ಶಕ್ತಿಯಾಗಿ ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೊಣೆಯನ್ನು ನಿರ್ವಹಿಸುವುದೂ ಪ್ರತಿಯೊಬ್ಬ ನಾಗರಿಕನೂ ವ್ಯಷ್ಟಿ ಸಮಷ್ಟಿಗಳ ಸಂಬಂಧದ ಸ್ಪಷ್ಟ ತಿಳಿವಳಿಕೆ ತಂದುಕೊಂಡಾಗ ಮಾತ್ರ. ಇಂತಹ ನಾಗರಿಕ ಪ್ರಜ್ಞೆಯೇ ಸಂಸ್ಕೃತಿ; ರಾಷ್ಟ್ರ ಪ್ರಜ್ಞೆಯನ್ನೂ ಕುದುರಿಸಿ, ಲೋಕಸತ್ತೆಯನ್ನು ಪೋಷಿಸಬಹುದಾದ ಸಂಸ್ಕೃತಿ.

ಸಾಮಾಜಿಕ ನ್ಯಾಯ

ಸಮಾನಾವಕಾಶಗಳ, ಸಾಮಾಜಿಕ ನ್ಯಾಯದ, ಸ್ವತಂತ್ರ ಸಾರ್ವಭೌಮ ಪ್ರಜಾಪ್ರಭುತ್ವ ನಿರ್ಮಾಣ ನಮ್ಮ ಸಂವಿಧಾನ ನಿರ್ಮಾಪಕರ ಗುರಿಯಾಗಿತ್ತು. ಮತ್ತೆ ಸೇರಿಕೊಂಡ ಧರ್ಮನಿರಪೇಕ್ಷತೆ, ಸಮಾಜವಾದಿ ಸ್ವರೂಪದ ರಾಷ್ಟ್ರ ನಿರ್ಮಾಣದ ಗುರಿಯೂ ಸಾಮಾಜಿಕ ನ್ಯಾಯವೇ. ಅನ್ಯಾಯದ ಕುರಿತ ತಿಳಿವಳಿಕೆಯೇ ನ್ಯಾಯದ ಕುರಿತ ಆಸಕ್ತಿಗೆ ಮುಖ್ಯ ಕಾರಣ. ಸಾಮಾಜಿಕ ನ್ಯಾಯ ಯಾವಾಗಲೂ ಸಮಷ್ಟಿಯ ಹಿತವನ್ನೇ ಗಮನದಲ್ಲಿರಿಸಿಕೊಂಡಿರುವುದು. ಸಮುದಾಯದ ಹಿತ ಮುಖ್ಯವೆನಿಸುವುದು ಸಾಮಾಜಿಕ ಶಾಂತಿಯಿಂದ ಸದೃಢ ರಾಷ್ಟ್ರ ನಿರ್ಮಾಣ ಸಾಧ್ಯವೆನಿಸುವುದರಿಂದ. ಸಮುದಾಯದ ಹಿತಕ್ಕಾಗಿ ವ್ಯಷ್ಟಿ ತನ್ನ ಹಾಗೂ ತನ್ನ ಕೌಟುಂಬಿಕ ಸ್ವಾರ್ಥದ ಕೆಲವು ಪದರುಗಳನ್ನು ತ್ಯಾಗ ಮಾಡಬೇಕಾಗುತ್ತದೆ. ಉದಾ : ತನ್ನ ಸ್ವಚ್ಛಂದ ವರ್ತನೆ ಸಾಮಾಜಿಕ ನೀತಿ ನಿಯಮಗಳನ್ನು ಉಲ್ಲಂಘಿಸುವಂತಿರಬಾರದು ಎಂದು. ತನ್ನ ಯಾವುದೇ ರೀತಿಯ ವರ್ತನೆ ಇತರರಿಗೆ ನೋವನ್ನಾಗಲೀ, ತೊಂದರೆಯನ್ನಾಗಲೀ ಉಂಟುಮಾಡಬಾರದು ಎಂದು. ಸಾಮಾಜಿಕ ಹಿತಕ್ಕಾಗಿ ಸಮಾಜ ಜೀವನವನ್ನು ನಿಯಂತ್ರಿಸುವ ಸರಕಾರ ವಿಧಿಸುವ ಕರ, ತೆರಿಗೆ ಮುಂತಾದವುಗಳನ್ನು ತಿರಸ್ಕರಿಸುವ ಅಧಿಕಾರ ತನಗಿಲ್ಲ ಎಂದು. ಹಾಗೆಯೇ ಸಮುದಾಯದ ಜೀವನವೂ ರಾಷ್ಟ್ರದ ಆಡಳಿತೆಗೆ ಯಾವ ರೀತಿಯ ತೊಂದರೆಯನ್ನೂ ಕೊಡುವಂತಿರಬಾರದು. ಸಾಮಾಜಿಕ ಅಶಾಂತಿ ಕದಡಿ, ರಾಷ್ಟ್ರದ ಆಡಳಿತೆ ಅದನ್ನು ಸರಿಪಡಿಸುವ ನೆಪದಿಂದ ಉಗ್ರ ಕ್ರಮಗಳನ್ನು ಕೈಗೊಳ್ಳುವಂತಿರಬಾರದು ಎಂಬುದೆಲ್ಲ ಒಂದು ಲೋಕಸತ್ತೆಯ ವ್ಯವಸ್ಥೆಯನ್ನು ಸರಿಯಾದ ದಾರಿಯಲ್ಲಿ ಕಾದು ಕೊಂಡು ಬರಲು ಅನಿವಾರ್ಯವೆನಿಸುವ ಆವಶ್ಯಕತೆಗಳು.

ನಾವು ನಮ್ಮ ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ 'ಸಾಮಾಜಿಕ ನ್ಯಾಯ' ಎಲ್ಲರಿಗೂ ದೊರಕುತ್ತಿಲ್ಲವೆಂದು ಇನ್ನೂ ಬೊಬ್ಬಿಡುತ್ತಿದ್ದೇವೆ. ಕೆಲವು ರಾಜಕೀಯ ಪಕ್ಷಗಳಿಗೆ ಹಾಗೂ ರಾಜಕಾರಣಿಗಳಿಗೆ 'ಸೋಸಲ್ ಜಸ್ಟೀಸ್' ಎನ್ನುವುದು (ಈ ಉಚ್ಚಾರದ ನೆನಪು ತರುವುದು ಹಾಸ್ಯಕ್ಕಾಗಿ ಅಲ್ಲ; ನಾವು ವಸಾಹತುಶಾಹಿ ಸಂಸ್ಕಾರಗಳಿಂದ ಇನ್ನೂ ಬಿಡುಗಡೆ ಹೊಂದಿಲ್ಲವೆಂದು ತೋರಿಸಲಷ್ಟೆ) 'ವೋಟು'ಗಳ ಬೇಟೆಯ ಆದರ್ಶವೂ ಆಗಿದೆ. ಹೀಗಾಗಲು ಕಾರಣಗಳೂ ಇವೆಯೆನ್ನಿ. ನಮ್ಮ ದೇಶದ ಸಂಪತ್ತನ್ನೆಲ್ಲ ಕೊಳ್ಳೆ ಹೊಡೆದು ತಾವು ಬಿಟ್ಟು ಹೋಗಬೇಕಾದಾಗ ಬ್ರಿಟಿಷರು ಕೊಟ್ಟ ಬಳುವಳಿ ದಾರಿದ್ರ್ಯ. ಇದಕ್ಕೆ ಪೂರ್ತಿ ಅವರೇ ಹೊಣೆಯಲ್ಲ. ನಮ್ಮ ಸಮುದಾಯ ಜೀವನ ರೀತಿ, ನಮ್ಮ ಧರ್ಮ, ನಮ್ಮ ನಂಬಿಕೆಗಳು, ಕಟ್ಟುಪಾಡುಗಳು, ನಮ್ಮ ವೈಯಕ್ತಿಕ ಜೀವನಕ್ಕೂ, ಸಮುದಾಯ ಜೀವನಕ್ಕೂ ನಡುವೆ ನಾವೇ ನಿರ್ಮಿಸಿಕೊಂಡ ಕಂದರಗಳು, ಇವೆಲ್ಲ ವ್ಯಕ್ತಿ, ಸಮಾಜ, ರಾಷ್ಟ್ರಗಳ ಹೊಂದಾಣಿಕೆಯ ದಾರಿಯಲ್ಲಿ ತಡೆ ತರುವಂಥವೇ.

ಬ್ರಿಟಿಷರು ಪೋಷಿಸಿ ಬೆಳೆಸಿದ ಹಿಂದೂ-ಮುಸ್ಲಿಂ ವೈಷಮ್ಯದ ಮಾತಂತಿರಲಿ, ಬಹುಸಂಖ್ಯಾತ ಹಿಂದೂ ಸಮಾಜದಲ್ಲೂ ಸವರ್ಣೀಯರೆನಿಸಿಕೊಳ್ಳುವವರಿಂದ ಅಸ್ಪೃಶ್ಯ ರೆಂದು ಕರೆಸಿಕೊಳ್ಳುವವರ ತನಕ, ಹತ್ತು ಹಲವು ಕಂದರಗಳು ಧರ್ಮದ ಹಿಡಿತದಲ್ಲಿ ಅರಳಬೇಕಾಗಿದ್ದ ಇವರೆಲ್ಲರ ಒಂದು ರೀತಿಯ ಸಾಂಸ್ಕೃತಿಕ ಐಕ್ಯ ಕೂಡ ಅಪ್ರಾಮಾಣಿಕ ವಾದುದೇನೋ ಎನಿಸುವಷ್ಟರ ಮಟ್ಟಿಗೆ ಬಿರುಕುಗಳು. ಜಾತೀಯ ಮಡಿವಂತಿಕೆ ಬರೇ ಬ್ರಾಹ್ಮಣರಿಗಷ್ಟೆ ಸೀಮಿತವಾಗಿರಲಿಲ್ಲ. ಜಾತಿ ವ್ಯವಸ್ಥೆಯ ಹತ್ತು ಹಲವು ಪದರುಗಳಲ್ಲೂ ಉತ್ತಮಿಕೆಗೆ ಬ್ರಾಹ್ಮಣರು ಸಂಕೇತವೆಂಬ ತಿಳಿವಳಿಕೆ ಬೆಳೆದು ಎಲ್ಲ ಪದರುಗಳಲ್ಲೂ ತಮ್ಮ ತಮ್ಮ ಜಾತಿ ವ್ಯವಸ್ಥೆಯ ಪದರಿನ ಮಡಿವಂತಿಕೆಯನ್ನು ಕಾದುಕೊಳ್ಳುವುದೇ ಸೂಕ್ತವೆಂಬ ತಿಳಿವಳಿಕೆ ಬೆಳೆದು, ಬ್ರಾಹ್ಮಣರು ಬ್ರಾಹ್ಮಣೇತರರ ಕುರಿತು ತೋರುತ್ತಿರುವ ಮಡಿವಂತಿಕೆ ಯನ್ನು ಬ್ರಾಹ್ಮಣರಲ್ಲದವರೆಂದೆನಿಸಿಕೊಂಡವರು ಜಾತಿ ವ್ಯವಸ್ಥೆಯ ಇತರ ಪದರುಗಳು ಕುರಿತು ತೋರಿಸುವುದು ಸರಿಯೆಂಬ ಭಾವನೆ ಸ್ಪಷ್ಟ ರೂಪ ತಳೆದಿತ್ತು. ಹೀಗಾಗಿ ಅಂತ್ಯಜರೆಂದು ಕರೆಸಿಕೊಂಡು ಇಂದು ದಲಿತರೆನಿಸಿಕೊಳ್ಳುವವರ ಅಸ್ಪೃಶ್ಯತೆ ಒಂದು ಸಾಮಾಜಿಕ ನೀತಿಯೇನೋ ಎಂಬ ದುರದೃಷ್ಟಕರ ಪರಿಸ್ಥಿತಿ ಸ್ವಾತಂತ್ರ್ಯ ಬಂದ ಕಾಲದಲ್ಲೂ ಇತ್ತು. ಈಗಲೂ ಈ ಅವಸ್ಥೆ ಪೂರ್ತಿಯಾಗಿ ಮಾಯವಾಗಿಲ್ಲ. ಅಸ್ಪೃಶ್ಯತೆಯ ವಿರುದ್ಧದ ಶಾಸನಗಳಿಂದಲೂ ಇದು ಸಂಪೂರ್ಣ ಮಾಯವಾಗಿದೆ ಯೆಂದು ಹೇಳುವಂತಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೂ ದೇಶದ ಕೆಲವೆಡೆಗಳಲ್ಲಿ ಮಲ ಹೊರುವ ಪದ್ಧತಿ ಇನ್ನೂ ಇದೆಯೆನ್ನುವ ನಾಚಿಕೆಗೇಡು ಪರಿಸ್ಥಿತಿಯು ನಮ್ಮ ಲೋಕಸತ್ತೆಯ ಆದರ್ಶವನ್ನು ಅಣಕಿಸುವಂತಿದೆ. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯಿಂದ ಪ್ರಭಾವಿತರಾಗಿ 'ನಿಮ್ನ' ರೆಂದು ಕರೆಸಿಕೊಳ್ಳಬೇಕಾಗಿದ್ದ ವರ್ಗಗಳ ಜನರ ಸ್ವಾಭಿಮಾನ ಜಾಗ್ರತವಾಗಿ ನಮ್ಮ ಸಂವಿಧಾನದ ರಕ್ಷಣೆ ತಮಗೂ ಇದೆಯೆಂಬ ತಿಳಿವಳಿಕೆ ಅವರಿಗೆ ಬರುತ್ತಲಿದೆಯಾದರೂ ದೀರ್ಘಕಾಲ ಈ ಮಡಿವಂತಿಕೆಯ ಶೋಷಣೆ ತಮ್ಮನ್ನು ಆರ್ಥಿಕವಾಗಿಯೂ, ಸಾಂಸ್ಕೃತಿಕವಾಗಿಯೂ, ಬಡವರನ್ನಾಗಿಸಿದೆ ಎಂಬ ನೋವನ್ನು ಅವರು ಮರೆತಿಲ್ಲ. ಇದಕ್ಕಾಗಿಯೂ ಸಾಮಾಜಿಕ ನ್ಯಾಯವನ್ನು ಅಪೇಕ್ಷಿಸುವ ಅವರ ಚಳವಳ ಮುಂದುವರಿದಿದೆ. ಹೀಗಿರುವುದರಿಂದಲೂ ಇಂದು ಇದು ರಾಜಕೀಯ ಅಧಿಕಾರವನ್ನು ಅಪೇಕ್ಷಿಸುವ ಅಥವಾ ಕಾದುಕೊಳ್ಳುವ ರಾಜಕಾರಣಿ ಗಳಿಗೆ 'ವೋಟು'ಗಳ ಬೇಟೆಯ ಒಂದು ಅಸ್ತ್ರ ಕೂಡ ಆಗಿದೆ.

ಹಿಂದೆ ಹೇಳಿದಂತೆ ನಮ್ಮ ಸಮುದಾಯ ಜೀವನದ ಎಲ್ಲ ಸ್ತರಗಳಲ್ಲೂ ಸಾಮಾಜಿಕ ಶಾಂತಿಯನ್ನು ಕಾಪಾಡಿಕೊಳ್ಳಲು ಅಗತ್ಯವಿರುವ ಸಾಮಾಜಿಕ ನೈತಿಕತೆ – ಇದನ್ನೆ ಸಾಮಾಜಿಕ ನ್ಯಾಯವೆನ್ನಿ – ತ್ಯಾಗವನ್ನು ಅಪೇಕ್ಷಿಸುತ್ತದೆ. ಸವರ್ಣೀಯರೆನಿಸಿಕೊಳ್ಳು ವವರು ತಮ್ಮ ಮಡಿವಂತಿಕೆಯನ್ನು ಕಾದುಕೊಳ್ಳುವುದು ತಮ್ಮ ಧಾರ್ಮಿಕ ಅಥವಾ ಇನ್ನಾವುದೇ ರೀತಿಯ ಕರ್ತವ್ಯವೆಂದು ತಿಳಿದು ಈ ಮಡಿವಂತಿಕೆಯ ಕಾರಣದಿಂದ ಇತರರನ್ನು ತಿರಸ್ಕಾರದಿಂದಲ್ಲವಾದರೂ, 'ಉಚ್ಚ ನೀಚ' ಎಂಬ ತಾರತಮ್ಯ ದೃಷ್ಟಿಯಿಂದ ನೋಡುವಂತಾದಾಗ, ಸಮಾಜ ಜೀವನದ ಶಾಂತಿಯನ್ನು ಕಾದುಕೊಳ್ಳಲು

ಮಾಡಬೇಕಾದ ತ್ಯಾಗವನ್ನು ಬಲಿ ಕೊಡಬೇಕಾಗುತ್ತದೆ. ಸಾಮಾಜಿಕ ಶಾಂತಿ ಕದಡಿದಾಗ ವೈಯಕ್ತಿಕ ಅಥವಾ ಕೌಟುಂಬಿಕ ಶಾಂತಿಗೆ ಅರ್ಥ ಬರುವುದೂ ಇಲ್ಲ. ಇಂಥಲ್ಲಿ ರಾಷ್ಟ್ರ ನಿಷ್ಠೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲವಾದ ಕಾರಣ ರಾಷ್ಟ್ರೀಯವೆನಿಸುವ ಸಾಂಸ್ಕೃತಿಕ ಅಸ್ಮಿತೆ ರೂಪುಗೊಳ್ಳುವುದೂ ಸಾಧ್ಯವಿಲ್ಲ. ಇದು ಬರೇ ಸವರ್ಣೀಯರೆನಿಸಿಕೊಳ್ಳುವ ವರಿಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಹಿಂದೂ ಜಾತಿ ವ್ಯವಸ್ಥೆಯೊಳಗಿರುವವರು ತಮ್ಮ ತಮ್ಮ ಮಡಿವಂತಿಕೆಯನ್ನು ಕಾದುಕೊಳ್ಳಲು ಇತರರು ತಮಗಿಂತ ನೀಚರು ಎಂಬ ತಿರಸ್ಕಾರ ಮನೋವೃತ್ತಿಯನ್ನು ತೋರಿಸುವ ಹಲವಾರು ಉದಾಹರಣೆಗಳನ್ನು ಕೊಡಬಹುದು. ಒಬ್ಬ ಬ್ಯಾಂಕ್ ಮ್ಯಾನೇಜರರು ಒಂದು ಹಳ್ಳಿಯಲ್ಲಿ ಬ್ಯಾಂಕ್ ಕೊಡುವ ಸಾಲಗಳ ಫಲಾನುಭವಿಗಳನ್ನು ಗುರುತಿಸಲು ಸಭೆ ಕರೆದಾಗ, ಬ್ರಾಹ್ಮಣರಲ್ಲದ ಕೆಲವು ಹಿಂದೂಗಳು ತಮಗಿಂತ ಜಾತಿ ವ್ಯವಸ್ಥೆಯಲ್ಲಿ ಕೀಳೆನಿಸಿದವರನ್ನು ಸಭೆಗೆ ಕರೆದುದಕ್ಕಾಗಿ ಮ್ಯಾನೇಜರರನ್ನು ತರಾಟೆಗೆ ತೆಗೆದುಕೊಂಡ ನಿದರ್ಶನಗಳಿವೆ. ಇಂದು ಸವರ್ಣೀಯ ರೆನಿಸುವ ಬ್ರಾಹ್ಮಣರು ಶೋಷಣೆಗೆ ಸಂಕೇತರಾಗಿರುವರಾದರೂ, ಇತರರ ಕುರಿತು ತಿರಸ್ಕಾರವನ್ನು ಸೂಚಿಸುವ ಶೋಷಕ ಪ್ರವೃತ್ತಿ ಹಿಂದುಗಳೆನಿಸಿಕೊಳ್ಳುವವರ ಎಲ್ಲ ಸ್ತರಗಳಲ್ಲೂ ಇದೆಯಾದುದರಿಂದ ನಮ್ಮ ಸಂವಿಧಾನ ಅಪೇಕ್ಷಿಸುವ ಸಮಾನಾವಕಾಶಗಳ ಸಾಮಾಜಿಕ ನ್ಯಾಯ ಕಷ್ಟವೆನಿಸುತ್ತದೆ. ಕೆಲವು ವರ್ಷಗಳ ಹಿಂದೆ ಮುಂಬಯಿಯಲ್ಲಿ ಈ ಲೇಖಕನ ಮನೆಯ ಕೆಲಸದಾಕೆ ಕೆಲಸ ಬಿಟ್ಟು ಹೋದಾಗ ಒಬ್ಬಾಕೆ 'ಮಹಾರ್' ಮಹಿಳೆ ತಾನು ಕೆಲಸ ಮಾಡಲು ಬರುವೆನೆಂದಾಗ ಬಿಟ್ಟು ಹೋದ ಕೆಲಸದಾಕೆಯೇ 'ಆ ಮಹಾರ್ ಮಹಿಳೆಯನ್ನು ಯಾಕೆ ಕೆಲಸಕ್ಕೆ ಕರೆದಿರಿ?' ಎಂದು ಕೇಳಿದ್ದಿದೆ. ಆಕೆಯನ್ನು ನಾವು ಕರೆದೆವೆಂದು ಪಕ್ಕದ ಮನೆಯವರು ಆಕೆ ತುಳಿಯುತ್ತಿದ್ದ ನಮ್ಮ ಮನೆಯ ಮುಂದಿನ ಜಾಗವನ್ನು ನೀರಿನಿಂದ ತೊಳೆದದ್ದೂ ಇದೆ. ಈ ಪರಿಸ್ಥಿತಿ ಈಗ ಸ್ವಲ್ಪ ಸುಧಾರಿಸಿದೆಯಾದರೂ ಇಂತಹ ಸಾಮಾಜಿಕ ವೈಷಮ್ಯದ ಆವರಣದಲ್ಲಿ ಸಾಮಾಜಿಕ ನ್ಯಾಯ ಕಷ್ಟದ ಕೆಲಸವಲ್ಲದೆ ಮತ್ತೇನು?

ಇದು ಹಿಂದೂಗಳಿಗಷ್ಟೆ ಅನ್ವಯಿಸುವ ಮಾತಲ್ಲ. ಮುಸ್ಲಿಂ ಮಡಿವಂತಿಕೆಯೇನೂ ಕಡಮೆಯಲ್ಲ. ತಮ್ಮ ಧಾರ್ಮಿಕ ಮಡಿವಂತಿಕೆ ಹಾಳಾಗುವುದೆಂದು 'ವಂದೇ ಮಾತರಂ' ಹಾಡಬಾರದು, ದೀಪ ಹಚ್ಚಿ ಸಮಾರಂಭದ ಉದ್ಘಾಟನೆಯಾಗಬಾರದು ಎಂಬ ನಿದರ್ಶನಗಳನ್ನು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಸಾಕಷ್ಟು ಬಾರಿ ಕಂಡಿದ್ದೇವೆ. ನೆರೆಯ ಕೊಲ್ಲಿ ರಾಷ್ಟ್ರಗಳಲ್ಲಿ ಮಕ್ಕಳ ಪಠ್ಯ ಕ್ರಮದಲ್ಲಿ ಇಸ್ಲಾಂ ಅಧ್ಯಯನ ನೈತಿಕ ಶಿಕ್ಷಣ ಸೇರಿಕೊಂಡಿದೆಯೆಂಬ ತಿಳಿವಳಿಕೆ ಇದ್ದೂ ಭಾರತದಲ್ಲಿ ಅಂತಹ ಶಿಕ್ಷಣ ಕ್ರಮ ಬಂದರೆ ಸಿಡಿದೇಳುವ ಪ್ರವೃತ್ತಿಯೂ ಸಾಮಾಜಿಕ ಶಾಂತಿಯನ್ನೂ ಅದನ್ನು ಪೋಷಿಸಬೇಕಾದ ಸಾಮಾಜಿಕ ನ್ಯಾಯವನ್ನೂ ಗೌರವಿಸುವಂಥದಲ್ಲ. ಹಾಗೆಯೇ ಇಂದು 'ದಲಿತ'ರೆಂಬ ವರ್ಗದಡಿ 'ನಾವು ದೀರ್ಘಕಾಲದ ಶೋಷಣೆಗೊಳಗಾದವರು, ಆ ಕಾರಣ ನಾವು ಸಂಘರ್ಷದಿಂದ ಮಾತ್ರ ನಮ್ಮ ನ್ಯಾಯವಾದ ಸಂವಿಧಾನ ವಿಧಿಸಿದ ಹಕ್ಕುಗಳನ್ನು ಪಡೆಯಬಲ್ಲವರು' ಎಂದು ಸವರ್ಣೀಯರೆನಿಸಿಕೊಳ್ಳುವವರ ವಿರುದ್ಧ ಸಂಘರ್ಷದ

ಕೂಗೆದ್ದಿದೆ. ಮಹಾರಾಷ್ಟ್ರದ 'ದಲಿತ ಪ್ಯಾಂಥರ್ಸ್' ಚಳವಳದ ಹುಟ್ಟು ಈ ಸ್ಥಿತಿಯಲ್ಲೆ. ಸವರ್ಣೀಯರೆನಿಸಿಕೊಳ್ಳುವವರ ವಿರುದ್ಧದ ನೋವಿನ ಸಂಘರ್ಷದ ದನಿಯಲ್ಲಿ ಪ್ರಾಮಾಣಿಕ ಆಕ್ರೋಶವಿದೆಯಾದರೂ ಇದು ಯಾವ ರೀತಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಬಹುದು, ಸಾಮಾಜಿಕ ನ್ಯಾಯವನ್ನು ಪಾಲಿಸಬಹುದು ಎಂಬುದು ಚರ್ಚಾಸ್ಪದವಾಗಿದೆ. ಸ್ವಾತಂತ್ರ್ಯದ 50ನೆಯ ವರ್ಷದಲ್ಲಿ ಕರ್ನಾಟಕದ ಕೆಲವು ಕಡೆಗಳಲ್ಲಿ ನಡೆದ ದಲಿತ ಸವರ್ಣೀಯ ಘರ್ಷಣೆಗಳೇ ಈ ಮಾತಿಗೆ ಸಾಕ್ಷಿ.

ಇಲ್ಲಿ ನಾವು ಮರೆಯುವ ಮುಖ್ಯ ಸಂಗತಿ ಈ ಜಾತೀಯ ವ್ಯವಸ್ಥೆ ಉಂಟುಮಾಡುವ ತಾರತಮ್ಯದ, ಶೋಷಣೆಯೆನ್ನಿ, ಸ್ವಾರ್ಥವೆನ್ನಿ, ಇವನ್ನು ಕೊನೆಗೊಳಿಸದೆ ಲೋಕಸತ್ತೆಯನ್ನು ಬಲಪಡಿಸಲು ಅಗತ್ಯವಿರುವ ರಾಷ್ಟ್ರನಿಷ್ಠೆಯನ್ನು ಮೂಡಿಸುವುದು ಅತ್ಯಂತ ಕಷ್ಟದ ಕೆಲಸವೆಂಬುದನ್ನು. ಈ ಬಿರುಕುಗಳನ್ನು ಅಳಿಸುವ ಅಥವಾ ಹೊಂದಿಸುವ ಯಾವ ಪ್ರಯತ್ನವನ್ನೂ ಮಾಡದೆ ನಾವು 'ಸಾಮಾಜಿಕ ನ್ಯಾಯದ ಕುರಿತು ಮಾತನಾಡುವುದು ಸರಿಯೆನಿಸದು'. ಹಾಗೆಯೇ ಈ ಬಿರುಕುಗಳನ್ನು ಗಮನಿಸುವಾಗ, ನಮ್ಮ ವರ್ಣಾಶ್ರಮ ವ್ಯವಸ್ಥೆ ರೂಢಿಸಿದ ಜಾತಿ ಉಪಜಾತಿಗಳು ಅನುಸರಿಸುವ ವೃತ್ತಿ ಜೀವನವನ್ನಷ್ಟೆ ಗಮನಿಸಿ, ಇದಕ್ಕೆ ಮೂಲವಾಗಿ ಆರ್ಥಿಕ ಅಸಮತೆಯನ್ನು ಪೋಷಿಸಿದ ಕಾರಣಗಳನ್ನೂ, ಇದರಿಂದಾಗಿ ಉಂಟಾದ ಸಾಮಾಜಿಕ ಅಸಮತೆಯ ಕಾರಣಗಳನ್ನೂ ಗಮನಿಸದೆ ಹೋದರೆ ನಮ್ಮ ನ್ಯಾಯ ಸಿದ್ಧಾಂತವೂ ಏಕಪಕ್ಷೀಯವಾಗುತ್ತದೆ. ಮೂಲತಃ ದಾರಿದ್ರ್ಯ ಉಂಟುಮಾಡುವ ಅಸಂತೋಷ ಸಾಮಾಜಿಕ ಸಂಘರ್ಷಕ್ಕೆ ಬೀಜ. ಇದು ಸಾರ್ವತ್ರಿಕ ಸತ್ಯ. ಬರೇ ಭಾರತಕ್ಕೆ ಅನ್ವಯಿಸುವ ಮಾತಲ್ಲ. ಚಿಯಾಂಗ್ ಕೈ ಶೇಕರ ಕಾಲದ ಚೀನಾದಲ್ಲಿ ಭಾರತದ ವರ್ಣ ವ್ಯವಸ್ಥೆಯ ರೀತಿಯ ಸಾಮಾಜಿಕ ಬಿರುಕುಗಳು ಅಷ್ಟಾಗಿ ಇರದಿದ್ದರೂ, ದಾರಿದ್ರ್ಯ ಕಾಡುತ್ತಿತ್ತು. ಮಾವೋ ಅವರ ಕಮ್ಯೂನಿಸ್ಟ್ ಆಡಳಿತೆ ನೆಲೆಯೂರಿದ ಮೇಲೆ ಸೈದ್ಧಾಂತಿಕ ಒಲವಿನ ಅಧಿಕಾರದ ದಂಡ ಶಕ್ತಿಯ ಬಲದಿಂದಲೇ ಎನಿಸಿದರೂ ಚೀಣಾದ ರಾಷ್ಟ್ರೀಯ ಅಸ್ಮಿತೆ ಸತ್ಯ ಎನ್ನುವಷ್ಟರ ಮಟ್ಟಿಗೆ ಅಲ್ಲಿ ದಾರಿದ್ರ್ಯ ನಿವಾರಣೆಯ ಸಾಮಾಜಿಕ ನ್ಯಾಯ ಸತ್ಯವಾಗಿರುವುದು ಇಂದು ಇತಿಹಾಸ. ಇದಕ್ಕಾಗಿ ಅನುಸರಿಸಿದ ದಾರಿಗಳ ಕುರಿತು ಭಿನ್ನಾಭಿಪ್ರಾಯವಿರಬಹುದು. ಆದರೆ ಚೀಣಾದ ಇಂದಿನ ಪ್ರಗತಿಗೆ ರಾಷ್ಟ್ರೀಯ ಅಸ್ಮಿತೆ ಅಭಿಮಾನಗಳ ಪ್ರಜ್ಞೆ ಒಂದು ಕಾರಣವೆಂದು ಚೀಣಾವನ್ನು ಸಂದರ್ಶಿಸಿದ ಅರ್ಥಶಾಸ್ತ್ರಜ್ಞರು ಹಾಗೂ ಇತರರು ಹೇಳಿದ್ದಾರೆ. ಈ ರೀತಿಯ ದಂಡ ಶಕ್ತಿ ಪ್ರಜಾಪ್ರಭುತ್ವದಲ್ಲಿ ಸರಿಯೇ ಎನ್ನುವುದು ಇಲ್ಲಿ ಚರ್ಚೆಯ ವಿಷಯವಲ್ಲ. ಆದರೆ ದಾರಿದ್ರ್ಯ ನಿವಾರಣೆಯನ್ನು ಸಾಧ್ಯವಾಗಿಸುವ, ಜೀವನಸ್ತರವನ್ನು ಸುಧಾರಿಸುವ ಶಿಕ್ಷಣವು, ಉದ್ಯೋಗಗಳಿಗೆ ಮುಕ್ತ ಅವಕಾಶಗಳನ್ನು ಒದಗಿಸುವ ಆಡಳಿತೆಯ ರೀತಿ ನೀತಿಗಳು ಮಾತ್ರ ಸರ್ವತ್ರ ಅನ್ವಯವಾಗುವ ಸಾಮಾಜಿಕ ನ್ಯಾಯವನ್ನು ಒದಗಿಸಬಹುದು. ವರ್ಣವ್ಯವಸ್ಥೆಯ ಬಿರುಕುಗಳೊಡನೆ ಸಂಘರ್ಷ ನಡೆಸುವುದೇ ಸಾಮಾಜಿಕ ನ್ಯಾಯವೆಂಬ ತಿಳಿವಳಿಕೆ ನಮಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೂ ಕೆಲವು

ರಾಜಕೀಯ ಪಕ್ಷಗಳಲ್ಲಿರುವುದನ್ನು ಗ್ರಹಿಸಿ ಹೀಗೆ ಬರೆಯಬೇಕಾಗಿದೆ. ಉದಾಹರಣೆಗೆ ದಾರಿದ್ರ್ಯ ರೇಖೆಯಿಂದ ಕೆಳಗಿರುವವರು ಎಂದು ನಾವು ತಿಳಿದಿರುವ ಜನಸಮುದಾಯ ಹೆಚ್ಚಿರುವ ಉತ್ತರ ಪ್ರದೇಶದ ಪೂರ್ವ ಭಾಗಗಳು, ಬಿಹಾರ ಮೊದಲಾದ ಪ್ರದೇಶಗಳಲ್ಲಿ ಕಾಯಸ್ಥರು, ಭೂಮಿಹಾರರು ಮುಂತಾದವರಲ್ಲಿ ಕೆಲವರು ತಮ್ಮ ಗಳಿಕೆಯನ್ನು, ಭೂಮಿಯ ಒಡೆತನವನ್ನು ಕಾದುಕೊಳ್ಳಲು ಮಾಡುತ್ತಲೇ ಇರುವ ದರಿದ್ರರ ಶೋಷಣೆ, ಇಂದು ದೇಶದ ಕೆಲವೆಡೆಗಳಲ್ಲಿ ಶಾಸನದ ಪ್ರತಿಬಂಧಕವಿದ್ದರೂ ನಡೆಯುತ್ತಲೇ ಇರುವ ಜೀತ ಪದ್ಧತಿ, ಬಾಲ ಕಾರ್ಮಿಕರ ಸಮಸ್ಯೆ, ಇವುಗಳಿಗೆಲ್ಲ ಮುಖ್ಯ ಕಾರಣಗಳನ್ನು ನಾವು ಆರ್ಥಿಕ ಸ್ವಾರ್ಥದಲ್ಲಿ ಗುರುತಿಸಬೇಕೇ ಹೊರತು ನಮ್ಮ ವರ್ಣ ವ್ಯವಸ್ಥೆಯ ಬಿರುಕುಗಳಲ್ಲಲ್ಲ. ವರ್ಗ ಪ್ರಜ್ಞೆಯನ್ನು ವರ್ಣ ಪ್ರಜ್ಞೆಯ ಜತೆ ಸಮೀಕರಿಸುವಂತಹ ಚಿಂತನೆ ನಮ್ಮ ಪೂರ್ವಗ್ರಹವನ್ನಷ್ಟೆ ಎತ್ತಿ ತೋರಿಸುತ್ತದೆ. ಶೋಷಣೆಯ ಆ ರೀತಿಯ ವಿಶ್ಲೇಷಣೆ ರಾಜಕೀಯ ಸ್ವಾರ್ಥಕ್ಕೂ ವೋಟುಗಳ ಗಳಿಕೆಗೂ – ಇದೂ ಅಜ್ಞಾನದ ಶೋಷಣೆಯಿಂದಾಗಿ – ಸಹಾಯ ಮಾಡಬಹುದಾದರೂ ಸಾರ್ವತ್ರಿಕವಾಗಿ ಅನ್ವಯವಾಗುವ ಸಾಮಾಜಿಕ ನ್ಯಾಯವನ್ನು ತರಲಾರದು. ಸೈದ್ಧಾಂತಿಕವೆನಿಸುವ ವೈಚಾರಿಕತೆ ಬೆಳೆದು ಇಂದು ನಾವು ಸಾಕಷ್ಟು ಕ್ಲೀಶೆಯೆನಿಸುವಂತೆ ಬಳಸುತ್ತಿರುವ 'ಶೋಷಣೆ' ಶಬ್ದದ ಮೂಲದಲ್ಲಿರುವುದು ಭಾರತೀಯ ಸಮಾಜದ ವರ್ಣ ವ್ಯವಸ್ಥೆಯ ಬಿರುಕುಗಳಲ್ಲ, ಆರ್ಥಿಕ ಸ್ವಾರ್ಥ ಎಂದು ತಿಳಿಯುವಂತಾದಾಗ ಸಾಮಾಜಿಕ ನ್ಯಾಯದ ಗುರಿ ಸ್ಪಷ್ಟವೆನಿಸೀತು. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ರಾಜಕಾರಣ ನಡೆದು ಬಂದ ದಾರಿಯನ್ನು ತಿರುಗಿ ನೋಡುವಾಗ 'ವೋಟು'ಗಳ ಗಳಿಕೆಯ ದೃಷ್ಟಿಯಿಂದ ಜಾತೀಯತೆಯ ವಿರುದ್ಧ ಘೋಷಣೆಗಳನ್ನು ಮಾಡುತ್ತಲೇ ಜಾತೀಯ ಪದರುಗಳನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡು ಬಂದ ಪಕ್ಷಗಳೇ ಹೆಚ್ಚಿನವು. ಮಾರ್ಕ್ಸ್‌ವಾದಿ ಸೈದ್ಧಾಂತಿಕ ವಿಚಾರಗಳಲ್ಲಿ ನಂಬಿಕೆ ಇರಿಸಿಕೊಂಡ ಸಾಮ್ಯವಾದ ಪಕ್ಷಗಳಿಗೆ ಮಾತ್ರ ಅಂಥ ಅಪ್ರಾಮಾಣಿಕ ನಡೆವಳಿಕೆ ಇರಲಿಲ್ಲವೆಂದೇ ಕಮ್ಯೂನಿಸ್ಟ್ ಪಕ್ಷಗಳಲ್ಲಿ ಜಾತೀಯ ಸ್ವಾರ್ಥ ಪ್ರೇರಿತ ರಾಜಕಾರಣವನ್ನು ನಾವು ಕಂಡಿಲ್ಲ. ಅವರ ಸೈದ್ಧಾಂತಿಕ ಒಲವನ್ನು ಟೀಕಿಸುವವರೂ ಜಾತೀಯತೆಯ ವಿಚಾರದಲ್ಲಿ ಅವರ ನಿಷ್ಠುರ ಪ್ರಾಮಾಣಿಕತೆಯನ್ನು ಮೆಚ್ಚದಿರಲು ಸಾಧ್ಯವಿಲ್ಲ. ಇನ್ನೊಂದು ತುಸು ಆಶ್ಚರ್ಯಕರವೆನಿಸುವ ವಿಚಾರವನ್ನೂ ಇಲ್ಲಿ ಮಂಡಿಸುವುದು ಪ್ರಸ್ತುತವೆನಿಸಬಹುದು. 'ಹಿಂದುತ್ವ'ದ ಪ್ರತಿಪಾದಕರೆನಿಸಿ ಅತ್ಯಂತ ಜಾತೀಯ ಪಕ್ಷವೆಂದು ಇತರ ಪಕ್ಷಗಳಿಂದ ತಿರಸ್ಕಾರಕ್ಕೆ ಗುರಿಯಾಗಿರುವ ಭಾರತೀಯ ಜನತಾ ಪಕ್ಷ, 1996ರ ಚುನಾವಣೆಯಲ್ಲಿ ಗೆಲ್ಲಿಸಿದ 'ದಲಿತ' ಪ್ರತಿನಿಧಿಗಳು ಇತರ ಎಲ್ಲ ಪಕ್ಷಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದರೆಂದು ಕೆಲವೇ ದಿನಗಳು ಪ್ರಧಾನಿಯಾಗಿದ್ದ ವಾಜಪೇಯಿ ಅವರು ಅಧಿಕಾರ ತ್ಯಜಿಸುವ ಮುನ್ನ ಹೇಳಿದ ಮಾತು ಈ 'ಜಾತೀಯತೆ'ಯ ಪ್ರಶ್ನೆಯನ್ನು ನೋಡುವ ರೀತಿಯಲ್ಲಿ ಇರುವ ಬಿರುಕುಗಳನ್ನು ಎತ್ತಿ ತೋರಿಸುತ್ತದೆ.

ಆಧುನಿಕ ವಿಶ್ವದಲ್ಲಿ, ವೈಜ್ಞಾನಿಕ ತಿಳಿವಳಿಕೆಯಿಂದ ನಮ್ಮ ಜೀವನವನ್ನು ಹಲವಾರು

ರೀತಿಗಳಲ್ಲಿ ಪ್ರಭಾವಿಸುತ್ತಿರುವ ಆಧುನಿಕತೆಯೊಡನೆಯೂ ಮುಖಾಮುಖಿಯಾಗಬೇಕಾದ ಸಮಾಜ ಜೀವನ ಯಾವಾಗಲೂ ನಿಂತ ನೀರಂತಿರುವುದು ಸಾಧ್ಯವಾಗದ ಮಾತು. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಭಾರತೀಯ ಸಮಾಜ ಜೀವನದಲ್ಲೂ ಪರಿವರ್ತನೆಗಳು ಬರುತ್ತಲೇ ಇವೆ. ಕೆಲವು ವ್ಯಕ್ತಿಗಳು, ಅವರಿಗೆ ಸಂಬಂಧಿಸಿದ ವಿಚಾರಗಳು ಕೆಲವು ಗುಂಪುಗಳು ನಿಂತ ನೀರಂತಿರಬಹುದು. ಆದರೆ ಇಂಥವರೂ ಕಾಲದ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಬಹುದು ಎಂಬ ಸತ್ಯವನ್ನು ಸಮಾಜ ಶಾಸ್ತ್ರಜ್ಞರು ಗುರುತಿಸಬಹುದು. ಹಿಂದೂ ಸಮಾಜದ ವರ್ಣ ವ್ಯವಸ್ಥೆಯಲ್ಲೂ ಇಂತಹ ಪರಿವರ್ತನೆಗಳು ಆಗುತ್ತಲೇ ಇವೆ. ಶಿಕ್ಷಣ, ಶಿಕ್ಷಣದಿಂದ ಆಧುನಿಕ ಜೀವನಕ್ಕೆ ಹೊಂದಿಕೊಳ್ಳುವ ಜೀವನಸ್ತರ, ಸಾಮಾಜಿಕ ವ್ಯವಸ್ಥೆಯಲ್ಲಿ ತುಸುವಾದರೂ ಗೌರವಾರ್ಹವೆನಿಸುವ 'ಬಿಳಿ ಕಾಲರ್' ವೃತ್ತಿ, ಹೆಚ್ಚುತ್ತಲೇ ಇರುವ ನಗರೀಕರಣ ಇವೆಲ್ಲ ವೃತ್ತಿ ಗೌರವಕ್ಕೆ ಇನ್ನೂ ಮನ್ನಣೆ ಕೊಡದ ನಮ್ಮ ಸಮಾಜ ಜೀವನದಲ್ಲೂ ವರ್ಣವ್ಯವಸ್ಥೆ ತರುವ ತಿರಸ್ಕಾರ ಮನೋವೃತ್ತಿಯನ್ನು ಅಳಿಸುವ ಸಾಧನಗಳಾಗುತ್ತಿವೆ. ನಗರೀಕರಣ ಜಾತಿ ವ್ಯವಸ್ಥೆಯ ಬಿಗಿ ಹಿಡಿತವನ್ನು ಸಡಿಲಿಸಲು ಸಹಕರಿಸುವ ಸತ್ಯ ಸಮಾಜಶಾಸ್ತ್ರಜ್ಞರಿಗೆ ತಿಳಿದಿದೆ. ನಗರೀಕರಣದಿಂದ ದೊರಕುವ ಶಿಕ್ಷಣಾವಕಾಶ, ಉದ್ಯೋಗಾವಕಾಶಗಳು ಜಾತೀಯ ಬಿರುಕುಗಳನ್ನು ತುಂಬಿಸಲು ಸಹಕರಿಸುತ್ತವೆಯೆಂಬುದು ಮುಂಬಯಿ ಯಂತಹ ಮಹಾನಗರದ ಜನಜೀವನವನ್ನು ವೀಕ್ಷಿಸುವವರ ಅನುಭವಕ್ಕೆ ಬಾರದಿಲ್ಲ. ಈ ಮಹಾನಗರದ ಹೆಚ್ಚು ಕಡಿಮೆ ಅರ್ಧದಷ್ಟು ಜನ, ಎಂದರೆ ಸುಮಾರು 50 ಲಕ್ಷ, ಇಂದು ಜೋಪಡಿಗಳಲ್ಲಿ ವಾಸಿಸುತ್ತಿರುವವರು. ಇವರಲ್ಲಿ ಸವರ್ಣೀಯರೂ ಇದ್ದಾರೆ, ದಲಿತರೂ ಇದ್ದಾರೆ. ಆದರೆ ಆರ್ಥಿಕ ದೃಷ್ಟಿಯಿಂದ ಎಲ್ಲ ದಲಿತರೇ. ಒತ್ತಾಯವಾಗಿ ಜಾತೀಯತೆಯ ಬಿರುಕುಗಳನ್ನು ಮರೆಯಲೇಬೇಕಾದವರು. ಇಂತಹ ಪರಿವರ್ತನೆ ಹಳ್ಳಿಗಳಲ್ಲಿ ಸಾಧ್ಯವಿಲ್ಲ, ಅಲ್ಲಿ ಇನ್ನೂ ಜಾತಿ ವ್ಯವಸ್ಥೆಯ ಬಿರುಕುಗಳೂ, ಶೋಷಣೆಯೂ ಸಾಕಷ್ಟಿದೆ ಎಂದು ನಾನು ಮಂಡಲ್ ವರದಿಯ ಕುರಿತು ಬರೆದ ಒಂದು ಲೇಖನದ ವಿಚಾರಕ್ಕೆ ತನ್ನ ಆಕ್ಷೇಪವನ್ನು ಒಬ್ಬ ವಿಮರ್ಶಕ ಮಿತ್ರರು ಮಾಡಿದ್ದಿದೆ. ಆದರೆ ನಮ್ಮ ಹಳ್ಳಿಗಳೂ ಬದಲಾಗುತ್ತಿವೆ ಎನ್ನುವ ಸತ್ಯವನ್ನು ನಾವು ಮರೆಯುತ್ತೇವೆ. ನಮ್ಮ ಪಂಚಾಯತ್ ವ್ಯವಸ್ಥೆಯಿಂದ ಎಲ್ಲಾ ಜಾತಿಯವರಿಗೂ ಲಭ್ಯವಾಗುವ ಅಧಿಕಾರ, ಹಳ್ಳಿ ಹಳ್ಳಿಗಳಿಗೂ ಹರಡುತ್ತಿರುವ ಟಿ. ವಿ. ಜಾಲಗಳು, ಹೆಚ್ಚುತ್ತಿರುವ ಶಿಕ್ಷಣಾನುಕೂಲತೆಗಳು ತರುತ್ತಿರುವ ಪರಿವರ್ತನೆಗಳು, ಭೂಮಿಯ ಒಡೆತನ, ಕೃಷಿ ಕ್ಷೇತ್ರಗಳಲ್ಲಿ ಆಗುತ್ತಿರುವ ಸುಧಾರಣೆಗಳು ಇವನ್ನೆಲ್ಲ ಮರೆತು – ಇವು ಸಾಕಷ್ಟು ತೀವ್ರವಾಗಿ ಬರುತ್ತಿಲ್ಲವೆಂದು ನಾವು ಆಕ್ಷೇಪಿಸಬಹುದು – ನಾವು ಜಾತೀಯ ಶೋಷಣೆಯ ಕುರಿತಷ್ಟೆ ಹೇಳುತ್ತಿರುವುದು ಎಷ್ಟು ಸಮಂಜಸವೆಂದು ಕೇಳಬೇಕಾಗಿದೆ. ಅಲ್ಲದೆ, ಇತ್ತೀಚೆಗಿನ ಒಂದು ಸಮೀಕ್ಷೆಯಂತೆ ಈ ಶತಮಾನದ ಅಂತ್ಯದೊಳಗೆ ಭಾರತದ ಜನಸಂಖ್ಯೆಯ ಪ್ರತಿಶತ 80ರಷ್ಟು ಜನ ಪಟ್ಟಣಗಳಲ್ಲಿರುತ್ತಾರೆ ಎಂದು ಸೂಚಿಸಲಾಗಿದೆ. ಇದು ತರಬಹುದಾದ ಸಾಮಾಜಿಕ ಬದಲಾವಣೆಗಳ ಕುರಿತು ನಾವು ಏಕೆ ಚಿಂತಿಸುವುದೇ ಇಲ್ಲ.

ನಗರೀಕರಣ, ಬೆಳೆಯುತ್ತಲೇ ಇರುವ ಮಧ್ಯಮ ವರ್ಗ ಇವುಗಳಿಂದಾಗಿ ಉಂಟಾಗುತ್ತಿರುವ ಪರಿವರ್ತನೆಗಳನ್ನು ಗಮನಿಸಿದಾಗ ಮಾತ್ರ ನಾವು 'ಜಾತೀಯತೆ'ಯ ಹೆಸರಿನ ಶೋಷಣೆಯೊಂದೆ ಸಾಮಾಜಿಕ ನ್ಯಾಯಕ್ಕೆ ಅಡ್ಡಿ ತರುತ್ತಿರುವ ಮಹತ್ವದ ತಡೆ ಎಂದು ಹೇಳುವುದು ತೀರ ಸರಳೀಕೃತ ತರ್ಕ ಸರಣಿ ಎನ್ನಬೇಕಾಗುತ್ತದೆ. ಇಂದು ನಮ್ಮ ಸಮಾಜ ಜೀವನದಲ್ಲಿ ನಾಗರಿಕರ ಶೋಷಣೆ ಹಲವಾರು ರೀತಿಗಳಿಂದ ಆಗುತ್ತಿದೆ. ಇದರಲ್ಲಿ ಮುಖ್ಯ ಪಾತ್ರ ವಹಿಸಿರುವುದು ನಾವೇ ಆರಿಸಿ ಕಳುಹಿಸಿರುವ ರಾಜಕೀಯ ಅಧಿಕಾರ ವಹಿಸಿರುವ ಆಡಳಿತೆಯ ಅಧಿಕಾರಿವರ್ಗ. ಈ ಶೋಷಣೆಗೆ ಜಾತಿ ಭೇದವೇನಿಲ್ಲ. ಅಲ್ಲದೆ ಜಾತೀಯತೆಯನ್ನು ದೂರವಿರಿಸುವ ಕೆಲವು ಸಾಮಾಜಿಕ ಸಂದರ್ಭಗಳು ಹೇಗೆ ಬರುತ್ತಿವೆ! ಇಂದು ವೈದ್ಯ ವೃತ್ತಿಯನ್ನು ಆಶ್ರಯಿಸಿ ಹೋಗುವ ಮಧ್ಯಮ ವರ್ಗದ ಜನ ವಿವಾಹ ಸಂಬಂಧ ಬೆಳೆಸುವಾಗ ವೃತ್ತಿ ಬಾಂಧವರನ್ನೆ ಆಯ್ಕೆ ಮಾಡುವುದು, – ಹೆಚ್ಚಿನ ಸಂದರ್ಭಗಳಲ್ಲಿ ಜಾತಿಯ ಪ್ರಶ್ನೆಯನ್ನು ಕಡೆಗಣಿಸಿ – ತೀರ ಸಾಮಾನ್ಯ. ಬ್ಯಾಂಕಿಂಗ್ ಉದ್ಯಮಗಳಲ್ಲಿ ತೊಡಗಿರುವವರು ಪರಸ್ಪರ ಮೆಚ್ಚಿಕೊಂಡು ಸಮಾನ ಉದ್ಯೋಗ ದೊರಕಿಸುವ ಅವಕಾಶಗಳಿಂದಾಗಿಯೂ ಜಾತಿಯ ಪ್ರಶ್ನೆಯನ್ನು ಬದಿಗಿರಿಸುವ ನಿದರ್ಶನಗಳು ಬೆಳೆಯುತ್ತಲೇ ಇವೆ. ಚಾರ್ಟರ್ಡ್ ಎಕೌಂಟೆಂಟ್ ಹುದ್ದೆಗಳಲ್ಲಿ, ಕಾಲೇಜು ಅಧ್ಯಾಪನ ವೃತ್ತಿಯಲ್ಲೂ ಇಂತಹ ಅನುಕೂಲ ಸಂಬಂಧಗಳನ್ನು ಹೊಂದಿಸಿಕೊಳ್ಳುವಾಗ ಜಾತಿಯ ಅಡ್ಡಗೋಡೆ ಕಳಚುವ ಸಂದರ್ಭಗಳು ಹೆಚ್ಚುತ್ತಿವೆ. ಇನ್ನು ಕೇಂದ್ರ, ರಾಜ್ಯಗಳ ಅಧಿಕಾರಿ ವಲಯಗಳಲ್ಲಿ ವಿವಾಹ ಸಂಬಂಧಗಳಲ್ಲಿ ಜಾತಿ ಪ್ರಶ್ನೆಯಾಗುವುದೇ ಇಲ್ಲವೆನ್ನಲೂಬಹುದು. ಇವೆಲ್ಲ ಸಮಾಜದ ಮೇಲಿನ ಸ್ತರದಲ್ಲಿರುವವರ ರೀತಿ, ಜನಸಾಮಾನ್ಯರಿಗೆ ಇದು ಅನ್ವಯಿಸುವುದಿಲ್ಲ ಎಂಬ ಆಕ್ಷೇಪ ಇಲ್ಲಿ ಬರಬಹುದು. ತೀರ ದರಿದ್ರರೆನಿಸುವ ಹಳ್ಳಿಗಳ ಜನ ಈ ಜಾತೀಯತೆಯ ಶೋಷಣೆಯಿಂದ ಹೊರತಾಗಿಲ್ಲ, ಇವರು ಬಹುಸಂಖ್ಯಾತರು ಎನ್ನುವ ಆಕ್ಷೇಪವೂ ಬರಬಹುದು. ಈ ಆಕ್ಷೇಪಗಳಿಗೆ ಸಮಾಧಾನವಿಷ್ಟೆ. ಶಿಕ್ಷಣದಿಂದ ದೊರಕುವ ತಿಳಿವಳಿಕೆ ಹಾಗೂ ಉದ್ಯೋಗಾವಕಾಶ, – ಕೃಷಿ ಕ್ಷೇತ್ರಕ್ಕೂ ಸಂಬಂಧಿಸಿದಂತೆ – ಹಾಗೂ ಆರ್ಥಿಕ ನೆಮ್ಮದಿ ಜಾತೀಯತೆಯ ಕಟ್ಟುಗಳನ್ನು ಸಡಲಿಸುವ ಪ್ರಬಲ ಮಾಧ್ಯಮವೆಂದು ತಿಳಿಯುವಂತಾದಾಗ, ಜಾತೀಯ ಶೋಷಣೆಯ ವಿರುದ್ಧ ಸಂಘರ್ಷ ನಡೆಸುವುದೊಂದೆ ಸಾಮಾಜಿಕ ನ್ಯಾಯ ಒದಗಿಸುವ ಸಾಧ್ಯತೆ ಎಂದು ತಿಳಿಯುವುದಿಲ್ಲ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಾವು ಎಡವಿರುವುದು ಇಲ್ಲೇ. ಜನ ಸಮುದಾಯವನ್ನು ಒಳ್ಳೆಯ ಶಿಕ್ಷಣದ ಸಂಸ್ಕಾರದ ಮೂಲಕ ತಿಳಿವಳಿಕೆಯ ಹಾದಿಯಲ್ಲಿ ಕೊಂಡೊಯ್ಯುವುದು ಕಷ್ಟದ ಕೆಲಸ. ಸಂಘರ್ಷದ ಹಾದಿಯೇ ಸರಿಯೆಂದು ಬದಲಾಗುತ್ತಿರುವ ನಮ್ಮ ಸಮಾಜ ಜೀವನದ ಎಲ್ಲ ಅನಿಷ್ಟಗಳಿಗೆ ಜಾತಿ ವ್ಯವಸ್ಥೆಯೇ ಮೂಲ ಎಂದು ಹೇಳುತ್ತಿರುವುದು ರಾಜಕಾರಣಿಗಳಿಗೆ ಸಾಮಾಜಿಕ ನ್ಯಾಯದ ಮಾತಿನ ಅಸ್ತ್ರವನ್ನು ಒದಗಿಸಿಕೊಡಬಹುದು. ಆದರೆ ರಾಷ್ಟ್ರ ಅಪೇಕ್ಷಿಸುವ ಸಾಮಾಜಿಕ ಶಾಂತಿ, ತನ್ಮೂಲಕ ರಾಷ್ಟ್ರಕ್ಕೆ ಹೊಂದಿಕೊಳ್ಳುವ ಸಾಂಸ್ಕೃತಿಕ ಅಸ್ಮಿತೆ ಇವುಗಳನ್ನಲ್ಲ.

ನಮ್ಮ ಸ್ವಾತಂತ್ರ್ಯ ಹೋರಾಟದ ಗುರಿಯೂ ಬರೇ ರಾಜಕೀಯ ಸ್ವಾತಂತ್ರ್ಯ, ಬ್ರಿಟಿಷರ ಆಡಳಿತೆಯಿಂದ ಬಿಡುಗಡೆ ಇವಿಷ್ಟೇ ಆಗಿರಲಿಲ್ಲ. ಅದರ ಮೂಲದಲ್ಲಿದ್ದುದು ನಮ್ಮ ದಾರಿದ್ರ್ಯ ನಿವಾರಣೆಗೆ, ಸಹಜ ಬೆಳವಣಿಗೆಗೆ, ಒಂದು ರಾಷ್ಟ್ರೀಯ ಚೇತನದ ಅನನ್ಯತೆಗೆ ಸ್ವಾತಂತ್ರ್ಯ ಅಗತ್ಯ ಎಂಬ ತಿಳಿವಳಿಕೆ. ಗಾಂಧೀಜಿ ಕನಸು ಕಾಣುತ್ತಿದ್ದುದೂ ನಮ್ಮ ಲಕ್ಷಗಟ್ಟಲೆ ಹಳ್ಳಿಗಳ ಗ್ರಾಮ ಸ್ವರಾಜ್ಯದ ಕುರಿತೆ. ಈ ಸ್ವಾತಂತ್ರ್ಯದ ಹಂಬಲದಲ್ಲಿ ನಮ್ಮ ಸಮಾಜ ವ್ಯವಸ್ಥೆಯ ಬದಲಾವಣೆಯೂ ಎಷ್ಟು ಅಗತ್ಯ ಎಂದು ತಿಳಿದಿದ್ದುದರಿಂದಲೇ ಅವರು ನೆಚ್ಚಿಕೊಂಡ ವಿಧಾಯಕ ಕಾರ್ಯಕ್ರಮಗಳಲ್ಲಿ ಅಸ್ಪೃಶ್ಯತೆಯ ನಿವಾರಣೆ ಹಾಗೂ ಪಾನನಿರೋಧ ಪ್ರಮುಖ ಸ್ಥಾನ ಗಳಿಸಿದ್ದುದು. ಗಾಂಧೀಜಿ ಅಸ್ಪೃಶ್ಯತೆಯ ವಿರುದ್ಧ ತ್ರಿಕರಣ ಪೂರ್ವಕ ಹೋರಾಡಿದ್ದಷ್ಟೇ ಅಲ್ಲ, ಸ್ವಾತಂತ್ರ್ಯ ಚಳವಳದಲ್ಲೂ ತೊಡಗಿಸಿಕೊಂಡ ಮೇಧಾವಿಗಳ ಒಂದು ಪಡೆಯನ್ನೇ ಅಸ್ಪೃಶ್ಯತೆಯ ವಿರುದ್ಧದ ಚಳವಳದಲ್ಲಿ ಸೇರಿಸಿಕೊಂಡರೂ, ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಅವರೇ ಟಂಕಿಸಿದ 'ಹರಿಜನ' ಶಬ್ದವನ್ನು ತಿರಸ್ಕಾರದಿಂದ ನೋಡಲು ಆರಂಭಿಸಿದ್ದೇವೆ. ಗಾಂಧೀಜಿಯನ್ನು ಕೆಲವು ವಲಯಗಳಲ್ಲಿ 'ಮನುವಾದಿ' ಎಂದು ಕರೆಯುವುದನ್ನೂ ಕಂಡಿದ್ದೇವೆ. ಇನ್ನು ಪಾನ ನಿರೋಧವೂ, ಅತ್ತ ಉಗುಳಲೂ ಆಗದ ಇತ್ತ ನುಂಗಲೂ ಆಗದ ತುತ್ತಾಗಿದೆ. ಲಕ್ಷಗಟ್ಟಲೆ ಬಡವರಿಗೆ, ಅದೂ ಮಹಿಳೆಯರಿಗೆ ಶಾಪವಾಗಿ ಪರಿಣಮಿಸಿರುವ ಈ ಮದ್ಯವ್ಯಸನವನ್ನು ಕೊನೆಗೊಳಿಸುವ 'ಸಾಮಾಜಿಕ ನ್ಯಾಯ' ರಾಜ್ಯದ ಬೊಕ್ಕಸದ ಸ್ಥಿತಿಗತಿಯನ್ನವಲಂಬಿಸಿದೆ. ಆರ್ಥಿಕ ಕಾರಣಗಳ ನೆಪ ಒಡ್ಡಿ, ಇದನ್ನು ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಆಡಳಿತ ವ್ಯವಸ್ಥೆಯನ್ನು ನಿರ್ಮಿಸಲಾಗದೆ ಈ 'ಸಾಮಾಜಿಕ ನ್ಯಾಯ' ಬದಲಾಗುತ್ತಲೇ ಇರಬೇಕಾಗಿದೆ.

ನಮ್ಮ ಸಮಾಜ ವ್ಯವಸ್ಥೆಯಲ್ಲಿ ಪರಿವರ್ತನೆಗಳು ಅಗತ್ಯ ಎಂದು ನಂಬಿದ್ದ ಗಾಂಧೀಜಿಯ ವಿಧಾಯಕ ಕಾರ್ಯಕ್ರಮಗಳ ರೀತಿಯಲ್ಲೆ ಸ್ವಾತಂತ್ರ್ಯ ಪೂರ್ವದ ಇತರ ಕಾಂಗ್ರೆಸ್ ಮುಂದಾಳುಗಳಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಸಮಾಜ ವ್ಯವಸ್ಥೆಯ ಕುರಿತ ಚಿಂತನೆ ಇತ್ತೆಂದೇ ಕಾಂಗ್ರೆಸ್ ವ್ಯವಸ್ಥೆಯೊಳಗೇ ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ, ಅಶೋಕ ಮೇಥಾ, ಆಚಾರ್ಯ ನರೇಂದ್ರ ದೇವ ಮೊದಲಾದ ಸಮಾಜವಾದಿ ಒಲವುಳ್ಳ ನಾಯಕರ ದಂಡೇ ಇತ್ತು. ಮುಂದೆ ಮಾತ್ರ ಜಯಪ್ರಕಾಶ ನಾರಾಯಣರಿಗೆ ಸಂಪೂರ್ಣ ಭ್ರಮ ನಿರಸನವಾಗಿ ಅವರೇ ಸಂಪೂರ್ಣ ಕ್ರಾಂತಿಯ ಹರಿಕಾರರಾಗಬೇಕಾಗಿ ಬಂದುದೂ ನಮ್ಮ ಸ್ವಾತಂತ್ರ್ಯದ ಕುರಿತ ನಡೆವಳಿಕೆ ಬೆಳೆದು ಬಂದ ರೀತಿಗೆ ಕನ್ನಡಿ.

ಕಳೆದ 50 ವರ್ಷಗಳಲ್ಲಿ ಆದದ್ದೇನು. ತಾನೇ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಆಡಳಿತೆಯ ವಿರುದ್ಧವೇ ಜಯಪ್ರಕಾಶ ನಾರಾಯಣ ಅವರು ಹೋರಾಡಿ ಸೆರೆ ಸೇರಬೇಕಾಗಿ ಬಂತು. ಲೋಹಿಯಾರವರ ವಿಚಾರಧಾರೆ ಬುದ್ಧಿಜೀವಿಗಳನ್ನು ಪ್ರಭಾವಿಸಿತಾದರೂ ಸಮುದಾಯವನ್ನು ಸಂಘಟಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳಲಿಲ್ಲ. ಸಾಮ್ಯವಾದಿ ಸಿದ್ಧಾಂತಗಳ ಆದರ್ಶ ಹಾಗೂ

ಕಟ್ಟುನಿಟ್ಟಿನ ಶಿಸ್ತು ಇವುಗಳನ್ನು ನೆಚ್ಚಿಕೊಂಡಿದ್ದ ಕಮ್ಯೂನಿಸ್ಟ್ ಪಕ್ಷ ಆರಂಭದಿಂದಲೂ ಭಾರತದ ಪರಿಸರಕ್ಕೆ ಹೊಂದಿಕೊಳ್ಳುವುದಿಲ್ಲವೆಂಬ ಆರೋಪವನ್ನು ಸಹಿಸಿಯೂ ಗುರಿ ಒಂದೇ ಆಗಿದ್ದರೂ ಹೋಳು ಹೋಳಾಗಿ ಕಾರ್ಯನಿರ್ವಹಿಸುವ ಸ್ಥಿತಿಯನ್ನು ಕಾಣುವಂತಾಗಿದೆ. ಇಲ್ಲಿ ಕೂಡ ಇವರ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಪರಿಶ್ರಮ ಮಾರ್ಕ್ಸ್ ವಿಚಾರಧಾರೆಯ ಕ್ರಾಂತಿಯನ್ನು ತರಲು ಸಹಕರಿಸದು ಎಂಬ ತಿಳಿವಳಿಕೆ ಉಗ್ರ ನಕ್ಸಲೀಯ ಸಂಘಟನೆಗಳು ಬೆಳೆಯಲೂ ಕಾರಣವಾಯಿತು.

ಇವೆಲ್ಲ ಸೂಚಿಸುವುದೇನನ್ನು ಎಂದು ವಿವರಿಸದಿದ್ದರೆ ಮೇಲಿನ ಮಾತುಗಳು ಅರ್ಥಪೂರ್ಣವೆನಿಸವು. ಸಾಮ್ಯವಾದ ಸಿದ್ಧಾಂತಗಳ ಮೂಲ ಆಶಯವಿರುವುದೇ ಉತ್ಪಾದನೆಯ ಎಲ್ಲ ಸಾಧನೆಗಳ ಸ್ವಾಮ್ಯವನ್ನು ರಾಜ್ಯದ ಆಡಳಿತ ವಹಿಸಿಕೊಳ್ಳುವುದರಲ್ಲಿ. ಎಲ್ಲ ಉತ್ಪಾದನೆಯನ್ನು ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ಸಮುದಾಯಕ್ಕೆ ಹಂಚುವುದು ರಾಜ್ಯದ ಕರ್ತವ್ಯವಾಗುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ತಾರತಮ್ಯವನ್ನು ಅಳಿಸಲು ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಇಲ್ಲಿ ಒಂದು ಸೈದ್ಧಾಂತಿಕ ಆದರ್ಶವೂ ಆಗುತ್ತದೆ.

ಇವೆಲ್ಲವನ್ನು ದಾರಿದ್ರ್ಯ ನಿವಾರಣೆಯ ಸಾಧನಗಳಾಗಿ ಬಳಸುವುದು ಹೇಗೆ ಸಾಧ್ಯ. ಒಂದೇ ತಿಳಿವಳಿಕೆಯುಳ್ಳ ಜನಸಮುದಾಯಕ್ಕೆ ಅದರ ಹಿತವನ್ನೇ ಗಮನಿಸಿ ಯಾವ ತಾರತಮ್ಯವೂ ಇರದ ರಾಜ್ಯಾಡಳಿತೆಯನ್ನು ಆಗಗೊಡುವುದು ಇಲ್ಲವೇ ಅಧಿಕಾರದ ದಂಡ ಶಕ್ತಿಯಿಂದ ಎಲ್ಲ ವಿರೋಧವನ್ನು ಕಡೆಗಣಿಸಿ ಇದನ್ನು ಸಾಧ್ಯವಾಗಿಸುವುದು – ಕಮ್ಯೂನಿಸ್ಟ್ ವ್ಯವಸ್ಥೆಗಳಲ್ಲಿ ಆಗುತ್ತಿರುವಂತೆ. ಆದರೆ ಇವೆರಡೂ ನಮ್ಮಲ್ಲಿ ಸಾಧ್ಯವಾಗಿಲ್ಲ. ಕಾರಣ, ನಮ್ಮ ಅಶಿಕ್ಷಿತ ಬಹುಸಂಖ್ಯಾತ ಜನಸಮುದಾಯಕ್ಕೆ ಅಜ್ಞಾನವೇ ಎಲ್ಲ ಕಡೆ ಕಾಡುತ್ತಿರುವಾಗ ಸಾಮಾಜಿಕ ನ್ಯಾಯದ ತಿಳಿವಳಿಕೆ ಕೊಡುವಂತಹ ಸಂಘಟನೆ ನಮ್ಮಲ್ಲಿ ಹುಟ್ಟಿಕೊಂಡಿಲ್ಲ. ಹುಟ್ಟಿಕೊಳ್ಳುವುದೂ ಸಾಧ್ಯವಿಲ್ಲವೇನೋ. ಅಲ್ಲದೆ ಇಂತಹ ವ್ಯವಸ್ಥೆಯನ್ನು ಜಾರಿಗೊಳಿಸಲು ಅಗತ್ಯವಿರುವ ಎಲ್ಲ ವಿರೋಧವನ್ನೂ ಕಡೆಗಣಿಸುವ ದಂಡ ಶಕ್ತಿ ನಾವು ನೆಚ್ಚಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊಂದಿಕೊಳ್ಳುವುದಿಲ್ಲ. ಹೀಗಾಗಿ ನಮ್ಮ ಆಡಳಿತೆಯು ನೆಹರೂ ಯುಗದಿಂದಲೂ ಸಮಾಜವಾದದ ಮಾತುಗಳನ್ನೂ ಕ್ರಿಯಾಯೋಜನೆಗಳನ್ನೂ ಬಳಸುತ್ತ ಬಂದಿದೆಯಾದರೂ ನಮ್ಮ ಸಾಮ್ಯವಾದ ಅಥವಾ ಸಮಾಜವಾದಿ ತಿಳಿವಳಿಕೆ ಕಲಸು ಮೇಲೋಗರವಾಗಿ ಕೇವಲ ಬುದ್ಧಿಜೀವಿಗಳೆನಿಸುವವರ ತಾರ್ಕಿಕ ಚಿಂತನೆಗೆ ಮೀಸಲಾಗಿ ರಾಷ್ಟ್ರದ ಹಿತವನ್ನೇ ಮುಖ್ಯ ಆದರ್ಶವೆನಿಸುವ ಪ್ರಬಲ ಶಕ್ತಿಯಾಗಿ ಬೆಳೆಯಲೇ ಇಲ್ಲ. ವಿಶ್ವದ ಇತಿಹಾಸದಲ್ಲಿ ಕಳೆದೆರಡು ದಶಕಗಳಲ್ಲಿ ಸಾಮ್ಯವಾದಿ ರಾಷ್ಟ್ರಗಳಲ್ಲಿ ಆದ ಬದಲಾವಣೆಗಳೂ ಮಾರ್ಕ್ಸ್‌ವಾದಿ ಸೈದ್ಧಾಂತಿಕ ಪರಿಕಲ್ಪನೆಗಳೆಲ್ಲ ತಿಳಿಯಾಗುವುದಕ್ಕೂ ಕಾರಣವಾಗಿವೆ. ಪ್ರಾಯಶಃ ಈ ಸಂದಿಗ್ಧದಿಂದಾಗಿಯೇ ಇಂದು ಧರ್ಮನಿರಪೇಕ್ಷವೆನಿಸುವ ಸಮಾಜವಾದಿ ಒಲವುಳ್ಳವರೆಂದು ಹೇಳಿಕೊಳ್ಳುವ ರಾಜಕಾರಣಿಗಳೂ 'ಸಾಮಾಜಿಕ ನ್ಯಾಯ'ವನ್ನು ಬರೇ ಜಾತಿಯ ಶೋಷಣೆಗೆ ಮೀಸಲಾಗಿರಿಸಿರುವಂತೆ ಮಾತನಾಡುತ್ತಿರುವುದು.

ಹಿಂದೆ ಸೂಚಿಸಿದಂತೆ ನಮ್ಮ ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ ನಮ್ಮ ಜನಸಂಖ್ಯೆಯಂತೆಯೇ ಮಧ್ಯಮ ವರ್ಗವೂ ಬೆಳೆಯುತ್ತಿದೆ. ಮಧ್ಯಮ ವರ್ಗ ಬೆಳೆಯುತ್ತಿರುವುದಕ್ಕೂ ಮುಖ್ಯ ಕಾರಣ, ನಮ್ಮ ಎಷ್ಟೇ ಅಸಮರ್ಪಕವೆನಿಸಿದರೂ ಈಗ ಇರುವ ಶಿಕ್ಷಣ ವ್ಯವಸ್ಥೆ, ಉದ್ಯೋಗಾವಕಾಶಗಳು ಇವುಗಳಿಂದಾಗಿ ಸುಧಾರಿತ ಜೀವನಸ್ತರ. ಮಧ್ಯಮ ವರ್ಗ, ಶಹರಗಳಿಗೇ ಕೇಂದ್ರಿತವಾಗುವ ಪ್ರಕ್ರಿಯೆ ಸ್ವಾಭಾವಿಕವಾದುದರಿಂದ ಇದು ಕೆಲಮಟ್ಟಿಗೆ ವರ್ಣ ವೈಷಮ್ಯವನ್ನು ಅಳಿಸುವ ಸಾಧನವೂ ಆಗುತ್ತಿದೆಯೆಂದು ಹಿಂದೆ ಹೇಳಿದ್ದೇನೆ. ಆದರೆ ಇದು ವರ್ಗ ವೈಷಮ್ಯವನ್ನು ಹೆಚ್ಚಿಸುವುದೂ ಅನಿವಾರ್ಯವೇನೋ ಎಂಬಂತೆ ಅದರ ನಡೆವಳಿಕೆ ಇದೆ. ಭಾರತದಲ್ಲಿ ನಾವು ದೀರ್ಘ ಕಾಲದಿಂದ ರೂಢಿಸಿಕೊಂಡಿರುವ ತಾರತಮ್ಯ ಜ್ಞಾನವೂ ಈ ನಡೆವಳಿಕೆಗೆ ಪುಷ್ಟಿ ಕೊಡುವಂತಿದೆ. ಇದು ಕೆಲವು ವಿರೋಧಾಭಾಸಗಳನ್ನು ಸೃಷ್ಟಿಸುವುದೂ ಇದೆ.

ಮೊದಲು ವಿರೋಧಾಭಾಸಗಳ ಕುರಿತು. ಇಂದು ಒಬ್ಬ ದಲಿತ ಐಎಎಸ್ ಅಧಿಕಾರಿ ಜಿಲ್ಲೆಯ ಮುಖ್ಯಾಧಿಕಾರಿಯಾಗಿ ಬಂದಾಗ ಅವರಿಂದ ನಮಗೇನಾದರೂ ಕೆಲಸವಾಗಬೇಕಿದ್ದರೆ ವ್ಯಕ್ತಿ ಮತ್ತು ಹುದ್ದೆಗಳನ್ನು ಗಮನದಲ್ಲಿರಿಸಿ ವೃತ್ತಿ ಗೌರವಕ್ಕೆ ಮನ್ನಣೆ ಕೊಡುವುದು ನಮ್ಮ ಸ್ವಾರ್ಥ, ಕರ್ತವ್ಯ ಎರಡೂ ದೃಷ್ಟಿಗಳಿಂದ ಅಗತ್ಯವೆಂದು ವರ್ಣ ಪ್ರಜ್ಞೆಯನ್ನು ಮರೆಯುತ್ತೇವೆ. ಆದರೆ ಸರ್ವೋಚ್ಚ ನ್ಯಾಯಾಲಯ ಈ 'ಮೀಸಲಾತಿ'ಯ ಪ್ರಶ್ನೆಯಿಂದ ಆರ್ಥಿಕವಾಗಿ ಮುಂದುವರಿದ 'ಕೆನೆ'ಯನ್ನು ಹೊರಗಿಡಬೇಕು ಎಂದಾಗ ಅದನ್ನು ವಿರೋಧಿಸಲು ವರ್ಣ ಪ್ರಜ್ಞೆ ಅಗತ್ಯವೆನಿಸುತ್ತದೆ. ಒಬ್ಬ ಮಧ್ಯಮ ವರ್ಗದ ವ್ಯಕ್ತಿ ಒಂದು ಪಂಚತಾರಾ ಹೋಟೆಲನ್ನು ಸಂದರ್ಶಿಸುವ ಅವಕಾಶ ಎಲ್ಲಾದರೂ ಬಂದರೆ ಅಲ್ಲಿ ಊಟ ತರುವ ಕೆಲಸಗಾರನ ಸಮವಸ್ತ್ರಕ್ಕಷ್ಟೆ ಗೌರವ ಕೊಡುವುದು ಸಾಮಾನ್ಯ. ಆತನ ವರ್ಣಜಾತಿ ಯಾವುದೆಂಬ ಗೋಜಿಗೆ ಹೋಗುವುದಿಲ್ಲ. ಬೀದಿಯಲ್ಲಿ ಕ್ಷೌರದ ಪೆಟ್ಟಿಗೆ ಹಿಡಿದು ಹೋಗುವ ಕ್ಷೌರಿಕನಿಂದ ಕ್ಷೌರ ಮಾಡಿಸಿಕೊಳ್ಳುವುದು ಮಧ್ಯಮ ವರ್ಗದ ಸಂಸ್ಕಾರಕ್ಕೆ ಹೊಂದುವುದಿಲ್ಲವೆಂದು ತಿಳಿಯುವವರೂ ಸೆಲೂನ್ ಸೇರಿ ತಲೆ ಬೋಳಿಸಿಕೊಳ್ಳುವುದು ಕರ್ತವ್ಯವೆಂದೆ ತಿಳಿಯುತ್ತಾರೆ. ಅಷ್ಟೆಯೇ, ಅಂತಹ 'ಸೆಲೂನ್' ಪ್ರತಿಷ್ಠಿತರೆನಿಸಿಕೊಳ್ಳುವವರು ವಾಸಿಸುವ ವಲಯಗಳಲ್ಲಾಗಲೀ ಒಂದು ಪಂಚತಾರಾ ಹೋಟೆಲಿನ ಮಧ್ಯದಲ್ಲಾಗಲೀ ಇದೆಯಾದರೆ ಆಗ ಜಾತಿ ಪ್ರಜ್ಞೆ ಕಾಡುವುದಿಲ್ಲ. ಅದು ಪ್ರತಿಷ್ಠೆಯ ಮಾತೂ ಆಗಬಹುದು. ನಮ್ಮ ವರ್ಣ ಪ್ರಜ್ಞೆಯ ದೃಷ್ಟಿಕೋನದ ಬಿರುಕುಗಳಿಂದಾಗಿ ನಮಗೆ ವೃತ್ತಿ ಗೌರವ ಕೊಡುವುದೂ ಸಾಧ್ಯವಾಗುತ್ತಿಲ್ಲ. ಆದರೆ ವರ್ಗ ಪ್ರಜ್ಞೆಯಲ್ಲಿ ಆರ್ಥಿಕ ಉತ್ತಮಿಕೆಯನ್ನು ಸೂಚಿಸುವ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದೂ ಅದಕ್ಕೆ ಮರ್ಯಾದೆ ಕೊಡುವುದೂ ಅಗತ್ಯವೆಂದು ತಿಳಿಯುತ್ತೇವೆ.

ಮುಂಬಯಿ ಮಹಾನಗರದ ಕಾಲ್ದಾರಿಗಳಲ್ಲಿ ಹೆಚ್ಚಿನವುಗಳಲ್ಲಿ ಇಂದು ನಾವು ಜೋಪಡಿಗಳನ್ನು (Slums) ಕಾಣುತ್ತೇವೆ. ಇಲ್ಲಿ ವಾಸ ಮಾಡುತ್ತಿರುವವರೆಲ್ಲ ನಿಜವಾದ

ಅರ್ಥದಲ್ಲಿ ದಲಿತರು, ಮಧ್ಯಮ ವರ್ಗದ ಸಂಸ್ಕಾರಗಳಿಂದ ತಿರಸ್ಕೃತರು. ಇವರೆಲ್ಲ ಜಾತಿ ವ್ಯವಸ್ಥೆಯಿಂದ ದೂರವಾದ ಅಸ್ಪೃಶ್ಯರೇನಲ್ಲ. ಎಲ್ಲ ಜಾತಿಯವರೂ, ಸವರ್ಣೀಯರೆನಿಸಿ ಕೊಳ್ಳುವವರೂ ಸೇರಿದಂತೆ ಇಲ್ಲಿ ಸಿಗುತ್ತಾರೆ. ಮುಂಬಯಿಯಲ್ಲಿ ಮನೆ ದೊರಕಿಸಿ ಕೊಳ್ಳಲು ಸಾಧ್ಯವೇ ಇಲ್ಲವೆನ್ನುವ ಪರಿಸ್ಥಿತಿಯಲ್ಲಿ ಇವರು ಇಂತಹ ಜೋಪಡಿಗಳಿಗೇ ಶರಣು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ. ಇಲ್ಲಿ ಸವರ್ಣೀಯರೂ ಇದ್ದಾರೆ ಎನ್ನುವುದಕ್ಕೆ ಈ ಜೋಪಡಿಗಳ ಒಳಗೂ ಹೊರಗೂ (ಹರಕು ಟಾರ್ಪಲಿನ್ ಬಟ್ಟೆ, ಬಿದಿರಿನ ಕೋಲು, ಇಂಥವುಗಳೇ ಈ ಮನೆಗಳನ್ನು ರಚಿಸಲು ಸಾಧನಗಳು) ರಂಗವಲ್ಲಿ ದೇವರ ಫೋಟೋ, ಪೂಜೆ ಇವೆಲ್ಲ ನಡೆಯುತ್ತಿರುವುದೇ ಸಾಕ್ಷಿ. ನಾನು ಪ್ರತ್ಯಕ್ಷ ಕಂಡಂಥವು. ಆದರೆ ಪಕ್ಕದ ಕಟ್ಟಡಗಳಲ್ಲಿ ವಾಸಿಸುವ ಮಧ್ಯಮ ವರ್ಗೀಯರಿಗೆ, ಶಿಕ್ಷಣ ಉದ್ಯೋಗಾವಕಾಶಗಳಿಂದ ಜೀವನಸ್ತರವನ್ನು ಸುಧಾರಿಸಿಕೊಂಡಂಥವರು (ಇವರಿಗೂ ಜಾತಿ ಒಂದೇ ಅಲ್ಲ) ಈ ಕಾಲ್ದಾರಿಗಳ ನರಕ ಅಸಹ್ಯವೆಂದು ತೋರುತ್ತದೆ. ಅವುಗಳನ್ನು ತೆಗೆಸಬೇಕೆಂಬ ಚಳವಳ ನಡೆಯುತ್ತಲೇ ಇದೆ. ಈ ಜೋಪಡಿವಾಸಿಗಳ ಕುರಿತು ಅನುಕಂಪ ತೋರಿಸುವ ಕೆಲವು 'ಸಮಾಜ ಸೇವಕರು' ಈ ಮಧ್ಯಮ ವರ್ಗೀಯ ಸಂಸ್ಕಾರಗಳನ್ನು ವಿರೋಧಿಸಿ ಅವರ ರಕ್ಷಣೆಗೆ ಮುಂದಾಗುವುದೂ ಇದೆ. ಇನ್ನು ರಾಜಕಾರಣಿಗಳಿಗೂ ಇವರನ್ನು ಒದ್ದೋಡಿಸುವ ಮಾತು ಬರೇ ಮಧ್ಯಮ ವರ್ಗೀಯ ಸಂಸ್ಕಾರದಿಂದ ಎಂದು ಕಾಣುವುದು ರಾಜಕೀಯ ಸ್ವಾರ್ಥದಿಂದ. ಈ ನಿವಾಸಿಗಳಿಗೆ ಪಡಿತರ ಕಾರ್ಡು ಕೊಡಿಸಿ, ಜೋಪಡಿಗಳಿಗೂ ಸಂಖ್ಯೆ ತಗಲಿಸಿ, ಬೇಕೆನಿಸಿದರೆ ಅವರು ಎಷ್ಟೋ ವರ್ಷಗಳಿಂದ ಅಲ್ಲಿದ್ದಾರೆಂದು ಖೋಟಾ ದಾಖಲೆಗಳನ್ನು ನಿರ್ಮಿಸಿ ಅವರು ಅಲ್ಲಿಂದ ಕದಲದಂತೆ ಮಾಡುವ ರಾಜಕೀಯವನ್ನು, ಇದರಲ್ಲಿ ಅಡಗಿರುವ ವೋಟುಗಳ ಸ್ವಾರ್ಥವನ್ನು, ನಾವು 'ಸಾಮಾಜಿಕ ನ್ಯಾಯ'ವೆಂದು ಬಗೆದು ಮಧ್ಯಮ ವರ್ಗದ ಜನರಿಗೂ ಜೋಪಡಿ ನಿವಾಸಿಗಳಿಗೂ ಇರುವ ಅಂತರವನ್ನು ನಮ್ಮ ನಮ್ಮ ಸ್ವಾರ್ಥಕ್ಕೆ ಬೇಕಾಗುವಂತೆ ವಿವರಿಸುವ ಯತ್ನವನ್ನು ಮಾಡುತ್ತೇವೆ. ಇಂಥಲ್ಲಿ 'ಸಾಮಾಜಿಕ ನ್ಯಾಯ'ದ ಹೆಸರಿನಲ್ಲಿ ಕೆಲಸ ಮಾಡುವುದು ಜಾತಿ ಪ್ರಜ್ಞೆಯಲ್ಲ, ವರ್ಗ ಪ್ರಜ್ಞೆಯೆಂದು ಹೇಳಲಷ್ಟೆ ಮೇಲಿನ ಉದಾಹರಣೆ. ಹಾಗೆಯೇ ನಗರೀಕರಣ ಜಾತೀಯ ಕಟ್ಟುಪಾಡುಗಳನ್ನು ಸಡಿಲಿಸುತ್ತಿರುವುದಕ್ಕೂ ಉದಾಹರಣೆ.

ಭಾರತದಲ್ಲಿ, ಅದೂ ದಕ್ಷಿಣ ಭಾರತದಲ್ಲಿ 'ರಂಗವಲ್ಲಿ' ಮಹಿಳೆಯ ಸೌಂದರ್ಯ ಪ್ರಜ್ಞೆಯನ್ನು ಬಿಂಬಿಸುವ ಸುಂದರ ಕ್ರಿಯೆ. ಬೆಳಗಿನ ಜಾವದಲ್ಲಿ ಸೂರ್ಯನ ಆಗಮನವನ್ನು ಸ್ವಾಗತಿಸುವಂತೆ ಮನೆಯ ಅಂಗಳದ ಮುಂಭಾಗವನ್ನು ನೀರಿನಿಂದ ತೊಳೆದು ರಂಗವಲ್ಲಿ ಇಕ್ಕುವ ಈ ಕ್ರಿಯೆಯನ್ನು ನೋಡುತ್ತ ಸಾಗುವ ಇತರ ಮಹಿಳೆಯರು (ಮಧ್ಯಮ ವರ್ಗವನ್ನು ಪ್ರವೇಶಿಸಿದವರು) 'ಯಾಕೆ ನೀವೇ ಈ ಕೆಲಸ ಮಾಡುತ್ತೀರಿ ? ನಿಮ್ಮಲ್ಲಿ ಕೆಲಸದವರಿಲ್ಲವೆ ?' ಎಂದು ಕೇಳಿದ್ದನ್ನು ನಾನು ಗಮನಿಸಿದ್ದೇನೆ. ಇದನ್ನು ಕೆಲಸದವರಿಗೆ ದಾಟಿಸುವುದು ವರ್ಗ ಪ್ರಜ್ಞೆಯಿಂದಾಗಿ, ಜಾತಿ ಪ್ರಜ್ಞೆಯಿಂದಲ್ಲ. ಯಾವ ಕೆಲಸವನ್ನೂ ಗೌರವದಿಂದ ನೋಡುವ ಅಭ್ಯಾಸವೇ

ನಷ್ಟವಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯನ್ನು ಈ 50 ವರ್ಷಗಳಲ್ಲಿ ಇದಿರಿಸ ಬೇಕಾಗಿರುವ ನಾವು ರಾಜಕೀಯ ವಲಯಗಳಲ್ಲಿ 'ಸಾಮಾಜಿಕ ನ್ಯಾಯ'ದ ಕುರಿತು ಆಡುತ್ತಿರುವ ಮಾತುಗಳನ್ನು, ನಮ್ಮ ಸಮಾಜ ಜೀವನದಲ್ಲಿ ಆಗುತ್ತಲೇ ಇರುವ ಪರಿವರ್ತನೆಗಳನ್ನು ಗಮನಿಸಿಕೊಂಡೇ ವಿಮರ್ಶಿಸಬೇಕು ಹೊರತು ರಾಜಕೀಯ ಘೋಷಣೆಗಳಿಂದಲ್ಲ.

ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಾವು 'ಸಾಮಾಜಿಕ ನ್ಯಾಯ'ವನ್ನು ಎಲ್ಲರಿಗೆ ದೊರಕಿಸಿಕೊಡಬೇಕಾದ ಕೆಲಸದಲ್ಲಿ ಎಡವುತ್ತಲೇ ಬಂದಿದ್ದೇವೆ. ನಮ್ಮ ಆದ್ಯತೆಗಳನ್ನು ತಪ್ಪಾಗಿ ಗುರುತಿಸಿದ್ದೇವೆ. 'ಭಾಕ್ರಾನಂಗಲ್' ಯೋಜನೆಯಂತೆ ಕಡ್ಡಾಯ ಶಿಕ್ಷಣ ಮಾಧ್ಯಮಿಕ ಹಂತದವರೆಗೆ ಹಾಗೂ ಭೂ ಸುಧಾರಣೆ ಪ್ರಥಮ ಪ್ರಾಶಸ್ತ್ಯ ಪಡೆಯ ಬೇಕಿತ್ತು. ಜಾತಿ ವ್ಯವಸ್ಥೆಯಿಂದ ಆಗುತ್ತಿರುವ ಅನಾಹುತವನ್ನು ಸುಧಾರಿಸಲು 'ವೃತ್ತಿ ಗೌರವ'ಕ್ಕೆ ಶಾಸನದ ಮೂಲಕವಾದರೂ ಮನ್ನಣೆ ಸಿಗಬೇಕಿತ್ತು. ನಾವು ತಿರಸ್ಕಾರದಿಂದ ಕಾಣುವ ಕೆಳಜಾತಿಯ ಹಾಗೂ ಕೀಳು ಕೆಲಸ ಮಾಡುವವರೆಂದು ತಿಳಿಯುವವರನ್ನು ಬಹುವಚನದ 'ನೀವು' ಎಂದೇ ಸಂಬೋಧಿಸಬೇಕು 'ನೀನು' ಎಂದಲ್ಲ ಎನ್ನುವ ಶಾಸನ ತರಲು ಉತ್ಸಾಹ ತೋರದಿದ್ದ ನಾವು 'ಹರಿಜನ' ಎಂಬ ಪದ ತಿರಸ್ಕಾರವನ್ನು ಸೂಚಿಸುತ್ತದೆ, ಹಾಗೆ ಸಂಬೋಧಿಸಿದರೆ ಅದು ಶಿಕ್ಷಾರ್ಹ ಅಪರಾಧವೂ ಆಗಬಹುದು ಎಂಬಂಥ ಶಾಸನ ಮಾಡಲು ಹಿಂಜರಿದಿಲ್ಲ. ಇದನ್ನು ಕೆಲವು ಸಂದರ್ಭಗಳಲ್ಲಿ ದುರುಪಯೋಗ ಮಾಡಿಕೊಂಡು ಸವರ್ಣೀಯರೆನಿಸಿಕೊಳ್ಳುವವರನ್ನು ಪೇಚಿಗೆ ಸಿಕ್ಕಿಸಿದ ಉದಾಹರಣೆಗಳೂ ಇವೆ.

ಕೃಷಿಕರ ನಾಡೇ ಆದ ಭಾರತದಲ್ಲಿ ಶಿಕ್ಷಣದ ಹಾಗೂ ತಿಳಿವಳಿಕೆಯ ಸಂಸ್ಕಾರ ಪಡೆದ ಕೃಷಿಕ ಪ್ರಜಾಪ್ರಭುತ್ವವನ್ನು ರಕ್ಷಿಸುವ ನಾಗರಿಕ ಪ್ರಜ್ಞೆಯುಳ್ಳ ಪ್ರಮುಖ ವ್ಯಕ್ತಿ ಎಂದು ನಾವು ಸರಿಯಾಗಿ ತಿಳಿದಿಲ್ಲ. ಸ್ವಾತಂತ್ರ್ಯ ಬಂದಾಗ, ತುಂಬ ಕಷ್ಟದ ಕೆಲಸ ವಾದರೂ ಭೂ ಸುಧಾರಣೆಯ ಕೆಲಸವನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಲಿಲ್ಲ ವೆಂದೇ ಇಂದು ಬಿಹಾರದಂತಹ ರಾಜ್ಯಗಳಲ್ಲಿ ಭೂಮಾಲಿಕರ ಹಿತವನ್ನು ಅರ್ಥಾತ್ ಸ್ವಾರ್ಥವನ್ನು ಕಾದುಕೊಳ್ಳಲು, ಅವರ ಶೋಷಕ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಬರಲು, ಖಾಸಗೀ ಸೈನ್ಯಗಳನ್ನು ಕಟ್ಟಿಕೊಳ್ಳುವವರೆಗೂ ಮುಂದುವರಿದಿದೆ. ಭೂರಹಿತರಿಗೆ ಯಾವ ರೀತಿಯ ಜಾತೀಯ ಪಕ್ಷಪಾತವನ್ನೂ ಮಾಡದೆ ಭೂ ವಿತರಣೆ ಸಾಧ್ಯವಾಗುವ ಕ್ರಮಗಳನ್ನು ಕೈಗೊಂಡು ಕೃಷಿಕರ ವೃತ್ತಿ ಗೌರವಕ್ಕೆ ಮರ್ಯಾದೆ ಕೊಡುವ ಸಂಸ್ಕಾರ ಗಳನ್ನು ಹುಟ್ಟುಹಾಕಿ, ಜತೆಗೆ ಅವರಿಗೆ ಶಿಕ್ಷಣಾನುಕೂಲತೆಗಳನ್ನೂ ಒದಗಿಸಿಕೊಡುವ ಕೆಲಸಗಳನ್ನು ನಾವು ಮಾಡಿಲ್ಲ. ಒಬ್ಬ ರೈತ ತನ್ನ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಂತೆಯೇ ಉತ್ತಮ ಕೃಷಿಯ ಕುರಿತು ತಿಳಿವಳಿಕೆ ತಂದುಕೊಳ್ಳಲು ಸಾಧ್ಯವಾಗು ವಂತಹ ಕಾರ್ಯಕ್ರಮಗಳಿಂದ ಹಾಗೂ ಅವನಿಗಿರುವ ಬಿಡುವಿನ ಎಲ್ಲಾ ಅವಕಾಶಗಳನ್ನು ಮೂಲಭೂತವೆನಿಸುವ ಪ್ರಾಥಮಿಕ ಶಿಕ್ಷಣದ ಸಂಸ್ಕಾರಗಳನ್ನೂ ಒದಗಿಸಲು ಕೃಷಿಯಲ್ಲಿ ತೋರಿಸುವ ತಜ್ಞತೆಯಲ್ಲಿ ನಮ್ಮ 'ಮೆಕಾಲೆ' ಸೃಷ್ಟಿಸಿದ ಶಿಕ್ಷಣ ಸಂಸ್ಥೆಯ ಫಲ

ಸ್ವರೂಪವೆನಿಸಿದ 'ಪದವಿ', 'ಬಿ. ಎ.' ಮೊದಲಾದವು ಪಡೆಯಲು ಸಾಧ್ಯವಾಗುವ ಅವಕಾಶಗಳನ್ನು ಉಂಟುಮಾಡಿದ್ದರೆ ಶಿಕ್ಷಣದ ಸಂಸ್ಕಾರದ ಸಂಕೇತವೆನಿಸುವ ಪದವಿ ಪಡೆದ ರೈತರು 'ಬಿಳಿ ಕಾಲರ್' ನೌಕರರು ಸಂಪಾದಿಸುವ ಗೌರವವನ್ನು – ಸಾಮಾಜಿಕವಾಗಿ – ತಾವೂ ಪಡೆದಿದ್ದೇವೆ ಎಂಬ ತೃಪ್ತಿಯನ್ನೂ ತಂದುಕೊಂಡು ನಮ್ಮ ರಾಷ್ಟ್ರೀಯ ರಾಜಕೀಯ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಯುವ ಪ್ರಬಲ ಶಕ್ತಿಗಳೆನಿಸಬಹುದಿತ್ತು. ಭೂರಹಿತರ ಕುರಿತ ಅನುಕಂಪದಿಂದ ಮಾಡಿದ ವಿನೋಬಾ ಭಾವೆಯವರ 'ಭೂದಾನ' ಚಳವಳಿ ನಮ್ಮ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಲಿಲ್ಲವೆಂಬ ತಿಳಿವಳಿಕೆ ನಮಗಿದೆ. ಮಹಾರಾಷ್ಟ್ರದಲ್ಲಿ ಸಹಕಾರ ವ್ಯವಸ್ಥೆಯಿಂದ ನಡೆಸುವ ಸಕ್ಕರೆ ಉದ್ಯಮ ರಾಜಕೀಯ ಶಕ್ತಿಯನ್ನು ಸಂಪಾದಿಸಿಕೊಂಡಿರುವುದು ನಮಗೆಲ್ಲ ತಿಳಿದಿದೆ. ಕೃಷಿ ವಲಯದಲ್ಲೂ ಸಹಕಾರ ತತ್ವ ಪರಿಣಾಮಕಾರಿಯಾಗಿ ಕೆಲಸ ಮಾಡಬಹುದಿತ್ತು. ಆದರೆ ನಾವು ಇದಕ್ಕೆ ಮಹತ್ವ ಕೊಡಲಿಲ್ಲ. ಭೂ ಸುಧಾರಣೆ, ಕೃಷಿಕನಿಗೆ ಶಿಕ್ಷಣದ ಸಂಸ್ಕಾರ, ವೃತ್ತಿ ಗೌರವಕ್ಕೆ ಶಾಸನದ ನೆರವು ಇವೆಲ್ಲ 'ಸಾಮಾಜಿಕ ನ್ಯಾಯ'ಕ್ಕೆ ನೆರವಾಗುವಂತೆಯೇ ತಿಳಿವಳಿಕೆ ಬೆಳೆದ ಕೃಷಿಕ ಸಮುದಾಯದಿಂದ ಜನಸಂಖ್ಯಾ ಸ್ಫೋಟವನ್ನೂ ತಡೆಯಲು ಸಹಾಯವಾಗಬಹುದಿತ್ತು. ಹಾಗೆಯೇ ಎಲ್ಲ ಹಳ್ಳಿಗಳಲ್ಲೂ ಮೂಲಭೂತ ಆವಶ್ಯಕತೆಗಳಾದ ಶಾಲೆ, ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ ಕೇಂದ್ರ, ಶಿಸ್ತು, ಸಂಯಮ, ಸಹಕಾರ ತತ್ವಗಳ ಕುರಿತು ತಿಳಿವಳಿಕೆ ನೀಡುವ ಸಮುದಾಯ ಭವನ, ಗ್ರಂಥಾಲಯ, ಸಾಮೂಹಿಕವಾಗಿ ಜನ ಬೆಳೆಯಲು ಅನುಕೂಲ ವಾಗುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ, ಇವೆಲ್ಲ ನಮ್ಮ ಆದ್ಯತೆಗಳ ಪಟ್ಟಿಯಲ್ಲಿ ಸೇರಿಕೊಳ್ಳಲೇ ಇಲ್ಲ. ಕರ್ನಾಟಕದಲ್ಲಿ ನಾವು ಮಾಡಿಕೊಂಡಿರುವ ಭೂ ಸುಧಾರಣೆಯ ಕಾರ್ಯಕ್ರಮಗಳಿಗೂ ದೇವರಾಜ ಅರಸು ಅವರು ಬರುವ ತನಕ ಕಾಯಬೇಕಿರಲಿಲ್ಲ.

ಕೊನೆಯದಾಗಿ 'ಸಾಮಾಜಿಕ ನ್ಯಾಯ' ಏಕಪಕ್ಷೀಯವಾಗಿರುವುದು ನಮ್ಮ ಅಜ್ಞಾನಕ್ಕೆ ನಿದರ್ಶನವೆನಿಸಬಹುದು. ಅಪ್ರತ್ಯಕ್ಷವಾಗಿ ಆಧುನಿಕತೆ ತರುತ್ತಲೇ ಇರುವ ಸಾಮಾಜಿಕ ಪರಿವರ್ತನೆಗಳಿಗೆ ಶಿಕ್ಷಣವು ತಿಳಿವಳಿಕೆಯುಳ್ಳ ತೀವ್ರತೆಯನ್ನು ಕೊಡಲು ಸಮರ್ಥವಾಗ ಬಹುದು. ಹಾಗಾದಾಗ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ 'ಶೋಷಣೆ' ಬರೇ ಜಾತಿ ವ್ಯವಸ್ಥೆಯಿಂದ ಮಾತ್ರ ಆಗುತ್ತಿಲ್ಲ, ನಮ್ಮ ಸಮಾಜ ವ್ಯವಸ್ಥೆ ತನ್ನ ಬದಲುವಿಕೆಯ ಸ್ಥಿತಿಯಲ್ಲಿ ತರುತ್ತಲೇ ಇರುವ ಹಲವಾರು ಮೂಲ ಗಳಿಂದಲೂ ಆಗುತ್ತಿದೆಯೆಂಬ ತಿಳಿವಳಿಕೆ ಬೆಳೆದು ರಚನಾತ್ಮಕ ಪರಿಹಾರದ ಚಿಂತನೆ ಬೆಳೆಯಬಹುದು. ಸಾಮಾಜಿಕ ನ್ಯಾಯ ವರ್ಣವ್ಯವಸ್ಥೆಯಿಂದ ಉಂಟಾಗಿರುವ ಅನಾಹುತಗಳಿಗೆ ಒಂದೇ ಪರಿಹಾರವಲ್ಲ. ಶೋಷಣೆಯ ವಿವಿಧ ಮೂಲಗಳನ್ನು, ಮುಖ್ಯವಾಗಿ ಸಾಮಾಜಿಕ ಸ್ವಾಸ್ಥ್ಯವನ್ನು, ಕೆಡಿಸಬಹುದಾದ ಆರ್ಥಿಕ ಮೂಲದವುಗಳನ್ನು ಗುರುತಿಸಬೇಕಾದವರು ಸಮಾಜಶಾಸ್ತ್ರಜ್ಞರು, ರಾಜಕಾರಣಿಗಳಲ್ಲ. ರಾಜಕೀಯ ಪುಢಾರಿಗಳ ಪೊಳ್ಳು ಆಶ್ವಾಸನೆಗಳು 'ಶೋಷಣೆ'ಯನ್ನು ಅದರ ನಿಜವಾದ ಅರ್ಥದಲ್ಲಿ

ವಿವರಿಸಿದಂತಾಗುವುದಿಲ್ಲ. 'ಸಾಮಾಜಿಕ ನ್ಯಾಯ' ಪ್ರಜಾಪ್ರಭುತ್ವದ ಯಶಸ್ಸಿಗೆ, ರಾಷ್ಟ್ರನಿಷ್ಠೆಗೆ ಅತ್ಯಂತ ಅಗತ್ಯವೆನಿಸುವ ಶಕ್ತಿ. ಆದರೆ ಯಾವುದು ಎಲ್ಲರಿಗೂ ಅನ್ವಯವಾಗಬೇಕಾದ 'ಸಾಮಾಜಿಕ ನ್ಯಾಯ'ವೆಂದು ತಿಳಿಯುವ ಕುತೂಹಲ ನಮಗಿರಬೇಕು.

ಲಂಚಾವತಾರ

ಚಾಣಕ್ಯನ ಕಾಲದಲ್ಲೂ ಲಂಚ ಇದ್ದಿಲ್ಲವೆಂದಲ್ಲ. ಆದರೆ ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಲಂಚವನ್ನು ಜೀವನಧರ್ಮವೆನಿಸುವ ಚಾಣಾಕ್ಷ ನೀತಿಯನ್ನಾಗಿ ಪರಿವರ್ತಿಸಿದ ಶ್ರೇಯಸ್ಸು ಭಾರತೀಯರಿಗೆ ಸಲ್ಲಬೇಕು. ಬ್ರಿಟಿಷ್ ಆಡಳಿತೆಯ ಮೊದಲನೆಯ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್, ಪ್ರತಿಭಾವಂತ ಆಡಳಿತಗಾರನಾಗಿದ್ದು, ಭಾರತದ ಆಡಳಿತೆಯ ಯಂತ್ರದ ವ್ಯವಸ್ಥಿತ ಕಾರ್ಯನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸಿಯೂ, ಲಂಚದ ಆಪಾದನೆಗಳಿಂದ ಮುಕ್ತನಾಗದೆ ಇಂಗ್ಲೆಂಡಿನಲ್ಲಿ ವಿಶೇಷ ತನಿಖೆಗೆ (impeachment) ಒಳಗಾಗಬೇಕಾಗಿ ಬಂದಿತ್ತು. ಈ ಆಪಾದನೆಗಳಿಂದ ಆತ ಮುಕ್ತನಾದರೂ ಅದರ ಮಹತ್ವವಿರುವುದು ಅಂದಿನ ಬ್ರಿಟಿಷರ ನ್ಯಾಯ ನೀತಿಯಲ್ಲಿ. ಇದಕ್ಕೆ ಸಹಕರಿಸಿದ ಅಂದಿನ ಎಡ್ಮಂಡ್ ಬರ್ಕ್‌ನಂಥವರ ಪ್ರಜಾಪ್ರಭುತ್ವಕ್ಕೆ ಹೊಂದಿಕೊಳ್ಳುವ ಚಿಂತನ ರೀತಿಯಲ್ಲಿ.

ನಮ್ಮ ಸ್ವಾತಂತ್ರ್ಯದ 50ನೆಯ ವರ್ಷದಲ್ಲಿ ಉತ್ತರ ಪ್ರದೇಶದಿಂದ ಬಂದ ಒಂದು ಸುದ್ದಿ ನಮ್ಮ ಆಡಳಿತೆಯ ಕರ್ತವ್ಯನಿಷ್ಠೆಗೆ ಕನ್ನಡಿ ಹಿಡಿಯುವಂಥದು. ಆ ರಾಜ್ಯದ ಐಎಎಸ್ ಅಧಿಕಾರಿಗಳೆಲ್ಲ ಒಟ್ಟು ಸೇರಿ ಈ ಅಧಿಕಾರ ಕಕ್ಷೆಯಲ್ಲಿರುವ ಮೂರು ಅತ್ಯಂತ ಭ್ರಷ್ಟ ಐಎಎಸ್ ಅಧಿಕಾರಿಗಳ ಹೆಸರುಗಳನ್ನು ಸೂಚಿಸಬೇಕೆಂದು ನಿರ್ಧರಿಸಿ ಆ ರೀತಿ ಅಭಿಪ್ರಾಯ ಸಂಗ್ರಹಿಸಿದರಂತೆ. ಇಲ್ಲಿ ನಾವು ನೆನಪಿಡಬೇಕಾದುದು ಅವರ ಆಯ್ಕೆ 'ಅತ್ಯಂತ ಭ್ರಷ್ಟ' ಅಧಿಕಾರಿಗಳ ಕುರಿತಾಗಿತ್ತು ಎಂಬುದನ್ನು. ಇನ್ನು ಬೇರೆ ಬೇರೆ ರಾಜ್ಯಗಳಲ್ಲಿ ಐಎಎಸ್ ಅಧಿಕಾರಿಗಳು ಲಂಚದ ಪ್ರಕರಣಗಳಲ್ಲಿ ಸಿಲುಕಿಕೊಳ್ಳುವುದು, ಲೋಕಾಯುಕ್ತರ ಬಲೆಗೆ ಬೀಳುವುದು, ಅಕ್ರಮ ವ್ಯವಹಾರಗಳಲ್ಲಿ ತೊಡಗಿಕೊಳ್ಳುವುದು, ವರಮಾನಕ್ಕನುಗುಣವಲ್ಲದ ಸಂಪತ್ತನ್ನು ಹೊಂದಿರುವುದು, ಇವೆಲ್ಲ ತೀರ ಸಾಮಾನ್ಯವೆನ್ನುವಂತೆ ದೈನಿಕಗಳಲ್ಲಿ ಸುದ್ದಿಗಳು ಪ್ರಕಟವಾಗುತ್ತಲೇ ಇವೆ. ನಮ್ಮ ಲೋಕಸತ್ತಾತ್ಮಕ ಆಡಳಿತೆಯನ್ನು ದಕ್ಷತೆಯಿಂದ, ಪಕ್ಷಪಾತರಹಿತ ನೀತಿಯಿಂದ, ಜನತೆಗೆ ವೈಯಕ್ತಿಕ ಹಾಗೂ ಸಾಮಾಜಿಕ ನ್ಯಾಯ ಒದಗಿಸುವ ದೃಷ್ಟಿಯಿಂದ, ನಿರ್ವಹಿಸಬೇಕಾಗಿರುವ ಆಡಳಿತೆಯ ಪ್ರಬಲ ಆಯುಧವೇ ಲಂಚದ ಪ್ರಲೋಭನೆಗೆ ಒಳಗಾಗುವಂತಾದರೆ ನಮ್ಮ ಪ್ರಜಾಪ್ರಭುತ್ವದ ಭವಿಷ್ಯದ ಬಗ್ಗೆ ಸಂದೇಹ ಬರುವುದರಲ್ಲಿ ಆಶ್ಚರ್ಯವೇನು. ಬೇಲಿಯೇ ಹೊಲ ಮೇಯ ತೊಡಗಿದಾಗ ಬೆಳೆ ದಕ್ಕುವುದು ಯಾರಿಗೆ ?

ನಮ್ಮ ಸ್ವಾತಂತ್ರ್ಯದ ಆರಂಭದ ಕಷ್ಟದ ಆದರೂ ತಿಳಿವಳಿಕೆಯ ವರ್ಷಗಳೆನಿಸುವ ನೆಹರೂ ಯುಗದಲ್ಲೂ ಲಂಚ ಇದ್ದಿಲ್ಲವೆಂದಲ್ಲ. ಪಂಜಾಬದ ಮುಖ್ಯಮಂತ್ರಿಯಾಗಿದ್ದ ಪ್ರತಾಪಸಿಂಗ್ ಖೈರೊನ್ ಅವರ ಮೇಲಿದ್ದ ಆಪಾದನೆಗಳ ವಿಚಾರ ನೆಹರೂ ಅವರು ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಆಡಳಿತೆಯ ಚುರುಕುತನ, ರಾಜ್ಯದ ಅಭಿವೃದ್ಧಿ ಹೆಚ್ಚು

ಮುಖ್ಯವೆನಿಸಿರಬೇಕು. ಮುಂದೆ ಚುನಾವಣೆಗಳು ಆಗತೊಡಗಿದಾಗ ಚುನಾವಣೆಗಳನ್ನು ಗೆಲ್ಲಲು ಪಕ್ಷಗಳು ಹಣ ಸಂಪಾದನೆಯ ದಾರಿ ಹುಡುಕಬೇಕಾಗಿ ಬಂದುದರಿಂದ, 'ಜೀಪ್' ಮುಂತಾದ ಕೆಲವು ಪ್ರಕರಣಗಳು ಬೆಳಕಿಗೆ ಬರುವಂತಾಗಿತ್ತು. ಅಧಿಕಾರಕ್ಕಾಗಿ ಅಲ್ಲ, ಅಧಿಕಾರವನ್ನು ಉಳಿಸಿಕೊಳ್ಳಲು ಯಾವುದೇ ರೀತಿಯಿಂದಲ್ಲಾದರೂ ಧನ ಸಂಗ್ರಹ ಅಗತ್ಯವೆಂಬ ತಿಳಿವಳಿಕೆ ನಮ್ಮ ರಾಜಕಾರಣಿಗಳಲ್ಲಿ ಮೂಡಿದುದರಿಂದ ನಮ್ಮ ಆಡಳಿತೆಯು ಬ್ರಿಟಿಷರ ಕಾಲದಿಂದಲೂ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಮಾಡಿಕೊಂಡಿರುವ ಹಲವಾರು ಶಾಸನಗಳು, ನಿಯಮಾವಳಿಗಳು, ಅನುಕೂಲ ವಾತಾವರಣವನ್ನು ಸೃಷ್ಟಿಸಿ ದೇಶದ ಪ್ರಗತಿಯ ವಿಧಿ ವಿಧಾನಗಳನ್ನು ರೂಪಿಸುವಾಗ, ಕಾರ್ಯ ನಿರ್ವಹಿಸುವಾಗ, 'ಲಂಚ'ಕ್ಕೆ ಪ್ರಮುಖ ಸ್ಥಾನ ದೊರಕಿದುದರಲ್ಲಿ ಆಶ್ಚರ್ಯವೇನಿಲ್ಲ. ಇದಕ್ಕಾಗಿ ರಾಜಕಾರಣಿಗಳು ಆಡಳಿತೆಯನ್ನು ನಿರ್ವಹಿಸಬೇಕಾದ ಅಧಿಕಾರಿಗಳನ್ನೂ (ಐಎಎಸ್ ವರ್ಗದವರು) ಅಧಿಕಾರಿಗಳು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರದ ಹಿಡಿತ ಹೊತ್ತಿರುವ ರಾಜಕಾರಣಿಗಳನ್ನೂ ಓಲೈಸುವುದು ಅನಿವಾರ್ಯವೆನಿಸಿ ನಮ್ಮ ಆಡಳಿತೆಯ ರಾಜಕೀಯಕರಣ (Politicisation) ಆರಂಭವಾದ ಮೇಲೆ ಲಂಚದ ವಿಷವರ್ತುಲದಿಂದ ನಮ್ಮ ಪ್ರಜಾಪ್ರಭುತ್ವ ಪಾರಾಗುವುದೇ ಇಲ್ಲವೆನ್ನುವಂತೆ ಸ್ವಾತಂತ್ರ್ಯದ 50ನೆಯ ವರ್ಷದಲ್ಲಿ 'ಹಗರಣ'ಗಳ ಸುದ್ದಿಗಳೇ ಎಲ್ಲ ದೈನಿಕಗಳ ಹೆಚ್ಚಿನ ಸ್ಥಳವನ್ನು ದಿನವೂ ಆಕ್ರಮಿಸುತ್ತಿರುವುದು ನಮ್ಮ ರಾಷ್ಟ್ರದ ಸಾಂಸ್ಕೃತಿಕ 'ಅಸ್ಮಿತೆ'ಯ ಸ್ವರೂಪ ಲಂಚದಲ್ಲಿ ಕಂಡು ಬರುತ್ತಿದೆಯೇ ಎಂಬ ಸಂದೇಹ ತರುವಂತಿದೆ.

ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಅರ್ಥವಿದ್ದದ್ದು ರಾಷ್ಟ್ರೀಯ ಜಾಗೃತಿಯ ಹಿನ್ನೆಲೆಯಲ್ಲಿ; ಒಂದು ಆದರ್ಶದ ಹಿನ್ನೆಲೆಯಲ್ಲಿ. ನಂತರದ ಅಧಿಕಾರದ ನಿರ್ವಹಣೆಯ ಯುಗದಲ್ಲಿ ಅಧಿಕಾರವೇ ಒಂದು ಆದರ್ಶವಾಗುವಾಗ, ಅದನ್ನು ಏನಕೇನ ಪ್ರಕಾರೇಣ ಉಳಿಸಿಕೊಳ್ಳುವುದು ರಾಜಕೀಯ ಅಸ್ತಿತ್ವದ ಪ್ರಶ್ನೆ. ನಮ್ಮ ಸಾಮಾಜಿಕ ಜೀವನದ ಹಲವು ಮುಖಗಳನ್ನು ಅಧಿಕಾರವಹಿಸುವ ಸರಕಾರವೇ ನಿರ್ವಹಿಸುವಂತೆ ನಾವು ಕಟ್ಟು ಕಟ್ಟಳೆಗಳನ್ನು ಮಾಡಿಕೊಂಡಿರುವಾಗ ಈ ನಿರ್ವಹಣೆ ಜನರಿಗೆ ತಲುಪುವ ದಾರಿಯಲ್ಲಿ ಅನುಕೂಲಗಳನ್ನು ಅಪೇಕ್ಷಿಸುವವರು, ಶೀಘ್ರತೆಯನ್ನು ಅಪೇಕ್ಷಿಸುವವರು, ಸ್ವಾರ್ಥಕ್ಕೆ 'ಸಾಮಾಜಿಕ ಹಿತ'ದ ಮುಖವಾಡ ತೋರಿಸುವ ನಯವಂಚಕರೆಲ್ಲ ಆಶ್ರಯಿಸ ಬೇಕಾಗಿರುವುದು, ಕೆಲಸಕ್ಕಾಗಿ ತೃಪ್ತಿ ಪಡಿಸುವ ದಾರಿಯನ್ನೆ. ಕರ್ತವ್ಯನಿಷ್ಠೆಯನ್ನು ಲಂಚದ ದಾರಿಯಲ್ಲಿ ಕೊಂಡೊಯ್ದು ಸ್ವಾರ್ಥಕ್ಕೂ ಕರ್ತವ್ಯನಿಷ್ಠೆಯ ಮುಖವಾಡ ತೊಡಿಸುವ ಈ ಹೆದ್ದಾರಿ ಪ್ರಜಾಪ್ರಭುತ್ವದಲ್ಲಿ ಅನಿವಾರ್ಯವೆನ್ನುವ ಸ್ಥಿತಿಗೆ ನಾವು ಈ 50 ವರ್ಷಗಳಲ್ಲಿ ತಲುಪಿದ್ದೇವೆ ಎನ್ನಲು ಈ 'ಲಂಚ' ಸಾಮಾನ್ಯರಲ್ಲೂ ಜೀವನ ಧರ್ಮವೆಂಬಂತೆ ಸೇರಿಕೊಂಡಿರುವುದೇ ಸಾಕ್ಷಿ.

ನಮ್ಮ ನಾಡಿನ ಹಿರಿಯ ಮುತ್ಸದ್ದಿ ರಾಜಾಜಿ ತುಂಬ ದೂರದೃಷ್ಟಿಯುಳ್ಳ ನಾಯಕ ರಾಗಿದ್ದರು. ಅತ್ಯುಚ್ಚ ಗೌರವದ ಪದವಿಯನ್ನಲಂಕರಿಸಿದ್ದರೂ ನಮ್ಮ ಆಡಳಿತೆಯ ಒಳ ಸುಳಿಗಳಲ್ಲಿ ಅಡಕವಾಗುವ ದೌರ್ಬಲ್ಯಗಳನ್ನು ಗುರುತಿಸಿಯೇ ಈ ಪರ್ಮಿಟ್–

ಕೋಟಾ–ಲೈಸೆನ್ಸ್ ಮಾದರಿಯ ಆಡಳಿತೆಯಿಂದ ದೇಶ ಹಾಳಾಗುವುದೆಂದು 'ಸ್ವತಂತ್ರ' ಪಕ್ಷವನ್ನು ಆರಂಭಿಸಿದರು, ಸೋತರು. ಬಹುಸಂಖ್ಯಾತ ಅಶಿಕ್ಷಿತರೇ ಇರುವ ಭಾರತದಲ್ಲಿ ಪ್ರಜಾಪ್ರಭುತ್ವದ ರಕ್ಷಣೆಯನ್ನು ರಾಷ್ಟ್ರೀಯ ಅಸ್ಮಿತೆಯ ಹಿನ್ನೆಲೆಯಿಂದ ಪ್ರೇರಿತವಾದ ರಾಷ್ಟ್ರಾಭಿಮಾನದ ಹಿನ್ನೆಲೆಯಲ್ಲಿ ಗುರುತಿಸಿ ಆಡಳಿತೆಯ ಅನ್ಯಾಯಗಳಿಗೆ ವೈಚಾರಿಕ ಪ್ರತಿಭಟನೆ ಸೂಚಿಸುವ ಕಾಲ ಬರಲು ಇನ್ನೂ 50 ವರ್ಷಗಳು ಕಾಯಬೇಕೇನೋ. ಪ್ರಾಯಶಃ ಇದನ್ನು ಮನಗಂಡೇ ಗಾಂಧೀಜಿ ಕಾಂಗ್ರೆಸನ್ನು ವಿಸರ್ಜಿಸಲು ತನ್ನ ಹತ್ಯೆಯ ಕೆಲವೇ ದಿನಗಳ ಹಿಂದೆ ಕರೆ ಕೊಟ್ಟದ್ದು. ಹಾಗಾದಾಗ ರಾಜಕೀಯ ಧ್ರುವೀಕರಣ ಸಾಧ್ಯವಾಗಿ ಸ್ವಾರ್ಥ ರಾಷ್ಟ್ರನಿಷ್ಠೆಗಳ ಧ್ರುವೀಕರಣವೂ ಸಾಧ್ಯವಾಗುತ್ತಿತ್ತೇನೋ. ಇಲ್ಲಿ ನಾವು ನೆನಪಿಡಬೇಕಾದದ್ದು ಕಾಂಗ್ರೆಸ್ ಆಡಳಿತೆ ದೇಶವ್ಯಾಪಿಯಾಗಿದ್ದಾಗಲೇ ಈ ಲಂಚಾವತಾರದ ಯುಗ ಮಹತ್ವ ಪಡೆದುದು ಎಂಬುದನ್ನು.

ಇಂದು, ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ 'ಲಂಚ' ನಮ್ಮ ಸಾರ್ವಜನಿಕ ಜೀವನದ ಅನಿವಾರ್ಯ ಅಂಗವೆನಿಸುವಷ್ಟು ಸಾರ್ವತ್ರಿಕವಾಗಿ ಸಮಾನಾವಕಾಶಗಳ ಪ್ರಜೆಯಾದ ನಾಗರಿಕನನ್ನು ನಿರಂತರ ಶೋಷಣೆಗೆ ಗುರಿಮಾಡಿದೆ, ಮಾಡುತ್ತಿದೆ. ಪಾಕಿಸ್ತಾನದ ಜತೆಗೆ ಭಾರತವೂ ವಿಶ್ವದ ಅತ್ಯಂತ, ಲಂಚದ ದೃಷ್ಟಿಯಿಂದ, ಭ್ರಷ್ಟ ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿಕೊಂಡಿರುವುದು ಇಂದಿನ ನಮ್ಮ ಸಾಂಸ್ಕೃತಿಕ ಅಸ್ಮಿತೆಯ ಸಂಕೇತ. ಪ್ರಧಾನಿ ಇಂದಿರಾ ಗಾಂಧಿಯವರು – ಆಗಲೇ ನಿಷ್ಪಕ್ಷಪಾತ ಆಡಳಿತೆಯಲ್ಲಿ ಇರಬಾರದ ರಾಜಕಾರಣಿ ಅಧಿಕಾರಿಗಳ ಪರಸ್ಪರ ಹೊಂದಿಕೊಳ್ಳುವಿಕೆಯ ಸಂಬಂಧ ತುಂಬ ಮುಂದುವರಿದಿತ್ತು – ಲಂಚ ವಿಶ್ವವ್ಯಾಪಿಯಾದ ಕಾರಣ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಿಲ್ಲ ಎಂಬಂತೆ ಮಾತನಾಡಿದ್ದರು. ಭಾರತದಂತಹ ಉಪಖಂಡದ ಆಡಳಿತೆಯ ವ್ಯವಹಾರಗಳಲ್ಲಿ ಕೋಟಿಗಟ್ಟಲೆ ಹಣದ ವಹಿವಾಟು ರಕ್ಷಣಾ ಖಾತೆಯೆಂದೇನು, ಹತ್ತು ಹಲವು ಖಾತೆಗಳಲ್ಲಿ ವಿತರಣೆಯಾಗಬೇಕಾದಾಗ, ಟೆಂಡರ್ ಗುತ್ತಿಗೆ, 'ಶೀಘ್ರವಾಗಿ', 'ಬೇಕಾದವರಿಗೆ' ಕೆಲಸ ಹೊಂದಿಸಿಕೊಡುವ ಅಗತ್ಯ ವಾಗುವಾಗಲೆಲ್ಲ 'ಲಂಚ' ತಲೆ ಹಾಕುವುದು ಆಶ್ಚರ್ಯವೇನಲ್ಲ. ಇದು ಲೋಕಸತ್ತಾತ್ಮಕ ಆಡಳಿತೆಯ ಆದರ್ಶವಿರುವ ರಾಷ್ಟ್ರಗಳ ಉನ್ನತ ವಲಯಗಳಲ್ಲಿ ಸಾಮಾನ್ಯವೆನಿಸ ಬಹುದು. ಆದರೆ ಭಾರತದಲ್ಲಿ ಈ ವಿಷ ಸಾರ್ವತ್ರಿಕವಾಗಿ ಜನಜೀವನವನ್ನು ಆಕ್ರಮಿಸಿ ರುವ ರೀತಿ ಕಳವಳಕ್ಕೆಡೆಮಾಡಿಕೊಡುವಂಥದು. ನ್ಯಾಯವಾದ ಕರ್ತವ್ಯ ಪಾಲನೆಗೂ 'ಲಂಚ' ಬೇಡುವ, ಹಾಗೂ ಕೊಡುವ, ರೀತಿ ಪ್ರಾಯಶಃ ಭಾರತದ್ದೇ ಎನಿಸುವ ಮಾದರಿ. ಆಫೀಸಿನ ಬಾಗಿಲು ಕಾಯುವ ಪೇದೆಯಿಂದ ಹಿಡಿದು, ದಾರಿ ಗುಡಿಸುವ ಜಾಡಮಾಲಿಯಿಂದ ಹಿಡಿದು, ಅತ್ಯುಚ್ಚ ಅಧಿಕಾರಿಗಳ ತನಕವೂ ಈ 'ಮೇಲು ಸಂಪಾದನೆ' ಎಂಬ ಅಸಹ್ಯ ಶಬ್ದ ನಮ್ಮ ಜೀವನಕ್ರಮದಲ್ಲಿ ಬೆರೆತುಕೊಂಡಿರುವಾಗ ನಮ್ಮ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳೆಲ್ಲ ಬರೇ ಮುಖವಾಡಗಳೆಂದೆ ಭಾಸವಾಗುವು ದರಲ್ಲಿ ಆಶ್ಚರ್ಯವೇನಿಲ್ಲ. ನಮ್ಮ ಧಾರ್ಮಿಕ ಕೇಂದ್ರಗಳ ಬಾಗಿಲುಗಳಲ್ಲಿ ಸಾಲಾಗಿ ಅಂಗವಿಹೀನರು, ಭಿಕ್ಷುಕರು, ತಟ್ಟೆ ಇರಿಸಿಕೊಂಡು ಭಿಕ್ಷೆ ಬೇಡುವ ದೃಶ್ಯ ತೀರ ಸಾಮಾನ್ಯ.

ಇಲ್ಲಿ ಅನುಕಂಪಕ್ಕೆ ಅವರ ಮೊರೆ. ನಮ್ಮ ಆಡಳಿತೆಯನ್ನು ವ್ಯವಸ್ಥಿತವಾಗಿ ನಿರ್ವಹಿಸ ಬೇಕಾದ ಸರಕಾರದ ಹಾಗೂ ಅಧೀನ ಸಂಸ್ಥೆಗಳ ಅಧಿಕಾರಿಗಳು ತಮ್ಮ ಸಾಮಾನ್ಯ ಕರ್ತವ್ಯನಿರ್ವಹಣೆಗೂ ಲಂಚ ಬೇಡುವ ಭಿಕ್ಷುಕರಾಗಿಯೂ 'ಇದು ನಮ್ಮ ಹಕ್ಕು' ಎನ್ನುವಂತಹ ಪರಿಸ್ಥಿತಿಯನ್ನು ಸಾರ್ವತ್ರಿಕ ಮಟ್ಟಕ್ಕೆ ತಂದಿರುವಾಗ ನಮ್ಮ ದೇಶದ ಭವಿಷ್ಯದ ಬಗ್ಗೆ, ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಆಶಾವಾದಿಗಳಾಗಿರಲು ಸಾಧ್ಯವಿಲ್ಲ.

ಈ ಲಂಚ ನೀತಿ ಮೂರು ವಿಧಗಳಲ್ಲಿ ನಡೆಯುತ್ತದೆ. ಪ್ರತಿಷ್ಠಿತರೆನಿಸಿ ಕೊಳ್ಳುವವರು, ಉದ್ಯಮಪತಿಗಳು ಮೊದಲಾದವರಿಗೆಲ್ಲ ಇದು ವ್ಯವಹಾರ ನೀತಿ. ಇನ್ನು ಮಧ್ಯಮ ವರ್ಗದ ಕಾರಕೂನರು, ಉಪಾಧ್ಯಾಯ ವೃತ್ತಿಯಲ್ಲಿರುವವರು, ಅಥವಾ ಅದನ್ನು ದೊರಕಿಸಿಕೊಳ್ಳಬಯಸುವವರು, ಪೋಲಿಸು ಪೇದೆಗಳು, ಸ್ವಂತ ಆವಶ್ಯಕತೆಗಳನ್ನು ಪೂರೈಸಿಕೊಳ್ಳಬಯಸುವ ಸಾಮಾನ್ಯ ಜನರು ಇವರಿಗೆಲ್ಲ ಇದು ಬದುಕುವ ದಾರಿ. ಇನ್ನು ತೀರ ಕೆಳವರ್ಗದಲ್ಲಿರುವ ಜನರು, ರೈತರು, ಅಶಿಕ್ಷಿತ ಕೂಲಿ ಕೆಲಸ ಮಾಡುವವರು, ಕಾರ್ಮಿಕರು ಇವರಿಗೆಲ್ಲ ಇದು ಅನಿವಾರ್ಯವೆನಿಸುವ ಪೀಡೆ. ವೃದ್ಧಾಪ್ಯ ವೇತನವನ್ನೂ ಕೊಡಿಸಲು ಅದರಲ್ಲೇ ಕಡಿತದ ಲಂಚ ಕಡ್ಡಾಯವೆನಿಸುವ ನೈತಿಕ ಅಧಃಪತನ ಭಾರತಕ್ಕೆ ಮೀಸಲೇನೊ. ಬಹುಸಂಖ್ಯಾತ ಜನ ಈ ನೀತಿಬಾಹಿರ ಲಂಚ ಪ್ರಪಂಚವನ್ನು ಸ್ವೀಕರಿಸಲೇಬೇಕು ಎನ್ನುವ ಸಾಮಾಜಿಕ ಸ್ಥಿತಿಯನ್ನು ತಂದುಕೊಂಡಿರುವ ನಾವು ಪ್ರಜಾಪ್ರಭುತ್ವದ ಮಾತನಾಡುವುದು ಹಾಸ್ಯಾಸ್ಪದವೆನಿಸುವಂತಿದೆ.

ಬ್ರಿಟನ್ ತನ್ನ ವಸಾಹತುಶಾಹಿ ದಿನಗಳಲ್ಲಿ ಹೆಸರು ಗಳಿಸಿದ್ದು ವ್ಯಾಪಾರ ಸಂಸ್ಕೃತಿಯ ರಾಷ್ಟ್ರವೆಂದು (nation of shopkeepers). ಆದರೆ ಇದರಿಂದಾಗಿ ಅದರ ರಾಷ್ಟ್ರೀಯ ವೆನಿಸುವ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ 'ಸೂರ್ಯ ಕಂತದ ಸಾಮ್ರಾಜ್ಯ'ವನ್ನು ಸ್ಥಾಪಿಸಲು ಅದಕ್ಕೆ ಸಾಧ್ಯವಾಗಿತ್ತು. ಇದೇ ಕಾರಣದಿಂದಲೂ, ತನ್ನ ಭಾಷೆಯ ವಿಶ್ವಮಾನ್ಯತೆ ಯಿಂದಾಗಿ ಅದನ್ನು ತನ್ನ ಸಾಮ್ರಾಜ್ಯದಲ್ಲಿ ಮುಖ್ಯವಾಗಿ ತನ್ನ ಸ್ವಾರ್ಥಕ್ಕಾಗಿ ಹೇರಿದ್ದ ರಿಂದಲೂ, ಇಂದು ನಾವು ಕೂಡ ಈ ಭಾಷೆಯ ಸಂಸ್ಕಾರಗಳಿಂದ ಬಿಡುಗಡೆ ಪಡೆಯುವುದು ಸಾಧ್ಯವಿಲ್ಲವೇನೋ ಎಂಬ ಪರಿಸ್ಥಿತಿಯನ್ನು ಇದಿರಿಸಬೇಕಾಗಿದೆ. ಅಮೆರಿಕ, ಹಲವು ರಾಜ್ಯಗಳ ಒಕ್ಕೂಟ, ತನ್ನ ಸಂಪತ್ತು ಉಂಟುಮಾಡಿದ ಶಕ್ತಿ, ಶಕ್ತಿ ರೂಪಿಸಿದ ಸಾಧನೆ, ಇವುಗಳಿಂದಾದ ಪ್ರಗತಿಯಿಂದಾಗಿ ವಿಶ್ವವನ್ನೆ ತನ್ನ ಹಿಡಿತದಲ್ಲಿಟ್ಟು ಕೊಳ್ಳಬೇಕು ಎಂಬ ಉತ್ಸಾಹವನ್ನು ಪ್ರಕಟಿಸುವ ರಾಷ್ಟ್ರೀಯ ಅಸ್ಮಿತೆಯನ್ನು ತನ್ನ ವ್ಯವಹಾರದಲ್ಲಿ ಪ್ರದರ್ಶಿಸುತ್ತಿದೆ. ಇದು ಅಮೆರಿಕದ ದಕ್ಷಿಣ ಹಾಗೂ ಉತ್ತರದ ಇತರ ರಾಜ್ಯಗಳಿಗೆ ಸಾಧ್ಯವಾಗಿಲ್ಲವೆನ್ನುವಾಗ ಸಂಯುಕ್ತ ಅಮೆರಿಕದ ವೈಶಿಷ್ಟ್ಯ ಚೆನ್ನಾಗಿ ಮನದಟ್ಟಾಗುತ್ತದೆ. ಎರಡನೆಯ ಮಹಾಯುದ್ಧದ ನಂತರ ಪುನರ್ನಿರ್ಮಾಣಗೊಂಡ ಹಿಂದೆ ವಸಾಹತುಶಾಹಿಯ ಹಿಡಿತದಲ್ಲಿದ್ದ ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲೂ ನಾವು ರಾಷ್ಟ್ರೀಯ ಅಸ್ಮಿತೆಯನ್ನು ಗುರುತಿಸಬಹುದಾದಷ್ಟು ಪ್ರಗತಿಯಾಗಿದೆ. ನಮಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೂ ನಮ್ಮ ಹೆದ್ದಾರಿಗಳ ಸುಧಾರಣೆಗೆ, ವಿಮಾನ ನಿಲ್ದಾಣಗಳ ಪರಿಷ್ಕರಣೆಗೆ ಸಿಂಗಾಪುರದಂತಹ ಪುಟ್ಟ ರಾಜ್ಯಗಳ ನೆರವು

ಬೇಡುವಂತಾದುದಕ್ಕೆ ಬೇರೆ ಟಿಪ್ಪಣಿ ಬೇಡ. ನಮ್ಮ ರಾಷ್ಟ್ರೀಯ ಏಕಾತ್ಮತೆಯನ್ನು ಸೂಚಿಸುವ, ಭಾರತದ ಎಲ್ಲ ಭಾಗಗಳ, ಗುಡ್ಡಗಾಡುಗಳ ಹಾಗೂ ಹಳ್ಳಿ ಪಟ್ಟಣಗಳ ಜನಾಂಗಿಕ ಪ್ರಜ್ಞೆಯಲ್ಲಿ ಹೂತು ಹೋಗಿರುವ ರಾಮಾಯಣ, ಮಹಾಭಾರತಗಳ ಕುರಿತ ತಿಳಿವಳಿಕೆಯ ನೆನಪೂ ಬಾರದಂತೆ ನಾವು ನಮ್ಮ ಸಾಂಸ್ಕೃತಿಕ ಅಸ್ಮಿತೆಯ ನೆನಪು ತಂದುಕೊಳ್ಳಲು ಅಸಮರ್ಥವಾಗಿರುವುದಕ್ಕೆ ಏನು ಕಾರಣ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸಾಹಿತ್ಯಕ ಸಂಸ್ಕೃತಿಯಲ್ಲಿ, ಸಾಮಾಜಿಕ ಬದಲಾವಣೆಗಳನ್ನೂ ತರಲು ಕಾರಣವಾಗಿದ್ದ ಸಂಸ್ಕೃತಿಯಲ್ಲಿ, ವಚನಕಾರರು, ಭಕ್ತಿ ಪಂಥ, ಚೈತನ್ಯ, ಜ್ಞಾನೇಶ್ವರ, ನರಸಿ ಮೇಥಾ, ಕಬೀರ, ತುಳಸೀದಾಸ, ರವೀಂದ್ರನಾಥ ಠಾಕೂರ, ಬಂಕಿಂ, ಶರತ್, ಸುಬ್ರಹ್ಮಣ್ಯ ಭಾರತಿ, ಇಕ್‌ಬಾಲ್ ಇವರೆಲ್ಲ ನಂಬಿದ್ದ ಭಾರತೀಯ ಅಸ್ಮಿತೆಯ ಮೂಲ ಸ್ರೋತ ಇಂದು ಬರೇ ಇತಿಹಾಸದ ನೆನಪುಗಳಾಗುವಂತೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಾವು ನಡೆದುಕೊಳ್ಳುತ್ತಿರುವ ರೀತಿ ಯಾವ ಸಂಸ್ಕಾರವನ್ನು ಘೋಷಿಸುತ್ತಿದೆ, ಯಾವ ರೀತಿಯ ರಾಷ್ಟ್ರೀಯ ಅಸ್ಮಿತೆಯನ್ನು ಸಾರುತ್ತಿದೆ. ವಿಶ್ವದ ಬೇರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಭಾರತದ ಕಡೆ ಬೊಟ್ಟಿಟ್ಟು ಸಾರುತ್ತಿರುವ 'ಆಡಳಿತೆಯಲ್ಲಿ ಎಲ್ಲ ಹಂತಗಳ ಭ್ರಷ್ಟತೆ'ಯನ್ನೆ !

ಭಯ ವೈಯಕ್ತಿಕ ಹಾಗೂ ಸಾಮಾಜಿಕ ನಡೆವಳಿಕೆಯನ್ನು ನಿಯಂತ್ರಿಸುವ ಒಂದು ಪ್ರಬಲ ಶಕ್ತಿ ಎಂಬುದು ಮನಃಶಾಸ್ತ್ರೀಯ ಸತ್ಯ. ನೈತಿಕತೆ ನಮ್ಮೆಲ್ಲರ ಜೀವನದಲ್ಲಿ ಮಹತ್ವದ ಪಾತ್ರವಹಿಸುವುದು ಸಾಮಾಜಿಕ ನೀತಿಯನ್ನು ಉಲ್ಲಂಘಿಸುವಂತೆ ನಮ್ಮ ನಡೆವಳಿಕೆ ಇರಬಾರದು ಎಂಬ ಭಯದಿಂದ. ಈ ಭಯ ಪ್ರಾಮಾಣಿಕವೆನಿಸುವ ತಿಳಿವಳಿಕೆಗೆ ಕಾರಣವಾಗುವಾಗ ಅದು ನಿಜವಾದ ನೈತಿಕ ದೃಷ್ಟಿಕೋನವೆನಿಸುತ್ತದೆ. ಇಂತಹ ನೈತಿಕತೆ ಭಯದಿಂದಲೂ ಮುಕ್ತವಾಗುತ್ತದೆ. ನೈತಿಕತೆಗೆ ಧಾರ್ಮಿಕ ಹಿನ್ನೆಲೆಯನ್ನು ನಾವು ಆರೋಪಿಸುವುದೂ ಅದು ಕಾಲ ದೇಶ ಬದ್ಧವೆನ್ನುವುದೂ ಸರಿಯಲ್ಲ, ನೈತಿಕತೆಗೆ ಮಾನವೀಯವೆನಿಸುವ ಸಂವೇದನಗಳೇ ಮೂಲ. ಎಲ್ಲ ದೇಶಗಳಲ್ಲೂ, ಎಲ್ಲ ಕಾಲಗಳಲ್ಲೂ ವ್ಯವಸ್ಥೆಯ ಅನ್ಯಾಯಗಳ ವಿರುದ್ಧ ನಡೆದಿರುವ ಚಳವಳಗಳಲ್ಲಿ ನಾವು ಇಂತಹ ನೈತಿಕತೆ ಸಾಮಾಜಿಕ ರೂಪ ಪಡೆಯುವುದನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ಜೆ. ಬ್ರನೌಸ್ಕಿ ಎಂಬ ಖ್ಯಾತ ಜೀವವಿಜ್ಞಾನಿ ತನ್ನ 'A sense of the Future'ಎಂಬ ಗ್ರಂಥದಲ್ಲಿ ಬರೆದ ಎರಡು ಮಾತುಗಳನ್ನು ಉದ್ಧರಿಸುವುದು ಪ್ರಸ್ತುತವೆನಿಸಬಹುದು. "There are two things that make up morality. One is the sense that other people matter ! The sense of common loyalty of charity and tenderness, the sense of human love. The other is a clear, judgement of what is at stake, a cold knowledge, without a trace of deception, of precisely what will happen to oneself to others if one plays either the hero or the coward. This is the highest morality, to combine human love with an unthinking, scientific judgement."

ಭಯದಿಂದ ಮುಕ್ತವಾದ ನೈತಿಕತೆ ಇದು.

ಭಾರತದ ಸ್ವಾತಂತ್ರ್ಯೋತ್ತರ ಲಂಚ ಪ್ರಪಂಚದ ಕುರಿತು ಯೋಚಿಸುವಾಗ ನಮ್ಮಲ್ಲಿ ವ್ಯಕ್ತಿಗತವಾಗಿಯೂ, ಸಾಮಾಜಿಕವಾಗಿಯೂ ನೈತಿಕತೆಯ ಕುಸಿತ ಕಂಡು ಬಂದಿರುವುದು ಸ್ಪಷ್ಟ. ಬ್ಯಾಂಕುಗಳ ರಾಷ್ಟ್ರೀಕರಣದ ಪ್ರಕ್ರಿಯೆಗೆ ಮುಖ್ಯ ಕಾರಣ ಖಾಸಗೀ ಬ್ಯಾಂಕುಗಳಿಂದ ಉಪಯುಕ್ತ ಸೇವೆ ನಡೆಯುತ್ತಿರಲಿಲ್ಲವೆಂದಲ್ಲ, ಅದು ಸಾಮಾಜಿಕವಾಗಿ ಎಲ್ಲ ಸ್ತರಗಳ ಜನರನ್ನು ತಲುಪುತ್ತಿಲ್ಲವೆಂದು. ಈ ಸಾಮಾಜಿಕ ಅನ್ಯಾಯದ ಕಳಕಳಿಯ ಹಿಂದೆ ಸಾಮಾಜಿಕ ಹಾಗೂ ರಾಷ್ಟ್ರೀಯ ಅಸ್ಮಿತೆಯ ತಿಳಿವಳಿಕೆ ಇತ್ತು. ಸಮಾಜವಾದದ, ಎಲ್ಲ ಉತ್ಪಾದನಾ ಮೂಲಗಳ ಸಾಮಾಜಿಕ ಹೊಣೆಗಾರಿಕೆಯ ಪ್ರಧಾನ ಆಶಯವೇ ಸಾಮಾಜಿಕ ನ್ಯಾಯ. ಆದರೆ ರಾಷ್ಟ್ರೀಕರಣದ ನಂತರ ಆಗಿರುವುದೇನು ? ಬ್ಯಾಂಕಿಂಗ್ ವ್ಯವಹಾರ ತೀರ ಸಾಮಾನ್ಯರೆನಿಸುವವರಿಗೂ ದೊರಕುವಂತಾದರೂ, ಈ ವ್ಯವಸ್ಥೆಯ ಆಡಳಿತೆ ನಡೆಸುವವರಲ್ಲಿ ಹಲವು ಜನ ಕಾರಣರಾದ ನೂರಾರು ಹಗರಣಗಳಲ್ಲದೆ ಎಲ್ಲ ಬ್ಯಾಂಕುಗಳಲ್ಲೂ ಲೆಕ್ಕವಿಲ್ಲದಷ್ಟು ವಂಚನೆಯ ಪ್ರಕರಣಗಳು. ಭಯಮುಕ್ತ ವಾತಾವರಣದಲ್ಲಿ ರಾಷ್ಟ್ರದ ಸಾಮಾಜಿಕ ಹೊಣೆಯರಿತು ಕೆಲಸ ಮಾಡಬೇಕಾದ ಕೆಲಸಗಾರರು, ಅಧಿಕಾರಿಗಳು ವಂಚನೆಯ ಪ್ರಕರಣಗಳಲ್ಲಿ ಶಾಮೀಲಾಗಿರುವ ದುರಂತ. ಹರ್ಷದ್ ಮೆಹಥಾರವರ ಶೇರುಗಳ ಹಗರಣದಲ್ಲಿ ಸೇರಿಕೊಂಡ ಬ್ಯಾಂಕ್ ಅಧಿಕಾರಿಗಳಷ್ಟೇ ಅಲ್ಲದೆ ಹಲವಾರು ಬ್ಯಾಂಕುಗಳಲ್ಲಿ ಬೆಳಕಿಗೆ ಬಂದಿರುವ, ಬರುತ್ತಲೇ ಇರುವ ವಂಚನೆಯ ಪ್ರಕರಣಗಳು ರಾಷ್ಟ್ರೀಯ ಆಡಳಿತೆಯ ವ್ಯವಹಾರದಲ್ಲಿ ರಾಷ್ಟ್ರೀಯ ಅಸ್ಮಿತೆಯನ್ನು ಪ್ರಕಟಿಸಬೇಕಾದ ಹಲವಾರು ನೌಕರರ ಪ್ರಾಮಾಣಿಕತೆಗೆ ಸವಾಲಾಗಿರುವಾಗ, ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯ ಕುಸಿತ ಸ್ಪಷ್ಟವಾಗಿದೆ. ರಾಷ್ಟ್ರೀಕರಣದ ಪೂರ್ವದಲ್ಲಿ ಬ್ಯಾಂಕ್ ವ್ಯವಹಾರದಲ್ಲಿ ಅಧಿಕಾರದ ದಂಡಶಕ್ತಿಯ ಭಯವೂ ಪ್ರಚೋದಿಸಿದ ಪ್ರಾಮಾಣಿಕತೆಗೆ ಸ್ಥಾನವಿದ್ದರೆ ರಾಷ್ಟ್ರೀಕರಣದ ನಂತರ ಆ ಭಯವಿರದಾಗ ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯನ್ನು ಸ್ವಾರ್ಥದ ಮಾನದಂಡದಿಂದಲೇ ನಿರ್ಧರಿಸುವಂತಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯದ ಆದರ್ಶವೇ ತ್ಯಾಗ ಬಲಿದಾನಗಳ ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯನ್ನು ನಿರ್ಧರಿಸುವ ಪರಿಸ್ಥಿತಿ ಇತ್ತು. ಈಗ ಮಾತ್ರ ನಾವು ಕಾಣುತ್ತಿರುವುದು ಸ್ವಾರ್ಥದ ಪರಿಧಿಯಿಂದ ಹೊರಬರದ ನೈತಿಕತೆಯ ಮುಖವಾಡವನ್ನು ಮಾತ್ರ. ಸ್ವಾರ್ಥದ ಪರಿಧಿಯಿಂದ ಹೊರಬರದ ಯಾವ ರೀತಿಯ ಚಿಂತನೆಯೂ ಸಾಮಾಜಿಕ ಹಿತವನ್ನೂ ರಾಷ್ಟ್ರದ ಹಿತವನ್ನೂ ಕಡೆಗಣಿಸುವುದರಿಂದ ನೈತಿಕತೆ ಮಾತಿನ ಆದರ್ಶವಾಗಿ ಉಳಿಯುತ್ತದೆ. ಪ್ರಾಮಾಣಿಕತೆಯಿಂದ ದೂರವಾದ ನೈತಿಕ ಪ್ರಜ್ಞೆ ಪ್ರಜಾ ಪ್ರಭುತ್ವವನ್ನು ರಕ್ಷಿಸುವ ನಾಗರಿಕನನ್ನಾಗಲೀ, ರಾಷ್ಟ್ರೀಯವೆನಿಸಬಹುದಾದ ಸಾಂಸ್ಕೃತಿಕ ಅನನ್ಯತೆಯನ್ನಾಗಲೀ ರೂಪಿಸುವುದಿಲ್ಲ. ಲಂಚ ವಂಚನೆಗಳು ಸಾಮಾಜಿಕ ರಕ್ಷೆ ಪಡೆಯುವ ಯಾವ ವ್ಯವಸ್ಥೆಯೂ ಒಂದು ನೈತಿಕ ಶಕ್ತಿ ಎನಿಸುವುದೇ ಇಲ್ಲ.

ಅನೈತಿಕತೆಯೂ ನೀತಿಯ ಮುಖವಾಡ ಧರಿಸುವ ಲಂಚ ವಂಚನೆಗಳ

ಪ್ರಕ್ರಿಯೆಗಳೇ ಭಾರತೀಯ ಸಾಂಸ್ಕೃತಿಕ ಅಸ್ಮಿತೆಯನ್ನು ಪ್ರದರ್ಶಿಸುವಂತಹ ದುರಂತವನ್ನು ನಾವು ಸ್ವಾತಂತ್ರ್ಯದ 50 ವರ್ಷಗಳಲ್ಲಿ ಕಂಡಿದ್ದೇವೆ. ಧನಾರ್ಜನೆಯ ಯಾವ ವಿಧಾನವೂ ಅನೈತಿಕವಲ್ಲವೆಂಬ ತಿಳಿವಳಿಕೆ ಬೆಳೆಯಲು ಮುಖ್ಯ ಕಾರಣಗಳು ಎರಡು. ಮೊದಲನೆಯದು ನಮ್ಮ ಶಾಸಕಾಂಗದಲ್ಲಿ ಸಾಮಾಜಿಕ ನಡೆವಳಿಕೆಯನ್ನು ನಿಯಂತ್ರಿಸ ಬಹುದಾದ ಎಲ್ಲ ಅಧಿಕಾರ ಕೇಂದ್ರೀಕೃತವಾಗಿರುವುದು. ಎರಡನೆಯದು ಜಾತಿ ವ್ಯವಸ್ಥೆಯಲ್ಲಿ ಹಂಚಿಹೋಗಿ ಶಿಕ್ಷಣದ ಸಂಸ್ಕಾರವೂ ಸಾಕಷ್ಟಿರದ ಜನಸಮುದಾಯದ ಅಜ್ಞಾನದ ಲಾಭ ಪಡೆದು ಆರಿಸಿ ಬರುವ ಶಾಸಕರನ್ನು ಅಪ್ರಾಮಾಣಿಕ ವರ್ತನೆಗೆ, ಸ್ವಜನ ಪಕ್ಷಪಾತಕ್ಕೆ, ಲಂಚಕೋರತನಕ್ಕೆ ಶಿಕ್ಷೆಯೆಂದು ಅವರನ್ನು ಶಾಸಕ ಸ್ಥಾನದಿಂದ ಹಿಂದೆ ಕರೆಸುವ ಅಧಿಕಾರ ಜನತೆಗಿಲ್ಲದಿರುವುದು. ದಿಲ್ಲಿಯ ಒಬ್ಬ ನ್ಯಾಯಾಧೀಶರು ಲೋಕಸಭೆಯ ಸದಸ್ಯರ ಯೋಗ್ಯತೆಯನ್ನು ಟೀಕಿಸಿದ್ದಕ್ಕೆ, ಸದಸ್ಯರು ಇದು ಲೋಕ ಸಭೆಯ ಅವಮಾನವೆಂದು ಕೂಗಿದ್ದನ್ನು ಇಲ್ಲಿ ನೆನೆಸಿಕೊಳ್ಳಬಹುದು. ಶಾಸಕರಿಗೆ ಜನತೆ ಯಿಂದ ದೊರಕಿಸಿಕೊಂಡ ಶಾಸಕ ಪಟ್ಟದ ಅಹಂಕಾರ ಬೇಕು, ಕರ್ತವ್ಯ ಪಾಲನೆಯಲ್ಲಿ ತಮ್ಮ ತಿಳಿವಳಿಕೆಯ ಸ್ವಾರ್ಥದ ಇತಿಮಿತಿಯಲ್ಲಿ ಸಮುದಾಯದ ಹಿತವೂ ಸೇರಿಕೊಂಡಿರ ಬೇಕು ಎಂಬ ನಿಲುವನ್ನೇ ನಾವು ಹೆಚ್ಚಾಗಿ ಕಾಣುತ್ತಿದ್ದೇವೆ. ತಮ್ಮ ಅಧಿಕಾರದ ಅವಧಿಯ ಭದ್ರತೆ, ಈ ಅವಧಿಯಲ್ಲಿ ತಾವು ಯಾರಿಗೂ ಉತ್ತರ ಹೇಳುವ ಹೊಣೆಗಾರಿಕೆಯಿಲ್ಲ, ಈ ಅವಧಿಯನ್ನು ಸ್ವಾರ್ಥಕ್ಕಾಗಿ ಸದುಪಯೋಗಪಡಿಸಿಕೊಂಡು ಎಲ್ಲ ವಿಧಾನಗಳಿಂದಲೂ ಧನ ಸಂಗ್ರಹಿಸುವ ದಾರಿಗಳನ್ನು ಹುಡುಕಬೇಕು ಎಂಬ ಮನೋಭಾವವೇ ಸಾರ್ವತ್ರಿಕತೆ ಪಡೆಯುತ್ತಿದೆಯೇ ಎಂಬ ಸಂದೇಹ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಜನ ಸಾಮಾನ್ಯರಲ್ಲಿ ಬಲವಾಗಿ ಬೇರೂರಿದಂತಿದೆ. ಪ್ರತ್ಯಕ್ಷ ಲಂಚದ ಮಾತಂತಿರಲಿ, ಈ ಶಾಸಕತ್ವದ ಅಥವಾ ಮಂತ್ರಿ ಪದದ ಅಹಂಕಾರ ಪೋಷಣೆಗಾಗಿ ರಾಜ್ಯ ರಾಷ್ಟ್ರಗಳ ಬೊಕ್ಕಸಗಳಿಗೆ ಹೊರೆಯಾಗುವ ಇವರು ದೊರಕಿಸಿಕೊಳ್ಳುವ ಅನುಕೂಲತೆಗಳ ವೆಚ್ಚ – ಮನೆ ಬಾಡಿಗೆ, ಪ್ರಯಾಣ ಭತ್ಯೆ, ಟೆಲಿಫೋನ್ ಸಂಪರ್ಕ, ಸಹಾಯಕರ ಪಡೆ ಬೇಕೆನಿಸಿದಾಗ ಕುಂಟು ನೆಪದಲ್ಲೂ ವಿದೇಶಪ್ರಯಾಣ, ವಿದೇಶ ವೈದ್ಯಕೀಯ ಚಿಕಿತ್ಸೆ ಇವನ್ನೆಲ್ಲ ನೋಡುವಾಗ ಭಾರತದಲ್ಲಿ ದಾರಿದ್ರ್ಯ ರೇಖೆ ಎಲ್ಲಿದೆಯೆಂದು ಕೇಳುವುದು ಅಪ್ರಸ್ತುತವೆನಿಸದು.

ಸ್ವಾತಂತ್ರ್ಯದ 50ನೆಯ ವರ್ಷದಲ್ಲಿ ಪ್ರಧಾನ ಮಂತ್ರಿ ಪದವಿಯನ್ನಲಂಕರಿಸಿದವರ ತನಕವೂ ಲಂಚದ, ಸ್ವಜನಪಕ್ಷಪಾತದ ಆಪಾದನೆಗಳು, ಆಡಳಿತೆಯ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಏನೆಲ್ಲ ಹಗರಣಗಳು ಬೆಳೆಯುತ್ತಿರುವಾಗ 'ಲಂಚ'ಕ್ಕೆ ಭಾರತದಲ್ಲಿ ಭಯಮುಕ್ತ ಆವರಣವಿದೆಯೆಂದೆ ಭಾರತ ಪಾಕಿಸ್ತಾನಗಳು 'ಭ್ರಷ್ಟ' ರಾಷ್ಟ್ರಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಗಳಿಸಿಕೊಂಡಿರುವುದು. ಇಂಥ ನಡೆವಳಿಕೆಯನ್ನು ನಿಯಂತ್ರಿಸುವ ಭಯ ಎಲ್ಲಿಂದ ಬರಬೇಕು, ಶಾಸಕರಾಗಿ ಆರಿಸಿ ಬಂದವರ ಸರ್ವಾಧಿಕಾರ ಪ್ರವೃತ್ತಿಯನ್ನು ನಿಯಂತ್ರಿಸಬಲ್ಲ ಶಕ್ತಿ ಯಾವುದು ? ಪ್ರಜಾಪ್ರಭುತ್ವದಲ್ಲಿ ಶಿಕ್ಷಣದ ಸಂಸ್ಕಾರದಿಂದ ತಿಳಿವಳಿಕೆ ಬೆಳೆಸಿಕೊಂಡು ಸ್ವತಂತ್ರವಾಗಿ ನಿರ್ಭೀತರಾಗಿ

ಮತಾಧಿಕಾರವನ್ನು ಚಲಾಯಿಸುವ ಮತದಾರರಿಂದ ಮಾತ್ರ. ಇದು ಸಾಧ್ಯವಾಗುವುದೂ ನಮ್ಮ ರಾಜ್ಯ, ನಮ್ಮ ರಾಷ್ಟ್ರ ಎಂಬ ಅಭಿಮಾನ ಸಾರ್ವತ್ರಿಕವಾಗಿ ನಾಗರಿಕರಲ್ಲಿ ಇದ್ದಾಗ ಮಾತ್ರ. ಭಾರತದಲ್ಲಿ ಕಳೆದ 50 ವರ್ಷಗಳಲ್ಲಿ ಈ ದೆಸೆಯಲ್ಲಿ ನಾವು ಏನನ್ನೂ ಸಾಧಿಸಿಲ್ಲದಿರುವುದೇ ನಮ್ಮ ಸಾಮಾಜಿಕ ರಂಗದಲ್ಲಿ ನೈತಿಕತೆ ಕುಸಿಯಲೂ ಕಾರಣ. ನಾಗರಿಕರಿಗೆ ತಮ್ಮ ಎಲ್ಲ ನಡೆವಳಿಕೆಗಳಿಗೆ ಉತ್ತರ ಹೇಳುವ ಅನಿವಾರ್ಯತೆ ಇದೆ ಎಂಬ ಭಯ ಶಾಸಕರಿಗೆ ಇಲ್ಲದಾಗ ಅವರು ಮಾಡಿದ್ದೇ ನೀತಿ, ಹೇಳಿದ್ದೆ ಸತ್ಯ ಎನ್ನುವ ಪರಿಸ್ಥಿತಿ ಬರುವುದು ಅನಿವಾರ್ಯ. ಹೀಗಿರುವಾಗ ಧನಾರ್ಜನೆಯೇ ನೀತಿ ಎಂಬ ತಿಳಿವಳಿಕೆ ಸಾರ್ವತ್ರಿಕವಾಗಿ ಬೆಳೆದು 'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ' ಎಂಬ ಗಾದೆಯ ಮಾತಿನಂತೆ ರಾಷ್ಟ್ರದ ಎಲ್ಲ ವ್ಯವಹಾರಗಳಲ್ಲಿ 'ಪ್ರತಿಶತ' ಲೆಕ್ಕದ ಲಂಚ ತಲೆಹಾಕಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಸರಕಾರ ವಿಧಿಸಿದ ಯಾವುದಾದರೊಂದು ನಿಯಮವನ್ನು ಪಾಲಿಸುವ ಅಗತ್ಯವಿದ್ದಲ್ಲೆಲ್ಲ ಅದನ್ನು ನಿರ್ವಹಿಸುವ ಅಧಿಕಾರಿ ಕೇಳಿದ್ದನ್ನು ಕೊಟ್ಟರೆ ಮಾತ್ರ ತಮಗೆ ಅನುಕೂಲವಾಗುವ ಕೆಲಸವಾಗಬಹುದು ಎಂಬ ತಿಳಿವಳಿಕೆ ಮಧ್ಯಮ ವರ್ಗದ ಜನರೂ ಸೇರಿದಂತೆ ಅಜ್ಞಾನದಿಂದ ಇತರರ ಸಹಾಯ ಪಡೆದು ಕೆಲಸ ನಿರ್ವಹಿಸಬೇಕಾದ ಅವಿದ್ಯಾವಂತ ಬಹುಸಂಖ್ಯಾತ ನಾಗರಿಕರಿಗೂ ಬರುವಂತಾದಾಗ 'ಲಂಚ' ಒಪ್ಪಿಕೊಳ್ಳಲೇಬೇಕಾದ ಜೀವನ ರೀತಿ ಎಂದು ಎಲ್ಲ ತಿಳಿಯುವಂತಾದುದರಲ್ಲಿ ಆಶ್ಚರ್ಯವೇನಿಲ್ಲ.

ಸ್ವಲ್ಪ ಕಾಲದ ಹಿಂದೆ 'ಇಂಡಿಯಾ ಟುಡೇ' ಪತ್ರಿಕೆ ವರದಕ್ಷಿಣೆಯ ಕುರಿತು ನಡೆಸಿದ ಸಮೀಕ್ಷೆಯೊಂದರಲ್ಲಿ ಐಎಎಸ್ ಅಧಿಕಾರಿಗಳು ಸಾಮಾನ್ಯವಾಗಿ ಅಪೇಕ್ಷಿಸುವ ವರದಕ್ಷಿಣೆ ಅರ್ಧ ಕೋಟಿಗೂ ಹೆಚ್ಚು ಎಂಬ ವಿಚಾರ ಪ್ರಕಟವಾಗಿತ್ತು. ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅಧಿಕಾರಿಗಳಿಂದ ಹಿಡಿದು ಸಾಮಾನ್ಯರವರೆಗೂ ಲಂಚ ಬೇಡುವವರೇ ಹೆಚ್ಚಿರುವುದರಿಂದ, ಪ್ರಾಮಾಣಿಕ ಅಧಿಕಾರಿಗಳು ಇಂತಹ ವ್ಯವಸ್ಥೆಯೊಳಗಿರುವುದನ್ನು ಅವರು ಸಹಿಸದಿರುವುದರಿಂದ, ಲಂಚ ಕೊಡುವುದು ಕರ್ತವ್ಯವೆಂಬ ಭಾವನೆ ಸಾರ್ವತ್ರಿಕವಾಗಿ ಬೆಳೆಯುತ್ತಿದೆ. ಸಾಮಾಜಿಕ ವ್ಯವಹಾರಗಳಲ್ಲಿ ಲಂಚ ನೈತಿಕತೆಯ ಮುಖವಾಡ ಧರಿಸಿದೆ.

ಹಾಗೆಂದು ಪ್ರಜಾಪ್ರಭುತ್ವದ ಆದರ್ಶವಿರುವಲ್ಲಿ 'ಲಂಚ ನಿರೋಧ'ದ ಮುಖವಾಡವಾದರೂ ಬೇಕಲ್ಲ. ಸ್ವಲ್ಪ ಸಮಯದ ಹಿಂದೆ 'ಲಂಚ ನಿರೋಧ' ಕ್ಕೆಂದೇ ರಚಿಸಲಾದ ಲೋಕಾಯುಕ್ತರ ಪಡೆ ಒಂದು ಸಬ್ ರಿಜಿಸ್ಟ್ರಾರ್ ಕಚೇರಿಗೆ ಧಾಳಿ ನಡೆಸಿದಾಗ ನೋಟಿನ ಕಂತೆಗಳೆ (ಲಂಚ ಸಂಗ್ರಹ) ಕಿಟಕಿಗಳಿಂದ ಹೊರಗೆಸೆಯಲ್ಪಟ್ಟವು. ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆ ತನಿಖೆಯ ಪರಿಣಾಮವೇನಾಯಿತು ಎಂಬ ತಿಳಿವಳಿಕೆ ನೀಡುವ ಯಾವ ಸುದ್ದಿಯೂ ಮುಂದೆ ಪ್ರಕಟವಾದಂತಿಲ್ಲ. ಆದರೆ ಸಿನಿಕತನದ್ದೆಂದು ತೋರಬಹುದಾದ ಒಂದು ಮಾತು ಮಾತ್ರ ಕೇಳಿ ಬರುತ್ತಿತ್ತು. 'ಇನ್ನು ಧಾಳಿ ನಡೆಸುವವರಿಗೂ ಪಾಲು ಕೊಡಬೇಕೆಂದಾದರೆ, ಲಂಚದ ಗರಿಷ್ಠ ಮಿತಿ ಹೆಚ್ಚಾಗುವುದು ಖಚಿತ' ಎಂದು. ವ್ಯವಸ್ಥೆಯೊಳಗಣ ಲಂಚ ನಿರೋಧಕ ವ್ಯವಸ್ಥೆಯು,

ಪ್ರಾಮಾಣಿಕತೆಯನ್ನೂ, ಸಂದೇಹದಿಂದ ನೋಡುವ ಪರಿಸ್ಥಿತಿ ಸೂಚಿಸುವುದೇನನ್ನು. ತಿರಸ್ಕಾರಾರ್ಹವಾದ ಕ್ರಿಯೆಯೂ ಅನಿವಾರ್ಯವಾಗಿ ನೆಚ್ಚಿಕೊಳ್ಳಬೇಕಾದ ಸತ್ಯವಾಗುವಾಗ ವ್ಯಕ್ತಿಯ ಚಿಂತನ ಶಕ್ತಿಯೂ, ಕ್ರಿಯಾಶೀಲತೆಯೂ ನಷ್ಟವಾಗುತ್ತದೆ. ಇಂತಹ ವ್ಯಕ್ತಿ ಪ್ರಜಾಪ್ರಭುತ್ವವನ್ನು ರಕ್ಷಿಸುವ ಬದಲು ಅದರ ಹಿಡಿತದಲ್ಲಿ ತನ್ನ ವೈಯಕ್ತಿಕತೆ, ಕ್ರಿಯಾಶೀಲತೆಗಳನ್ನೂ ಸೃಜನಶೀಲ ಚಿಂತನೆಯ ಶಕ್ತಿಯನ್ನೂ ಕಳೆದುಕೊಳ್ಳುತ್ತಾನೆ. ಲಂಚ ಸಾಮಾನ್ಯರಿಗೂ ಅನಿವಾರ್ಯ ನೀತಿ ಎಂದಾದಾಗ ಅದೇ ಸಂಸ್ಕೃತಿಯೆನಿಸುತ್ತದೆ. ಇಂತಹ ರಾಷ್ಟ್ರೀಯ ಅನನ್ಯತೆಯಿಂದ ದೇಶ ಉದ್ಧಾರವಾಗುವುದಿಲ್ಲ.

ಸ್ವಾತಂತ್ರ್ಯದ 50ನೆಯ ವರ್ಷದಲ್ಲಿ ಇದೇ 97ರ ಫೆಬ್ರವರಿ 21ರಂದು 'ಪ್ರಜಾವಾಣಿ' ದೈನಿಕದಲ್ಲಿ 'ಮುಲಾಜಿಲ್ಲದ ವ್ಯವಹಾರ' ಎನ್ನುವ ಶೀರ್ಷಿಕೆಯಡಿ ಪ್ರಕಟವಾದ ಒಂದು ಸುದ್ದಿ ನಮ್ಮ ಸಾರ್ವಜನಿಕ ಸೇವಕರ ಕರ್ತವ್ಯ ನಿಷ್ಠೆಗೂ, ಪ್ರಾಮಾಣಿಕತೆಗೂ ಕನ್ನಡಿ ಹಿಡಿಯುವಂಥದು ಎಂದು ಅದನ್ನು ಇದ್ದಕ್ಕಿದ್ದಂತೆ ಉದ್ಧರಿಸಿದ್ದೇನೆ :

''ಚಿಕ್ಕಮಗಳೂರು ಸರಕಾರೀ ನೌಕರರು ಯಾರಿಗೂ ತಾರತಮ್ಯ ಮಾಡರು. ಅವರಿಗೆ ಎಲ್ಲರೂ ಒಂದೇ ಲಂಚ ತೆಗೆದುಕೊಳ್ಳುವ ವಿಷಯದಲ್ಲಿ. ಹೀಗೆಂದು ಇಲ್ಲಿನ ತಾಲೂಕು ಪಂಚಾಯತಿ ಗುಮಾಸ್ತನೊಬ್ಬ ಸಾಬೀತು ಮಾಡಿದ್ದಾನೆ. ಅವನು ತನ್ನ ಪಂಚಾಯ್ತಿ ಉಪಾಧ್ಯಕ್ಷೆಗೂ ರಿಯಾಯಿತಿ ತೋರಿಲ್ಲ. ಆಕೆಯ ಹತ್ತು ತಿಂಗಳ ಪ್ರವಾಸ ಭತ್ಯೆ ಬಿಲ್ ಮಾಡಲು ಲಂಚ ನೀಡಬೇಕಾಗಿರುವ ವಿಷಯ ಈಗ ಬಹಿರಂಗಗೊಂಡಿದೆ. ಈಗಾಗಲೇ 200 ರೂ. ಲಂಚ ಪಡೆದಿರುವ ನೌಕರ ಇನ್ನುಳಿದ ಹತ್ತು ತಿಂಗಳ ಭತ್ಯೆ ಬಿಲ್ ಮಾಡಲು 500 ರೂ. ಕೇಳಿರುವುದಾಗಿ ಉಪಾಧ್ಯಕ್ಷೆ ದೇವಮ್ಮನವರೇ ಹೇಳಿದ್ದಾರೆ. ದೇವಮ್ಮ 20 ತಿಂಗಳು ಉಪಾಧ್ಯಕ್ಷರಾಗಿದ್ದು ಈಗ ಸರ್ಕಾರದ ನಿಯಮದಂತೆ ರಾಜೀನಾಮೆ ನೀಡಿದ್ದಾರೆ. ನೌಕರರು ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾಗಿರುವ ಜನ ಪ್ರತಿನಿಧಿಗಳಿಂದಲೇ ಲಂಚ ಕೇಳುವ ಇಂಥವರು ಸಾಮಾನ್ಯ ಜನರನ್ನು ಯಾವ ರೀತಿಯಲ್ಲಿ ಪೀಡಿಸಬಹುದು ಎಂಬುದು ಈಗ ಇಲ್ಲಿ ಚರ್ಚಾ ವಿಷಯವಾಗಿದೆ. ವಿಶೇಷವೆಂದರೆ ಹಿಂದೆ ಇದೇ ನೌಕರನಿಗೆ ಬೇರೆ ಕಡೆ ವರ್ಗಾವಣೆಯಾದಾಗ ಉಪಾಧ್ಯಕ್ಷರು ತಮ್ಮ ಪ್ರಭಾವ ಬೀರಿ ಇಲ್ಲೇ ಉಳಿಸಿಕೊಂಡಿದ್ದರಂತೆ. ಆದರೂ ಅವರಿಗೇನು ರಿಯಾಯ್ತಿ ಇಲ್ಲ. ವ್ಯವಹಾರವೆಂದರೆ ವ್ಯವಹಾರ.''

ಈ ಸುದ್ದಿ ನಮ್ಮ ಸಮಾಜ ಜೀವನದ ಎರಡು ಮುಖಗಳನ್ನು ಎತ್ತಿ ತೋರಿಸುತ್ತಿದೆ. ಮೊದಲನೆಯದು, ಇದನ್ನು ನಾವು ಬರೇ ಚರ್ಚಾ ವಿಷಯವಾಗಿಸುವಷ್ಟು ಜಡರಾಗಿದ್ದೇವೆ. ಅಂತಹ ನೌಕರರನ್ನು ಕೂಡಲೇ ಒದ್ದೋಡಿಸಬೇಕು ಎಂದು ಆಗ್ರಹಪಡಿಸುವ ನೈತಿಕ ಧೈರ್ಯವಿಲ್ಲ. ಎರಡನೆಯದು ಅಂತಹ ಚಳವಳವೇನಾದರೂ ಕಾರ್ಯಗತವಾದರೆ ಮುಂದೆ ನಮ್ಮದೇನಾದರೂ ಕೆಲಸವಾಗಬೇಕಾದಾಗ ನೌಕರರ ಪ್ರತಿಕ್ರಿಯೆಯಾಗಲೀ ನಿಧಾನ ನಡತೆಯಾಗಲೀ ಯಾವ ರೀತಿಯದಿರಬಹುದು ಎಂಬ ಶಂಕೆ. ಎರಡರಲ್ಲೂ ಭಯಕ್ಕೆ, ಸ್ವಾರ್ಥಕ್ಕೆ ಪ್ರಮುಖ ಸ್ಥಾನ. ಇಂಥ ನಾವು

ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದ ನಾಗರಿಕರು. ಅಧಿಕಾರ, ಅಜ್ಞಾನವನ್ನು ಭಯ ಮುಕ್ತ ವಾತಾವರಣದಲ್ಲಿ ಶೋಷಿಸುವ ರೀತಿಗೆ ಇದು ಉದಾಹರಣೆಯೂ ಹೌದು. ಪ್ರಾಯಶಃ ಇಂತಹ ಸನ್ನಿವೇಶಗಳನ್ನು ಗಮನಿಸಿಯೇ ಇತ್ತೀಚೆಗೆ ಮಂತ್ರಿಯೊಬ್ಬರು ನಮ್ಮ ವಿಕೇಂದ್ರಿಕರಣ ನೀತಿಯಲ್ಲಿ ಲಂಚದ ವಿಕೇಂದ್ರೀಕರಣವೂ ಆಗುತ್ತಿದೆ ಎಂದದ್ದು.

ಹೀಗಿದೆ ನಮ್ಮ ಲಂಚ ಪ್ರಪಂಚದ ವಿಷವರ್ತುಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಮನಾರ್ಹ ಪ್ರಗತಿಯಾಗಿರುವುದು ಸಣ್ಣ ಸಣ್ಣ ಉದ್ಯಮ ಕ್ಷೇತ್ರಗಳಲ್ಲೇ. ಆದರೆ ಇಂತಹ ಉದ್ಯಮಗಳಲ್ಲಿ ತೊಡಗಬಯಸುವವರಿಗೆ ಅಗತ್ಯವಿರುವ ಪರವಾನಗಿಗಳನ್ನು ದೊರಕಿಸಿ ಕೊಳ್ಳಲು, ವಿದ್ಯುತ್, ಟೆಲಿಫೋನ್ ಮೊದಲಾದ ಸಂಪರ್ಕಗಳನ್ನು ಒದಗಿಸಿಕೊಳ್ಳಲು, ಬ್ಯಾಂಕ್ ಸಾಲ ಪಡೆಯಲು, ಲಂಚವೆನ್ನಿ 'ಪ್ರತಿಶತ ಕಮಿಶನ್' ಎನ್ನಿ ಯಾವುದೇ ಹೆಸರಿನಿಂದ ಕರೆದರೂ ನ್ಯಾಯವಾಗಿ ಕೊಡಬೇಕಾಗಿರದ ಹಣ ಕೊಡದೆ ಉದ್ಯಮವನ್ನು ಸ್ಥಾಪಿಸಿ ನಡೆಸಿಕೊಂಡು ಬರಲು ಸಾಧ್ಯವಾಗುತ್ತಿಲ್ಲ.

ಇನ್ನು ಉದ್ಯಮದ ದಿನನಿತ್ಯದ ಕಾರ್ಯ ನಿರ್ವಹಣೆಯಲ್ಲೂ ಎಕ್ಸೈಸ್ ಸುಂಕದ ಪರೀಕ್ಷಣಾಧಿಕಾರಿಗಳು ಬಂದಾಗ, ಗುಣಮಟ್ಟವನ್ನು ಪರೀಕ್ಷಿಸುವ ನಿರೀಕ್ಷಕರು ಬಂದಾಗ ಸ್ವಚ್ಛತೆಯ ಪರೀಕ್ಷಣೆಗೆಂದು ಆಹಾರ ಖಾತೆಯ ಅಧಿಕಾರಿಗಳು ಬಂದಾಗ, ಕಾರಣವಿದ್ದೂ ಇರದೆಯೂ ಆದಾಯ ತೆರಿಗೆಯ ಅಧಿಕಾರಿಗಳು ಬಂದಾಗ, ಅಥವಾ ಅವರನ್ನು ಸಂದರ್ಶಿಸುವ ಸಂದರ್ಭಗಳು ಬಂದಾಗಲೆಲ್ಲ 'ಲಂಚ' ವ್ಯವಹಾರ ನೀತಿಯಾಗುವುದನ್ನು ನಾವು ನಮ್ಮ ಪ್ರಗತಿಯ ಚಕ್ರದಲ್ಲಿ ಕಂಡಿದ್ದೇವೆ. ಇಷ್ಟೆಯೇ! ಇನ್ನು ದೀಪಾವಳಿ ಕ್ರಿಸ್‌ಮಸ್ ಮುಂತಾದ ಸಂದರ್ಭಗಳಲ್ಲಿ ಇವರಿಗೆ ಬೇರೆಯೇ ರೀತಿಯ ಉಡುಗೊರೆ ಯೆನಿಸುವ ಕಾಣಿಕೆಗಳನ್ನು ಅರ್ಪಿಸುವ ಸಂಪ್ರದಾಯವೂ ಬೆಳೆದು ಬಂದಿದೆ. ಲಂಚದ ಚಕ್ರವ್ಯೂಹದೊಳಗೆ ಪ್ರವೇಶಿಸಲು ತಿಳಿದಿಲ್ಲವಾದರೆ ನೀವು ಯಶಸ್ವಿ ಉದ್ಯಮಿಗಳಾಗಲು ಸಾಧ್ಯವೇ ಇಲ್ಲ ಎನ್ನುವ ತಿಳಿವಳಿಕೆ ಸಾಮಾನ್ಯವಾಗಿರುವ ನಮ್ಮ ನಾಡು 'ಭ್ರಷ್ಟ' ದೇಶಗಳ ಪಟ್ಟಿಯ ಕೊನೆಯ ಸಾಲಿನಲ್ಲಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇದು ನಾವು ನಮ್ಮ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗುವ ರೀತಿ. ಇಂಥಲ್ಲಿ ಸಾಮಾಜಿಕ ಹಿತವಾಗಲೀ ಸಾಮಾಜಿಕ ನ್ಯಾಯವಾಗಲೀ ಯಾರಿಗೆ ಬೇಕು. ಸಮಾಜವನ್ನೇ ಶೋಷಿಸುವಂತಹ ಜನ ಯಾವ ರೀತಿ ದೇಶದ ಅಸ್ಮಿತೆ ಅನನ್ಯತೆಗಳ ಬಗೆಗೆ ಯೋಚಿಸಿಯಾರು ?

ಅಲ್ಪಸಂಖ್ಯಾತರೆನಿಸುವವರು ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಬೆರೆಯಬೇಕು ಎಂದು ಕೆಲವು ರಾಜಕೀಯ ಪಕ್ಷಗಳು ಬೊಬ್ಬಿಡುತ್ತಿವೆ. ಈ ರಾಷ್ಟ್ರವಾಹಿನಿಯ ಅಸ್ಮಿತೆಯ ಸಂಸ್ಕಾರವೇನು ? ಇಂದು ಕಾಣುತ್ತಿರುವುದು 'ಲಂಚ'ವೇ. ದೇಶದ ಪ್ರಧಾನಿಯಾಗಿ ದ್ದವರು ನ್ಯಾಯಾಲಯದ ಕಟಕಟೆಯನ್ನು ಏರಬೇಕಾದಂತಹ ಪರಿಸ್ಥಿತಿ ಯಾವ ರೀತಿಯ ಸಾಮಾಜಿಕ ಅನನ್ಯತೆಯನ್ನು ಪ್ರದರ್ಶಿಸುತ್ತದೆ. ಕೋಟಿಗಟ್ಟಲೆ ಹಣ ಒಬ್ಬ ಮಂತ್ರಿಯ ಮನೆಯಲ್ಲಿ ದೊರಕಿದಾಗ ಅದು ಯಾರದೆಂದು ತಿಳಿಯುವ ಪ್ರಯತ್ನ ತಿಂಗಳುಗಳೇ ಕಳೆದರೂ ಮುಂದುವರಿಯುತ್ತಿದ್ದು ಸ್ಪಷ್ಟೀಕರಣ ದೊರಕದಾಗ ನಮ್ಮ ಸಾಮಾಜಿಕ

ಜೀವನ ಸಿಲುಕಿಕೊಂಡಿರುವ ಸ್ಥಿತಿಯ ಬಗ್ಗೆ ನಮಗೇ ಕನಿಕರವಾಗಬೇಕು. ನೂರಾರು ಲಂಚದ ಪ್ರಕರಣಗಳು ಬೆಳಕಿಗೆ ಬಂದು ಆಮೇಲೆ ಏನಾಯಿತೆಂದು ತಿಳಿಯದೆ ನೆನಪಿನಿಂದ ಮರೆಯಾಗುವ ಸ್ಥಿತಿ ಸೂಚಿಸುವುದು ಅಸ್ವಸ್ಥ ಸಮಾಜವನ್ನು; ಸಾಮಾಜಿಕ ನ್ಯಾಯದ ಪ್ರಜಾಪ್ರಭುತ್ವವನ್ನಲ್ಲ. ಅನಾರೋಗ್ಯದಿಂದಿದ್ದೂ ತೋರಿಕೆಯ ಲೋಕಸತ್ತೆಯ ಆರೋಗ್ಯವನ್ನು ಪ್ರದರ್ಶಿಸುವ ಸಮಾಜದ ಅಪ್ರಾಮಾಣಿಕ ಮುಖ ಅಸಹ್ಯವೆಂಬ ಎಚ್ಚರ ನಮ್ಮಲ್ಲಿರದೆಯೇ ನಾವು ಮುಂದುವರಿಯುತ್ತಿದ್ದೇವೆ, ಸ್ವಾತಂತ್ರ್ಯದ 50 ವರ್ಷಗಳಲ್ಲಿ. ಹಿಂದೆ ಸೂಚಿಸಿದ ಒಂದು ಘಟನೆಯಲ್ಲಿ ಬಿಲ್ ಮಾಡಿಸಲು 200 ರೂಪಾಯಿ ಲಂಚ ಕೊಟ್ಟ ಪ್ರಕರಣದ ಉಲ್ಲೇಖವಿದೆ. ಲಂಚ ಕೊಟ್ಟು ಬಿಲ್ ಮಾಡಿಸುವುದೂ ನಮ್ಮ ಪ್ರಾಮಾಣಿಕತೆಗೆ ನಿದರ್ಶನವಾದರೆ ಇಂತಹ ಜನ ಪ್ರತಿನಿಧಿಗಳಿಂದ ಜನ ಬಯಸುವುದೇನು ಎಂದು ಕೇಳಿದರೂ ತಪ್ಪಾಗದು. ಇನ್ನು ಹಳ್ಳಿಗಳಲ್ಲಿರಲಿ, ಪೇಟೆ ಪಟ್ಟಣಗಳಲ್ಲಿರಲಿ, ಭಾರತೀಯ ಮಹಿಳೆ ತಾಳ್ಮೆ, ಸಂಯಮ, ವಾತ್ಸಲ್ಯಗಳ ಪ್ರತೀಕವೆಂಬ ತಿಳಿವಳಿಕೆ ಹಿಂದೆ ರೂಢಿಯಲ್ಲಿತ್ತು. ಇಂದು ನಮಗೆ ದೊರಕುತ್ತಿರುವ ಶಿಕ್ಷಣದ ಸಂಸ್ಕಾರದಿಂದ ಪ್ರಭಾವಿತಳಾದ ಹಾಗೂ ಸುತ್ತ ಕಾಣುವ ಸಾಮಾಜಿಕ ನಡೆವಳಿಕೆಗೆ ಸ್ಪಂದಿಸುತ್ತಿರುವ ಮಹಿಳೆ ಈ ಲಂಚದ ಸಾಮುದಾಯಿಕ ವರ್ಚಸ್ಸಿಗೆ ಹೇಗೆ ಹೊಂದಿಕೊಳ್ಳುತ್ತಿದ್ದಾಳೆ ಎಂದು ತಿಳಿದರೆ ಅಲ್ಲೂ ಬೇಸರವೇ. ಸರಕಾರದ ಹಿಡಿತವಿರುವ ಹತ್ತು ಹಲವು ಕಚೇರಿಗಳಲ್ಲೂ ಲಂಚ ಪಡೆಯುವುದರಲ್ಲಿ ತಾವೇನು ಹಿಂದಿಲ್ಲವೆನ್ನುವಂತೆ ಮಹಿಳೆಯೂ ಕಾಣಿಸಿಕೊಳ್ಳುತ್ತಿರುವುದೂ ನಮ್ಮ ರೋಗಿಷ್ಟ ಸಮಾಜ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ. ಎಲ್ಲ ಮಹಿಳೆಯರೂ ಈ ರೀತಿ ಎಂಬ ಸುಲಭ ಸಿದ್ಧಾಂತದ ಮಾತು ಇದಲ್ಲ. ಅಧಿಕಾರದ ಹಿಡಿತ ಸಾರ್ವಜನಿಕರ ಮೇಲೆ ಇರುವಂತಹ ಸಂದರ್ಭಗಳಲ್ಲಿ ಮಹಿಳೆಯರೂ ಲಂಚದ ಆಮಿಷಕ್ಕೆ ಹೊರತಾಗುವ ಪರಿಸ್ಥಿತಿ ಇಂದು ಇಲ್ಲ ಎಂದು ಹೇಳಲಷ್ಟೆ ಮೇಲಿನ ಮಾತು.

ಸಾಮಾನ್ಯ ಕಾರಕೂನಿಕೆಯಿಂದ ಹಿಡಿದು ಸರಕಾರದ ಹಾಗೂ ಸರಕಾರೇತರ ವೃತ್ತಿ ಕೇಂದ್ರಗಳಿಗೂ ಈ ಲಂಚ ಖುಷವತ್ತುಗಳ ಜಾಲ ಹರಡಿರುವುದು ನಮ್ಮ ಸಾಮಾಜಿಕ ಜೀವನದ ಅನಾರೋಗ್ಯ ಸ್ಥಿತಿಯನ್ನೇ ಸೂಚಿಸುತ್ತಿಲ್ಲವೆ. ತೆರಿಗೆಯ ಸಲಹೆಗಾರರು ತೆರಿಗೆದಾರನಿಗೆ ಕೊಡುವ ಸಲಹೆಯಲ್ಲಿ 'ಲಂಚ'ವೂ ಸೇರಿಕೊಳ್ಳುವುದು ಸಾಮಾನ್ಯ. ವೈದ್ಯಕೀಯ ವೃತ್ತಿಯಲ್ಲಿರುವ ನುರಿತ ಪದವೀಧರರು ರೋಗಿಗಳನ್ನು ತಪಾಸಣೆಗೆಂದು ತಮಗೆ ಆರ್ಥಿಕ ಸಹಾಯ ಮಾಡುವ ತಪಾಸಣಾ ಕೇಂದ್ರಗಳಿಗೇ ಕಳುಹಿಸುವುದೂ, ತಮ್ಮ ಬಳಿಗೇ ರೋಗಿಗಳನ್ನು ಕಳುಹಿಸುವಂತೆ ಸಾಮಾನ್ಯ ವೈದ್ಯರಿಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಸಂಭಾವನೆ ಕೊಟ್ಟು ಓಲೈಸುವುದೂ, ಇವೆಲ್ಲ ತೀರ ಸಾಮಾನ್ಯವೆನ್ನುವಂತೆ ನಡೆಯುತ್ತಿರುವ ಸಾಮಾಜಿಕ ಜೀವನ ರೋಗಿಷ್ಟವಲ್ಲವೆ. ಇನ್ನು ಸರಕಾರದ ನೆರವು ಸಿಗಬೇಕಾದಂತಹ ಬೌದ್ಧಿಕವೆನಿಸುವ ವಲಯಗಳಲ್ಲೂ ಗ್ರಂಥಗಳ ಸಗಟು ಖರೀದಿ ಮುಂತಾದ ಸಂದರ್ಭಗಳಲ್ಲಿ ಈ 'ಪ್ರತಿಶತ' ಕಮಿಶನ್‌ನ ವ್ಯವಹಾರ ನಡೆಯುತ್ತಿದೆಯೆಂದು ಕೇಳಿಬರುತ್ತಿರುವಾಗ ಅಪ್ರಾಮಾಣಿಕವಾದ ಧನಾರ್ಜನೆಯೂ ಪ್ರಾಮಾಣಿಕ ವೆನಿಸುವ ರೀತಿಯಲ್ಲಿ ಬೆಳಗುತ್ತಿರುವಾಗ 'ಲಂಚ'

ಜೀವನಶೈಲಿಯೆನ್ನಿಸುವುದರಲ್ಲಿ ಆಶ್ಚರ್ಯವೇನು.

ನಮ್ಮ ಅಪ್ರಾಮಾಣಿಕತೆಯ ಮಟ್ಟ ಎಲ್ಲಿಯ ತನಕ ಹೋಗಿದೆಯೆಂದರೆ ಎಲ್ಲ ರಾಜಕೀಯ ಪಕ್ಷಗಳೂ ಪ್ರಶ್ನಾರ್ಹ ರೀತಿಯಲ್ಲಿ ಪಕ್ಷಕ್ಕಾಗಿ ಪಕ್ಷದ ಹೆಸರಿನಲ್ಲಿ ಸ್ವಾರ್ಥಕ್ಕಾಗಿ ಧನ ಸಂಗ್ರಹ ಮಾಡುತ್ತಿದ್ದು ತಾವೆಲ್ಲ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿರುವವರೆಂದು ಮಾತನಾಡುತ್ತಿರುವವರೇ. ಈ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಲೇ ಅತ್ಯಂತ ಭ್ರಷ್ಟರೆಂದು ಸಾರ್ವಜನಿಕರು ಗುರುತಿಸಿದವರನ್ನೂ ಪಕ್ಷದ ಬಲಸಂವರ್ಧನೆಗಾಗಿ, ಜಾತೀಯ ವ್ಯವಸ್ಥೆಯ ಲೋಕಸತ್ತೆಯ ಚುನಾವಣೆಗಳಲ್ಲಿ ಚುನಾವಣೆಯ ಯಶಸ್ಸು ಗಳಿಸಲು ನೆರವಾಗಬಹುದೆಂಬ ಕಾರಣಕ್ಕಾಗಿ ಪಕ್ಷಕ್ಕೆ ಸ್ವಾಗತಿಸಿ ತಾವು ಭ್ರಷ್ಟ ರಹಿತರ ಪಕ್ಷ ಬೆಳೆಸುತ್ತೇವೆಂದು ಹೇಳುವ ವಿರೋಧಾಭಾಸವನ್ನೂ ನಾವು ಕಾಣುತ್ತಿದ್ದೇವೆ.

ನಮ್ಮ ದೇಶದ ಅಕ್ರಮ ವ್ಯವಹಾರಗಳ ಹಣದ ಮೊತ್ತವನ್ನು ಎರಡು ಲಕ್ಷ ಕೋಟಿಗಳ ಅಂದಾಜಿನಲ್ಲಿರಿಸಲಾಗಿದೆ. ಇದನ್ನೇ ನಾವು ಕಪ್ಪು ಹಣವೆಂದು ಬಣ್ಣ ಕೊಟ್ಟು ಹೆಸರಿಸುತ್ತಿರುವುದು. ಇದು ಅಕ್ರಮ ವ್ಯವಹಾರದಿಂದ ಉದ್ಯಮ ನೀತಿಯಲ್ಲಿ ಸಂಪಾದಿಸಿರುವ ಕಪ್ಪು ಹಣವೇ ಅಥವಾ ನಮ್ಮ ಜನಜೀವನದಲ್ಲಿ 'ಲಂಚ' ಸಂಪಾದನೆಯಾಗಿ ಸಾರ್ವಜನಿಕರಲ್ಲಿ ಸೇರಿಕೊಂಡಿರುವ ಹಣವೂ ಕೂಡಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ಏನಿದ್ದರೂ ಈ ಹಣ ನಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಮಾಡುತ್ತಿರುವ ದುಷ್ಪರಿಣಾಮಗಳು ಅಷ್ಟಿಷ್ಟಲ್ಲ. ಅರ್ಥಶಾಸ್ತ್ರದ ಮುಖ್ಯ ಸೂತ್ರಗಳನ್ನು ಕದಡಿಸುವಷ್ಟು ಈ ಹಣ ಪ್ರಭಾವಕಾರಿಯಾಗಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಪೂರೈಕೆ ಇವುಗಳ ಸಂಬಂಧವನ್ನು ಕೆಡಿಸಲು ಇದು ಸಹಾಯ ಮಾಡುತ್ತದೆ. ಕಪ್ಪು ಹಣವನ್ನು ಬ್ಯಾಂಕಿನಲ್ಲಿರಿಸಲು, – ಅದು ಬೇಕಾದರೆ ಬೇನಾಮಿಯೇ ಇರಲಿ – ಹೆದರುವ ಜನ, ಅದನ್ನು ಅವಶ್ಯಕ ಅನಾವಶ್ಯಕ ಖರ್ಚುಗಳಿಗೆಲ್ಲ ಹೊಂದಿಸುವಾಗ ಬೆಲೆಗಳ ಸ್ವಾಭಾವಿಕ ನಿಯಂತ್ರಣ ಕದಡಿ ವಿಕೃತ ಆರ್ಥಿಕ ಪರಿಸ್ಥಿತಿಯನ್ನು ಉಂಟುಮಾಡುತ್ತದೆ. ಎಂಥದನ್ನೂ ಕೊಳ್ಳುವವರು ಕಪ್ಪು ಹಣದ ಹಿಡಿತವಿರುವ ಸಾಮಾನ್ಯ ಕಾರಕೂನರೂ ಇರುವರೆಂದಾಗುವಾಗ ಬೆಲೆಗಳು ಮಾರುಕಟ್ಟೆಯ ಸ್ಥಿತಿಯನ್ನವಲಂಬಿಸಿ ಏರಿಳಿತಗಳನ್ನು ಕಾಣುವ ಪರಿಸ್ಥಿತಿ ಬದಲಾಗುವುದಿದೆ. ಈ 50 ವರ್ಷಗಳಲ್ಲಿ ನಾವು ಕಾಣುವ ವರಮಾನಕ್ಕನುಗುಣವಲ್ಲದ ಸೊತ್ತು ಆಸ್ತಿಗಳನ್ನು ಹೊಂದಿರುವ ಅಧಿಕಾರಿಗಳು, ರಾಜಕಾರಣಿಗಳು, ಕೆಲವು ವೃತ್ತಿನಿರತರು ಇಂಥವರನ್ನೆಲ್ಲ ಗುರುತಿಸುವಂತಾದ ಸಮಾಜ ಜೀವನವೂ ಸಾರುವುದು ಸಾಮಾಜಿಕ ನ್ಯಾಯವನ್ನಲ್ಲ; ರೋಗಿಷ್ಟ ಸಮಾಜವನ್ನ. ಪ್ರಾಮಾಣಿಕ ದರಿದ್ರರು ಇನ್ನಷ್ಟು ದರಿದ್ರರಾಗುವ ಅಪ್ರಾಮಾಣಿಕ ಧನಾರ್ಜನೆ ಮಾಡುತ್ತಿರುವವರು ಅತಿ ಶ್ರೀಮಂತರಾಗಿರುವ ವೈಚಿತ್ರ್ಯವನ್ನು. ಇದಕ್ಕೆ ಬೆಳೆಯುತ್ತಲೇ ಇರುವ ಗ್ರಾಹಕ ಸಂಸ್ಕೃತಿಯೂ ಪೋಷಣೆ ನೀಡುತ್ತಿದೆ ಎಂಬುದು ಬೇರೆಯೇ ಮಾತು.

ವಯಸ್ಕ ಮತದಾನ ಪದ್ಧತಿ, 90 ಕೋಟಿ ಜನಸಂಖ್ಯೆ, ಐದು ವರ್ಷಗಳಿಗೊಮ್ಮೆ ಚುನಾವಣೆಗಳು ಇವಿಷ್ಟರಿಂದಲೇ ಒಂದು ಪ್ರಜಾಪ್ರಭುತ್ವ ಯಶಸ್ವಿಯೆನಿಸುವುದಿಲ್ಲ. ಸಂಸ್ಕಾರಯುತ ನಾಗರಿಕ ಪ್ರಜ್ಞೆ, ರಾಷ್ಟ್ರದ ಕುರಿತ ಅಭಿಮಾನ, ಅಧಿಕಾರಿಗಳೇ

ನಿಯಂತ್ರಿಸದ ಸಮುದಾಯ ಜೀವನ ಇವು ಸಾಂಸ್ಕೃತಿಕ ಅನನ್ಯತೆಗೆ ನೆರವಾಗುವಂಥವು. ಪ್ರಜಾಪ್ರಭುತ್ವದ ಯಶಸ್ಸು ಅಧಿಕಾರದ ದಂಡ ಶಕ್ತಿಯನ್ನು ಅಪ್ರಾಮಾಣಿಕ ವ್ಯವಹಾರಗಳಿಗೆ ಬಳಸಿಕೊಂಡು ಸಾಮಾನ್ಯ ನಾಗರಿಕರನ್ನೂ ಕೆಣಕುತ್ತಲೇ ಇರುವ ಆಡಳಿತೆಯನ್ನಾಗಲೀ ಅಥವಾ ಇಂತಹ ಒತ್ತಡ ತರುವ ಇತರ ಶಕ್ತಿಗಳನ್ನಾಗಲೀ ನಿರ್ಭೀತಿಯಿಂದ ಇದಿರಿಸುವ ತಿಳಿವಳಿಕೆಯುಳ್ಳ ನಾಗರಿಕ ಪ್ರಜೆಯಲ್ಲಿದೆ. ನಾವು ನಮ್ಮ ಸ್ವಾತಂತ್ರ್ಯದ 50ನೆಯ ವರ್ಷದಲ್ಲಿ ನಾಡಿನ ಹಿರಿಯ ಚಿಂತಕರು, ಬುದ್ಧಿಜೀವಿಗಳು 'ನಾನು ಇಂದು ಭಾರತೀಯನೆಂದು ಕರೆಸಿಕೊಳ್ಳಲು ನಾಚಿಕೆ ಪಡುತ್ತೇನೆ' ಎನ್ನುವಂತಾದ ನಮ್ಮ ನಿತ್ಯ ಜೀವನದ ಅಪ್ರಾಮಾಣಿಕ ನಡೆವಳಿಕೆಗೆ 'ಲಂಚ' ಒಂದು ಪ್ರಮುಖ ಕಾರಣ. ಇದು ಲಂಚಕೋರರೂ ಲಂಚ ಕೊಟ್ಟು ಕೆಲಸ ಮಾಡಿಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವವರೂ, ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕಾದ ವಿಚಾರ.

ನಾವಿರೋದೇ ಹೀಗೆ

ಜನನಿಬಿಡ ಮುಂಬಯಿ ಮಹಾನಗರದಲ್ಲಿ ಶವ ದಹನವೂ ಒಂದು ಕಷ್ಟದ ಕಾಯಕ. ಶವದಹನಕ್ಕೂ 'ಕ್ಯೂ' ನಲ್ಲಿ ಮಲಗಿಸಿದ ಹತ್ತಾರು ಶವಗಳಿರುವಾಗ ಆ ಕೌಟುಂಬಿಕ ದುಃಖದ ಸನ್ನಿವೇಶದಲ್ಲೂ, ಚಿತಾಭಸ್ಮ ನಿಮಗೆ ಸರಿಯಾಗಿ ಬೇಗ ದೊರಕಬೇಕಾದರೆ ಶವದಹನದ ಕೆಲಸಗಾರನಿಗೂ ಲಂಚವೆನ್ನಿ, ಭಕ್ಷೀಸು ಎನ್ನಿ ಹಣ ಕೊಡದಿರಲಾಗುವುದಿಲ್ಲ. ಅಪಘಾತ, ಆತ್ಮಹತ್ಯೆ, ಕೊಲೆ ಮುಂತಾದ ಆಕಸ್ಮಿಕವೆನಿಸುವ ಸನ್ನಿವೇಶಗಳಲ್ಲಿ ಹತರಾದ ವ್ಯಕ್ತಿಗಳ ಶವಗಳನ್ನು ಸಂಸ್ಕಾರಕ್ಕಾಗಿ ಬಿಡಿಸಿಕೊಳ್ಳಬೇಕಾದಾಗ, ಆದಷ್ಟು ಶೀಘ್ರ ಕೆಲಸವಾಗಬೇಕಾದರೆ ದಾರಿ ತೋರಿಸುವುದು ಲಂಚವೇ. ಶವಾಗಾರದಲ್ಲಿ ಪರಿಚಯ ದೊರಕದೆ ಮಲಗಿರುವ ಶವಗಳನ್ನು ಪರಿಚಯಿಸಲು ಸಾಧ್ಯವೇ ಎಂಬ ನಿರೀಕ್ಷಣೆಗೂ ಕಾವಲುಗಾರನ ಕೈ ಬಿಸಿ ಮಾಡಬೇಕು. ಯಾಕೆ, ಇತ್ತೀಚೆಗೆ ದಿಲ್ಲಿಯ ಸಮೀಪ ಜರುಗಿದ ಸೌದಿ-ಕಜಕ್ ವಿಮಾನಗಳ ಢಿಕ್ಕಿಯಲ್ಲಿ ಮೃತರಾದ ಮುನ್ನೂರಕ್ಕೂ ಹೆಚ್ಚು ವ್ಯಕ್ತಿಗಳ ಶವಗಳಿಗೆ ಶವಪೆಟ್ಟಿಗೆ ದೊರಕಿಸಲೂ ನ್ಯಾಯಕ್ಕಿಂತ ಹೆಚ್ಚು ಬೆಲೆ ಬೇಡಿ ಆ ರೀತಿಯಲ್ಲೂ ಹೆಚ್ಚು ಹಣ ಸಂಪಾದಿಸ ಬಯಸುವ ಹಣ ಹದ್ದುಗಳು. ಯಾವುದೇ ಅಪಘಾತದ ಸ್ಥಳದಲ್ಲಿ ವಾರೀಸುದಾರರಿರದ ಅಸಹಾಯಕ ಪರಿಸ್ಥಿತಿಯಲ್ಲಿ ಸಿಕ್ಕಿದ್ದನ್ನು ದೋಚುವ ಅನಾಗರಿಕ ಪ್ರವೃತ್ತಿ ನಮ್ಮ ನಾಗರಿಕತೆಯ ಲಕ್ಷಣ.

ಕಾಲ ಕಾಲಕ್ಕೆ ನಾವು ನಮ್ಮ ಪತ್ರಿಕೆಗಳಲ್ಲಿ ಮಾರಾಟಕ್ಕೆ ಬಂದಿರುವ ಕೆಲವು ಔಷಧಿಗಳನ್ನು ಉಪಯೋಗಿಸಬಾರದೆನ್ನುವ ಔಷಧಿಗಳನ್ನು ತಯಾರಿಸುವವರ ಮೇಲ್ವಿಚಾರಣೆ ನಡೆಸುವ ಸರಕಾರದ ಅಧಿಕಾರಿಗಳ ಪ್ರಕಟಣೆಗಳನ್ನು ನೋಡುತ್ತಿರುತ್ತೇವೆ. ಕೆಲವು ಸಿದ್ಧ ಔಷಧಿಗಳು ಪರಿಣಾಮಕಾರಿಯಾಗುತ್ತಿಲ್ಲವೆಂಬ ಕಳವಳಕ್ಕೀಡಾದ ವೈದ್ಯರ ಅಸಹಾಯಕತೆಯನ್ನು ಗಮನಿಸುವಾಗ ಖೋಟಾ ನೋಟುಗಳನ್ನು ತಯಾರಿಸುವ ಜಾಲಗಳಂತೆ ಖೋಟಾ ಔಷಧಿಗಳನ್ನು ತಯಾರಿಸುವ ಜಾಲಗಳಿವೆಯೆಂಬುದನ್ನು ಮನಗಾಣುತ್ತೇವೆ. ರಸ್ತೆ ಅಪಘಾತಗಳಲ್ಲಿ ಪ್ರತಿದಿನ ಸಾವಿರಾರು ಮಂದಿ ಮೃತರಾಗುತ್ತಿದ್ದಾರೆ ಎಂಬುದನ್ನು ಓದುತ್ತಿರುತ್ತೇವೆ. ಸಾರಿಗೆ ನಿಯಂತ್ರಣದ ಅಧಿಕಾರಿಗಳಿಂದ ಲಂಚ ಕೊಟ್ಟು ವಾಹನ ಚಲಾಯಿಸಲು ಪರವಾನಗಿ ದೊರಕಿಸಿಕೊಳ್ಳುವುದು ದಳ್ಳಾಳಿಗಳ ಮೂಲಕ ಕಷ್ಟವಲ್ಲವೆಂಬುದನ್ನು ಮರೆಯುತ್ತೇವೆ. ರಸ್ತೆಯಲ್ಲಿ ಜರಗುವ ಅಪಘಾತಗಳಿಗೂ ಸಾರಿಗೆ ವ್ಯವಸ್ಥೆಯ ಅಪ್ರಾಮಾಣಿಕತೆಗೂ ಏನಾದರೂ ಸಂಬಂಧವಿದೆಯೇ ಎಂದು ಯೋಚಿಸುವುದಿಲ್ಲ. 'ಯಾರ ಜೀವ ಹೋದರೂ ಚಿಂತಿಲ್ಲ; ನಮ್ಮ ಬೊಕ್ಕಸ ತುಂಬುತ್ತಲೇ ಇರಬೇಕು' ಎನ್ನುವ ನೀತಿ ಸಾರ್ವತ್ರಿಕವಾಗಿರುವುದನ್ನು ಕಾಣುತ್ತೇವೆ. ಪ್ರಾಮಾಣಿಕತೆ ಅಯೋಗ್ಯರ ಲಕ್ಷಣವೆನ್ನುವ ತಿಳಿವಳಿಕೆ ಬೆಳೆಯುವಷ್ಟು ಸ್ವಾತಂತ್ರ್ಯದ 50

ವರ್ಷಗಳಲ್ಲಿ ಸಾಧಿಸಿದ ಪ್ರಗತಿ ವೈಯಕ್ತಿಕ ಸ್ವಾರ್ಥವೇ ಜೀವನ ಧರ್ಮ ಎಂದು ಸಾರುವಂತಾದ ಸಾವಿರ ನಿದರ್ಶನಗಳನ್ನು ನಾವು ನಮ್ಮ ದೈನಂದಿನ ಜೀವನದಲ್ಲಿ ಕಾಣುವಾಗ ನಮ್ಮಲ್ಲಿ ಸಮುದಾಯ ನಿಷ್ಠೆಯೂ ಇಲ್ಲ, ಕಾಯಕ ನಿಷ್ಠೆಯೂ ಇಲ್ಲ, ನಾವು ವರ್ತಮಾನದ 'ಐಷಾರಮ'ದ ಸ್ಥಿತಿಯನ್ನು ಬಯಸುವ (ಅ) ನಾಗರಿಕರು ಎಂದು ಹೇಳದೆ ವಿಧಿಯಿಲ್ಲ. ಇದಕ್ಕೆ ಸರಕಾರದ ರೀತಿ ನೀತಿಗಳೇ ಸಹಾಯ ಮಾಡುವ ಸಂದರ್ಭಗಳೇ ಹೆಚ್ಚಿರುವಾಗ, ಪ್ರಾಮಾಣಿಕತೆ ಎಲ್ಲ ಕಡೆ ಮಾಯವಾಗುತ್ತಿರುವಾಗ, 'ಲಂಚ'ದ ವಿಷವನ್ನು ನಾಗರಿಕ ಒತ್ತಾಯದಿಂದ ಸಹಿಸಲೇಬೇಕಾದ ವಿಷಕಂಠನಾಗಬೇಕಾಗುತ್ತದೆ. ಆತ ಪ್ರತಿಭಟಿಸುವ ಮಾತೇ ಇಲ್ಲವೆನ್ನುವಷ್ಟು ನಿರ್ವೀರ್ಯನಾಗುತ್ತಾನೆ.

ಸ್ವಾತಂತ್ರ್ಯಪೂರ್ವದ ಸಮುದಾಯ ನಿಷ್ಠೆಯ ಪರಿಕಲ್ಪನೆಗಳಿಗೂ, ಸ್ವಾತಂತ್ರ್ಯ ಬಂದ 50 ವರ್ಷಗಳ ನಂತರದ ಸಮುದಾಯದ ಕುರಿತ ಚಿಂತನೆಯ ಪರಿಕಲ್ಪನೆಗಳಿಗೂ ಬಹಳಷ್ಟು ಅಂತರವಿದೆಯೆಂದು ತಿಳಿಯದೆಯೇ ಇಂದಿನ, ಆರ್ಥಿಕ ಹಸಿವೇ ಪ್ರಧಾನವೆನಿಸುವ ವೈಯಕ್ತಿಕ ಹಾಗೂ ಕೌಟುಂಬಿಕ ಸ್ವಾರ್ಥವನ್ನು ವಿವೇಚಿಸಲಾಗುವುದಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿದ್ದ ವರ್ಗೀಕೃತ ಸಮಾಜ ಜೀವನದಲ್ಲಿ ನೀತಿಯ ಕುರಿತ ಪರಿಕಲ್ಪನೆಗಳು ಪ್ರಕಟವಾಗುತ್ತಿದ್ದುದು ಧರ್ಮದ ಅಥವಾ ಧಾರ್ಮಿಕ ಸಂಸ್ಕಾರಗಳ ಹಿನ್ನೆಲೆಯಲ್ಲಿ. ಬ್ರಿಟಿಷ್ ಆಡಳಿತೆಯಲ್ಲಾಗಲೀ, ದೇಶೀಯ ಸಂಸ್ಥಾನಗಳ ಆಡಳಿತೆಗಳಲ್ಲಾಗಲೀ 'ರಾಜ'ನ ಪರಮಾಧಿಕಾರದ ಭಯವಿದ್ದುದು ದೂರದಲ್ಲಿ. ಅದು ಸಹಜ, ಅನಿವಾರ್ಯವೆನ್ನುವ ತಿಳಿವಳಿಕೆಗೆ ಏಟು ಬಿದ್ದುದು ನಮ್ಮ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳು ಬದಲಾಗಿ ರಾಷ್ಟ್ರೀಯ ಜಾಗೃತಿ ಪ್ರಕಟವಾದಾಗ. ಜಾತಿ ವ್ಯವಸ್ಥೆಯ ಕಲಂಕವೆನಿಸಿರುವ ತಲೆ ತಲಾಂತರಗಳಿಂದ ಬಂದಿರುವ ಅಸ್ಪೃಶ್ಯತೆಗೆ ಸಂಬಂಧಿಸಿದ ಶೋಷಣೆಯ ಕುರಿತ ಚಿಂತನೆ ಆರಂಭವಾದುದೂ ಈ ಹಿನ್ನೆಲೆಯಲ್ಲಿ. ಅಷ್ಟರತನಕ ಕೆಲವು ತೀರ ಮಾನವೀಯವೆನಿಸುವ, ಸಮುದಾಯದ ಹಿತದ ಚಿಂತನೆಗೆ ಸಂಬಂಧಿಸಿದ, ಅನುಕಂಪವೇ ಪ್ರಧಾನವಾದ, ನೈತಿಕವೆನಿಸುವ ಕ್ರಿಯೆಗಳಿಗೂ ನಾವು ಕಾರಣ ಹುಡುಕುತ್ತಿದ್ದುದು ಧರ್ಮದ ಚೌಕಟ್ಟಿನಲ್ಲೆ. ಬಡತನ, ಶ್ರೀಮಂತಿಕೆ, ಜಾತಿ ವ್ಯವಸ್ಥೆಯೊಳಗೆ ಹುಟ್ಟು ಇವೆಲ್ಲಕ್ಕೂ 'ಕರ್ಮಫಲ'ವೆಂಬ ಧಾರ್ಮಿಕ ನಂಬಿಕೆಗಳಡಿಯಲ್ಲಿ ಸಮಾಧಾನ ತಂದುಕೊಳ್ಳುತ್ತಿದ್ದ ಜನಸಮುದಾಯಕ್ಕೆ ಸರ್ವ ಸಮಾನತೆಯ ರಾಷ್ಟ್ರೀಯವೆನಿಸುವ ಪರಿಕಲ್ಪನೆಗಳೊಡನೆ, ಆಧುನಿಕತೆಯೊಡನೆ ಮುಖಾಮುಖಿಯಾಗುವ ಸಂದರ್ಭ ಬಂದದ್ದು ಸ್ವಾತಂತ್ರ್ಯ ಹೋರಾಟದ ಗತಿ ತೀವ್ರವಾದ ಮೇಲೆ ಹಾಗೂ ಸ್ವಾತಂತ್ರ್ಯ ಬಂದ ಮೇಲೆ. ಹಿಂದೂ ಸಮಾಜದ ಜಾತಿ ವ್ಯವಸ್ಥೆಯ ಚೌಕಟ್ಟಿನಲ್ಲೂ ಅಸ್ಪೃಶ್ಯರೆನಿಸಿಕೊಳ್ಳುತ್ತಿದ್ದವರಿಂದ ಹಿಡಿದು ಸವರ್ಣೀಯರ ತನಕವೂ ಧಾರ್ಮಿಕವೆನಿಸುವ ನಂಬಿಕೆಗಳೇ ನೈತಿಕತೆಯ ಮಾನದಂಡವಾಗಿದ್ದವು. ಇವುಗಳಲ್ಲಿ ಕೆಲವು ಅಂಧಶ್ರದ್ಧೆಯಿಂದ ಪ್ರೇರಿತವಾಗಿರಬಹುದು. ಕೆಲವು ಸಾರ್ವಜನಿಕ ನಂಬಿಕೆಗಳ ಚೌಕಟ್ಟಿನಲ್ಲಿ ಬಂದಿದ್ದಿರಬಹುದು. ಪುರೋಹಿತಶಾಹಿಯ ಶೋಷಣೆಯೆಂದು ಇಂದು ತಿಳಿಯಲಾಗುವ ಕೆಲವು ಸನ್ನಿವೇಶಗಳೂ – ಉದಾ : ಪ್ರಶ್ನೆ ಕೇಳಿ ಮಾನಸಿಕ ಕ್ಲೇಶಗಳಿಗೆ

ಪರಿಹಾರ ಪಡೆಯಲಿಚ್ಛಿಸುವುದು, ಪೂಜೆ ಪುನಸ್ಕಾರಗಳಿಂದ ನೆಮ್ಮದಿ ಬರಬಹುದೆಂಬ ನಂಬಿಕೆ, ಅಂತರಾಳದ ಸಂವೇದನೆಯಲ್ಲಿ ತಾನೇನೋ ತಪ್ಪು ಮಾಡಿರಬಹುದು, ಅದಕ್ಕಾಗಿ ಮುನಿದ ದೈವ ಕಾಡುವುದನ್ನು ಸಹಿಸಬೇಕಾಗುವುದು, ತನ್ನೆಲ್ಲ ಆರ್ಥಿಕ ಮತ್ತು ಇನ್ನಿತರ ಬವಣೆಗಳಿಗೆ ದೈವದ ಕೋಪ ಕಾರಣವಿರಬಹುದು ಎಂಬ ತಿಳಿವಳಿಕೆ ವರ್ಗೀಕೃತ ಜಾತಿ ವ್ಯವಸ್ಥೆಯಲ್ಲೂ ಸಾರ್ವತ್ರಿಕವಾಗಿತ್ತು. ಬುಡಕಟ್ಟು ಜನಾಂಗಗಳ ನಂಬಿಕೆಗಳಲ್ಲೂ ಒಂದಲ್ಲ ಒಂದು ರೀತಿಯ 'ದೈವ'ದ ಕುರಿತ ಚಿಂತನೆ ವೈಚಾರಿಕವೆನಿಸುವಂತಿದ್ದು ಆಧುನಿಕತೆಯೊಡನೆ ವೈಜ್ಞಾನಿಕವೆನಿಸುವ ತಿಳಿವಳಿಕೆಗಳೊಡನೆ ಮುಖಾಮುಖಿಯಾಗಲು ತುಂಬ ಕಾಯಬೇಕಾಗಿತ್ತು. ಬ್ರಿಟಿಷ್ ಆಡಳಿತೆ, ಇಂಗ್ಲೀಷಿನ ಜ್ಞಾನ, ತುಸು ತುಸುವೆ ವೈಜ್ಞಾನಿಕವೆನಿಸುವ ಚಿಂತನೆ, ಶಿಕ್ಷಣ ಪಡೆದ ಜನ ಸಮುದಾಯದಲ್ಲಿ ಮನುಷ್ಯನ ಕರ್ತೃತ್ವಶಕ್ತಿಯ ಬಗ್ಗೆ ತಿಳಿವಳಿಕೆ ಬೆಳೆಸತೊಡಗಿದರೂ ಆಧುನಿಕತೆಯಿಂದ ಪ್ರಭಾವಿತವಾದ ಶಿಕ್ಷಣದ ಸಂಸ್ಕಾರ ಸುಲಭವಾಗಿ ಎಲ್ಲರಿಗೂ ದೊರಕುವ ಕಾಲ ಆದಾಗಿರಲಿಲ್ಲ.

ಧಾರ್ಮಿಕ ನಂಬಿಕೆಗಳ 'ಪಾಪ ಪುಣ್ಯ'ಗಳ ತಿಳಿವಳಿಕೆಯ ಹಿನ್ನೆಲೆಯಲ್ಲಾದರೂ ಜಾತಿ ವ್ಯವಸ್ಥೆಯ ಮಿತಿಗಳನ್ನು ಮೀರುವ ಅನುಕಂಪ ಪ್ರಧಾನವೆನಿಸಿದರೂ ಸಮುದಾಯ ನಿಷ್ಠೆಯನ್ನು ಪ್ರದರ್ಶಿಸುವ ಕೆಲವು ರೀತಿ ನೀತಿಗಳು ಮಾನವೀಯವೆನಿಸುವ ನೈತಿಕತೆಯನ್ನು ನೆನಪಿಗೆ ತರುವಂಥವೂ ಆಗಿವೆ. ಸಂಚಾರ ಸೌಲಭ್ಯಗಳು ಕಡಿಮೆಯಿದ್ದ ದಿನಗಳಲ್ಲಿ ಪಥಿಕರಿಗೆ ನೆರಳಿನ ಆಶ್ರಯವಿರಲಿ ಎಂದು ಸಾಲುಮರಗಳನ್ನು ಬೆಳೆಸುವುದು, ಬಾಯಾರಿದ ಪ್ರಾಣಿಗಳಿಗೆ, ಮುಖ್ಯವಾಗಿ ಗೋವುಗಳಿಗೆ ನೀರು ಒದಗಿಸಲು ಅರವಟ್ಟಿಗೆಗಳನ್ನು ಕಟ್ಟಿಸುವುದು, ದಾರಿಹೋಕರಿಗೆ ಆಶ್ರಯ ಬೇಕೆನಿಸಿದಾಗ ನೀರು, ಅನ್ನ, ಮಲಗಲು ಆಶ್ರಯ ಇವನ್ನೆಲ್ಲ ಒದಗಿಸುವುದು ಪರಿಸರ ಪ್ರಜ್ಞೆಯೆಂದು ಇಂದು ಗುರುತಿಸಬಹುದಾದ, ಅಶ್ವತ್ಥ ಮೊದಲಾದ ಕೆಲವು ಉಪಯುಕ್ತ ವೃಕ್ಷಗಳನ್ನು ಕಡಿಯದಿರುವ ನಂಬಿಕೆ ಬೆಳೆಸಿಕೊಳ್ಳುವುದು, ಹಳ್ಳಿಗಳ ಜನಜೀವನದಲ್ಲಿ ಯಾವ ಸಮಾರಂಭವೇ ಇರಲಿ, ಒಂದಲ್ಲ ಒಂದು ರೀತಿಯಿಂದ ಜಾತಿ ವ್ಯವಸ್ಥೆಯನ್ನೂ ಮರೆತು ಸಹಕರಿಸುವುದು ಇವೆಲ್ಲ ಸಮುದಾಯನಿಷ್ಠೆಯ ಸಂಕೇತಗಳೆಂದು ಹೇಳಬಹುದಾದರೂ ಇದರಲ್ಲಿ ಬೆರೆತು ಬಾಳುವ ಸಹಕಾರ ನೀತಿ ಸಮುದಾಯದ ಹಿತಕ್ಕೆ ಅಗತ್ಯವೆಂಬ ಮಾನವೀಯವೆನಿಸುವ ತಿಳಿವಳಿಕೆ, ಪರೋಪಕಾರ ಧಾರ್ಮಿಕ ನಂಬಿಕೆಗಳ ಹಿನ್ನೆಲೆಯ 'ಪುಣ್ಯ' ಫಲಕ್ಕೆ ಸಹಕಾರಿ ಎಂಬ ತಿಳಿವಳಿಕೆ ಎರಡೂ ಕಾರಣವಾಗಿದ್ದವು. ಭಾರತದ ಹಳ್ಳಿಗಳಲ್ಲಿ ದೊರಕುವ ಆತಿಥ್ಯ, ಪ್ರೀತಿಯ ಸ್ವಾಗತ, ಸ್ವಂತ ಸೌಕರ್ಯವನ್ನು ಕಡೆಗಣಿಸಿಯೂ ಮಾಡುವ ಅತಿಥಿ ಸತ್ಕಾರ, ಇವುಗಳ ಬಗ್ಗೆ ಬರೆಯದ ವಿದೇಶೀ ಪ್ರವಾಸಿಗರಿಲ್ಲ. ಇಂತಹ ಜೀವನಕ್ರಮ ಆಧುನಿಕತೆಯೊಂದಿಗೆ ಮುಖಾಮುಖಿಯಾಗತೊಡಗಿದ್ದು ನಗರೀಕರಣದ ಪ್ರಕ್ರಿಯೆ ವೇಗ ಪಡೆದುಕೊಂಡ ನಂತರವೇ. ಈ ಆಧುನಿಕತೆಯ ಹಿನ್ನೆಲೆಯಲ್ಲೂ ಉದ್ಯೋಗಾವಕಾಶಗಳಿಗಾಗಿಯೂ ನಗರಗಳಿಗೆ ವಲಸೆ ಹೋಗುವ ಪರಿಪಾಠ ವೇಗ ಪಡೆದುಕೊಂಡ ಮೇಲೆ ಇದರಿಂದಾಗಿ ಜಂಟಿ ಕುಟುಂಬ ಪದ್ಧತಿಯೂ ಒಡೆಯತೊಡಗಿ, ಕೌಟುಂಬಿಕ ಚೌಕಟ್ಟಿನಿಂದ ಬಿಡುಗಡೆಯಿಂದಾಗಿ ಆ

ಚೌಕಟ್ಟಿನಲ್ಲಿ ಹರಡಿದ್ದ ನಂಬಿಕೆಗಳೂ ಸಡಿಲವಾದುದರಲ್ಲಿ ಆಶ್ಚರ್ಯವಿಲ್ಲ. ಆಧುನಿಕ ಶಿಕ್ಷಣ, ಆಧುನಿಕ ಜೀವನ ಕ್ರಮ ಪರಂಪರಾಗತ ನಂಬಿಕೆಗಳನ್ನು ಸಂಶಯದ ದೃಷ್ಟಿಯಿಂದ ನೋಡುವಂತಾದಾಗ ನಷ್ಟವಾದದ್ದು ಹಿಂದಿನ ಕುಟುಂಬ ಜೀವನದ ಪರಿಕಲ್ಪನೆಗಳಲ್ಲಿ ತೋರಿಬರುತ್ತಿದ್ದ ಧಾರ್ಮಿಕ ಹಿನ್ನೆಲೆಯ ನೈತಿಕತೆ. ಸ್ವಾತಂತ್ರ್ಯದ ಪರಿಕಲ್ಪನೆಗಳು, ಸಮಾನತೆಯ, ಜಾತಿ ವ್ಯವಸ್ಥೆಯಿಂದ ಹೊರತಾದ ಸಮಾನಾವಕಾಶಗಳ ಪರಿಕಲ್ಪನೆಗಳು ನಮ್ಮ ಎಲ್ಲ ನಂಬಿಕೆಗಳಲ್ಲಿ ನೈತಿಕತೆಯನ್ನೂ ಸಮುದಾಯ ನಿಷ್ಠೆಯನ್ನೂ ರೂಢಿಸುವ, ಯಾವುದು ಗ್ರಾಹ್ಯ, ಯಾವುದು ಸಮಾಜದ ಹಿತಕ್ಕೆ ಸಹಕಾರಿಯಾಗಿರದೆ ತ್ಯಾಜ್ಯ ಎನ್ನುವ ಪ್ರಬುದ್ಧ ತಿಳಿವಳಿಕೆಯನ್ನು ತಂದು ಆದರ್ಶ ಸಾಮಾಜಿಕ ವ್ಯವಸ್ಥೆಯನ್ನು ಉಂಟುಮಾಡಬಹುದಾದುದು ತುಂಬ ಕಷ್ಟದಿಂದ. ಇದರಿಂದಾಗಿ ಆದುದೇನು? ಧಾರ್ಮಿಕ ವರ್ಚಸ್ಸಿನ ನಂಬಿಕೆಗಳಿಗೆ ಇನ್ನೂ ನೆಚ್ಚಿಕೊಂಡಿರುವ ಹಳ್ಳಿಗರ ನೈತಿಕ ಪ್ರಜ್ಞೆ, ಸಹಕಾರ ಜೀವನ ಕ್ರಮ, ಸ್ನೇಹದ ಕೂಟ ಜೀವನ ಇವೆಲ್ಲ ಕರಗತೊಡಗಿದ್ದು ನಗರ ಜೀವನದ ಸಂಪರ್ಕ ತಂದ ಆಧುನಿಕತೆಯ ಸಂಸ್ಕಾರಗಳಿಂದ. ಜಾತಿ ವ್ಯವಸ್ಥೆಯಿಂದ ಬಿಡಿಸಿಕೊಳ್ಳಬೇಕಾದದ್ದು ಸಮಾನಾವಕಾಶಗಳ ಪ್ರಜಾಪ್ರಭುತ್ವದಲ್ಲಿ ಅನಿವಾರ್ಯ ವಾದರೂ, ಇದಕ್ಕೆ ಅನುಕೂಲವಾಗಬಹುದಾಗಿದ್ದ, ತಿಳಿವಳಿಕೆಯಿಂದ ನಮ್ಮ ಸಮಾಜ ಜೀವನದಲ್ಲಿರುವ ಬಿರುಕುಗಳನ್ನೂ, ಸಹಕಾರದ ಸಾರ್ವಜನಿಕ ಹಿತದ ಅಂಶಗಳನ್ನೂ ತೂಗಿ ನೋಡುವ ಸಂಸ್ಕಾರವನ್ನು ಬೆಳೆಸಬಹುದಾಗಿದ್ದ ಶಿಕ್ಷಣ ವ್ಯವಸ್ಥೆಯನ್ನು ನಾವು ಕಳೆದ 50 ವರ್ಷಗಳಲ್ಲೂ ರೂಢಿಸಿಕೊಳ್ಳಲು ಸಾಧ್ಯವಾಗದೆ ಭಾರತದ ನಾಗರೀಕರಿಗೆ 'ವೋಟು' ಹಾಕುವ 5 ವರ್ಷಗಳ ಚುನಾವಣೆಯ ಒಂದು ಕಾರ್ಯಕ್ರಮದ ಹೊರತಾಗಿ, ಪ್ರಜಾಪ್ರಭುತ್ವಕ್ಕಾಗಲೀ, ಸಮಾನತೆಗಾಗಲೀ ನಿಷ್ಠೆಯನ್ನು ನೈತಿಕ ಹಿನ್ನೆಲೆಯಲ್ಲಿ ಪ್ರಚೋದಿಸುವ ಸಾಮಾಜಿಕ ಸಂದರ್ಭ ಬಂದಿಲ್ಲ. ತಾರತಮ್ಯದ ಜಾತಿ ವ್ಯವಸ್ಥೆ, ಅದರ ಹಿನ್ನೆಲೆಯಲ್ಲಿ ರೂಢಿಸಿಕೊಂಡ ಸಾಮಾಜಿಕ ಮೌಲ್ಯಗಳು ಹಾಗೂ ಆಧುನಿಕ ಜೀವನಕ್ರಮ ತರುತ್ತಿರುವ ತಿಳಿವಳಿಕೆಯ ಹಿನ್ನೆಲೆಯಲ್ಲಿ ಪ್ರಕಟವಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಇವು ಸೆಣಸಾಡುತ್ತಿವೆ. ಹೀಗೆ ವ್ಯಕ್ತಿ ಒಳಗಾಗುವ ವೈಚಾರಿಕ ದ್ವಂದ್ವದಲ್ಲಿ ಎಲ್ಲ ರೀತಿಯ ನೈತಿಕ ಪ್ರಜ್ಞೆಗೂ ಮಾನವೀಯವೆನಿಸುವ ಸಂಸ್ಕಾರಗಳೇ ಮೂಲವಾಗಿ ಸಾಮಾಜಿಕ ಮೌಲ್ಯಗಳು ನಿರ್ಧಾರವಾಗಬೇಕು ಎನ್ನುವ ತಿಳಿವಳಿಕೆ ಕಷ್ಟವಾಗುತ್ತಿದೆ. ಇದರಿಂದಾಗಿ ಧರ್ಮದ ಕುರಿತು ಆತನಿಗಿರುವ ನಂಬಿಕೆ ಸಡಿಲಾದರೂ ಸಂಪ್ರದಾಯಗಳ ಕುರಿತ ನಂಬಿಕೆ ಹೆಚ್ಚುತ್ತಿರುವ ವಿರೋಧಾಭಾಸವನ್ನೂ ನಾವು ಕಾಣುತ್ತೇವೆ. ಬರೇ ಧಾರ್ಮಿಕವೆನಿಸುವ ಸಂಪ್ರದಾಯಗಳು ತಮಗೆ ರಕ್ಷೆಯೆಂದು ತಿಳಿದು, ತೆಂಗಿನಕಾಯಿ ಒಡೆದು ಕೆಲಸವಾರಂಭಿಸುವುದು, ಉದ್ಯಮದಲ್ಲಿ ತೊಡಗುವ ಮೊದಲು ಪೂಜೆಯ ಕಾರ್ಯಕ್ರಮ ಏರ್ಪಡಿಸುವುದು, ತಾವು ವ್ಯವಹಾರಕ್ಕಾಗಿ ನಡೆಸುವ ವಾಹನಗಳಲ್ಲಿ ದೇವರ ಹೆಸರನ್ನು ದೊಡ್ಡ ಅಕ್ಷರಗಳಲ್ಲಿ ಬರೆಸುವುದು ಇಂಥವೆಲ್ಲ ಹೆಚ್ಚಾಗಿ ಅಂಧಶ್ರದ್ಧೆಯಿಂದ ಕೂಡಿದ ವರ್ತನೆಗಳು ತಮಗೆ ರಕ್ಷೆಯೆಂದು ತಿಳಿದು ನಂತರ ಸಾಮೂಹಿಕ ಹಿತದ ಪರಿಕಲ್ಪನೆಯೇ ಇರದಂತಹ, ಮೋಸ, ವಂಚನೆ, ಭ್ರಷ್ಟಾಚಾರ

ಇವುಗಳಿಂದ ಎಷ್ಟು ಸಾಧ್ಯವೋ ಅಷ್ಟು ಧನಾರ್ಜನೆ ಗಳಿಸಬೇಕು ಎಂದು ತಮ್ಮ ನಡೆವಳಿಕೆಯನ್ನು ರೂಪಿಸಿಕೊಳ್ಳುವುದು. ಇಂಥ ವಿರೋಧಾಭಾಸಗಳನ್ನೂ ನಾವು ಇಂದು ಸಾಕಷ್ಟು ಪ್ರಮಾಣದಲ್ಲಿ ಕಾಣುತ್ತಿದ್ದೇವೆ. ಧನಾರ್ಜನೆಗೆ ನೈತಿಕತೆ ಪ್ರಶ್ನೆಯಾಗುವುದೇ ಇಲ್ಲವೆಂಬ ದುರಂತವನ್ನು ನಾವು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಾಣುತ್ತಿದ್ದೇವೆ. ಇಂದು ಮನುಷ್ಯ ಹೆಚ್ಚು ಸ್ವಾರ್ಥಿಯೂ, ತನ್ನ ಹಾಗೂ ತನ್ನವರ ಹಿತದ ಸೀಮಿತ ಚೌಕಟ್ಟಿನಲ್ಲಿ ಜೀವನ ವಿಮರ್ಶೆಗೆ ತೊಡಗಿದಂಥವನೂ ಆಗಿರುವುದನ್ನು ಕಾಣುತ್ತೇವೆ. ಈ ಸ್ಥಿತಿಗೆ ನಮ್ಮ ಸ್ವಾತಂತ್ರ್ಯವೊಂದೇ ಕಾರಣವಲ್ಲ ವೆನ್ನುವುದು ನಿಜವಾದರೂ, ಇಂದು ಒಂದು ಲೋಕಸತ್ತಾತ್ಮಕ ಆಡಳಿತೆಯನ್ನು ಅದರ ನಿಜವಾದ ಅರ್ಥದಲ್ಲಿ ನಡೆಸಿಕೊಂಡು ಹೋಗಲು ಇರಬೇಕಾದ ರಾಷ್ಟ್ರೀಯ ಪ್ರಜ್ಞೆಯ ಸಾಂಸ್ಕೃತಿಕ ಅಸ್ಮಿತೆಗೆ ಪರ್ಯಾಯವೆನಿಸುವಂತೆ ನಾವು ಕಾಣುತ್ತಿರುವ 'ಹಿಂದುತ್ವ'ದ ಪರಿಕಲ್ಪನೆಗಳು, ಧರ್ಮನಿರಪೇಕ್ಷತೆಯ ಪರಿಕಲ್ಪನೆಗಳು, ಅಲ್ಪಸಂಖ್ಯಾತರ ಹಿತವನ್ನಷ್ಟೆ ಗಮನದಲ್ಲಿರಿಸಿಕೊಂಡಂಥ ಸಮಾಜವಾದದ ಪರಿಕಲ್ಪನೆಗಳು, ಜತೆಗೇ ನಮ್ಮ ವೈಯಕ್ತಿಕ ಜೀವನದ ಮೇಲೂ ಸಾಮಾಜಿಕ ಜೀವನದ ಮೇಲೂ ಬರುತ್ತಲೇ ಇರುವ ಬದಲಾವಣೆಯ, ನೈತಿಕತೆಯೆಂಬುದೇ ಭ್ರಮೆ, ಶ್ರೀಮಂತಿಕೆಯ ಆದರ್ಶವೊಂದೇ ಸತ್ಯ ಎಂದು ತೋರುವಂತಹ ಸಾಮಾಜಿಕ ಒತ್ತಡಗಳು, ಅಧ್ಯಯನ ಯೋಗ್ಯವೆನಿಸುವಂಥವು.

ರಾಜಾರಾಮ ಮೋಹನರಾಯ್‌ಯಂಥವರಿಂದಲೇ ಆರಂಭವಾದ ಹಿಂದೂ ಸಮಾಜದ ಸ್ವವಿಮರ್ಶೆ, ಬ್ರಹ್ಮಸಮಾಜ, ಆರ್ಯಸಮಾಜ, ಚಳವಳಗಳಿಂದ ತೊಡಗಿ ಹಲವಾರು ಪರಿವರ್ತನೆಯ ಕವಲುಗಳು ಬಂದಿರುವುದನ್ನೂ, ಇವು ಚಿಂತನಶೀಲ ವ್ಯಕ್ತಿಗಳನ್ನೂ ಪ್ರಭಾವಿಸಿರುವುದನ್ನು ನಾವು ನಮ್ಮ ಇತಿಹಾಸದುದ್ದಕ್ಕೂ ಕಾಣುತ್ತೇವೆ. ತೀಕ್ಷ್ಣ ರಾಜಕೀಯ ಪ್ರಜ್ಞೆ ಹಾಗೂ ಆಧ್ಯಾತ್ಮಿಕ ಅನುಭೂತಿಯ ಸಮನ್ವಯದ ಅರವಿಂದ ದರ್ಶನವಾಗಲಿ ರಮಣ ಮಹರ್ಷಿಯವರ ಆಧ್ಯಾತ್ಮಿಕ ಅಂತರ್ಮುಖತೆಯಾಗಲೀ, ಧರ್ಮದ ಚೌಕಟ್ಟಿನಲ್ಲಿ ಚಿಂತನಶೀಲ ವ್ಯಕ್ತಿಗಳನ್ನೂ, ಸಮುದಾಯಗಳನ್ನೂ ಆಕರ್ಷಿಸಿ ದುದರಲ್ಲಿ ಆಶ್ಚರ್ಯವೇನೂ ಇಲ್ಲವಾದರೂ, ಸ್ವಲ್ಪ ವಿಶಾಲವೆನಿಸುವ, ಹಾಗೂ ಸಂಯಮದೃಷ್ಟಿಯ ಪರಿಕಲ್ಪನೆಗಳಿಂದ ಕೂಡಿದ, ಇತರ ಧರ್ಮಗಳಂತೆ ಭಯವನ್ನು ಪ್ರಚೋದಿಸುವ ಧಾರ್ಮಿಕ ದಂಡಸಂಹಿತೆಯ ಭಯ ಅಷ್ಟಾಗಿ ಇರದ ಹಿಂದೂ ಸಮುದಾಯಗಳಲ್ಲಿ ಆಧುನಿಕತೆಯೊಂದಿಗೆ ಮುಖಾಮುಖಿಯಾಗಲೇಬೇಕಾದ ಸಂದರ್ಭದಲ್ಲಿ ಹಿಂದಿನ ಧಾರ್ಮಿಕ ಪರಿಕಲ್ಪನೆಗಳ ಹಿಂದೆ ಇರುವ ಕೆಲವು ಮಾನವೀಯ ವೆನಿಸಬಹುದಾದ ನೈತಿಕ ಮೌಲ್ಯಗಳೂ ಸಡಿಲವಾದುದಷ್ಟೇ ಅಲ್ಲ, ನಷ್ಟವಾದುದನ್ನೂ ನಾವು ಕಾಣುತ್ತೇವೆ. ಮೊದಲೇ ಆರಾಧನಾ ವಿಧಾನಗಳಲ್ಲಿ ಯಾವ ಕಟ್ಟುನಿಟ್ಟಿನ ನಿಯಮಗಳೂ ಇರದ ಹಿಂದೂ ಸಮಾಜ ಜೀವನದಲ್ಲಿ ಜಾತಿ ವ್ಯವಸ್ಥೆಯ ತಾರತಮ್ಯ ಜೀವನ ಹಾಗೂ ಪುರೋಹಿತ ಮನೋವೃತ್ತಿಯ ಶೋಷಣೆ ಇವು ಆಧುನಿಕ ಸಮುದಾಯ ಜೀವನ ನೆಚ್ಚಿಕೊಳ್ಳುವ ಮೌಲ್ಯಗಳಿಗೆ ಹೊಂದಿಕೊಳ್ಳುತ್ತಿಲ್ಲವೆಂಬ ತಿಳಿವಳಿಕೆ ಶಿಕ್ಷಣದ ಸಂಸ್ಕಾರ ಪಡೆದ ಜನಸಮುದಾಯಗಳಲ್ಲಿ ಬೆಳೆಯತೊಡಗಿದಾಗ ಹಿಂದೆ

ಹೇಳಿದಂತೆ ಧಾರ್ಮಿಕ ನಂಬಿಕೆಗಳ ಹಿಂದೆ ಇದ್ದ ನೈತಿಕವೆನಿಸಬಹುದಾದ ಸಂವೇದನೆಗಳೂ ಕರಗತೊಡಗಿ, ಮೊದಲೇ ಜಂಟಿ ಕುಟುಂಬ ವ್ಯವಸ್ಥೆಯಿಂದ ಬಿಡುಗಡೆ ಪಡೆಯತೊಡಗಿರುವ ಜನ ಹೆಚ್ಚು ಹೆಚ್ಚು ವೈಯಕ್ತಿಕ ಹಾಗೂ ತನ್ನ ಸೀಮಿತ ಪರಿವಾರದ ಕೌಟುಂಬಿಕ ಸ್ವಾರ್ಥಕ್ಕೂ ಮನ್ನಣೆ ಕೊಡುತ್ತ ಬಂದಿರುವುದನ್ನೂ ನಾವು ಕಾಣಬಹುದು. ಇನ್ನು ಧಾರ್ಮಿಕ ವ್ಯವಸ್ಥೆಯೊಳಗೆ ಧರ್ಮಪೀಠಗಳೂ ಆಧುನಿಕತೆ ತರುತ್ತಿರುವ ವೈಚಾರಿಕ ಪರಿಕಲ್ಪನೆಗಳೊಂದಿಗೆ ಮುಖಾಮುಖಿಯಾಗಬೇಕಾದ ಪರಿಸ್ಥಿತಿಯಿಂದ ದೂರವಾಗಿಲ್ಲ. ಅವು ಕೂಡ, ಹಿಂದಿನಂತೆ ಧರ್ಮಕ್ಕೆ ಸಂಬಂಧಿಸಿದ ಭಯದಿಂದ ತಮ್ಮ ಹಿಡಿತದಲ್ಲಿದ್ದ ಜನಸಮುದಾಯ ಆಧುನಿಕತೆಯ ಹಾಗೂ ಸರ್ವಸಮಾನತೆಯ ಪರಿಕಲ್ಪನೆಗಳಿಂದ ಪ್ರಭಾವಿತರಾಗಿ ಈ ಪೀಠಗಳ ವರ್ಚಸ್ಸಿನಿಂದ ದೂರ ಸರಿಯುತ್ತಿರುವ ಅನಿವಾರ್ಯ ಪರಿಸ್ಥಿತಿಯನ್ನು ಇದಿರಿಸಬೇಕಾಗಿ ಬಂದಿರುವ ಕಾರಣ, ತಮ್ಮ ಹಿಡಿತವನ್ನು ಸಾಧ್ಯವಾದಷ್ಟು ಬಲಪಡಿಸಲು, ಆಧುನಿಕತೆಯ ಸಂಸ್ಕಾರಗಳೆನಿಸುವ ಶಿಕ್ಷಣ, ಧರ್ಮದ ವಿಧಿ ನಿಷೇಧಗಳಿಂದ ಹೊರತಾದ ಸಾಮಾಜಿಕ ಚಿಂತನೆ ಇವುಗಳಲ್ಲಿ ತೊಡಗಿರುವುದನ್ನೂ ಕಾಣುತ್ತೇವೆ.

ಮೇಲೆ ಹೇಳಿದಂತೆ ಧರ್ಮದ ಕಟ್ಟುಪಾಡುಗಳು ಸಡಿಲವಾದರೂ, ತಮ್ಮ ನಂಬಿಕೆಗಳನ್ನು ಆಧುನಿಕತೆಯ, ಸ್ವಾತಂತ್ರ್ಯದ ಸರ್ವ ಸಮಾನತೆಯ ಪರಿಕಲ್ಪನೆಗಳಿಗೆ ಹೊಂದಿಸುವುದು ಕಷ್ಟವೆನಿಸಿದರೂ, ತಮ್ಮ ಇಷ್ಟಾರ್ಥ ಸಿದ್ಧಿಗಾಗಿ, ಮಾನಸಿಕ ಹಾಗೂ ಸಾಂಸಾರಿಕ ಕ್ಲೇಶಗಳಿಗೆ ಪರಿಹಾರ ಕಂಡುಕೊಳ್ಳಲು ಜಗತ್ತಿನ ವ್ಯವಹಾರವನ್ನು ನಿಯಂತ್ರಿಸುವ ಸರ್ವಶಕ್ತ ಅಧಿಕಾರವೊಂದಿದೆ ಎಂಬ ತಿಳಿವಳಿಕೆಯಿಂದ, ಅದನ್ನು ತಮ್ಮ ತಮ್ಮ ಧರ್ಮಗಳ ಮಿತಿಯಲ್ಲೇ ಹುಡುಕಬೇಕಾದ ಅನಿವಾರ್ಯತೆಯಿಂದಲೂ ಹಿಂದೂ ಜನ ಸಮುದಾಯ ಧಾರ್ಮಿಕ ವ್ಯವಸ್ಥೆಯ ಭಯವನ್ನು ಕಡಿಮೆ ಮಾಡಿಕೊಂಡರೂ ಧಾರ್ಮಿಕ ಆಚರಣೆಗಳ ಕುರಿತ ಆದರವನ್ನು – ಸುಲಭ ಸಾಧ್ಯವಾದುದು – ಹೆಚ್ಚಿಸಿಕೊಳ್ಳುತ್ತಲೇ ಇರುವ ವಿರೋಧಾಭಾಸವನ್ನೂ ನಾವು ಕಾಣುವಂತಾಗಿದೆ. ಅಂತರ್ಮುಖತೆ ಭಾರತೀಯ ಜೀವನ ದೃಷ್ಟಿಯ ಒಂದು ಪ್ರಮುಖ ಅಂಶ. 'ನನ್ನನ್ನು ನಾನೇ ಉದ್ಧರಿಸಿಕೊಳ್ಳಬೇಕು' ಎಂಬ ಮಾತಿನ ಆಧ್ಯಾತ್ಮಿಕ ಹಿನ್ನೆಲೆ ಏನೇ ಇರಲಿ, ಸಮಷ್ಟಿಯ ಹಿತದ ಪರಿಕಲ್ಪನೆಗಳಿಂದ ದೂರವಾಗುವ ಮಾನಸಿಕ ಸ್ಥಿತಿ ರೂಪುಗೊಳ್ಳಲು ಮುಖ್ಯ ಕಾರಣಗಳು ಎರಡು: ವೈಚಾರಿಕ ತಿಳಿವಳಿಕೆ ಇರದ ಆಚಾರ ಶುಷ್ಕವೆನಿಸುವ ಯಾಂತ್ರಿಕ ವಿಧಿಯಾಗುತ್ತದೆ. ಇದು ಬರೇ ಹಿಂದೂ ಧರ್ಮಕ್ಕಷ್ಟೇ ಅಲ್ಲ, ವಿಶ್ವದ ಎಲ್ಲ ಧರ್ಮಗಳಿಗೂ ಅನ್ವಯಿಸುವ ಮಾತು. ಇದರ ಲಾಭ ಪಡೆಯುವುದು ತಮಗೆ ವೈಚಾರಿಕ ತಿಳಿವಳಿಕೆ ಇದೆಯೆಂದು ತಿಳಿದುಕೊಳ್ಳುವ ಅಥವಾ ಅಂತಹ ಮುಖವಾಡ ಧರಿಸುವ ಎಲ್ಲ ಧರ್ಮಗಳ ಪುರೋಹಿತ ವರ್ಗ. ಎರಡನೆಯ ಕಾರಣ: ಬದುಕಿನ ಸಂಕೀರ್ಣತೆ ಅಥವಾ ಆರ್ಥಿಕ ಮೂಲದ ಹತ್ತು ಹಲವು ಸಮಸ್ಯೆಗಳನ್ನು ಇದಿರಿಸಬೇಕಾದಾಗ ವ್ಯಕ್ತಿ ತನ್ನ ಎಲ್ಲ ಕಷ್ಟಗಳಿಗೆ ಪರಿಹಾರ ಕೊಡುವ ಅಮೂರ್ತ ಶಕ್ತಿ ಇದೆಯೆಂದು ಅದನ್ನು ತನ್ನ ನಂಬಿಕೆಯ ದೈವದಲ್ಲೇ ಕಾಣುವ ಅನಿವಾರ್ಯ ಪರಿಸ್ಥಿತಿಯಿಂದಾಗಿ ಆಚಾರಸಂಹಿತೆಯ ವಿಧಿ

ನಿಷೇಧಗಳಿಗೇ ಹೆಚ್ಚಾಗಿ ಶರಣು ಹೋಗುತ್ತಿರುವುದು. ಇದನ್ನು ಪುರೋಹಿತ ವರ್ಗ ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದೂ ಆಶ್ಚರ್ಯದ ಮಾತೇನಲ್ಲ. ಹಿಂದೂ ಸಮಾಜದ ಜಾತಿ ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ಸವರ್ಣೀಯರನ್ನು ಅನುಕರಿಸುವ ಪ್ರವೃತ್ತಿ ಇದ್ದುದರಿಂದ ಇದು ಶೋಷಣೆಯ ಮಾದರಿಯೆನಿಸುವಂತಾದುದರಲ್ಲೂ ಆಶ್ಚರ್ಯವಿಲ್ಲ. ಧರ್ಮದ ಚೌಕಟ್ಟಿನ ಆಚಾರ ಸಂಹಿತೆಗೆ ಹೆಚ್ಚಾಗಿ ಸಂಸ್ಕೃತವೇ ಪ್ರಧಾನ ಭಾಷೆಯಾಗಿರುವುದರಿಂದ, ಬ್ರಿಟಿಷರ ಆಡಳಿತೆ ಬಲವಾಗಿ ಮೆಕಾಲೆಯ ಶಿಕ್ಷಣ ನೀತಿ ತರಲಾರಂಭಿಸಿದ ಇಂಗ್ಲೀಷಿನ ಜ್ಞಾನ ಸಂಸ್ಕೃತದ ಪ್ರಾಬಲ್ಯ ಹಾಗೂ ಉಪಯುಕ್ತತೆಗಳನ್ನು ಕಡಿಮೆ ಮಾಡುವ ಪ್ರಕ್ರಿಯೆ ಆರಂಭವಾದ ಮೇಲೆ ಆಚಾರವೇ ವಿಚಾರ ಎಂಬ ಭ್ರಮೆ ಸಾರ್ವತ್ರಿಕವೆನಿಸುವ ಆಯಾಮ ಪಡೆದುಕೊಳ್ಳಲಾರಂಭಿಸಿದುದರಲ್ಲೂ ಆಶ್ಚರ್ಯವಿಲ್ಲ. ಜ್ಞಾನ ಅಥವಾ ಜ್ಞಾನದ ಮುಖವಾಡ ಅಜ್ಞಾನವನ್ನು ಶೋಷಿಸುವುದೂ ಇದೇ ಹಂತದಲ್ಲಿ. ಇತ್ತೀಚೆಗಿನ ವರ್ಷಗಳಲ್ಲಿ ಭಾರತದ ಆಧ್ಯಾತ್ಮಿಕತೆಯ ಮುಖವಾಡ ಎಂತಹ ದೇವಮಾನವರನ್ನು (Godmen) ಸೃಷ್ಟಿಸಿದೆಯೆಂಬುದನ್ನು ಅರಿಯದವರಿಲ್ಲ. ಈ ಲೇಖನಕ್ಕೆ ಈ ವಿಚಾರ ಅಷ್ಟು ಪ್ರಸ್ತುತವಲ್ಲವಾದರೂ ದೈವದ ಭಯವನ್ನೆ ಮುಖ್ಯ ಆಯುಧವಾಗಿರಿಸಿಕೊಂಡು ನಡೆಯುತ್ತಿರುವ ಅಜ್ಞಾನದ ಶೋಷಣೆ ಹೇಗೆ ಮುಂದುವರಿಯುತ್ತಿದೆ ಎಂದು ತೋರಿಸಲಷ್ಟೆ ಈ ಉದಾಹರಣೆ.

ಸ್ವಾತಂತ್ರ್ಯಪೂರ್ವದಲ್ಲಿದ್ದುದೂ ಧಾರ್ಮಿಕ ಚೌಕಟ್ಟಿನ ಒಂದು ರೀತಿಯ ಶೋಷಿತ ವ್ಯವಸ್ಥೆಯೇ. ಆದರೆ ಇಂತಹ ವ್ಯವಸ್ಥೆಯಲ್ಲೂ ಅಪ್ರಜ್ಞಾಪೂರ್ವಕವೆನಿಸುವ ತ್ಯಾಗ ಸಂಯಮಗಳು, ಪರೋಪಕಾರಕ್ಕೆ ನೈತಿಕ ಹಿನ್ನೆಲೆಯಿದೆ ಎಂಬ ತಿಳಿವಳಿಕೆ, ತಮ್ಮ ಕಷ್ಟ ಏನೇ ಇರಲಿ, ಇತರರ ಹಿತವನ್ನೂ ಗಮನದಲ್ಲಿರಿಸಿಕೊಳ್ಳಬೇಕು ಎಂಬರ್ಥದ ಸಮಷ್ಟಿ ನಿಷ್ಠೆಯನ್ನು ನಾವು ಕಾಣುತ್ತೇವೆ. ಕಾರಂತರ 'ಮರಳಿ ಮಣ್ಣಿಗೆ'ಯ ಕೆಲವು ಸ್ತ್ರೀ ಪಾತ್ರಗಳು, ಈ ಮಾತಿಗೆ ಪ್ರಭಾವಕಾರಿ ಉದಾಹರಣೆಗಳು. ಆದರೆ ಬ್ರಿಟಿಷರ ಆಡಳಿತೆ, ಇಂಗ್ಲೀಷಿನ ಜ್ಞಾನ ಇವು ಮೂಡಿಸುತ್ತ ಬಂದ ಪರಂಪರಾಗತ ನಂಬಿಕೆಗಳೊಡನೆ ಸಂಘರ್ಷ, ಈ ಹಿನ್ನೆಲೆಯಲ್ಲಿ ಮೇಲೆ ಹೇಳಿದಂತೆ ವಿಚಾರದ ಕಾವು ಕಡಿಮೆಯಾಗಿ ಆಚಾರವೇ ವಿಚಾರ ಎಂಬ ತಿಳಿವಳಿಕೆ ಬೆಳೆಯತೊಡಗಿದ ಮೇಲೆ ಈ ಆಚಾರಗಳಲ್ಲೆ ಬದುಕಿನ ದಾರಿ ಕಂಡುಕೊಳ್ಳಬೇಕಾಗಿದ್ದ ಪುರೋಹಿತ ವರ್ಗ ಅಜ್ಞಾನವನ್ನು ಶೋಷಿಸತೊಡಗಿದುದರಲ್ಲಿ ಆಶ್ಚರ್ಯವಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿದ್ದ ಸಾಮಾಜಿಕ ಪರಿಸ್ಥಿತಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬದಲಾಗಿ, ಹೆಚ್ಚಿದ ಸಂಚಾರ ಸೌಲಭ್ಯ, ರಾಜಕೀಯ ನೆಲೆಯಲ್ಲಿ ಭಿನ್ನ ಭಿನ್ನ ಗುಂಪುಗಳು ಏಕತ್ರ ಬರುವ ಪರಿಸ್ಥಿತಿ, ಇತರ ಭಾಷಿಕ, ಪ್ರಾಂತಗಳ ಜನರೊಡನೆ ರಾಜಕೀಯ ವ್ಯವಸ್ಥೆಯಿಂದಾಗಿಯೂ ಬೆರೆಯಲೇ ಬೇಕಾದ ಸಂಪರ್ಕ, ಆಧುನಿಕ ಜೀವನ ಕ್ರಮ ತಂದ, ತರುತ್ತಿರುವ ಸಾಮಾಜಿಕ ಪರಿವರ್ತನೆಗಳು, ಔದ್ಯೋಗೀಕರಣ, ನಗರ ಜೀವನ, ಒಂದು ರೀತಿಯ ಸ್ವಚ್ಛಂದತೆ ಬೆಳೆಯಲು ಕಾರಣವಾದ ಸ್ವಾತಂತ್ರ್ಯದ ಪರಿಕಲ್ಪನೆಗಳು, ಇವೆಲ್ಲ ಸೇರಿ ಧರ್ಮ ಬರೇ ಸಂಕೇತವಾಗಿ ಧಾರ್ಮಿಕ ಚೌಕಟ್ಟಿನ ಹೆಚ್ಚಾಗಿ ಅರ್ಥ ತಿಳಿಯದ ಅಥವಾ ತಿಳಿಯುವ

ಗೋಜಿಗೇ ಹೋಗದ ಸಂಸ್ಕಾರಗಳೇ ಜನಜೀವನವನ್ನು ಪ್ರಭಾವಿಸಿವೆ. ತನಗೆ ಮಾತ್ರ ತಿಳಿದಿದೆ – ದೇವರನ್ನು ಒಲಿಸುವ ವಿಧಾನ ಎಂದು ಅದಕ್ಕಾಗಿ ದಕ್ಷಿಣೆ ಬೇಡುವ ಪುರೋಹಿತರಂತೆಯೇ ಇಂದು ನಮ್ಮ ಸಾರ್ವಜನಿಕ ಜೀವನದ ಎಲ್ಲ ರಂಗಗಳಲ್ಲೂ 'ನಿಮ್ಮ ಕೆಲಸವಾಗಬೇಕಾದರೆ ನಮಗೆ ದಕ್ಷಿಣೆ ಕೊಡಿ' ಎಂಬ ಪ್ರವೃತ್ತಿ ಬೆಳೆದುದೂ ಅದೇ ರೀತಿಯಲ್ಲಿ. ಸಾಮೂಹಿಕವಾದ ಆರಾಧನಾ ಕೇಂದ್ರಗಳೂ ಬರೇ 'ಭಕ್ತಿ'ಯ ಪರಿಧಿಯನ್ನು ದಾಟಿದ ಇಷ್ಟಾರ್ಥ ಸಿದ್ಧಿಯನ್ನು ಬಯಸುವ ಕೇಂದ್ರಗಳಾಗಿರುವುದೂ, ನಮ್ಮ ಆಧುನಿಕ ಜೀವನಕ್ರಮದ 'ಸುಖ'ದ ಪರಿಕಲ್ಪನೆಗಳಿಗೆ ಅಥವಾ ಇಂಥ ಜೀವನಕ್ರಮ ತರುವ ಕಷ್ಟಕೋಟಲೆಗಳ ನಿವಾರಣೆಗೆ ಆಶ್ರಯ ಇಲ್ಲಿದೆಯೆಂದು. ಇವೆರಡಕ್ಕೂ ಮೂಲದಲ್ಲಿರುವುದು ಹೆಚ್ಚಾಗಿ ಆರ್ಥಿಕ ಮೂಲದ ಭದ್ರತೆ. ಎಲ್ಲ ಬೇಡುವುದೂ ಅಂತಹ ಸುಖ ಸೌಕರ್ಯಗಳನ್ನೆ. ಸಮಷ್ಟಿ ಜೀವನದ ಹಿತ ಗೌಣವಾಗಿ, ವೈಚಾರಿಕತೆಯನ್ನು ಆಶ್ರಯಿಸುವ ಮನೋಭಾವವನ್ನೂ ಕಳೆದುಕೊಂಡು ಸ್ವಂತ ಪರಿವಾರವಷ್ಟೆ ಮುಖ್ಯ ಎಂದು ತಿಳಿಯುವ ಅರ್ಥ ಪ್ರಧಾನವಾದ ಸಾಮಾಜಿಕ 'ನೈತಿಕತೆ' ಬೆಳೆಯತೊಡಗಿದುದು ಈ ಹಿನ್ನೆಲೆಯಲ್ಲಿ.

ಹಣವಿದ್ದರೆ ಎಂತಹ ಕೆಲಸವೂ ಸಾಧ್ಯವಾಗಬಹುದು ಎಂಬ ತಿಳಿವಳಿಕೆಯನ್ನು ಹೆಚ್ಚು ಹೆಚ್ಚು ಬೆಳೆಸತೊಡಗಿದ್ದು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ಸಾಮಾಜಿಕ ಜೀವನ ಪಡೆದುಕೊಂಡ ರಾಜಕೀಯ ವರ್ಚಸ್ಸಿನಿಂದಾಗಿ. ಸರ್ವ ಸಮಾನತೆಯ ಹಾಗೂ ಸಮಾನಾವಕಾಶಗಳ ಲೋಕಸತ್ತೆಯ ಆಡಳಿತೆಗೆ ಭದ್ರ ಬುನಾದಿಯನ್ನು ಹಾಕಬೇಕಾಗಿದ್ದ ನಾವು ಈ ಕೆಲಸದಲ್ಲಿ ಸೋತಿದ್ದೇವೆ. ಶಿಕ್ಷಣಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡದಿರುವುದೇ ಇದಕ್ಕೆ ಮುಖ್ಯ ಕಾರಣ. ಅಹಿಂಸೆಯಿಂದಲೇ ಸ್ವಾತಂತ್ರ್ಯವನ್ನು ಗಳಿಸಿದ್ದೇವೆ ಎಂದು ಸಾರುತ್ತಲೇ ಇರುವ ನಾವು ರಾಷ್ಟ್ರೀಯ ಸ್ತರದಲ್ಲಿ ಸ್ವಾತಂತ್ರ್ಯದ ಆದರ್ಶಕ್ಕಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಡೆದ (ಮುಖ್ಯವಾಗಿ, ಫ್ರಾನ್ಸ್ ಅಮೆರಿಕಾಗಳಲ್ಲಿ) ಯುದ್ಧಗಳಲ್ಲಿ ಸಾಮೂಹಿಕವಾಗಿ ಜನತೆ ಭಾಗವಹಿಸಿದ್ದ ನಿದರ್ಶನಗಳ ಸ್ಪಷ್ಟ ತಿಳಿವಳಿಕೆ ತಂದುಕೊಂಡಿಲ್ಲ. ನಮಗೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಆದ ಮಿಲಿಯಗಟ್ಟಲೆ ಜನರ ಸ್ಥಳಾಂತರ, ಕೋಮು ಗಲಭೆಗಳಲ್ಲಿ ನಡೆದ ನರಮೇಧ, ಐತಿಹಾಸಿಕ ಸಂಭವಗಳೆಂದಷ್ಟೆ ನೆನಪಿನಲ್ಲುಳಿದು ಯಾವ ಆದರ್ಶದ ಕುರಿತ ಚಿಂತನೆಗೂ ಕಾರಣವಾಗಲಿಲ್ಲವಾಗಿ ಈ ಉಪಖಂಡದ ಜನಾಂಗಿಕ ಪ್ರಜ್ಞೆಯನ್ನು ಕೆಣಕುವ, ಎಚ್ಚರಿಸುವ, ಹೊಸದಾದ ಆತ್ಮವಿಶ್ವಾಸವನ್ನು ಬೆಳೆಸುವ, ಕ್ರಿಯೆಗೆ ಕಾರಣವಾಗಲಿಲ್ಲ. ನಮ್ಮ 'ಕ್ವಿಟ್ ಇಂಡಿಯ ಚಳವಳ'ದಲ್ಲಿ ನಡೆದ ಸರಕಾರೀ ಕಚೇರಿಗಳ, ಅಂಚೆ ಕಚೇರಿಗಳ, ಟ್ರಾಂ, ಬಸ್ಸುಗಳನ್ನು ಸುಡುವ ಸಂಸ್ಕಾರ ಅಂದು ಸ್ವಾತಂತ್ರ್ಯದ ಹಂಬಲದಿಂದ ಎಂದು ಹೇಳಲಾಗುತ್ತಿದ್ದರೂ ಇಂದು ಸ್ವತಂತ್ರ ಭಾರತದಲ್ಲೂ ವಿರೋಧ ಪ್ರದರ್ಶನದ ಸಂಸ್ಕಾರವಾಗಿ ಉಳಿದಿರುವುದೇ ನಮ್ಮ ಲೋಕಸತ್ತೆಯ ಕುರಿತ ಅಜ್ಞಾನಕ್ಕೆ ಪ್ರಭಲ ಸಾಕ್ಷಿ. ಇಂತಹ ಚಟುವಟಿಕೆಗಳಿಂದ ಬರಿದಾಗುತ್ತಿರುವುದು ನಮ್ಮ ಪ್ರಜಾ ಪ್ರಭುತ್ವದ ಸರಕಾರದ ಬೊಕ್ಕಸವೇ. ಇದಲ್ಲದೆ ನಮ್ಮ ಸ್ವಾತಂತ್ರ್ಯದ ಪರಿಕಲ್ಪನೆಗಳೆಲ್ಲ

ಮುಖ್ಯವಾಗಿ ಅಧಿಕಾರವನ್ನು ಚಲಾಯಿಸುವ ಸರಕಾರವನ್ನು ರೂಪಿಸುವ ಚುನಾವಣೆಗಳ ಕಸರತ್ತಿಗಷ್ಟೆ ಸೀಮಿತವಾಗಿರುವುದರಿಂದ ಜಾತಿ ವ್ಯವಸ್ಥೆಯಿಂದ ಮೊದಲೇ ಕಲುಷಿತ ವಾಗಿರುವ ಸಮಾಜ ಸ್ವರೂಪದಲ್ಲಿ 'ವೋಟು'ಗಳ ಪ್ರಾಧಾನ್ಯದ ರಾಜಕಾರಣವೂ ಬೆರೆತು, ಎಲ್ಲ ಸಾಮೂಹಿಕ ಹಿತದ ಚಿಂತನೆಯೂ ಗುಂಪುಗಳಿಗೆ, ಜಾತಿ, ಉಪಜಾತಿಗಳಿಗೆ ಸೀಮಿತವಾಗಿ ರಾಷ್ಟ್ರೀಯವೆನಿಸುವ ಅಭಿಮಾನ ಮೂಡಲು ಅವಕಾಶವೇ ಇಲ್ಲವೆನ್ನು ವಂತಾಗಿದೆ. ಹೀಗಿದ್ದು, ಸರ್ವ ಸಮಾನತೆಯ ಆದರ್ಶದ (egalitarian) ಹಿಂದಿರುವ ನೈತಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಸಾಧ್ಯವಾಗಿಲ್ಲ.

ಹಾಗೆಂದು ಸ್ವಾತಂತ್ರ್ಯ ತಂದ ನಾಡಿನ ಬೆಳವಣಿಗೆಯ ಅವಕಾಶಗಳನ್ನು ಈ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾಗಿದೆ. ಎಷ್ಟೇ ಅಸಮರ್ಪಕವೆನಿಸಿದರೂ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚುತ್ತಲೇ ಬಂದ ಶಿಕ್ಷಣಾವಕಾಶಗಳು, ಹೆಚ್ಚತೊಡಗಿದ್ದ ಉದ್ಯಮಾ ವಕಾಶಗಳು, ತಾಂತ್ರಿಕ ಶಿಕ್ಷಣದ ಪರಿಣತಿಯಿಂದ ತೆರೆದುಕೊಳ್ಳತೊಡಗಿದ್ದ ಸ್ವಂತ ಪರಿಶ್ರಮದ ಉದ್ಯಮಾವಕಾಶಗಳು, ಇವೆಲ್ಲ ಆರ್ಥಿಕ ಸ್ವಾವಲಂಬನದ ಆಸೆಯನ್ನೂ, ಆರ್ಥಿಕ ಭದ್ರತೆಯ ನೆಮ್ಮದಿಯ ಜೀವನವನ್ನೂ ಉಂಟುಮಾಡುವ ಸೂಜಿಗಲ್ಲುಗಳೆನಿಸಿ ಉದ್ಯೋಗಾವಕಾಶಗಳು ದೊರಕುವ ನಗರಜೀವನ ಸುಖ ನೆಮ್ಮದಿಗಳನ್ನು ತರಬಲ್ಲುದು ಎಂಬ ತಿಳಿವಳಿಕೆ ಬೆಳೆಯುತ್ತಾ ಆರ್ಥಿಕ ನೆಮ್ಮದಿ ತರುವ ಆಕರ್ಷಣೆಗಳ ಕಡೆಗೇ ಗಮನಹರಿಸುತ್ತ ಸ್ವಂತ ಕೌಟುಂಬಿಕ ಪರಿವಾರವನ್ನಷ್ಟೆ ಭದ್ರಕೋಟೆಯಂತೆ ಕಾಯುವ ಮನೋವೃತ್ತಿಯನ್ನು ಬೆಳೆಸಿಕೊಂಡಿರುವುದನ್ನೂ ನಾವು ಕಾಣುತ್ತೇವೆ. ಪ್ರಾಮಾಣಿಕತೆ ಹಾಗೂ ನೈತಿಕ ಪ್ರಜ್ಞೆಯಿಂದ ಮಾಡುವ ಧನಾರ್ಜನೆ ಹಾಗೂ ಧನಾರ್ಜನೆಯ ಆಶಯವೇ ಮೂಲವಾಗಿ ಸ್ವಾರ್ಥದ ಪರಿಧಿಯಲ್ಲೆ ಸುತ್ತುತ್ತಿರಬೇಕಾದ ನೈತಿಕತೆ ಇವೆರಡರ ನಡುವಿನ ಅಂತರವನ್ನು ನಾವು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಚೆನ್ನಾಗಿ ಕಾಣುವಂತಾಗಿದೆ ಎಂಬುದಕ್ಕೆ ದೇಶದ ಕೋಟಿಗಟ್ಟಲೆ ಕಪ್ಪು ಹಣವೇ ಸಾಕ್ಷಿ.

ನಮ್ಮೆಲ್ಲ ಸಾಮಾಜಿಕ ಸ್ಥಿತಿಗತಿಗಳಿಗೆ ಸ್ಪಂದಿಸಲೇಬೇಕಾದ ಜನ ವರ್ಗವನ್ನು ನಾಲ್ಕು ನಿಟ್ಟಿನಿಂದ ನೋಡಬಹುದು. ಮೊದಲನೆಯದು ನಾವೇ ರೂಪಿಸಿಕೊಂಡಿರುವ 'ದಾರಿದ್ರ್ಯರೇಖೆ'ಯಿಂದ ಕೆಳಗಿರುವ ಕಡುಬಡವ ವರ್ಗ. ಇನ್ನೊಂದು ಶಿಕ್ಷಣಾವಕಾಶ ಗಳಿಂದ ವಂಚಿತರಾಗಿ ಬದಲಾಗುತ್ತಿರುವ ಹಳ್ಳಿಗಳಲ್ಲಿ ಸಾಧಾರಣ ತೃಪ್ತಿಯ ಜೀವನವೂ ಸಾಧ್ಯವಾಗುತ್ತಿಲ್ಲವೆನ್ನುವ ಬಡವರ ವರ್ಗ. ಇನ್ನೊಂದು ತುಸುವಾದರೂ ಶಿಕ್ಷಣದ ಸಂಸ್ಕಾರ ದೊರಕಿಸಿಕೊಂಡು ಪಟ್ಟಣಗಳತ್ತ ಹೆಚ್ಚು ಹೆಚ್ಚು ಆಕರ್ಷಿತರಾಗುತ್ತ ಆಧುನಿಕ ಜೀವನವನ್ನು ತಮ್ಮದಾಗಿಸಿಕೊಳ್ಳಬೇಕು ಎಂದು ತಮ್ಮ ಅಲ್ಪತೃಪ್ತಿಯ ಜೀವನದಲ್ಲೂ ವರ್ಗೋತ್ತಮ (elitist) ಆಶಯಗಳನ್ನು ಬೆಳೆಸಿಕೊಂಡು ರಾಷ್ಟ್ರ ವಾಹಿನಿಯಲ್ಲಿ ಸಾಮಾಜಿಕ ಸ್ಥಿತಿಯನ್ನು ಬಿಂಬಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ಮಧ್ಯಮ ವರ್ಗ. ಇಂದು ವಿಶ್ವದ ವ್ಯವಹಾರವನ್ನೆ ನಿಯಂತ್ರಿಸುತ್ತಿರುವ ಗ್ರಾಹಕ ಸಂಸ್ಕೃತಿಗೆ ಮಾರು ಹೋಗುತ್ತಿರುವುದೂ ಮುಖ್ಯವಾಗಿ ಇದೇ ವರ್ಗ. ಇದರ ಮೇಲಿನದು ಶ್ರೀಮಂತ ವರ್ಗ. ಅಲ್ಪಸಂಖ್ಯಾತ ವರ್ಗವಾದರೂ ತನ್ನ ಜೀವನ ಶೈಲಿಯಿಂದ ಆರ್ಥಿಕ

ಶ್ರೀಮಂತಿಕೆಯ ಕನಸುಗಳನ್ನು ಮಧ್ಯಮ ವರ್ಗದಲ್ಲಿ ಸೃಷ್ಟಿಸಲು ಕಾರಣವಾಗುತ್ತಿರುವ ವರ್ಗ. ನಿರುದ್ಯೋಗ, ಶಿಕ್ಷಣದ ಕೊರತೆ, ನಗರಗಳ ಆಕರ್ಷಣೆ ಇವೆಲ್ಲವುಗಳಿಂದ ಪ್ರಭಾವಿತವಾಗುವ, ಬಡತನವನ್ನೆ ನೆಚ್ಚಿಕೊಳ್ಳಬೇಕಾದ ಜನಸಮುದಾಯ ಆರ್ಥಿಕ ತೃಪ್ತಿಯ ಹಂಬಲದಲ್ಲೆ ಜೀವನ ಸವೆಸಬೇಕಾದಂತಹ ಪರಿಸ್ಥಿತಿಯಲ್ಲಿ ಇವರ ಬದುಕೆಲ್ಲ ಮಧ್ಯಮ ವರ್ಗವನ್ನು ಸೇರಿಕೊಳ್ಳುವ ಕನಸುಗಳಲ್ಲೆ ಮುಕ್ತಾಯವಾಗುವುದು ಹೆಚ್ಚು. ಕೆಲವು ಕಡೆ ಸಾಧ್ಯವಾಗುವ, ಕೆಲವೆಡೆ ಸಾಧ್ಯವಾಗದ, ಮಧ್ಯಮ ವರ್ಗದ ಜೀವನ ರೀತಿ ತಮಗೂ ಒದಗಬೇಕು ಎನ್ನುವ ಹಂಬಲವೇ ಸಾಮಾಜಿಕ ಸಂಘರ್ಷಕ್ಕೆ ಕಾರಣ ವಾಗುವುದಿದೆ. ಕೆಲವೊಮ್ಮೆ ತಮ್ಮ ಆರ್ಥಿಕ ತಾಪತ್ರಯಗಳನ್ನು ಕಡೆಗಣಿಸಿಯೂ ತಮ್ಮ ಮುಂದಿನ ಪೀಳಿಗೆಯಾದರೂ ಆ ವರ್ಗಕ್ಕೆ ಸೇರಿಕೊಳ್ಳಬೇಕು ಎಂಬ ದೃಷ್ಟಿಯಿಂದ ಅವರಿಗೆ ಶಿಕ್ಷಣವನ್ನು ಒದಗಿಸುವ, ಉದ್ಯೋಗಾವಕಾಶಗಳನ್ನು ಮಾಡಿಕೊಡುವ ನಗರ ಜೀವನದ ಸಂಸ್ಕಾರಗಳನ್ನು ಪಡೆಯಲು ತಾವು ಕಷ್ಟದಲ್ಲೇ ಜೀವನ ಸವೆಸುವ ಬಡ ವರ್ಗವೇ ನಮ್ಮ ನಾಡಿನ ಲೋಕಸತ್ತೆಯನ್ನು ನೆಚ್ಚಿಕೊಂಡು ಬಲಪಡಿಸಬೇಕಾದ ಬಹುಸಂಖ್ಯಾತ ವರ್ಗ, ಇಂಥವರಲ್ಲಿ ಹಿಂದುಳಿದವರು, ಅತ್ಯಂತ ಹಿಂದುಳಿದವರು, ಹಿಂದುಳಿದವರೆಂದೇ (ಆರ್ಥಿಕ ಸವಲತ್ತುಗಳಿಗಾಗಿ) ಕರೆಸಿಕೊಳ್ಳಬಯಸುವವರು, ಜಾತಿಯ ಪಟ್ಟಿಯನ್ನು ಇರಿಸಿಕೊಂಡೇ ಹಿಂದುಳಿದವರಾಗಬಯಸುವವರು ಎಲ್ಲ ಸೇರಿದ್ದಾರೆ. ಸ್ವಾಭಾವಿಕವಾಗಿಯೇ ಸಂಘರ್ಷದ ಜೀವನವನ್ನೇ ಬದುಕಿನುದ್ದಕ್ಕೂ ಸಾಗಿಸ ಬೇಕಾದ ಇವರ ನೈತಿಕತೆಯನ್ನು ನಿರ್ಧರಿಸುವಲ್ಲಿ ಆರ್ಥಿಕ ನೆಮ್ಮದಿಯಷ್ಟೆ ಮುಖ್ಯ ಪಾತ್ರ ವಹಿಸುತ್ತದೆ. ಇವರು ಅನುಸರಿಸಬಯಸುವ ಮಧ್ಯಮ ವರ್ಗದ ಜನಸಮುದಾಯ ವಂತೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನುಕರಣೆಯನ್ನೇ ಒಂದು ಶಿಸ್ತಿನಂತೆ ಸ್ವೀಕರಿಸಿ ಇಂದು ದೊರಕುತ್ತಿರುವ ಅರ್ಧಮರ್ಧ ಆಂಗ್ಲ ಶಿಕ್ಷಣದಿಂದ ಬಂದ ಹೆಗ್ಗರಿಮೆಯಿಂದ ಮೊದಲೇ ಕಡಿದುಕೊಳ್ಳತೊಡಗಿದ್ದ ನಮ್ಮ ಜಾನಪದ ಸಂಸ್ಕಾರಗಳಿಂದ ದೂರ ಸರಿಯುತ್ತ ಹೆಚ್ಚು ಹೆಚ್ಚು ಸ್ಪರ್ಧಾತ್ಮಕವಾಗುತ್ತಿರುವ ಜಗತ್ತಿನಲ್ಲಿ ಶ್ರೀಮಂತಿಕೆಯೊಂದೇ ಗ್ರಹಿಸಬೇಕಾದ ಮೌಲ್ಯವೆಂದು ತಿಳಿಯುವಂತಾಗಿದೆ. ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ಇವರು ನೋಡತೊಡಗುವುದು ಆರ್ಥಿಕ ಶ್ರೀಮಂತಿಕೆಯ ಶಿಸ್ತಿಗೆ ಅದು ಒಗ್ಗಿ ಕೊಳ್ಳುವುದೇ ಎಂಬ ಒಂದು ಕಾರಣದಿಂದ. ದೇಶದ ಸಾಕ್ಷರತೆಯ ಪ್ರಮಾಣಕ್ಕಿಂತ ಹೆಚ್ಚು ಸಾಕ್ಷರತೆ ಇರುವ ಕರ್ನಾಟಕದಲ್ಲೂ, ಸುಶಿಕ್ಷಿತ ಮಧ್ಯಮ ವರ್ಗದಲ್ಲಿ ಜಕಣಾಚಾರಿಯ ಬಗೆಗಾಗಲೀ, ಚಾಲುಕ್ಯ ಹೊಯ್ಸಳ ಶಿಲ್ಪ ಶೈಲಿಗಳ ಬಗೆಗಾಗಲೀ, ದೇಶದ ಎರಡು ಪ್ರಮುಖ ಸಂಗೀತ ಶೈಲಿಗಳಿಗೆ ಕರ್ನಾಟಕ ಪ್ರಮುಖ ರಾಜ್ಯವೆಂದಾಗಲೀ, ಕಾರಂತ, ಬೇಂದ್ರೆ, ಪುಟ್ಟಪ್ಪನವರ ಕೃತಿಗಳ ಬಗೆಗಾಗಲೀ ತಿಳಿದವರೆಷ್ಟು ಮಂದಿ ಎಂದು ಕೇಳುವುದೂ ಅಪ್ರಸ್ತುತವಾಗದು. ಇನ್ನು ಶ್ರೀಮಂತಿಕೆಯನ್ನು ಜೀವನ ನೀತಿಯಾಗಿ ಸ್ವೀಕರಿಸಿದವರಿಗೆ ಅವರು ಗ್ರಹಿಸಬಹುದಾದ ರಾಷ್ಟ್ರೀಯ ಚಾರಿತ್ರ್ಯದ ಬೇರುಗಳು ಸಿಗುವುದು ಇಂಗ್ಲೆಂಡು ಅಮೆರಿಕಗಳಲ್ಲೆ. ಎಲ್ಲ ವರ್ಗಗಳಲ್ಲೂ ಆರ್ಥಿಕ ಶಕ್ತಿಯಷ್ಟೆ ನೈತಿಕತೆಯನ್ನು ನಿರ್ಧರಿಸುವ ಸಾಧನ ಎಂಬ ತಿಳಿವಳಿಕೆ ಬೆಳೆಯುತ್ತ ಬಂದ ಬಗೆಯನ್ನು

ಚಿತ್ರಿಸಲಷ್ಟೇ ಇಷ್ಟೆಲ್ಲ ವಿವರಣೆ. ಸಮಷ್ಟಿಯ ಹಿತಕ್ಕೆ ತುಸುವಾದರೂ ಹೊಂದಿಕೊಳ್ಳಬಹುದಾದ ಧಾರ್ಮಿಕ ಪ್ರಜ್ಞೆಯ ಹಿಂದಿದ್ದ ವಿವೇಕ ಜ್ಞಾನ, ಪರಿಸರ ಜ್ಞಾನ ಇವುಗಳ ವಿಚಾರ ಹಿಂದೆ ಹೇಳಿದ್ದೇನೆ. ಇಂದು ಆರ್ಥಿಕ ಹಸಿವೇ ಸಾಮಾಜಿಕ ಮೌಲ್ಯ ನಿರ್ಧಾರಕ ಶಕ್ತಿ ಎಂಬ ತಿಳಿವಳಿಕೆಯೇ ಹೆಚ್ಚಾಗಿ ಪರಂಪರೆಯ ಬೇರುಗಳನ್ನು ತಮ್ಮ ಅಸ್ಮಿತೆಯ ಪ್ರಜ್ಞೆಗಾಗಿ ಬಳಸಿಕೊಳ್ಳಲು ವಿಚಾರ ಕ್ಕಿಂತಲೂ ಆಚಾರಗಳನ್ನೇ ನಂಬಿಕೆಯ ಕುರುಹಾಗಿ ಬಳಸಿಕೊಳ್ಳುವ ಪ್ರವೃತ್ತಿ ಮಹತ್ವ ಪಡೆಯುತ್ತಿರುವುದನ್ನೂ ಹೇಳಿದ್ದೇನೆ. ಆರ್ಥಿಕ ನೆಮ್ಮದಿ ತರುವ ಆಧುನಿಕ ಸುಖ ಸೌಕರ್ಯಗಳು ಪೂರ್ವಜನ್ಮದ 'ಕರ್ಮಫಲ' ಎಂಬ ತಿಳಿವಳಿಕೆಯೂ ಹೆಚ್ಚಿ ಧನಾರ್ಜನೆ ಯಾವ ಮೂಲದಿಂದ ಬಂದರೂ ನ್ಯಾಯವಾದುದೆಂಬ ಆತ್ಮ ಸಮಾಧಾನ. ಇನ್ನು ಆಧುನಿಕ ಜೀವನ ಕ್ರಮದಲ್ಲೂ ಸಾಮಾಜಿಕ ಹಿತವನ್ನು ಕಡೆಗಣಿಸಿ ಸಂಪಾದಿಸಿದ ಹಣದ ಕುರಿತಾದ 'ಪಾಪ ಪ್ರಜ್ಞೆ' ಯೊಂದಿದೆಯಲ್ಲ. ವಿಶಿಷ್ಟವೆನಿಸುವ ಶ್ರೀಮಂತಿಕೆಯನ್ನು ಮೆರೆಯುತ್ತಿರುವವರಲ್ಲಿ ಈ ಪ್ರಜ್ಞೆ ಹೆಚ್ಚೇನೋ ಎಂಬಂತೆ ತಿರುಪತಿಯಂತಹ ಧಾರ್ಮಿಕ ಕ್ಷೇತ್ರಗಳಲ್ಲಿ ಬಂದು ಬೀಳುವ ಸಾಮಾನ್ಯ ಜನರ ನಂಬಿಕೆಯ ಮುಡುಪಿನ ಜತೆಗೇ ಶ್ರೀಮಂತಿಕೆಯ ಚಿಹ್ನೆಗಳಾದ ಅನಾಮಧೇಯ ದಾನಿಗಳ ಲಕ್ಷಗಟ್ಟಲೆ ನೋಟುಗಳು, ಚಿನ್ನದ ತುಂಡುಗಳು ಇತ್ಯಾದಿ. ಇನ್ನು ಇಂತಹ ಕ್ಷೇತ್ರಗಳಿಗೆ ಕಾಲಕಾಲಕ್ಕೆ ಧಾಳಿ ಇಡುವ ನವ ಶ್ರೀಮಂತ ರಾಜಕಾರಣಿಗಳೂ ರಾಜಕೀಯ ಪದವೀಧರರೂ ಸೂಚಿಸುವುದು ಧಾರ್ಮಿಕ ಚೌಕಟ್ಟಿನ ವಿವೇಕದ ನೈತಿಕಪ್ರಜ್ಞೆಯ ವಿಚಾರಕ್ಕಿಂತ ಆಚಾರದ ಮಹತ್ವವನ್ನು ಸಾರುವುದನ್ನು. ತುಸು ವಂಚನೆಯೂ ಬೆರೆತಂತೆ ತೆರಿಗೆಯನ್ನು ಕಡಿಮೆ ಮಾಡಿಕೊಳ್ಳುವ ಉಪಾಯಗಳನ್ನು ಹುಡುಕುವ ಪ್ರವೃತ್ತಿ ಆರ್ಥಿಕ ದೃಷ್ಟಿಯಿಂದ ತುಂಬ ಮುಂದುವರಿದ ರಾಷ್ಟ್ರಗಳಲ್ಲೂ ಇದೆ. ಆದರೆ ಭಾರತದಂತೆ ತೆರಿಗೆಯ ವಂಚನೆಯ ಪ್ರಮಾಣ ಬೇರೆ ದೇಶಗಳಲ್ಲಿ ಇಲ್ಲವೆನ್ನಲು ನಮ್ಮ ವಿತ್ತಖಾತೆ ಸ್ವಾತಂತ್ರ್ಯ ಬಂದ ಮೇಲೆ ಒದಗಿಸುತ್ತಿರುವ ತೆರಿಗೆದಾರರ ಕುರಿತ ಅಂಕೆ ಸಂಖ್ಯೆಗಳೇ ಸಾಕ್ಷಿ. ಆರ್ಥಿಕ ಹಸಿವಿಗಾಗಿ ಮೋಸ ವಂಚನೆಗಳು ತೀರ ಸಾಮಾನ್ಯವೆನ್ನುವಂತೆ ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಾವು ನಡೆದುಕೊಂಡಿರುವುದನ್ನು ಭಾರತದಲ್ಲಿ ಇದೆಯೆನ್ನಲಾದ ಕಪ್ಪು ಹಣದ ಮೊತ್ತ ಸೂಚಿಸುತ್ತದೆ. ಈ ಪ್ರವೃತ್ತಿ ಬೆಳೆಯಲು ಕಾರಣಗಳನ್ನು ಹುಡುಕುವಾಗ ನಮ್ಮ ಲೋಕಸತ್ತಾತ್ಮಕ ವ್ಯವಸ್ಥೆಯ ಅಧಿಕಾರ ಸೂತ್ರಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ರಾಜಕಾರಣಿಗಳ ಆರ್ಥಿಕ ಹಸಿವು, ಬಯಲಿಗೆ ಬರಲಾಗದ ಯಾವ ರೀತಿಯ ವಂಚನೆಯೂ ಸ್ವಾರ್ಥದ ಹಿತವನ್ನು ಪೋಷಿಸುವಾಗ ಅದು ನ್ಯಾಯವೇ ಎಂಬ ಆತ್ಮ ಸಮಾಧಾನವನ್ನು ಬೆಳೆಸಿಕೊಳ್ಳುವುದು, ಎಂತಹ ಪಾಪ ಪ್ರಜ್ಞೆಯನ್ನೂ ಕೆಲವು ಧಾರ್ಮಿಕವೆನಿಸಬಹುದಾದ ಆಚಾರಗಳಿಂದ ತೇಲಿಸಿ ಬಿಡಬಹುದು ಎಂಬ ನಂಬಿಕೆ, ಇವೆಲ್ಲ ಸೇರಿವೆ. ಹೀಗಿರುವಾಗ ರಾಜ್ಯ ರಾಷ್ಟ್ರಗಳ ಕುರಿತ ಸಾಮಾಜಿಕ ಚಿಂತನೆಯ ಮಾತೇ ಉದ್ಭವಿಸುವುದಿಲ್ಲ. ಇಂತಹ ಸ್ವಾರ್ಥ ದೃಷ್ಟಿ ಯಾವ ರೀತಿಯ, ಲೋಕಸತ್ತೆಯನ್ನು ಪೋಷಿಸಬೇಕಾದ ಪ್ರಾಮಾಣಿಕ ಸಾಮಾಜಿಕ ಪ್ರಜ್ಞೆಯನ್ನೂ ರಾಷ್ಟ್ರನಿಷ್ಠೆಯನ್ನೂ ಬೆಳೆಸೀತು. ಸ್ವಾತಂತ್ರ್ಯೋತ್ತರ 50 ವರ್ಷಗಳಲ್ಲಿ

ಸರಕಾರ ತಾನೇ ದೇವರು, ಶಾಸಕರೇ ದೇವರ ಪ್ರತಿನಿಧಿಗಳು, ಅಧಿಕಾರಿ ವರ್ಗವೇ ಈ ದೇವರ ವರಗಳನ್ನು ದಯಪಾಲಿಸಲು ಸಹಾಯ ಮಾಡುವ ನವಪುರೋಹಿತರು ಎನ್ನುವ ಸಾಮಾಜಿಕ ಸನ್ನಿವೇಶವನ್ನು ಸೃಷ್ಟಿಸಿರುವುದರಿಂದ ಇಂದಿನ ಪುರೋಹಿತರು ಧಾರ್ಮಿಕವೆನಿಸುವ ಕೆಲಸಗಳಿಗೂ ಕಡ್ಡಾಯವಾಗಿ ಬೇಡುವ ದಕ್ಷಿಣೆಯಂತೆ ಸರಕಾರದ ಅನುಮತಿಯಿಂದಲೇ ಜರಗ ಬೇಕಾದ ಎಲ್ಲ ಕೆಲಸಗಳಿಗೂ, ವಿದ್ಯುತ್ ಸರಬರಾಜು, ನೀರಿನ ಪೂರೈಕೆ, ಮನೆ ಕಟ್ಟಲು ಪರವಾನಗಿ, ನೋಂದಣಿಯ ದಾಖಲೆಗಳನ್ನು ಒದಗಿಸಲು, ಸರಕಾರದ ಆಶ್ರಯದಲ್ಲಿ ಕೆಲಸ ಕೊಡಿಸಲು, ಬೇಕಾದಲ್ಲಿಗೆ ವರ್ಗ ಮಾಡಿಸಲು, ಲಂಚ ಹೆಚ್ಚು ಪಡೆಯಲು ಸಾಧ್ಯವಾಗುವ ಅಬಕಾರೀ ಮತ್ತಿತರ ಖಾತೆಗಳಲ್ಲಿ ಕೆಲಸ ಗಳಿಸಲು, ತೆರಿಗೆ ಕಡಿಮೆ ಮಾಡಿಕೊಳ್ಳಲು, ಪಿಂಚಣಿ ವ್ಯವಸ್ಥೆಯ ಕೆಲಸ ಮಾಡಿಕೊಳ್ಳಲು, ಸರಕಾರದ ಅಧಿಕಾರದ ಹಿಡಿತ ವಿರುವ ಯಾವುದೇ ಕೆಲಸ ಮಾಡಿಕೊಳ್ಳಲು ಕಡ್ಡಾಯವಾಗಿ ಇಂತಿಷ್ಟು ಹಣ ಕೊಡಬೇಕು ಎಂಬ ಭ್ರಷ್ಟ ಆಡಳಿತೆಯ ನಿರ್ಮಾಣವೂ ನಮ್ಮ 50 ವರ್ಷಗಳ ಪಂಚವಾರ್ಷಿಕ ಸಾಧನೆಗಳ ಪಟ್ಟಿಯಲ್ಲಿ ಸೇರಿಕೊಳ್ಳುವಂತಾದ ದುರಂತವನ್ನೂ ನಾವು ನೆನಪಿಸಿಕೊಳ್ಳಬೇಕಾಗಿದೆ.

ವೈಯಕ್ತಿಕವಾಗಿ ನಾವು ಎಷ್ಟೇ ಶ್ರೀಮಂತರೆನಿಸಿದರೂ ಸಾಮಾಜಿಕವಾಗಿ ನಾವು ಚರಿತ್ರಹೀನರು ಎಂದು ಸಾರಲು ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ ಸಾವಿರ ನಿದರ್ಶನಗಳನ್ನು ಕೊಡಬಹುದು. ಹೆಚ್ಚುತ್ತಲೇ ಇರುವ ಜನಸಂಖ್ಯೆ, ವಿವಿಧ ರಂಗಗಳಿಂದ ಶಿಕ್ಷಣದ ಸಂಸ್ಕಾರ ಪಡೆದು ಸಾಮಾಜಿಕ ಚಟುವಟಿಕೆಗಳ ರಂಗವನ್ನು ಪ್ರವೇಶಿಸುತ್ತಿರುವವರು, ಉತ್ತಮಿಕೆಯ ಅರಸುವಿಕೆಯಲ್ಲಿ ಸ್ಪರ್ಧಾತ್ಮಕ ಸೆಣಸುವಿಕೆಯ ಅನಿವಾರ್ಯತೆ, ಆಧುನಿಕತೆಯ ಆವಿಷ್ಕಾರಗಳೆನಿಸಿ ಗ್ರಾಹಕ ಸಂಸ್ಕೃತಿ ನಿತ್ಯ ಜೀವನದ 'ಐಷಾರಾಮ' ಕಲ್ಪನೆಗೆ ಒದಗಿಸುತ್ತಿರುವ ಆಕರ್ಷಣೆಗಳು ಇವೆಲ್ಲ ಅರ್ಥಪ್ರಾಧಾನ್ಯ ನೈತಿಕತೆಯನ್ನೆ ಪ್ರಚೋದಿಸುವ ಆವರಣದಲ್ಲಿ ಮಾನವೀಯ ಪ್ರೀತಿ, ಸ್ನೇಹ, ಸಹಕಾರ ಇವೆಲ್ಲ ಗೌಣವೆನಿಸುತ್ತಿರುವುದು ನಮ್ಮ ಸ್ವಾತಂತ್ರ್ಯೋತ್ತರ ಭಾರತದ ಕತೆ.

'ಸತಿ' ಸಹಗಮನ ಪದ್ಧತಿಯನ್ನು ಬ್ರಿಟಿಷರ ಆಡಳಿತೆಯಲ್ಲಿ ನಿಷೇಧಿಸಿರಬಹುದು. ಆದರೆ ಪ್ರತಿದಿನ ದೈನಿಕಗಳಲ್ಲಿ ಬರುವ ವರದಕ್ಷಿಣೆಗೆ ಸಂಬಂಧಿಸಿದ ಸಜೀವ ದಹನದ ಕೊಲೆಗಳಿಗೆ ಸಂಬಂಧಿಸಿದ ವರದಿಗಳಿಗೆ ಕಾರಣಗಳನ್ನು ಎಲ್ಲಿ ಹುಡುಕಬೇಕು. ಎಂತಹ ಪ್ರತಿಷ್ಠಿತರೂ ಈ ವರದಕ್ಷಿಣೆಯ ಹಸಿವಿಗೆ ಹೊರತಲ್ಲವೆನ್ನುವುದನ್ನು ನಾವು ನಿತ್ಯ ಪತ್ರಿಕಾ ವರದಿಗಳಲ್ಲಿ ನೋಡುತ್ತಿರುತ್ತೇವೆ. ಅತ್ಯಂತ ಪ್ರತಿಷ್ಠಿತ ವೃತ್ತಿಯೆಂದು ತಿಳಿಯಲಾಗು ತ್ತಿರುವ ವೈದ್ಯಕೀಯ ವೃತ್ತಿಯಲ್ಲಿರುವವರು, ಪ್ರೀತಿಸಿ ಮದುವೆಯಾದವರು, ಇಂತಹ ವರದಕ್ಷಿಣೆಯ ಪ್ರಕರಣಗಳಲ್ಲಿ ಸ್ತ್ರೀ ಹತ್ಯೆಗೆ ಕಾರಣವಾಗಿರುವ ವರದಿಗಳನ್ನು ನಾವು ಓದುತ್ತಿರುತ್ತೇವೆ. ಆರ್ಥಿಕ ಕಾರಣಗಳಿಗಾಗಿ ಇಡಿಯ ಕುಟುಂಬವೇ ಆತ್ಮಹತ್ಯೆ ಮಾಡಿಕೊಳ್ಳುವ ವರದಿಗಳನ್ನು ಓದುತ್ತಿರುತ್ತೇವೆ. ಆಧುನಿಕ ಜೀವನಕ್ರಮ ತರುತ್ತಿರುವ ಸಂಕೀರ್ಣ ಒತ್ತಡಗಳಿಗೆ ಹೊಂದಿಕೊಳ್ಳಲಾಗದೆ ಜೀವತೆರುವ, ಆತ್ಮಹತ್ಯೆಯ ಪ್ರಕರಣಗಳಿಗೂ ಕಾರಣ ಆರ್ಥಿಕ ಅಭದ್ರತೆಯ ಚಿಂತೆಯೆ. ಇನ್ನು ಯಾವುದೇ ಕಾರಣ

ಕ್ಕಾಗಿ ಯಾರಿಂದಲೂ ಹಣ ಸುಲಿಯಬಹುದು ಎಂಬ ತಿಳಿವಳಿಕೆ ಬೆಳೆಯಲು ನಮ್ಮ ಲೋಕಸತ್ತಾತ್ಮಕ ಆಡಳಿತೆಯನ್ನು ರೂಪಿಸುತ್ತಿರುವ ಇಂದಿನ ರಾಜಕಾರಣವೂ ನೆರವಾಗುತ್ತಿರುವುದರಿಂದ ಸಾಮಾಜಿಕ ಕಾರಣಗಳನ್ನು ಸೃಷ್ಟಿಸಿ ಹಣ ದೋಚುವ ಪ್ರವೃತ್ತಿಯ ಆಮೇಲೆ ಆ ಹಣ ಏನಾಯಿತೆಂದು ತಿಳಿಯದೇ ಹೋಗುವುದೂ, ಸೂಚಿಸುವುದು ನಮ್ಮ ಚರಿತ್ರಹೀನ ನಡೆವಳಿಕೆಯನ್ನೆ. ಸಾಧ್ಯವಾದಷ್ಟು ಬೇಗ ಶ್ರೀಮಂತಿಕೆಯನ್ನು ಒಲಿಸಿಕೊಳ್ಳಬೇಕು ಎಂದು ಉಪಾಯಗಳನ್ನು ಹುಡುಕುವಾಗ, ಇಂತಹ ಉಪಾಯಗಳನ್ನು ವಿವೇಕದ ತಕ್ಕಡಿಯಲ್ಲಿ ತೂಗಬೇಕು ಎಂಬ ಕಳವಳ ಇಲ್ಲದಿರುವಾಗ, ಮಾನವೀಯ ವೆನಿಸುವ ನೈತಿಕ ಪ್ರಜ್ಞೆ ಹಿಂದೆ ಸರಿಯುವುದು ಸ್ವಾಭಾವಿಕ. ಉಪಯೋಗಿಸಿ ಬಿಸಾಡಬೇಕಾದ ಸಿರಿಂಜ್‌ಗಳನ್ನು ಹುಡುಕಿ ಮತ್ತೆ ಸರಿಯಾದ ಪೆಟ್ಟಿಗೆಗಳಲ್ಲಿ ತುಂಬಿಸಿ ಮಾರುವ ಜನ, ಖೋಟಾ ನೋಟುಗಳಂತೆಯೇ ಖೋಟಾ ಕಾಗದ ಪತ್ರಗಳನ್ನು, ವಿಶ್ವವಿದ್ಯಾಲಯದ ಪ್ರಮಾಣಪತ್ರಗಳನ್ನು, ಛಾಪಾ ಕಾಗದಗಳನ್ನು ಖೋಟಾ ಜಾತಿ ಪ್ರಮಾಣ ಪತ್ರಗಳನ್ನು, ಸರಕಾರದ ಪಿಂಚಣಿ ಪಡೆಯಲು ಖೋಟಾ 'ಸ್ವಾತಂತ್ರ್ಯ ಯೋಧ' ಪ್ರಮಾಣಪತ್ರಗಳನ್ನು ಸೃಷ್ಟಿಸುವ ಇಂಥವೇ ವಂಚನೆಯ ಮೂಲಕ ಲಾಭ ಗಳಿಸಬಹುದಾದ ಸಾಧನಗಳನ್ನು ಹುಡುಕುವ, ಸಾಧ್ಯವಾಗಿಸುವ, ವಿದ್ಯಾವಂತರೆನಿಸಿಕೊಳ್ಳುವವರಿಗೂ ಚಾರಿತ್ರ್ಯ ಎಲ್ಲಿದೆ? ಒಗೆದ ಸಿರಿಂಜ್‌ಗಳನ್ನು ಪುನಃ ಮಾರುಕಟ್ಟೆಗೆ ತರುವುದರಿಂದ 'ಏಡ್ಸ್' ನಂತಹ ರೋಗಗಳೂ ಹರಡಬಹುದು, ಜೀವಹಾನಿಯಾಗಬಹುದು ಎಂಬ ನೈತಿಕ ಪ್ರಜ್ಞೆಯನ್ನು ಕಳೆದುಕೊಳ್ಳುವ ನಿದರ್ಶನಗಳನ್ನು ನಾವು ನಮ್ಮ ಸಮಾಜ ಜೀವನದ ಎಲ್ಲ ರಂಗಗಳಲ್ಲೂ ಕಾಣುತ್ತಿದ್ದೇವೆ. ಕಳ್ಳಸಾಗಣೆ, ಮಾದಕ ವಸ್ತುಗಳ ವಿಕ್ರಯ, ಪೋಲಿಸು ವ್ಯವಸ್ಥೆಯಿಂದ, ನಿಧಾನಗತಿಯ ನಮ್ಮ ನ್ಯಾಯಾಂಗದ ಕಾರ್ಯ ವೈಖರಿಯಿಂದ ಸಾಮಾನ್ಯ ನಾಗರಿಕ ನಿರೀಕ್ಷಿಸುವ ನ್ಯಾಯ ನಿರ್ವಹಣೆಯ ಕೆಲಸ ಸಾಧ್ಯವಾಗುವುದಿಲ್ಲವೆನ್ನುವ ತಿಳಿವಳಿಕೆ, ಇವೆಲ್ಲ ಸೇರಿ ನಮಗೆ ಬೇಕಾಗುವ 'ನ್ಯಾಯ' ಒದಗಿಸುವ ಕ್ರಿಮಿನಲ್ ತಂಡಗಳು ಬೆಳೆಯುತ್ತಿರುವುದನ್ನೂ, ಸಾಕಷ್ಟು 'ದಕ್ಷಿಣೆ' ಕೊಟ್ಟರೆ ಕೊಲೆ ಮಾಡಿಸುವುದೂ ಸಾಧ್ಯವಾಗುತ್ತಿರುವುದನ್ನೂ ನೋಡುತ್ತಿರುವ ನಾವು ನಮ್ಮ ಸ್ವಾತಂತ್ರ್ಯದ 50 ವರ್ಷ ಮುಗಿಯುತ್ತಿರುವಾಗ ಭಾರತ ಅತ್ಯಂತ ಭ್ರಷ್ಟ ರಾಷ್ಟ್ರಗಳ ಮೊದಲ ಸಾಲಿನಲ್ಲಿ ನಿಂತಿರುವುದರಲ್ಲಿ ಆಶ್ಚರ್ಯಪಡಬೇಕೆ! ಇಂದು ನಮಗೆ ಸಾಮಾಜಿಕವೆನಿಸುವ ನೈತಿಕತೆಯ ತಿಳಿವಳಿಕೆಯೇ ಬೇಡವೇನೋ ಎಂದು ತೋರುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ರಾಷ್ಟ್ರಪ್ರಜ್ಞೆ ಯಾರಿಗೆ ಬೇಕಾಗಿದೆ? ಚಾರಿತ್ರ್ಯವನ್ನು ಕಳೆದುಕೊಳ್ಳುವುದೇ ಒಂದು ಆದರ್ಶವೆನಿಸುವಂತೆ ನಾವು ಜೀವನ ಮೌಲ್ಯಗಳನ್ನು ಹಣದಲ್ಲಿ ಹುಡುಕುತ್ತಿರುವಾಗ ನಾವು ಬರೇ ರಾಜಕಾರಣಿಗಳನ್ನಾಗಲೀ, ಸಾಮಾಜಿಕ ಧುರೀಣರೆನಿಸಿಕೊಳ್ಳವವರನ್ನಾಗಲೀ, ಸರಕಾರದ ಅಧಿಕಾರಿಗಳನ್ನಾಗಲೀ ದೂರಿ ಪ್ರಯೋಜನವಿಲ್ಲ. ಒಂದು ದೇಶ ತನ್ನ ಯೋಗ್ಯತೆಗೆ ಸರಿಯಾದ ಸರಕಾರವನ್ನೆ ರೂಪಿಸಿಕೊಳ್ಳುತ್ತದೆ ಎಂಬ ಮಾತಿನ ಸತ್ಯ ಸ್ವಾತಂತ್ರ್ಯದ ಚಿನ್ನದ ಹಬ್ಬದ ಸಂದರ್ಭದಲ್ಲಿ ನೆನಪಿಗೆ ಬರುವಂತಿದೆ. ನಾವಿರೋದೇ ಹೀಗೆ.

ಅಸ್ವಸ್ಥ ಭಾರತ

ವಿಶ್ವದ ಇತಿಹಾಸದ ಗತಿಯಲ್ಲಿ, ಎಲ್ಲ ರಾಷ್ಟ್ರಗಳ ಇತಿಹಾಸದಲ್ಲೂ, ನಾವು ಸಾಕಷ್ಟು ವಿರೋಧಾಭಾಸಗಳನ್ನು ಕಾಣುತ್ತೇವೆ. ಎಲ್ಲ ರಾಷ್ಟ್ರಗಳ ಸ್ವಾತಂತ್ರ್ಯದ ಆದರ್ಶಕ್ಕೆ ತಾನು ಬದ್ಧ ಎಂದು (ಸೆಪ್ಟಂಬರ್ 1939ರಲ್ಲಿ) ಯಾವ ಪೂರ್ವಸಿದ್ಧತೆಯೂ ಇರದೆ ಜರ್ಮನಿಯ ವಿರುದ್ಧ ಯುದ್ಧಕ್ಕೆ ಧುಮುಕಿ ವಿಶ್ವದ ಇತಿಹಾಸವನ್ನೇ ಬದಲಿಸಿದ ಎರಡನೆಯ ಮಹಾಯುದ್ಧವನ್ನು ಆರಂಭಿಸಿದ ಬ್ರಿಟನ್ ಆ ಸಂದರ್ಭದಲ್ಲಿ ತಾನು ಯುಕ್ತಿ ಕುಯುಕ್ತಿಗಳಿಂದ ಆಕ್ರಮಿಸಿದ್ದ ಭಾರತದ ಸ್ವಾತಂತ್ರ್ಯದ ಆದರ್ಶವನ್ನು 'ಯಾಕೆ ಬೇಕು?' ಎನ್ನುವ ರೀತಿಯಲ್ಲಿ ಕಡೆಗಣಿಸಿದ ವಿರೋಧಾಭಾಸ ಒಂದು ಮುಖ್ಯ ಉದಾಹರಣೆ. ಇನ್ನು ಭಾರತದ ಸ್ವಾತಂತ್ರ್ಯ ಕೂಡ ಸಾಧ್ಯವಾದದ್ದು ಗಾಂಧೀಜಿಯ ನೇತೃತ್ವದ ಅಹಿಂಸಾತ್ಮಕ ಚಳವಳದಿಂದ ಮಾತ್ರ ಎಂಬ ತುಸು ಅಪ್ರಬುದ್ಧವೆನಿಸುವ ಮಾತನ್ನು ನಾವು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಹಲವಾರು ರಾಜಕಾರಣಿಗಳ ಬಾಯಿಯಿಂದ ಕೇಳಿದ್ದೇವೆ. ಭಾರತದ ಸ್ವಾತಂತ್ರ್ಯ ದೊರಕುವಂತಾದದ್ದು ದೀರ್ಘ ಕಾಲದ ಹಲವಾರು ಐತಿಹಾಸಿಕ ಸಂಭವಗಳಿಂದ. ರಾಷ್ಟ್ರವನ್ನು ಒಂದು ಘಟಕವೆಂದು ಪರಿಗಣಿಸಿ ರಾಷ್ಟ್ರೀಯವೆನಿಸುವ ಜಾಗೃತಿಯಿಂದ, ಅದರ ಬಿಡುಗಡೆಗಾಗಿ ಯಾವ ದಾರಿಯನ್ನು ಅನುಸರಿಸಿದರೂ ಸರಿಯೆ, ಅದಕ್ಕೆ ಅಗತ್ಯವಿರುವ ತ್ಯಾಗ ಬಲಿದಾನಗಳು ಸಹ್ಯವಷ್ಟೆ ಅಲ್ಲ, ಅಗತ್ಯವೆನ್ನುವ ತಿಳಿವಳಿಕೆಯಿಂದ ಹೋರಾಡಿದ ಹಲವಾರು ವ್ಯಕ್ತಿ ಶಕ್ತಿಗಳಿಂದ. ಈ ಶತಮಾನದ ಆರಂಭದ ಮೂರು ನಾಲ್ಕು ದಶಕಗಳಲ್ಲಿ ಮಾತ್ರ ಸಮಗ್ರ ರಾಷ್ಟ್ರದ ಜಾಗೃತಿಗೆ ಕಾರಣರಾಗಿ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವ ವಹಿಸಿದ್ದು ಮಹಾತ್ಮಾ ಗಾಂಧಿಯವರಾದ ಕಾರಣ ಅವರು ವ್ಯಕ್ತಿಯಾಗಿಯೂ ಸಂಚಾಲಕ ಶಕ್ತಿಯಾಗಿಯೂ, ವಿಶ್ವದಲ್ಲೆ ತನ್ನ ಅಹಿಂಸೆಯ ಆದರ್ಶವನ್ನು ಹರಡಿದ ಕಾರಣ ರಾಷ್ಟ್ರಪಿತ ಎನ್ನುವ ಗೌರವಕ್ಕೂ ಪಾತ್ರರಾಗಿದ್ದಾರೆ. ಗಾಂಧೀಜಿಗೆ ಅಹಿಂಸೆಯ ಆದರ್ಶವಿತ್ತು. ಅದನ್ನು ಪಾಲಿಸುವ ಸಂಕಲ್ಪ ಶಕ್ತಿಯೂ ಇತ್ತು. ಆ ಕಾರಣದಿಂದ ಚೌರಿಚೌರಾದಲ್ಲಿ ಸ್ವಾತಂತ್ರ್ಯ ಚಳವಳದ ಕಾರಣ ಕೆಲವರು ಪೋಲಿಸರ ಹತ್ಯೆಯಾದಾಗ ಚಳವಳವನ್ನೆ ನಿಲ್ಲಿಸುವ ಧೈರ್ಯ ಅವರಿಗಿತ್ತು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ನಡೆದ ಜಾತೀಯ ಹತ್ಯಾಕಾಂಡದಲ್ಲಿ ಅವರು ಕಲ್ಕತ್ತಾ ನೌಖಾಲಿಗಳಿಗೆ ಹೋಗಿ ತೋರಿಸಿದ ಧೈರ್ಯದ ಹಿಂದಿದ್ದುದು ಈ ಅಹಿಂಸೆಯ ಸಂಕಲ್ಪ ಶಕ್ತಿ. ಆದರೆ ಇದು ಸಾಧ್ಯವಾದದ್ದು ಗಾಂಧೀಜಿಯವರಿಗೆ ಮಾತ್ರ. ಆದರೆ ನಾವು ರಾಷ್ಟ್ರಪಿತನೆಂದು ಗೌರವಿಸುವ ಗಾಂಧೀಜಿಯವರ ಆದರ್ಶವನ್ನು ಬಾಯಿಮಾತಿನಲ್ಲಿ ಸ್ಮರಿಸುತ್ತ, ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಹಿಂಸೆಯ ಎಷ್ಟು ಮುಖಗಳನ್ನು ಭಾರತದ ಸಾಮಾನ್ಯ ನಾಗರಿಕನಿಗೆ ತೋರಿಸಿದ್ದೇವೆ, ಅಷ್ಟೇ ಅಲ್ಲದೆ ಭಾರತದ ನಾಗರಿಕರು ಹಿಂಸೆಯ ಎಷ್ಟು ಮುಖಗಳನ್ನು

ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಬೆಳೆಸಿಕೊಂಡು ಬಂದಿದ್ದಾರೆ ಎನ್ನುವ ಒಂದು ರೀತಿಯ ವಿರೋಧಾಭಾಸವನ್ನೂ ಪ್ರಕಟಿಸಿದ್ದೇವೆ.

ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯವರು ನೆಚ್ಚಿಕೊಂಡಿದ್ದ ಸತ್ಯ ಅಹಿಂಸೆಗಳ ಆದರ್ಶಗಳಲ್ಲಿ ನಂಬಿಕೆ ಇರಿಸಿ ಸ್ವಾತಂತ್ರ್ಯ ಚಳವಳದಲ್ಲಿ ಭಾರತೀಯರು ಭಾಗವಹಿಸಿದ್ದರು ಎಂದು ತಿಳಿದಿರುವ ನಾವು ಅದೇ ಭಾರತ ಇಂದಿನ ವಂಚನೆ, ಶೋಷಣೆ, ಹಿಂಸೆಗಳೇ ಮುಖ್ಯವೇನೋ ಎಂದು ತೋರುತ್ತಿರುವ ಸಾಮಾಜಿಕ ಸಂದರ್ಭಕ್ಕೆ ಎಡೆಮಾಡಿಕೊಟ್ಟಿರುವುದು ಒಂದು ವಿರೋಧಾಭಾಸವೆಂಬುದನ್ನು ನಾವು ಗಮನಿಸಬೇಕಾಗಿದೆ. ಗಾಂಧೀಜಿಯವರ ಆದರ್ಶಗಳ ಬಗೆಗೆ ಪೊಳ್ಳು ಅಭಿಮಾನ ಸೂಚಿಸುತ್ತಿರುವ ನಾವು ಚರಖಾ, ಖಾದಿ, ಗಾಂಧೀಜಿಯವರಿಗೆ ಸ್ವದೇಶ ಪ್ರೀತಿಯ, ಸ್ವಾವಲಂಬನದ ಸಾಧನಗಳೆನಿಸಿದ್ದವು ಎಂದು ಹೇಳುತ್ತಿರುವಂತೆಯೇ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಖಾದಿಯ ಪೂರೈಕೆ ಮಾರಾಟಕ್ಕೆ ಸಂಬಂಧಿಸಿದ ಸಂಸ್ಥೆಗಳಲ್ಲೂ ವಂಚನೆಯ ಪ್ರಕರಣಗಳನ್ನು ಕಂಡಿದ್ದೇವೆ. ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಸಂಬಂಧಿಸಿದಂತೆ ರೂಪುಗೊಂಡ ಖಾದಿಯ ಆದರ್ಶ, ದೇಶೀಯ ಉದ್ಯಮಗಳು, ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವ ಉದ್ದೇಶದ ಚಿಂತನೆ, ಇಂದು ಕಡಿಮೆ ಬೆಲೆಯ ವಸ್ತುಗಳನ್ನೇ ಬಯಸುವ ಬಡ ಹಾಗೂ ಕೆಳ ಮಧ್ಯಮ ವರ್ಗದ ಜನರ ಆರ್ಥಿಕ ಸ್ಥಿತಿಗೆ ಎಟಕುವ ಸಾಧನವಷ್ಟೇ ಆಗಿ ಒಂದು ಪೊಳ್ಳು ಆದರ್ಶವಾಗಿ ಹೇಗೆ ಹೇಗೋ ಬದುಕಿಕೊಂಡು ಪೊಲಿಯೆಸ್ಟರ್ ನೈಲನ್‌ಗಳಷ್ಟೇ ಅಲ್ಲ, ಇಂಥನ ಉದಾರೀಕೃತ ನೀತಿಯ ಫಲವಾಗಿ ಬಂದಿರುವ ಹತ್ತು ಹಲವು ಆಕರ್ಷಕ ವಿದೇಶೀ ವಸ್ತುಗಳೊಡನೆ ಸ್ಪರ್ಧಿಸಲು ಸಾಧ್ಯವಾಗದೆ ಬಳಲುತ್ತಿದೆ. ಗಾಂಧೀಜಿಯವರಿಗೆ ಪ್ರಿಯವಾಗಿದ್ದ ಪಾನನಿರೋಧ ಅವರ ಕಾಲದಲ್ಲಿ ಪ್ರಚಲಿತವಿದ್ದ ಪಾನನಿರೋಧ ಸಪ್ತಾಹದ ಆಚರಣೆಯೂ ಇಂದು ಅರ್ಥ ಕಳೆದುಕೊಂಡು, ರಾಜ್ಯದ ಬೊಕ್ಕಸ ತುಂಬಲು, ಭೋಗದಾಹದ ರಾಜಕೀಯ ಮುಂದಾಳುಗಳ ಆಸೆ ಆಮಿಷಗಳ ಪೂರೈಕೆಗೆ ನೆರವಾಗಲು ರಾಜ್ಯದ ಅಭಿವೃದ್ಧಿಯೊಂದು ನೆಪವಾಗಿ ಇಂದು ಸಾಧ್ಯವೇ ಇಲ್ಲವೆನ್ನುವ ನಿಲುವನ್ನು ಹೆಚ್ಚಿನ ರಾಜ್ಯಗಳು ತಳೆಯುವಂತಾಗಿದೆ.

ತನಗೆ ಬೇಕೆನಿಸಿದುದು ಸಿಗದಾಗ ಅದನ್ನು ಯಾವ ರೀತಿಯಿಂದಲಾದರೂ ದೊರಕಿಸಿಕೊಳ್ಳಬೇಕು ಎನ್ನುವ ಹಟವೇ ಮನಸಿನ ಕ್ರೌರ್ಯಕ್ಕೆ, ಕ್ರೌರ್ಯ ರೂಪಿಸುವ ಹಿಂಸೆಗೆ ಮೂಲ. ವೈಯಕ್ತಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ಇಂತಹ ಪ್ರವೃತ್ತಿಯನ್ನು ನಿಯಂತ್ರಿಸಬಹುದಾದರೂ ಸಮಾಜದ ಭಯ. ಸಾಮಾಜಿಕವೆನಿಸಬಹುದಾದ ಹಿಂಸೆಯ ಸ್ವರೂಪವನ್ನು ತಡೆಗಟ್ಟುವುದು ಆಡಳಿತೆಯ ಭಯ. ಆಡಳಿತೆಗೆ ನ್ಯಾಯ ಪಾಲನೆಯ ಅಧಿಕಾರ ಹಾಗೂ ಪೋಲಿಸು ಇಲಾಖೆಯ ಮೂಲಕ ದಂಡಶಕ್ತಿ ಇದೆಯೆಂಬ ತಿಳಿವಳಿಕೆಯೇ ಸಾರ್ವಜನಿಕರಿಗೆ ರಕ್ಷಣೆಯ ಭರವಸೆಯನ್ನೂ ಅನ್ಯಾಯದ ಹಿಂಸೆಗೆ ಶಿಕ್ಷೆ ಕಾದಿದೆ ಎಂಬ ಎಚ್ಚರವನ್ನೂ ಕೊಡುವುದು. ಒಂದು ಲೋಕಸತ್ತಾತ್ಮಕ ಆಡಳಿತ ವ್ಯವಸ್ಥೆ ಯಶಸ್ವಿಯಾಗಿ ನಡೆಯಬೇಕಾದರೆ ಆಡಳಿತೆಯ ಪ್ರಾಮಾಣಿಕತೆಯೇ ಅನ್ಯಾಯದ ಕುರಿತ

ಭಯ ಕುದುರಿಸುವಂತಿರಬೇಕು. ಆಡಳಿತೆ ಇರುವುದೇ ಸಮಷ್ಟಿಯ ಹಿತಕ್ಕಾಗಿ, ನ್ಯಾಯ ಪಾಲನೆಗಾಗಿ ಎಂಬ ತಿಳಿವಳಿಕೆಯೇ ಸಾಮಾಜಿಕ ಶಾಂತಿಯನ್ನು ಕಾಪಾಡುವಂಥದು. ಆದರೆ ಇಂತಹ ಆಡಳಿತೆಯನ್ನು ಲೋಕಸತ್ತಾತ್ಮಕ ವ್ಯವಸ್ಥೆಯಲ್ಲಿ ಹಿಡಿತದಲ್ಲಿರಿಸಿ ಕೊಳ್ಳಬೇಕಾದವರು ಚುನಾವಣೆಗಳಲ್ಲಿ ಗೆದ್ದು ಬರುವಂತಹ ಜನಪ್ರತಿನಿಧಿಗಳು. ಅವರಲ್ಲೂ ಬಹುಸಂಖ್ಯಾತರಾಗಿ ಅಧಿಕಾರ ವಹಿಸಿಕೊಳ್ಳಲು ಅರ್ಹರೆನಿಸುವ ರಾಜಕೀಯ ಪಕ್ಷದವರು. ಇವರು ಚುನಾವಣೆಗಳಲ್ಲಿ ಗೆದ್ದುಬರುವುದು ಕೆಲವು ಪೂರ್ವ ನಿರ್ಧಾರಿತ ಆದರ್ಶಗಳಿಂದ; ಇವನ್ನು ಆಚರಣೆಯಲ್ಲಿ ತರಲು ಅಗತ್ಯವೆನಿಸುವ ಕಾರ್ಯಕ್ರಮಗಳ ಯೋಜನೆಯಿಂದ. ಈ ಆದರ್ಶಗಳನ್ನಾಗಲೀ, ಹಮ್ಮಿಕೊಂಡ ಕಾರ್ಯಕ್ರಮಗಳನ್ನಾಗಲೀ ಜನತೆ ಒಪ್ಪಿಕೊಂಡು ಜನಪ್ರತಿನಿಧಿಗಳನ್ನು ಚುನಾಯಿಸಿರು ವುದರಿಂದ ಅವುಗಳನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆ ಆಡಳಿತೆಯ ಕಾರ್ಯಾಂಗಕ್ಕಿರಬೇಕಾದುದು ಸಹಜವೇ. ಆದರೂ ಅಧಿಕಾರ ವಹಿಸಿಕೊಂಡ ರಾಜಕಾರಣಿಗಳು ತಮ್ಮ ವೈಯಕ್ತಿಕ ಹಾಗೂ ಪಕ್ಷಕ್ಕೆ ಸಂಬಂಧಿಸಿದ ಸ್ವಾರ್ಥವನ್ನು ಆಡಳಿತೆಯ ಮೇಲೆ ಹೇರಲು ಯತ್ನಿಸಿದಾಗ ಅದು ರಾಜ್ಯದ ಅಥವಾ ರಾಷ್ಟ್ರದ ಸಮಸ್ತ ಜನಕೋಟಿಯ ಹಿತವನ್ನು ಕಡೆಗಣಿಸುವ ಹಿಂಸೆಯೂ ಆಗಬಹುದು. ಆಡಳಿತೆ ಇರಬೇಕಾದುದೇ ನಿಷ್ಪಕ್ಷಪಾತ ಕಾರ್ಯನಿರ್ವಹಣೆಗೆ; ನ್ಯಾಯ ಪಾಲನೆಗೆ. ರಾಜಕೀಯ ಅಧಿಕಾರದ ಆದರ್ಶವೇನೇ ಇರಲಿ ಅದರ ಗುರಿ ಸಾರ್ವಜನಿಕರ ಹಿತವೇ ಆಗಿರುವುದರಿಂದ ಅದು ತನ್ನ ಪ್ರಾಮಾಣಿಕ ಕರ್ತವ್ಯ ನಿರ್ವಹಣೆಯ ದಾರಿಯಲ್ಲಿ ಆಡಳಿತೆಯ ಕಾರ್ಯಾಂಗದ ಮೇಲೆ ರಾಜಕೀಯ ಹಸ್ತಕ್ಷೇಪ ಮಾಡುವಂತಾದಾಗ ಲೋಕಸತ್ತೆ ದಾರಿ ತಪ್ಪುವುದು ಸಹಜ. ಸಾಮಾನ್ಯವಾಗಿ ರಾಜಕೀಯ ಅಧಿಕಾರದ ಹಸ್ತಕ್ಷೇಪ ಉಂಟಾಗುವುದು – ಆಡಳಿತೆಯ ಕಾರ್ಯಾಂಗ ಪ್ರಾಮಾಣಿಕವೂ ಪಕ್ಷಪಾತ ರಹಿತವೂ ಆಗಿದ್ದಾಗ – ರಾಜಕಾರಣಿಗಳ ವೈಯಕ್ತಿಕ ಸ್ವಾರ್ಥದಿಂದ. ಅಧಿಕಾರ ತರುವ ಅಹಂಕಾರ ಯಾವಾಗಲೂ ಬಯಸುವುದು ಆ ಸ್ಥಿತಿಯ ಮುಂದುವರಿಕೆಯನ್ನೆ. ಇದು ವೈಯಕ್ತಿಕವಾಗಿ ರಾಜಕಾರಣಿಗಳಿಗೂ ಸಾಮೂಹಿಕವಾಗಿ ರಾಜಕೀಯ ಪಕ್ಷಗಳಿಗೂ ಅನ್ವಯಿಸುವ ಮಾತು. ಪ್ರಾಮಾಣಿಕ ಆಡಳಿತೆಗೂ ರಾಜಕೀಯ ಅಧಿಕಾರದ ಸ್ವಾರ್ಥಕ್ಕೂ ಸಂಘರ್ಷ ಉಂಟಾಗುವುದು ರಾಜಕೀಯ ಸ್ವಾರ್ಥ ಆಡಳಿತೆಯ ಪ್ರಾಮಾಣಿಕತೆಯ ದಾರಿಯನ್ನು ತನ್ನ ಸ್ವಾರ್ಥಕ್ಕಾಗಿ ತಪ್ಪಿಸಲು ಯತ್ನಿಸುವಾಗ. ಇಂತಹ ಸಂಘರ್ಷದಲ್ಲಿ ರಾಜಕೀಯ ಅಧಿಕಾರದ ಸ್ವಾರ್ಥದ್ದೇ ಮೇಲುಗೈಯಾಗಿ ಲೋಕಸತ್ತಾತ್ಮಕ ಆಡಳಿತೆಯಲ್ಲಿ ಅದಕ್ಕೆ ಹೊಂದಿಕೊಂಡಿರಬೇಕಾದ ಆಡಳಿತೆಯ ಕಾರ್ಯಾಂಗ ತನ್ನ ಪ್ರಾಮಾಣಿಕತೆಯನ್ನು ಕಳೆದುಕೊಂಡು ಅಧಿಕಾರದ ಕೈಗೊಂಬೆಯಂತಿರುವುದನ್ನೂ ಈ ಸ್ಥಿತಿಯಿಂದಾಗಿ ಆಡಳಿತೆಯ ಕಾರ್ಯಾಂಗ ತನ್ನ ಪ್ರಾಮಾಣಿಕತೆಯೊಡನೆ ರಾಜಿ ಮಾಡಿ ಕೊಂಡು ತನ್ನ ಸ್ವಾರ್ಥವನ್ನು ಸಾಧಿಸಬಯಸುವುದನ್ನೂ ನಾವು ಸ್ವಾತಂತ್ರ್ಯದ 50 ವರ್ಷಗಳಲ್ಲಿ ಸಾಕಷ್ಟು ಕಂಡಿದ್ದೇವೆ. ಒಮ್ಮೆ ಅಧಿಕಾರದ ಗದ್ದುಗೆಯೇರಿದ ಮೇಲೆ ತಾವು ಏನು ಮಾಡಿದರೂ ನಡೆದೀತು ಎಂಬ ಪ್ರಜ್ಞೆ ಸಾರ್ವತ್ರಿಕವಾಗಿ ಅಧಿಕಾರದ ಗದ್ದುಗೆಯೇರಿರುವ

ರಾಜಕಾರಣಿಗಳಿಗೆ ಬರುವಂತಾದ ಪರಿಸ್ಥಿತಿ ಲೋಕಸತ್ತೆ ಯೆನಿಸುವುದು ಚುನಾವಣೆಗಳ ನಾಟಕದಿಂದ ಮಾತ್ರ. ಅಶಿಕ್ಷಿತ ಮತದಾರ, ಪ್ರತಿಭಟಿಸುವ ಪ್ರಜ್ಞೆಯಿರದ ಮಧ್ಯಮ ವರ್ಗ, ಆಡಳಿತೆಯ ಚಟುವಟಿಕೆಗಳ ಪಾರದರ್ಶಕತೆಯನ್ನು ಮರೆಸಲು ಸಾಧ್ಯವಾಗುವ ಶಾಸನಗಳು, ಇವೆಲ್ಲವುಗಳಿಂದ ಲೋಕಸತ್ತೆಯ ಮುಖವಾಡವೇ ನಮ್ಮ ಲೋಕಸತ್ತೆಯೆನಿಸಿ ಕಳೆದ 50 ವರ್ಷಗಳಲ್ಲಿ ಅಧಿಕಾರದ ರುಚಿ – ಮುಖ್ಯವಾಗಿ ಅದು ತರುವ ಪ್ರತಿಷ್ಠೆ, ಸವಲತ್ತುಗಳು – ಕಂಡ ರಾಜಕೀಯ ಧುರೀಣರೂ ಅವರ ಕೈಗೊಂಬೆಗಳಂತೆ ತಾವೂ ತಮ್ಮ ಪಾಲಿನದನ್ನು ದಕ್ಕಿಸಿಕೊಳ್ಳೋಣ ಎಂದು ನಡೆದುಕೊಂಡ ಬಹುಸಂಖ್ಯಾತ ಅಧಿಕಾರಿ ವರ್ಗವೂ 'ಪ್ರಾಮಾಣಿಕತೆ' ಮತ್ತು 'ನೈತಿಕತೆ' ಎಂಬ ಶಬ್ದಗಳನ್ನು ಅಪಹಾಸ್ಯಕ್ಕೀಡುಮಾಡಿವೆ. ಇನ್ನು ರಾಜಕೀಯ ಅಧಿಕಾರದ ಸ್ವಾರ್ಥವಾಗಲೀ, ಆಡಳಿತೆಯ ಅಧಿಕಾರ ಸ್ವಾರ್ಥವಾಗಲೀ, ಇಂದು ನಮ್ಮ ಚುನಾವಣೆಗಳಿಗೆ ಆಧಾರವೆನಿಸಿದ ಜಾತಿ ವ್ಯವಸ್ಥೆಯ ಪ್ರಮುಖ ಕವಲುಗಳಿಗೆ ಮೀಸಲಾಗುವಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕ ಹಿತದ ಲೋಕಸತ್ತೆ ಅರ್ಥ ಕಳೆದುಕೊಳ್ಳುತ್ತದೆ.

ಹಿಂದೆ ಹೇಳಿದಂತೆ ಧನಾರ್ಜನೆಯ ಮಹತ್ವ ಬರುವುದೇ ಚುನಾವಣೆಗಳಿಂದಾಗಿ, ಈ ಮೂಲಕ ರಾಜಕಾರಣಿಗಳು ತಮ್ಮ ರಾಜಕೀಯ ಅಸ್ತಿತ್ವವನ್ನು ಕಾದುಕೊಳ್ಳು ವುದಕ್ಕಾಗಿ. ಅಧಿಕಾರಕ್ಕೆ ಬಂದ, ಬರುವ ರಾಜಕೀಯ ಪಕ್ಷಗಳಿಗೆ ಪಕ್ಷದ ಹಿತವನ್ನು ಕಾದುಕೊಳ್ಳಲು ಯಾವುದೇ ರೀತಿಯಿಂದಾದರೂ ಧನಸಂಗ್ರಹ ಅಗತ್ಯವೆನಿಸಿದಾಗ ಲೋಕದ ಹಿತ ಗೌಣವೆನಿಸುತ್ತದೆ. 'ಈ ಯಾವುದೇ ರೀತಿ' ಹಣಸಂಗ್ರಹ ನ್ಯಾಯಾನ್ಯಾಯ ವಿವೇಚನೆಯನ್ನು ಕಳೆದುಕೊಳ್ಳುತ್ತದೆ; ಪಾತ್ರಾಪಾತ್ರ ವಿವೇಚನೆಯನ್ನೂ ಕಳೆದುಕೊಳ್ಳುತ್ತದೆ. ಪಕ್ಷವನ್ನು ಬಲಪಡಿಸಲು ಹಣಸಂಗ್ರಹದ ಕೆಲಸದಲ್ಲಿ ತೊಡಗಿರುವವರಿಗೆ ಇಂತಹ ಧನಸಂಗ್ರಹದ ವಿವರ ಕೊಡುವ ಅಗತ್ಯವಿರದ ಕಾರಣ ವೈಯಕ್ತಿಕ ಸ್ವಾರ್ಥವನ್ನೂ ಪೋಷಿಸಿಕೊಳ್ಳುವ ಅವಕಾಶ ಸುಲಭವಾಗಿ ದೊರಕುವಂತಾ ಗುತ್ತದೆ. ಧನಸಂಗ್ರಹದ ಅಗತ್ಯವನ್ನು ಮನಗಂಡು ತಮಗೆ ಅನುಕೂಲವೆನಿಸಿದ ಕೆಲಸಗಳನ್ನು ಮಾಡಿಸಿಕೊಳ್ಳಲು ಇದು ಒಳ್ಳೆಯ ಅವಕಾಶವೆಂದು ಸಾಮೂಹಿಕ ಹಿತವನ್ನು ತಿರಸ್ಕಾರದಿಂದ ನೋಡುವ ಸಮಾಜಕಂಟಕ ಶಕ್ತಿಗಳೂ ಈ ಧನದಾಹದ ರಾಜಕಾರಣಿಗಳ ಜತೆ ಬೆರೆಯುವುದು ಸುಲಭವಾಗುತ್ತದೆ. ಇವೆಲ್ಲ ನಮ್ಮ ಇಂದಿನ ಲೋಕಸತ್ತೆಯ ವಿಕೃತ ರೂಪಗಳು. ಪಕ್ಷಕ್ಕಾಗಿ ಹಣ ಕೊಟ್ಟು ತಮಗೆ ಅಗತ್ಯವಿರುವ ಕೆಲಸಗಳನ್ನು ಮಾಡಿಸಿಕೊಳ್ಳಿ ಎನ್ನುವಂತಾದಾಗ ಕೊಟ್ಟ ಹಣದಲ್ಲಿ ಎಷ್ಟು ಪಕ್ಷಕ್ಕೆ ಹೋಗುತ್ತದೆ ಎಷ್ಟು ಸಂಗ್ರಹಿಸಿದವರ ಕೈ ಸೇರುತ್ತದೆ ಎಂಬ ವಿವರಗಳು ಲಭ್ಯವಾಗುವುದಿಲ್ಲ. ಯಾರೊಬ್ಬ ಮಂತ್ರಿಯ ಅಥವಾ ರಾಜಕೀಯ ಪುಡಾರಿಯ ಮನೆಯಲ್ಲಿ ದೊರಕಬಹುದಾದ ಕೋಟಿಗಟ್ಟಲೆ ಹಣಕ್ಕೆ ವಾರಸುದಾರರು ಯಾರು ಎಂದು ಯಾರಿಗೂ ತಿಳಿಯಲಾಗದಂತಹ ಪರಿಸ್ಥಿತಿ ಬಂದಿರುವುದು ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ.

ಇನ್ನು ಆಡಳಿತೆಯ ಅಧಿಕಾರ ನಿರ್ವಹಿಸುವಲ್ಲಿ ಕೂಡ ಇಂಥದೇ ಕತೆ. 'ನಿಮ್ಮ

ಕೆಲಸವಾಗಬೇಕಾದರೆ ಇಂತಿಷ್ಟು ಹಣ ಕೊಡಿ. ಅದು ಮೇಲಿನ ತನಕ ಹೋಗಬೇಕಾಗುತ್ತದೆ' ಎಂದು ಹೇಳುವಾಗ ಆ ಹಣ ಸಾಗುವ ದಾರಿಯ ವಿವರ ಯಾರಿಗೂ ತಿಳಿಯುವುದಿಲ್ಲ. ಕೆಲವು ವರ್ಷಗಳ ಹಿಂದೆ ಮಹಾರಾಷ್ಟ್ರದ ಒಬ್ಬ ಪ್ರಾಮಾಣಿಕ ಐಎಎಸ್ ಅಧಿಕಾರಿ ಕೆಲಸಗಳ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ತನಿಖೆ ನಡೆಸಿದಾಗ ಅಕ್ರಮ ವ್ಯವಹಾರಗಳಿಂದ ಲಕ್ಷಗಟ್ಟಲೆ ಹಣದ ದುರುಪ ಯೋಗವಾಗುತ್ತಿದೆ ಎಂಬ ಸುಳುವು ಸಿಕ್ಕಾಗ ಅದನ್ನು ಬಹಿರಂಗಪಡಿಸಿದ ಮೇಲೆ ಆ ಅಧಿಕಾರಿಗೆ ಆದದ್ದು ಬೇರೆ ಇಲಾಖೆಗೆ ವರ್ಗ. ಪ್ರಾಮಾಣಿಕತೆಯ ಮುಖವಾಡ ಅಪ್ರಾಮಾಣಿಕತೆಯನ್ನು ಪೋಷಿಸುವ ರೀತಿಯ 'ನೈತಿಕತೆ' ಇಂದು ನಮ್ಮ ಸಮಾಜ ಜೀವನದಲ್ಲಿ ಬೆರೆತುಹೋಗಿದೆ. ನ್ಯಾಯವಾದ ಕರ್ತವ್ಯವನ್ನು ನಿರ್ವಹಿಸಲು 'ಅನ್ಯಾಯ'ದ್ದೆನಿಸಬಹುದಾದ ಹಣ ಕೊಡುವ ಪರಿಸ್ಥಿತಿ ಆಡಳಿತೆಯ ನ್ಯಾಯ ಮಾರ್ಗದ ಬಗ್ಗೆ ಸಾಮಾನ್ಯ ನಾಗರಿಕರಲ್ಲಿ ಅವಿಶ್ವಾಸವನ್ನು ಪ್ರಕಟಿಸುತ್ತದೆ. ಆದರೆ ಇದರಿಂದಾಗಿ ನಾಗರಿಕನನ್ನು ವೈಯಕ್ತಿಕವಾಗಿ, ಕೌಟುಂಬಿಕವಾಗಿ ಹಾಗೂ ಕೆಲವು ಸಂದರ್ಭಗಳಲ್ಲಿ ಸಾಮಾಜಿಕವಾಗಿಯೂ ತಟ್ಟುವ ಸಮಸ್ಯೆಗಳ ಪರಿಹಾರಕ್ಕೆ ಬೇರೆ ದಾರಿಯೇ ಇಲ್ಲವೆಂದು ಆತ 'ಅನ್ಯಾಯ'ಕ್ಕೇ ಮೊರೆ ಹೋಗುವಂತಾಗುತ್ತದೆ. ಆಡಳಿತೆಗೂ ಸಾಮಾನ್ಯ ನಾಗರಿಕನಿಗೂ ನಡುವೆ ಏರ್ಪಡುವ ಇಂತಹ ವೈಚಾರಿಕ ಕಂದರ ಲೋಕಸತ್ತೆಯನ್ನು ಪೋಷಿಸುವುದಿಲ್ಲ. ಅನ್ಯಾಯವನ್ನು ಪ್ರತಿಭಟಿಸುವ ದಾರಿ ನಾಗರಿಕನಿಗೆ ಕಾಣದಾದಾಗ ಆತ ನಿರ್ವೀರ್ಯನಾಗುತ್ತಾನೆ. ಆ ಕಾರಣ ಅನೈತಿಕ ವ್ಯವಹಾರವೇ ನಮ್ಮ ಲೋಕಸತ್ತೆಯ ನೀತಿಯಾಗುತ್ತದೆ. ಅಶಿಕ್ಷಿತ, ಲೋಕವ್ಯವಹಾರದಲ್ಲಿ ನ್ಯಾಯಾನ್ಯಾಯ ವಿವೇಚನೆ ಮಾಡಲು ಸಾಧ್ಯವಾಗದ ಬಡ ನಾಗರಿಕನಿಗಂತೂ – ಭಾರತದಲ್ಲಿ ಇವರೇ ಬಹುಸಂಖ್ಯಾತರು – ಪ್ರತಿಭಟಿಸಲಾಗದುದನ್ನು ಸಹಿಸಲೇಬೇಕು ಎಂದು ತೋರುವಂತಾದಾಗ ಈ ಅಜ್ಞಾನ ಮುಗ್ಧತೆಗಳ ಲಾಭ ಪಡೆಯುವವರು ಚುನಾಯಿತ ಪ್ರತಿನಿಧಿಗಳು, ಅಧಿಕಾರ ವಹಿಸಿರುವ ಆಡಳಿತೆಯ ಪಕ್ಷದ ರಾಜಕಾರಣಿಗಳು. ದೀರ್ಘಾವಧಿಯ ದುಡಿಮೆಯ ನಂತರ ಸಿಗಬೇಕಾದ ಪಿಂಚಣಿ ಪಡೆಯಲೂ ಪಡಬೇಕಾದ ಕಷ್ಟ, ಪ್ರಾವಿಡೆಂಟ್ ನಿಧಿಯಲ್ಲಿ ಹೂಡಿರುವ ತನ್ನದೇ ಹಣವನ್ನು ಮರಳಿ ಪಡೆಯಲು ಮಾಡಬೇಕಾದ ಹಣದ ಕಸರತ್ತು. ಪ್ರಾಥಮಿಕ ಶಾಲೆಯ ಅಧ್ಯಾಪನ ವೃತ್ತಿ ದೊರಕಿಸಿಕೊಳ್ಳಲು, ಅನುಕೂಲ ಸ್ಥಳಕ್ಕೆ ವರ್ಗಮಾಡಿಸಿಕೊಳ್ಳಲು, ಲಂಚ ಪಡೆಯಲು ಅನುಕೂಲ ಸಂದರ್ಭವಿರುವ ಪೋಲಿಸು ಇಲಾಖೆಯಲ್ಲಿ ಕೆಲಸ ದೊರಕಿಸಿಕೊಳ್ಳಲು, ಇಂಥವೇ ಹತ್ತಾರು ವಿಭಾಗಗಳಲ್ಲಿ ಒಂದಲ್ಲ ಒಂದು ರೀತಿಯ ವೈಯಕ್ತಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ನ್ಯಾಯವೆನಿಸದ ಹಣ ಸುರಿಯಬೇಕಾದ ಸಾಮಾಜಿಕ 'ನೈತಿಕತೆ' ಲೋಕಸತ್ತೆಯ ಆದರ್ಶವನ್ನು ಪೋಷಿಸುವುದಿಲ್ಲ. ಇಲ್ಲಿದೆ ನಮ್ಮ ಲೋಕಸತ್ತೆಯ ವಿರೋಧಾಭಾಸ.

ಕಳೆದ ಐವತ್ತು ವರ್ಷಗಳಲ್ಲಿ ಭಾರತದ ಸಾಮಾಜಿಕ ವ್ಯವಸ್ಥೆಯೂ ಆಧುನೀ ಕರಣದ ಪ್ರಕ್ರಿಯೆಯಲ್ಲಿ ಹಲವಾರು ಒತ್ತಡಗಳನ್ನೂ ಪರಿವರ್ತನೆಗಳನ್ನೂ ಸಹಿಸಬೇಕಾಗಿ

ಬಂದಿದೆ. ಇವುಗಳಲ್ಲಿ ಮುಖ್ಯವಾದದ್ದು ನಗರೀಕರಣ ಹಾಗೂ ಪರಿಣಾಮಸ್ವರೂಪೀ ಬೆಳವಣಿಗೆಗಳು. ಪೀಳಿಗೆ ಪೀಳಿಗೆಗಳ ನಡುವೆ ಅಂತರ ಬೆಳೆಯುವುದು ಒಂದು ಸ್ವಾಭಾವಿಕ ಪ್ರಕ್ರಿಯೆ. ಆದರೆ ಭಾರತದಲ್ಲಿ ಮಾತ್ರ ಇದು ತುಸು ಗಂಭೀರ ಸ್ವರೂಪ ಪಡೆಯುವಂತಾಗಿ ಸಮಾಜ ನಿಷ್ಠೆಯ ಒಂದು ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬರಲು ಸಾಧ್ಯವಾಗದೆ ಹೋಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಸಾಮಾಜಿಕ ಚಿಂತನೆಗೆ ರಾಷ್ಟ್ರ ಒಂದು ಘಟಕವಾಗಿದ್ದಂತೆ ಒಂದು ಆದರ್ಶ ಕೂಡ ಆಗಿತ್ತು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಲೋಕಸತ್ತಾತ್ಮಕವೆನಿಸುವ ಆಡಳಿತೆಯಡಿ ಜಾತಿ ವ್ಯವಸ್ಥೆಯೊಳಗಿರುವ ಗುಂಪುಗಳೇ ರಾಜಕೀಯ ಅಧಿಕಾರಕ್ಕಾಗಿ ಹಾತೊರೆಯುವಂತಹ ಸ್ಥಿತಿ ಉಂಟಾದುದರಿಂದ ಸಾಮೂಹಿಕವೆನಿಸುವ ಸಮಾಜ ನಿಷ್ಠೆಯ ಬದಲಾಗಿ ಪ್ರತಿಯೊಂದು ಗುಂಪು ಕೂಡ ತನ್ನ ಸ್ವಾರ್ಥಕ್ಕೆ ಅಂಟಿಕೊಳ್ಳುವ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಸಾಮರಸ್ಯದ ಆದರ್ಶ ಬದಿಗೆ ಸರಿದು ಎಟಕುವ ಲೋಕಾಧಿಕಾರವನ್ನು ತಮ್ಮ ತಮ್ಮ ಗುಂಪುಗಳ ಸ್ವಾರ್ಥಕ್ಕೆ ಒಳಪಡಿಸಬೇಕು ಎಂಬ ಆಸೆಯೂ ಪ್ರಕಟವಾಗತೊಡಗಿ ಪ್ರಜ್ಞಾವಂತ ನಾಗರಿಕರು ಭ್ರಮನಿರಸನಕ್ಕೆ ಒಳಗಾಗುವ ಪರಿಸ್ಥಿತಿಯೂ ಉಂಟಾಗಿದೆ. ಇದಕ್ಕೆ ಸರಿಯಾಗಿಯೇ ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಬಂದ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿ, ಇವುಗಳಿಂದಾಗಿ ವಿಶ್ವದ ವ್ಯವಹಾರವನ್ನು ಸುಲಭವಾಗಿಯೇ ಗಮನಿಸಲು ಸಾಧ್ಯವಾದ ಭಾರತದ ನಾಗರಿಕನಿಗೂ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವ ಸೆಣಸಾಟದಲ್ಲಿ ತನ್ನ ವೈಯಕ್ತಿಕ ಹಾಗೂ ಕೌಟುಂಬಿಕ ಸ್ವಾರ್ಥವನ್ನು ಪೋಷಿಸಲು ಸಹಕರಿಸುವ ತತ್ವ, ಆದರ್ಶಗಳಷ್ಟೆ ಮುಖ್ಯ ಎಂದು ಕಂಡುಬಂದುದರಲ್ಲಿ ಆಶ್ಚರ್ಯವಿಲ್ಲ. ನಗರೀಕರಣದ ಪ್ರಕ್ರಿಯೆಯಲ್ಲಿ ಜಂಟಿ ಕುಟುಂಬ ಪದ್ಧತಿ ನೆಚ್ಚಿಕೊಂಡಿದ್ದ ಸಾಂಸ್ಕೃತಿಕ ಪರಂಪರೆಯ ಬೇರುಗಳು ಸಡಿಲವಾಗುತ್ತ ಹೆಚ್ಚಾಗಿ ಕಳಚಿಕೊಳ್ಳುತ್ತ, ಲೋಕಸತ್ತೆಯ ವ್ಯವಹಾರ ನೀತಿಯಲ್ಲಿ ಅಪ್ರಾಮಾಣಿಕತೆ, ಅನೈತಿಕತೆಯ ಸಂದರ್ಭಗಳನ್ನೆ ಹೆಚ್ಚಾಗಿ ಕಾಣುತ್ತ, ವೇಗ ಪಡೆದುಕೊಳ್ಳುತ್ತಿರುವ ಆಧುನಿಕ ಜೀವನಕ್ರಮದಲ್ಲಿ ಜೀವನ ಮೌಲ್ಯಗಳ ವಿಮರ್ಶೆಯೇ ಅಪ್ರಸ್ತುತವೇನೋ ಎಂಬಂತೆ ಭಾರತದ ಮಧ್ಯಮ ವರ್ಗ ತೊಳಲಾಡುತ್ತಿದೆ. ಅಪ್ರಾಮಾಣಿಕತೆ ಅನೈತಿಕತೆಗಳೇ, ವಾಸ್ತವದ ಸ್ಥಿತಿಯನ್ನು ಬಿಂಬಿಸುತ್ತಿರುವುದರಿಂದ 'ನೈತಿಕ' ದೃಷ್ಟಿಕೋನ ವೆಂಬುದಕ್ಕೇನಾದರೂ ಅರ್ಥವಿದೆಯೇ ಎಂಬ ಸಂದೇಹವನ್ನು ತಂದುಕೊಳ್ಳುವಂತಹ ಸಾಮಾಜಿಕ ಪರಿಸ್ಥಿತಿಯು ಉಂಟಾಗಿದೆ. ಸ್ವಾತಂತ್ರ್ಯೋತ್ತರ ಕಾಲದ ಎರಡನೆಯ ಪೀಳಿಗೆಗೆ ರಾಷ್ಟ್ರದ ವ್ಯವಹಾರದಲ್ಲಿ ಯಾವ ಆದರ್ಶವೂ ಕಾಣದಂತಾಗಿ ಭ್ರಮನಿರಸನ ತಲೆದೋರಿ ಸ್ವಂತ ಪರಿವಾರದ ಸುಖ ಸೌಕರ್ಯಗಳಷ್ಟೆ ಆದರ್ಶವಾಗಿ ಸಮಾಜನಿಷ್ಠೆ ಹಿಂದೆ ಸರಿಯುವಂತಾಗಿದೆ. ಹಾಗೆಂದು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾಮಾಜಿಕ ಹಿತದ ಆದರ್ಶವನ್ನಿರಿಸಿಕೊಂಡ ರಚನಾತ್ಮಕ ಕೆಲಸಗಳು ನಡೆಯುತ್ತಲೇ ಇಲ್ಲವೆಂದಲ್ಲ. ಆದರೆ ಯಾವ ರೀತಿಯ ಪ್ರಚಾರವನ್ನೂ ಅಪೇಕ್ಷಿಸದೆ ಅನಾಥರ, ದೀನ ದಲಿತರ, ರೋಗಿಗಳ, ಅಂಗವಿಕಲರ, ವೃದ್ಧರ, ಬಹಿಷ್ಕೃತರ, ಹಿಂಸೆಗೊಳಗಾದವರ,

ಶೋಷಣೆಗೊಳಗಾದ ಸ್ತ್ರೀಯರ ಸೇವೆಯನ್ನೇ ಗುರಿಯಾಗಿಸಿಕೊಂಡ ವಿಶಿಷ್ಟ ಸಮುದಾಯಗಳೂ, ಸಾಕ್ಷರತೆ, ವೈಜ್ಞಾನಿಕ ತಿಳಿವಳಿಕೆಯನ್ನು ಹರಡಲು ಪ್ರಯತ್ನಿಸುತ್ತಿರುವ ಗುಂಪುಗಳೂ ದೇಶದಾದ್ಯಂತ ತಮ್ಮಷ್ಟಕ್ಕೆ ತಾವು ಎಂಬಂತೆ ಚಟುವಟಿಕೆಗಳಲ್ಲಿ ತೊಡಗಿವೆಯಾದರೂ, ರಾಜಕೀಯ ಕೊಳೆಯೇ ದೇಶದಾದ್ಯಂತ ಹರಡುತ್ತಿರುವ ಪರಿಸ್ಥಿತಿಯಲ್ಲಿ ಇವುಗಳ ಒಳ್ಳೆಯ ಕೆಲಸವೂ ರಾಷ್ಟ್ರವ್ಯಾಪಿ ಎನಿಸಬಹುದಾದ ಒಂದು ಆದರ್ಶದ ಪರಂಪರೆಯನ್ನು ಹುಟ್ಟುಹಾಕಲು ಸಮರ್ಥವಾಗಿಲ್ಲ. ಹೀಗಾಗಿ ಸಾಮಾನ್ಯ ನಾಗರಿಕರಿಗೂ ಮುಗ್ಧರಾದ ಹಳ್ಳಿಯ ಬಡ ಜನತೆಗೂ ಸಾಮಾಜಿಕ ಸಂದರ್ಭ ಸೂಚಿಸುತ್ತಿರುವುದು ಅನೈತಿಕತೆಯನ್ನೆ, ಸಮಾಜ ನಿಷ್ಠೆಯ ಪ್ರಾಮಾಣಿಕತೆಯನ್ನಲ್ಲ.

ನಮ್ಮ ಉದ್ಯಮ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯದಿಂದ ಬಂದ ಅವಕಾಶಗಳ ಸದುಪಯೋಗ ಹಾಗೂ ದುರುಪಯೋಗಗಳಿಂದಲೂ, ನಗರ ಕೇಂದ್ರಿತ ಜೀವನ ಹೆಚ್ಚುತ್ತಿರುವಂತೆ ವರ್ಗ ವೈಷಮ್ಯವನ್ನು ಹೆಚ್ಚಿಸುವ ನವ ಶ್ರೀಮಂತಿಕೆಯೂ ವಿಶ್ವದಾದ್ಯಂತ ಹರಡುತ್ತಲೇ ಬಂದ ಗ್ರಾಹಕ ಸಂಸ್ಕೃತಿಯೂ ತಮ್ಮ ಪ್ರಭಾವ ವರ್ಚಸ್ಸುಗಳನ್ನು ಬೀರುತ್ತ ಇಂದಿನ ಯುವ ಜನಾಂಗಕ್ಕೆ ಪ್ರಭಾವಕಾರಿ ಮಾನವೀಯ ಸಂಸ್ಕಾರಗಳನ್ನು ಪೋಷಿಸಬಹುದಾದ ಭಾರತೀಯವೆನಿಸುವ ಸಾಂಸ್ಕೃತಿಕ ಚಿಂತನೆಯನ್ನು ತಂದುಕೊಳ್ಳಬೇಕು ಎಂಬ ಉತ್ಸಾಹವನ್ನೂ ಕಮರಿಸುತ್ತಿವೆ. ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ನಮ್ಮ ಜಾನಪದ ಸಂಸ್ಕಾರಗಳಿಂದ ನಾವು ದೂರ ಸರಿಯುತ್ತಿರುವುದಕ್ಕೆ ನಮ್ಮ ಲೋಕಸತ್ತಾತ್ಮಕ ವ್ಯವಹಾರದಲ್ಲಿ ಬೆರೆತುಕೊಂಡಿರುವ ಕೊಳೆಯಷ್ಟೆ ಕಾರಣವಲ್ಲ. ನಮ್ಮ ಇಂದಿನ ಶಿಕ್ಷಣ ನೀತಿಯೂ ಕಾರಣವಾಗಿದೆ. ಇಂದು ಅನುಕರಣೆಯೇ ಆದರ್ಶವೆನಿಸಿ ನಾವು ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿರುವ ಪರಿಸರ ಪ್ರಜ್ಞೆ, ಸೌಂದರ್ಯ ಪ್ರಜ್ಞೆಗಳನ್ನೂ ಮರೆಯುವಂತಾಗಿದೆ. ನಮ್ಮ ಸಂಗೀತ ನೃತ್ಯ ಶೈಲಿಗಳು ಬದುಕಿಗೆ ಎಷ್ಟು ಹತ್ತಿರವಾದಂಥವು, ಜೀವನೋತ್ಸಾಹವನ್ನು ಕುದುರಿಸುವಂಥವು ಎಂಬುದನ್ನೂ ಮರೆಯುತ್ತಿದ್ದೇವೆ. ನಮ್ಮ ಎರಡು ಸಂಗೀತ ಶೈಲಿಗಳು ಯಾವುದೊಂದು ಜಾತಿಗಾಗಲಿ, ಗುಂಪಿಗಾಗಲಿ ಸಂಬಂಧಿಸಿದಂಥವಲ್ಲ, ನಮ್ಮ ರಾಷ್ಟ್ರವನ್ನೆ ಪ್ರತಿನಿಧಿಸುವ ಯೋಗ್ಯತೆಯುಳ್ಳವು ಎಂಬುದನ್ನು ಮರೆಯುತ್ತೇವೆ. ನಮ್ಮ ನೃತ್ಯ ಶೈಲಿಗಳು ಹಲವಾರು ಇವೆಯಾದರೂ ಇವೆಲ್ಲ ಪ್ರತಿನಿಧಿಸುವುದು ಭಾರತದ ಸಾಂಸ್ಕೃತಿಕ ವೈವಿಧ್ಯವನ್ನು ಎಂಬುದನ್ನೂ ಮರೆಯುತ್ತೇವೆ. ಇವೆಲ್ಲವುಗಳನ್ನು ಮರೆಯಲು ಸಾಧ್ಯವಾಗುವ ಶಿಕ್ಷಣ ಕ್ರಮವೂ, ಸಾಮಾಜಿಕ ಪರಿಸರವೂ ನಮ್ಮನ್ನು ನಮ್ಮ ನೆಲದಿಂದಲೇ, ನಮ್ಮ ಜನಪದ ಜೀವನದಿಂದಲೇ ಪರಕೀಯರನ್ನಾಗಿಸುವ ಸಂದರ್ಭದಲ್ಲಿ ನಾವು ಭಾರತೀಯವೆನಿಸುವ ಮೌಲ್ಯಗಳನ್ನು ಆಧುನಿಕ ಯುಗಕ್ಕೆ ಹೊಂದುವಂತೆ ರೂಪಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಹೀಗಿರುವಾಗ ನಮ್ಮ ಸಮಾಜ ಜೀವನದಲ್ಲಿ ರಾಷ್ಟ್ರೀಯವೆನಿಸಬಹುದಾದ ಚೈತನ್ಯದ ನೆಲೆ ಕಾಣುವುದೂ ಕಷ್ಟವಾಗಿದೆ. ನಮ್ಮ ನೆರೆಯ ಸುತ್ತಮುತ್ತ ಇರುವ ರಾಷ್ಟ್ರದಲ್ಲಿ ರೂಪುಗೊಂಡಿರುವ ಅಥವಾ ರೂಪುಗೊಳ್ಳುತ್ತಿರುವ ರಾಷ್ಟ್ರೀಯ ಚೈತನ್ಯವನ್ನು ಪ್ರತಿಬಿಂಬಿಸುವ ರಾಷ್ಟ್ರೀಯ ಅಸ್ಮಿತೆ ನಮ್ಮ ಕಣ್ಣು ತೆರೆಸುವುದಿಲ್ಲವೆಂಬ

ನೋವನ್ನೂ ಇಲ್ಲಿ ಪ್ರಕಟಿಸಬೇಕಾಗಿದೆ.

ಸ್ವಾರ್ಥ, ಸ್ವಾರ್ಥ ಮೂಡಿಸುವ ಕ್ರೌರ್ಯ ಸಾಮಾನ್ಯವಾಗಿ ಮನುಷ್ಯನ ಸಹಜ ಪ್ರವೃತ್ತಿಗಳು. ಇವಕ್ಕೆ ಸಂಯಮದ ಬೇಲಿ ಕಟ್ಟಲು ಸಾಧ್ಯವಾಗುವುದು ಮಾನವೀಯ ಸಂವೇದನೆಗಳನ್ನು ಬೆಳೆಸಿಕೊಂಡಾಗ; ಸಮಾಜನಿಷ್ಠೆಯ ದೂರದೃಷ್ಟಿ ಇದ್ದಾಗ. ಮಹಾವೀರ ಬುದ್ಧರ ನಾಡಾದ ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಹಿಂಸೆ ಇದ್ದಿಲ್ಲವೆಂದಲ್ಲ. ಶೋಷಣೆಯ ಅಪ್ರತ್ಯಕ್ಷ ಹಿಂಸೆ ಎಲ್ಲ ಕಡೆಗಿದ್ದರೂ ದೈಹಿಕ ಹಿಂಸೆ ಯಾವುದೇ ಕಾರಣದಿಂದಲಾದರೂ ತಿರಸ್ಕಾರಾರ್ಹ ಎಂಬ ಸಾರ್ವಜನಿಕ ತಿಳಿವಳಿಕೆ ಇತ್ತು. ಆದರೆ ದೇಶ ಇಬ್ಭಾಗವಾದಾಗ ಭುಗಿಲೆದ್ದ ಹಿಂಸೆ ಅಹಿಂಸೆಯ ಪ್ರತಿಮೂರ್ತಿ ಎನಿಸಿದ್ದ ಗಾಂಧೀಜಿಯವರನ್ನು ಗುಂಟಿನೇಟಿಗೆ ಬಲಿಕೊಟ್ಟಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಿಂಸೆ ಬೆಳೆಯುತ್ತ ಬಂದ ಬಗೆಗೆ ಸಾವಿರ ಕಾರಣಗಳನ್ನು ಕೊಡಬಹುದು. ಜನಸಂಖ್ಯಾ ಸ್ಫೋಟ, ನಿರುದ್ಯೋಗ ಸಮಸ್ಯೆ, ಸ್ವಾತಂತ್ರ್ಯದಿಂದಾಗಿಯೇ ಬಂದ ಸಾಮಾಜಿಕ ಪರಿವರ್ತನೆಗಳು, ಸ್ವಾರ್ಥಕ್ಕೆ ಕಡಿವಾಣ ಹಾಕುವಂತಿದ್ದ ಕೆಲವು ಭೂ ಸುಧಾರಣೆಯ ಶಾಸನಗಳು, ಪಾನನಿರೋಧ ಬೆಳೆಸಿದ ಕಳ್ಳಭಟ್ಟಿ ವ್ಯವಸಾಯ, ಕಳ್ಳಸಾಗಣೆ, ಮಾದಕ ವಸ್ತುಗಳ ಜಾಲ ಇಂಥವೆಲ್ಲ. ಆದರೆ ಸಾಮಾಜಿಕವಾಗಿ ಇದು ತಿರಸ್ಕಾರ್ಹ ಪ್ರವೃತ್ತಿ ಎಂಬ ತಿಳಿವಳಿಕೆ ಕರಗತೊಡಗಿ ಇದು ಒಂದು ಭಯೋತ್ಪಾದಕ ಶಕ್ತಿಯಾಗಿ ಬೆಳೆಯ ತೊಡಗಿದುದು ನಮ್ಮ ಲೋಕಸತ್ತೆಯನ್ನು ಬೆಳೆಸಿಕೊಂಡು ಬರಬೇಕಾದ ರಾಜಕೀಯ ಶಕ್ತಿಗಳಿಂದಲೂ ಅವು ರೂಢಿಸಿಕೊಂಡು ಬಂದ ಮೌಲ್ಯಗಳಿಂದಲೂ ಎಂದು ಹೇಳುವಂತಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಮ್ಮ ಕಳೆದ 50 ವರ್ಷಗಳಲ್ಲಿ ಸಾಮಾಜಿಕ ತಲ್ಲಣಕ್ಕೆ ಕಾರಣವಾಗಿರುವ ಎರಡು ಮುಖ್ಯ ಸಂಗತಿಗಳು ಭ್ರಷ್ಟಾಚಾರ ಮತ್ತು ಹಿಂಸೆಯ ಭಯ. ಯಾವುದೇ ಕಾಯಿದೆಯ ನ್ಯಾಯಪಾಲನೆಯ ರಕ್ಷಣೆಯೂ ತಮಗೆ ಸಾಧ್ಯವಿಲ್ಲ ಎನ್ನುವ ಮನಃಸ್ಥಿತಿ ಉಂಟಾಗುವ ಸಮಾಜ ಜೀವನ ಆರೋಗ್ಯಕರ ವಾದುದಲ್ಲ, ಅಷ್ಟೇ ಅಲ್ಲ, ಲೋಕಸತ್ತೆಯನ್ನು ಪೋಷಿಸುವಂಥದೂ ಅಲ್ಲ. ಸುಲಿಗೆಯ ಶೋಷಕ ಪ್ರವೃತ್ತಿ ನಮ್ಮ ಸಮಾಜ ಜೀವನದಲ್ಲಿ ದೀರ್ಘ ಕಾಲದಿಂದಲೂ ಇದೆ. ಆದರೆ ಇದು ಸಾಮಾಜಿಕ ಸ್ವಾಸ್ಥ್ಯವನ್ನು ಕದಡುವಷ್ಟು ಪರಿಣಾಮಕಾರಿಯಾದ ಸುಲಿಗೆ ಎನಿಸಿಕೊಳ್ಳದಿರುವುದಕ್ಕೆ ದೀರ್ಘಕಾಲ ಇದು ಆಧುನಿಕವೆನಿಸುವ ತಿಳಿವಳಿಕೆಯ ಜೀವನ ಶೈಲಿಯೊಂದಿಗೆ ಮುಖಾಮುಖಿಯಾಗುವ ಪ್ರಸಂಗ ಬಂದಿರಲಿಲ್ಲವಾದುದರಿಂದ. ಇಂದು ಮಾತ್ರ ಸುಲಿಗೆಯ ಹಿಂಸೆ ಜೀವ ಭಯಕ್ಕೂ ಕಾರಣವಾಗುವಂತಹ ಸಂದರ್ಭಗಳು ಹೆಚ್ಚುತ್ತಲೇ ಬಂದಿರುವುದನ್ನು ನಾವು ನಮ್ಮ ಲೋಕಸತ್ತೆಯ 50 ವರ್ಷಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಣುತ್ತ ನಮ್ಮ ಸಾಮಾಜಿಕ ಜೀವನದ ಕಂದರಗಳನ್ನೂ ಗುರುತಿಸತೊಡಗಿ ನಮ್ಮ ಜೀವನ ಶೈಲಿಯನ್ನು ವಿಮರ್ಶೆಗೊಳಪಡಿಸುತ್ತಿದ್ದೇವೆ. ಆರ್ಥಿಕ ವ್ಯವಹಾರಗಳಲ್ಲಿ ಅಪ್ರಾಮಾಣಿಕತೆ ಬೆರೆಯುವಾಗ, ಹಣವೇ, ಅದರಲ್ಲೂ ಕಪ್ಪುಹಣವೇ, ಜೀವನ ಶೈಲಿಯನ್ನು ರೂಪಿಸುವಾಗ ನಾವು ಇತ್ತೀಚೆಗಿನ ದಿನಗಳಲ್ಲಿ ಕಾಣುತ್ತಿರುವಂತಹ ಪ್ರಸಿದ್ಧ ಉದ್ಯಮಿಗಳ, ಕಟ್ಟಡ ನಿರ್ಮಾಪಕರ, ಚಿತ್ರೋದ್ಯಮದ ಗಣ್ಯ ವ್ಯಕ್ತಿಗಳ ಕೊಲೆಗಳು ಭಯ

ಮೂಡಿಸುವ ಸಂದರ್ಭಗಳಾಗುತ್ತಿವೆ. ಎಲ್ಲ ಹೊಂದಿಕೊಂಡಂತಿರಬೇಕಾಗಿರುವ ನಮ್ಮ ಕೌಟುಂಬಿಕ ಜೀವನದಲ್ಲೂ ಇಂದು ಭಯ ಮೂಡಿಸುವ ಬಯಕೆಗಳು, ದೀರ್ಘಕಾಲದ ಸಾಮಾಜಿಕ ಅನಿಷ್ಟವೆನಿಸಿರುವ ವರದಕ್ಷಿಣೆಯ ಹಾವಳಿಯಿಂದ ಆಗುತ್ತಿರುವ ಸಜೀವ ದಹನದ ಕೊಲೆ ಪ್ರಕರಣಗಳು – ಒಂದು ಅಂದಾಜಿನಂತೆ ಸುಮಾರು 50,000 ಮಹಿಳೆಯರು ಪ್ರತಿ ವರ್ಷ ಈ ಪೀಡೆಗೆ ಬಲಿಯಾಗುತ್ತಾರೆ. ಇನ್ನು ಕೌಟುಂಬಿಕ ಸಂಬಂಧಗಳಿಗೆ ಅರ್ಥವಿಲ್ಲವೆನ್ನುವಂತೆ ಮಗ ತಾಯಿಯನ್ನು ಕೊಲ್ಲುವ, ಗಂಡ ಹೆಂಡತಿಯನ್ನು ಕೊಲ್ಲುವ, ಅಣ್ಣ ತಮ್ಮ ಹೊಡೆದುಕೊಂಡು ಸಾಯುವ, ಹಾಗೆಯೇ ಆರ್ಥಿಕ ಕಾರಣಗಳಿಗಾಗಿಯೂ, ಕೆಲವು ಕ್ಷುಲ್ಲಕವೆನಿಸುವ ಕಾರಣಗಳಿಗಾಗಿಯೂ ಹೆಚ್ಚುತ್ತಲೇ ಇರುವ ಆತ್ಮಹತ್ಯೆಯ ಪ್ರಕರಣಗಳು. ಸಾಮಾಜಿಕ ಆದರ್ಶಗಳಾಗಿ ಇರಬೇಕಾದ ಟ್ರೇಡ್ ಯೂನಿಯನ್ ಮುಂತಾದ ಸಂಘಟನೆಗಳಲ್ಲೂ ಕೊಲೆಯ ಹಿಂಸೆಯ ಪ್ರಕರಣಗಳು, ಇವೆಲ್ಲ ಸೃಷ್ಟಿಸುತ್ತಲೇ ಇರುವ ಭಯದ ಆವರಣದಲ್ಲಿ ನಮ್ಮ ಭಯಮುಕ್ತ ಲೋಕಸತ್ತಾತ್ಮಕ ವ್ಯವಸ್ಥೆ 'ಹೇಗೆ ಬೆಳೆಯಬೇಕು ಎಂಬುದು ಚಿಂತಿಸಬೇಕಾದ ವಿಚಾರ.' ರಾಜಕಾರಣಿಗಳ ಮತ್ತು ಕ್ರಿಮಿನಲ್ ಮನೋವೃತ್ತಿಯ ಜನರ ಸಖ್ಯದ ಬಗೆಗೆ ಲೋಕಸಭೆಯಲ್ಲೂ, ವೈಚಾರಿಕ ವೇದಿಕೆಗಳಲ್ಲೂ ಚರ್ಚಿಸುವಂತಾದ ಪರಿಸ್ಥಿತಿ ಸೂಚಿಸುವುದು ನಮ್ಮ ಪ್ರಜಾಪ್ರಭುತ್ವದ ಅಲುಗುತ್ತಿರುವ ಬುನಾದಿಯನ್ನೇ. ಆರ್ಥಿಕ ಹಾಗೂ ರಾಜಕೀಯ ಕಾರಣಗಳಿಗಾಗಿ ಕೊಲೆ ಮಾಡಲು 'ಸುಪಾರಿ' (ವೀಳ್ಯ) ಕೊಡುವ ಅಸಹ್ಯ ಪದ್ಧತಿ ಇಂದು ನ್ಯಾಯಪಾಲಕರ ಭಯವಿರದ ಆವರಣದಲ್ಲಿ ಮುಂದುವರಿಯುತ್ತಿರುವುದು ನಮ್ಮ ವಿಕೃತ ಸಾಮಾಜಿಕ ಸಂಸ್ಕಾರವನ್ನು, ಲಂಚದಂತೆ ಎತ್ತಿತೋರಿಸುತ್ತಿದೆ. ಇನ್ನು ರಾಜಕೀಯವಾಗಿ ಪಂಜಾಬ, ಕಾಶ್ಮೀರ, ಬಿಹಾರ, ಅಸ್ಸಾಂ, ಈಶಾನ್ಯ ರಾಜ್ಯಗಳು ಇಂತಹ ಕಡೆಗಳಲ್ಲಿ ನಡೆದಿರುವ ಇನ್ನೂ ನಡೆಯುತ್ತಲೇ ಇರುವ ಸ್ವಯಮಾಧಿಕಾರ ಚಳವಳಗಳಲ್ಲಿ ಆಗುತ್ತಿರುವ ಹಿಂಸೆಯಲ್ಲಿ ರಾಜಕೀಯ ಕಾರಣ ಮಾತ್ರ ಎಷ್ಟು, ಸಮಾಜ ಕಂಟಕರ ಪಾತ್ರವೆಷ್ಟು ಎಂದು ನಮಗೆ ತಿಳಿಯಲು ಸಾಧ್ಯವಾಗದಂತೆ ಹಿಂಸೆ ಮುಂದುವರಿದಿದೆ. ಹಿಂಸೆ, ಪ್ರತಿಹಿಂಸೆ, ಗುಂಪಿನ ಸ್ವಾರ್ಥದ ಕಾರಣದ ಹಿಂಸೆ, ಅಧಿಕಾರಕ್ಕಾಗಿ ಹಿಂಸೆ, ಗುಂಪು ಗುಂಪುಗಳೊಡನೆ ಸಂಯಮ ಮರೆತ ಸಂಘರ್ಷ, ಅದರಲ್ಲೂ ಹಿಂಸೆ, ಇವೆಲ್ಲ ಸೂಚಿಸುವುದು ಒಂದು ಅಸ್ವಸ್ಥ ಸಮಾಜವನ್ನೇ. ರಾಜಕೀಯ ಅಧಿಕಾರದಲ್ಲಿರುವವರೂ, ಅದರಲ್ಲಿ ಹಿಂದೆ ಇದ್ದವರೂ ಸಶಸ್ತ್ರ ಕಾವಲಿನೊಡನೆ ತಿರುಗುತ್ತಿರುವ ಅಸಹ್ಯ ದೃಶ್ಯಗಳನ್ನು ನೋಡುವ ಜನಸಾಮಾನ್ಯರು ಭಯಮುಕ್ತ ವಾತಾವರಣವೇನೆಂದು ಕೇಳುವಂತಾಗಿದೆ. ದೇಶದ ರಕ್ಷಣಾಮಂತ್ರಿ ಸಶಸ್ತ್ರ ಕಾವಲು ಪಡೆಯೊಡನೆ ತಿರುಗುತ್ತಿರುವ ಚಿತ್ರವನ್ನು ನೋಡುವ ಜನ ನಾಚಿಕೆಪಡಬೇಕೇ, ನಮ್ಮ ಲೋಕಸತ್ತೆಯ ಕುರಿತು ಅಭಿಮಾನ ತಾಳಬೇಕೆ ! ಲೋಕಸತ್ತಾತ್ಮಕ ವ್ಯವಸ್ಥೆಗೆ ಇದು ನಾಚಿಕೆ ತರಿಸಬೇಕಾದ ವಿಚಾರ. ಹೆಚ್ಚುತ್ತಲೇ ಇರುವ ನಗರೀಕರಣದಿಂದಾಗಿ ಜನ ಪಟ್ಟಣಗಳನ್ನೆ ಸೇರುತ್ತಿದ್ದರೂ ಅವರಿಗೆ ಭಯಮುಕ್ತ ಜೀವನ ಮಾಡಲು ಸಾಧ್ಯವಾಗದಂತೆ ಹೆದ್ದಾರಿ ದರೋಡೆಗಳು, ಮನೆಯ ಬಾಗಿಲೊಡೆದು ದರೋಡೆಗಳು, ಪೋಲಿಸರ ಭಯವೂ

ಇರದಂತೆ ನಡುಹಾದಿಯಲ್ಲೇ ಹಾಡು ಹಗಲೇ ದರೋಡೆ, ಕೊಲೆಯ ಪ್ರಕರಣಗಳು, ಕೋರ್ಟಿನ ಆವರಣದಲ್ಲೆ ಗುಂಡಿಟ್ಟು ಕೊಲೆ ಮಾಡುವಂತಹ ಸಮಾಜ ಕಂಟಕ ಶಕ್ತಿಗಳು ಇಂದು ಸಹಿಸಲೇಬೇಕಾದ ಅನಿಷ್ಟಗಳೆಂದು ತಿಳಿಯುವಂತಾದ ಸಾಮಾಜಿಕ ಸನ್ನಿವೇಶ ಲೋಕಸತ್ತಾತ್ಮಕ ವ್ಯವಸ್ಥೆಯನ್ನು ಸಂಕೇತಿಸುವುದಿಲ್ಲ – ಸಾರ್ವತ್ರಿಕವೆನಿಸುವ ಸುಲಿಗೆ ಹಿಂಸೆಗಳ ಸಮುದಾಯ ಜೀವನವನ್ನು. ಲೋಕ ಹಿತದ ಕಾರ್ಯ ನಿರ್ವಹಿಸಬೇಕಾದವರು ಬುಲೆಟ್ ಪ್ರೂಫ್ ಕಾರುಗಳಲ್ಲಿ ತಿರುಗಬೇಕಾದ, ದೇಹ ರಕ್ಷಣೆಗೆ ಅಗತ್ಯವೆನಿಸುವ ಸಶಸ್ತ್ರ ಪೋಲಿಸರ ಕಾವಲು ಇರದೆ ತಿರುಗಲು ಸಾಧ್ಯವಾಗದಂತಹ ಸಮಾಜ ಜೀವನವನ್ನು ನಾವು ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಮರ್ಥಿಸಲು ಸಾಧ್ಯವೇ ಎಂದು ಯೋಚಿಸಬೇಕಿದೆ. ಇತರ ರಾಜ್ಯಗಳಲ್ಲಿ ರಾಷ್ಟ್ರಾಧ್ಯಕ್ಷರನ್ನು ಅಥವಾ ಅತ್ಯಂತ ಗರಿಷ್ಠ ಅಧಿಕಾರವನ್ನು ಹೊಂದಿರುವವರ ರಕ್ಷಣೆ, ಆಡಳಿತೆ ಒಮ್ಮೆಗೇ ಕುಸಿಯುವಂತಹ ಸನ್ನಿವೇಶಗಳು ಬರಬಾರದೆಂಬ ಎಚ್ಚರದಿಂದ ಮುಂದುವರಿಯುತ್ತಿದೆಯಾದರೆ ನಮ್ಮಲ್ಲಿ ಕೆಲವು ಸಾಮಾನ್ಯ ಮಂತ್ರಿಗಳಿಗೂ ಚಿಲ್ಲರೆ ರಾಜಕಾರಣಿಗಳಿಗೂ ಬುಲೆಟ್ ಪ್ರೂಫ್ ಕಾರುಗಳ ರಕ್ಷಣೆಯ ಸೌಲಭ್ಯ ಒಂದು ಪ್ರತಿಷ್ಠೆಯ ಚಿಹ್ನೆಯಂತೆ ಬಳಸಲಾಗುತ್ತಿರುವ ಸನ್ನಿವೇಶ ಲೋಕಸತ್ತೆಯ ವಿಡಂಬನೆ ಎಂದು ತೋರುವುದು ಅಸಹಜವೇನಲ್ಲ.

ನಮ್ಮ ಸ್ವಾತಂತ್ರ್ಯದ 50 ವರ್ಷಗಳಲ್ಲಿ ತಾಂತ್ರಿಕ ಪರಿಣತಿಯಲ್ಲಿ, ವೈಜ್ಞಾನಿಕ ಪ್ರಯೋಗಗಳಲ್ಲಿ, ವಾಣಿಜ್ಯ ವ್ಯವಹಾರಗಳಲ್ಲಿ, ಉದ್ಯಮಶೀಲತೆಯಲ್ಲಿ, ಕೃಷಿ, ಸಹಕಾರ ಸಂಘಟನೆ, ಮೊದಲಾದ ಹಲವು ಕ್ಷೇತ್ರಗಳಲ್ಲಿ – ಆರ್ಥಿಕ ವ್ಯವಹಾರದ ದೃಷ್ಟಿಯಿಂದ ಪ್ರಗತಿಸೂಚಕವೆನಿಸುವಂಥವು – ಸಾಮಾಜಿಕವಾಗಿ ಒಂದು ರಾಷ್ಟ್ರೀಯ ಚೈತನ್ಯವನ್ನು. ರಾಷ್ಟ್ರೀಯವೆನಿಸುವ ಸಂಸ್ಕಾರವನ್ನು ಪ್ರದರ್ಶಿಸಬೇಕಾಗಿದ್ದರೂ, ಇದು ಸಾಧ್ಯವಾಗದಂತೆ, ನಾವು ಭ್ರಷ್ಟಾಚಾರ, ಜಾತೀಯತೆ, ಸಾರ್ವತ್ರಿಕವಾಗಿ ಹಿಂಸೆಯ ಭಯವನ್ನೆ ಪ್ರದರ್ಶಿಸುತ್ತಿರುವ ಕಲುಷಿತ ಸಮಾಜ ಜೀವನದಲ್ಲಿ ಬಾಳಲೇಬೇಕಾದಂತಹ ಪರಿಸ್ಥಿತಿ, ಇವುಗಳಲ್ಲೇ ತೊಳಲಾಡುತ್ತಿದ್ದೇವೆ. ಈ ಸ್ಥಿತಿ ನಿಜವಾದ ಪ್ರಜಾಪ್ರಭುತ್ವವನ್ನು ರೂಢಿಸಲು ಸಹಕಾರಿಯಾಗಿಲ್ಲ ಎನ್ನುವ ನೋವನ್ನು ಇಲ್ಲಿ ಪ್ರಕಟಿಸಬೇಕಾಗಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಭಾರತ ಒಂದು ಪ್ರಬುದ್ಧ ರಾಷ್ಟ್ರವಾಗುವುದೆಂದು ನಮ್ಮ ರಾಜಕಾರಣಿಗಳು ಹೇಳುತ್ತಿರುತ್ತಾರೆ. ಆದರೆ ಒಂದು ರಾಷ್ಟ್ರದ ಹಿರಿಮೆ ಗರಿಮೆಗಳು ಪ್ರಕಟವಾಗುವುದು ಅದರ ಜನಸಂಖ್ಯೆಯಿಂದಲ್ಲ, ಲೋಕಸತ್ತೆಯ ಕುರಿತಾದ ಅಪ್ರಾಮಾಣಿಕವೆನಿಸುವ ಹೇಳಿಕೆಗಳಿಂದಲ್ಲ; ರಾಷ್ಟ್ರದ ಶ್ರೀಮಂತಿಕೆಯಿಂದಲೂ ಅಲ್ಲ; ರಾಷ್ಟ್ರೀಯವೆನಿಸುವ ಚಾರಿತ್ರ್ಯದಿಂದ. ರಾಷ್ಟ್ರೀಯ ಅಸ್ಮಿತೆ ಅಭಿಮಾನಗಳು ಪ್ರತಿಯೊಬ್ಬ ನಾಗರಿಕನಲ್ಲೂ ಮೂಡುವಂತಾದಾಗ ಮಾತ್ರ. ಇತರ ದೇಶಗಳೂ ಅಸೂಯೆ ಬೆರೆತ ಅಭಿಮಾನದಿಂದ ನೋಡುವ ಭಾರತದ ರಾಷ್ಟ್ರೀಯವೆಂದು ತೋರುವ ಮಾನವೀಯ ಸಂಸ್ಕಾರಗಳಿಂದ. ಬರೇ 'ಸಾರೇ ಜಹಾಂಸೆ ಅಚ್ಚಾ....' ಎಂದು ಹಾಡುವುದರಿಂದ ನಮ್ಮ ನಾಡು ದೊಡ್ಡದಾಗುವುದಿಲ್ಲ.

* * *

ಅನುಬಂಧ

[ತುರ್ತುಪರಿಸ್ಥಿತಿಯ ನಂತರ ಜನತಾ ಸರಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಬರೆದ ಲೇಖನ.]

ಎರಡು ಅಧ್ಯಾಯ : ಒಂದು ವಿಶ್ಲೇಷಣೆ

1975ರ ಜೂನ್ ತಿಂಗಳ 27 ನೆಯ ದಿನಾಂಕ ಬೆಳಿಗ್ಗೆ ಆಫೀಸು ತಲುಪಲು ನಾನು ವಿ.ಟಿ.ಯ ಗಾಡಿ ಹಿಡಿಯಲು ಕಾಯುತ್ತಿದ್ದಾಗ, ನಿತ್ಯ ಜತೆಗೇ ವಿ.ಟಿ.ಯ ತನಕ ಬರುತ್ತಿದ್ದ ಗೆಳೆಯರೊಬ್ಬರ ಭೆಟ್ಟಿಯಾಗಿತ್ತು. ಅವರನ್ನು ಕಂಡಾಗ ನನಗೆ ಆಶ್ಚರ್ಯವೂ ಆಗಿತ್ತು. ರಾತ್ರಿ ನಿದ್ದೆಗೆಟ್ಟಿದ್ದರೆಂದು ಸಾರುವ ಕಣ್ಣು; ಸಿಟ್ಟಿನ ಉದ್ವಿಗ್ನ ಮುಖಭಾವ ''ಏನಾಯಿತು ?'' ಎಂದು ನಾನು ಪ್ರಶ್ನಿಸಿದಾಗ ಅವರು ಹೇಳಿದ್ದುದಿಷ್ಟೆ: ''ಆಗಿರುವುದು ಸರ್ವನಾಶ. ಈ ದೇಶದ ಸ್ವಾತಂತ್ರ್ಯದ ಹೋರಾಟದ ಇತಿಹಾಸಕ್ಕೆ ಅರ್ಥವೇ ಇಲ್ಲವೆನ್ನುವಂಥ ತೀರ್ಮಾನವನ್ನು ಕೊಡುವ ಎದೆಗಾರಿಕೆ ಒಬ್ಬಾಕೆಗೆ ಬಂತಲ್ಲಾ ....'' ಅವರು ಮುಂದೆ ಹೇಳಿದ ಸಿಟ್ಟಿನ ಎಲ್ಲ ಮಾತುಗಳನ್ನು ಬರೆಯುವುದು ಅಪ್ರಾಸಂಗಿಕವಾಗದಾದರೂ, ಅಂಥ ಮಾತುಗಳನ್ನು ಪ್ರಚೋದಿಸಿದ ಉದ್ರಿಕ್ತ ಮನಃಸ್ಥಿತಿಯಷ್ಟೆ ಈ ಲೇಖನಕ್ಕೆ ಮುಖ್ಯ. ಹೀಗೆ ಮಾತನಾಡಿದವರು ಮುಂಬಯಿಯ ಸಬರ್ಬನ್ ಗಾಡಿಗಳಲ್ಲಿ ದಿನವೂ ದುಡಿಮೆಗಾಗಿ ಪ್ರಯಾಣಿಸುತ್ತಿರುವ ಸಾಮಾನ್ಯ ಕಾರಕೂನನೋ, ಅಧಿಕಾರಿಯೋ, ವಿದ್ಯಾರ್ಥಿಯೋ, ವ್ಯಾಪಾರಿಯೋ ಆಗಿರಲಿಲ್ಲ. ಅವರು ಕೆಲಸ ಮಾಡುತ್ತಿದ್ದುದು ನಮ್ಮ ನಾಡಿನಲ್ಲೇ ಹೆಸರು ವಾಸಿಯಾದ ಒಂದು ಪತ್ರಿಕಾ ಸಮೂಹದಲ್ಲಿ. ದಕ್ಷ ಸಹ ಸಂಪಾದಕರೆಂದು ಹೆಸರುವಾಸಿಯಾಗಿರುವ ಅವರು ಪ್ರಚಲಿತ, ಪ್ರಾಸಂಗಿಕ, ರಾಜಕೀಯ, ಸಾಮಾಜಿಕ ವಿದ್ಯಮಾನಗಳನ್ನು ಆಳವಾಗಿ ಅಭ್ಯಸಿಸಿ ಆಗಾಗ ಲೇಖನಗಳನ್ನು ಬರೆಯುತ್ತಿರುವ ಧೀಮಂತ ವ್ಯಕ್ತಿ; ಹೆಸರಾಂತ ಪತ್ರಿಕೋದ್ಯಮಿ.

28 ವರ್ಷಗಳ ಕಾಲ ಕಾಂಗ್ರೆಸ್ ಆಡಳಿತೆ ನಡೆಸಿದ ಮೇಲೆ ದೇಶದಲ್ಲೆಲ್ಲ ಅರಾಜಕತೆ ಹರಡಿದೆ, ಇಂಥ ಅರಾಜಕತೆಯನ್ನು ಇದಿರಿಸಲು ತುರ್ತು ಪರಿಸ್ಥಿತಿಯೇ ತಾರಕ ಮಂತ್ರ ಎಂದು ನಮ್ಮ ಮಾಜೀ ಪ್ರಧಾನ ಮಂತ್ರಿಗಳು ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ವೈಚಾರಿಕತೆಯನ್ನು ಉಳಿಸಿಕೊಳ್ಳುವುದೂ ಬೆಳೆಸಿಕೊಳ್ಳುವುದೂ ಸ್ವತಂತ್ರವಾದ ಆವರಣದಲ್ಲಿ ಮಾತ್ರ ಸಾಧ್ಯ ಎಂದು ನಂಬಿಕೊಂಡಿರುವ ಎಲ್ಲ ಬುದ್ಧಿಜೀವಿಗಳಂತೆ ಅವರಿಗೂ ನೋವಾಗಿತ್ತು. ''ಸ್ವಲ್ಪ ಮಟ್ಟಿಗೆ ನಿಜವೇನೋ'' ಎಂದಿದ್ದೆ ನಾನು. ''ನಮ್ಮಲ್ಲಿರುವ ಅಸಹನೆ, ದ್ವೇಷ, ಅಸೂಯೆ, ಸ್ವಾರ್ಥ'' ಎಲ್ಲವುಗಳನ್ನು ಲೋಕಸತ್ತಾತ್ಮಕವೆನಿಸಬಹುದಾದ ಸಾಮಾಜಿಕ ನೀತಿಗೆ ಹೊಂದಿಸಿ ಕೊಳ್ಳುವಲ್ಲಿ 'ತುರ್ತು ಪರಿಸ್ಥಿತಿ'ಯ ಚಡಿಯೇಟು ಸಹಾಯ ಮಾಡುವುದೇನೋ!

ಏನಿದ್ದರೂ ನೆಹರೂ ಮನೆತನದ ಸದಸ್ಯರಲ್ಲಿ ಸರ್ವಾಧಿಕಾರತ್ವದ ಒಲವು ಬರಬಹುದೆಂದು ನಂಬುವುದು ಕಷ್ಟ.

ಯುರೋಪಿನಲ್ಲಿ ಸರ್ವಾಧಿಕಾರಿಗಳ ವರ್ಚಸ್ಸು ಸರ್ವಮಾನ್ಯವಾಗಿದ್ದ ಕಾಲದಲ್ಲಿ, ಮುಸೊಲಿನಿ, ಜವಾಹರಲಾಲರನ್ನು ನೋಡಬಯಸಿದ್ದಾಗ 'ನಾನು ಸರ್ವಾಧಿಕಾರಿಗಳನ್ನು ಭೆಟ್ಟಿಯಾಗಲಿಚ್ಛಿಸುವುದಿಲ್ಲ' ಎಂದು ಆ ಆಮಂತ್ರಣವನ್ನು ತಿರಸ್ಕರಿಸಿರಲಿಲ್ಲವೇ ಪಂಡಿತ್ ನೆಹರು! ಆಗ ಅವರು ಪ್ರಧಾನ ಮಂತ್ರಿಯೂ ಆಗಿರಲಿಲ್ಲ – ಜನಪ್ರಿಯರಾಗಿದ್ದ ಭಾರತದ ರಾಷ್ಟ್ರೀಯ ಕಾಂಗ್ರೆಸ್ ನಾಯಕ ಅಷ್ಟೆ. ಅಂಥವರ ಮಗಳು ಭಾರತದ ಅಧಿಕಾರ ಸೂತ್ರವನ್ನು ಹಿಡಿದಿರುವಾಗ ಈ 'ತುರ್ತು ಪರಿಸ್ಥಿತಿ'ಯಿಂದ ಅನಾಹುತ ವಾಗಲಾರದು ಎನ್ನುವ 'ಮುಗ್ಧತೆ' ಯನ್ನು ನಾನು ಅಂದು ಉಳಿಸಿಕೊಂಡಿದ್ದೆ. ಆದರೆ ಇದು ಮುಗ್ಧತೆಯಲ್ಲ, ಅವಿವೇಕವೆಂದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ.

ನಮ್ಮ ಸಾಮಾಜಿಕ ಜೀವನದಲ್ಲಿ ಅಸಮತೆ ಹೇಗೆ ತೊಲಗೀತು, ಅವ್ಯವಸ್ಥೆ ಹೇಗೆ ಕೊನೆಗೊಂಡೀತು, ಸಹಕಾರ ಹೇಗೆ ಬೆಳೆದೀತು, ಜೀವನ ಹೇಗೆ ಎಲ್ಲರಿಗೂ ಸುಖಮಯವಾದೀತು ಎನ್ನುವ ಕಳಕಳಿ ಎಲ್ಲರಿಗೂ ಇದ್ದೇ ಇದೆ. ಆದರೆ ಇಂಥ ಕಳಕಳಿ ಎಷ್ಟರಮಟ್ಟಿಗೆ ನಿಸ್ವಾರ್ಥವಾದುದು ಎನ್ನುವ ಅನುಭವ ಬರುವುದು ಈ ಸಮಸ್ಯೆಗಳ ಕಾವು ನಮ್ಮ ಸ್ವಾರ್ಥವನ್ನು ತಟ್ಟಿದಾಗ ಮಾತ್ರ. ಶಹರದ ಹೆದ್ದಾರಿಗಳಲ್ಲಿ ಮಲಗುವ ಅನಾಥರನ್ನು ಕಂಡಾಗ ಅಯ್ಯೋ ನಿರ್ಗತಿಕರೇ, ನಿಮ್ಮ ಪಾಡೇ, ನಮ್ಮ ಸಮಾಜಕ್ಕೆ ಕಣ್ಣಿಲ್ಲವೇ ಎನ್ನುತ್ತೇವೆ. ಅಂಥವರಲ್ಲಿ ಒಬ್ಬಿಬ್ಬರಾದರೂ ಬಂದು ನಮ್ಮ ಮನೆಯ ಬಾಗಿಲು ತಟ್ಟಿ 'ಒಂದು ರಾತ್ರಿ ಮಲಗಲು ಅವಕಾಶ ಕೊಡಿ' ಎಂದರೆ, 'ಅಯ್ಯೋ ನಮಗೇ ಮಲಗಲು ಜಾಗವಿಲ್ಲ – ಇಲ್ಲಿಂದ ತೊಲಗಿ' ಎನ್ನುತ್ತೇವೆ. ನಮ್ಮ ದೇಶದಲ್ಲಿ ಬಡತನ ಇಷ್ಟಿದೆಯಲ್ಲಾ ಎಂದು ಸಂತಾಪಪಡುವ ನಾವು ಹಸಿದ ನೂರು ಜನ ಸಾಲುಕಟ್ಟಿ ನಮ್ಮೆದಿರು ನಿಂತಾಗ, ನಾಲ್ಕು ಜನರಿಗೆ ಬ್ರೆಡ್ಡಿನ ತುಣುಕುಗಳನ್ನು ಕೊಡುವಂಥ ಔದಾರ್ಯ ಪ್ರದರ್ಶಿಸಿದರೂ, ಈ ಸಾಲು ಬೆಳೆಯುತ್ತಲೇ ಹೋಗುವುದೆಂಬ ಭಯವುಂಟಾದಾಗ, ಅಲ್ಲಿಂದ ಓಡಿ ನಮ್ಮ ಗೂಡು ಸೇರಿಕೊಳ್ಳುತ್ತೇವೆ. ''ಇಷ್ಟೆಯೇ ನಿನ್ನ ಸಹಾನುಭೂತಿ!'' ಎಂದು ಅಂತರಾತ್ಮ ಪ್ರಶ್ನಿಸಿದರೆ, 'ಈ ಬಡತನದ ಸಮಸ್ಯೆಗೆ ಪರಿಹಾರ ನಮ್ಮಿಂದಲ್ಲ – ಅದು ಸರಕಾರದಿಂದ ಮಾತ್ರ ಸಾಧ್ಯ' ಎಂದು ಸಮಸ್ಯೆಯ ಅಗಾಧತೆಯ ಕಡೆ ಬೊಟ್ಟಿಟ್ಟು ಸಮಾಧಾನಪಟ್ಟುಕೊಳ್ಳುತ್ತೇವೆ. ಬಾಂದ್ರಾದ ಕೊಳಚೆ ಪ್ರದೇಶಗಳನ್ನು ಕಂಡು ಹೇಸಿಕೊಂಡು ರೊಚ್ಚಿಗೆದ್ದಿದ್ದ ಒಬ್ಬ ಪ್ರಸಿದ್ಧ ಲೇಖಕರು ಎಲ್ಲರ ಪಾಪಪ್ರಜ್ಞೆಯನ್ನು ಎಚ್ಚರಿಸುವಂಥ ಭಾಷಣ ಮಾಡಿದ್ದುದನ್ನು ನಾನು ಕೇಳಿದ್ದೆ. ಅದೇ ಲೇಖಕರು ಎರಡು ದಿನಗಳ ಮೊದಲು ಮಾಡಿದ್ದ ಎಸ್. ಟಿ. ಬಸ್ಸಿನ ಪ್ರಯಾಣ ಹೇಗಿತ್ತು? ಎಂದು ಕೇಳಿದಾಗ ಉತ್ತರ ಬಂದಿತ್ತು ''ನರಕ – ಇನ್ನೆಂದಿಗೂ ಅಂಥ ಪ್ರಯಾಣ ಮಾಡುವುದಿಲ್ಲ'' ಎಂದು. ಇದಕ್ಕೆ ಟೀಕೆ ಅನಗತ್ಯ.

ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿ ಘೋಷಿಸಿದಾಗ, ''ಸ್ವಾತಂತ್ರ್ಯದ ದೀಪ ನಂದಿತು'' ಎಂದು ಸಂತಾಪ ಪಟ್ಟ ಬುದ್ಧಿಜೀವಿಗಳೂ ಇದ್ದರು; ''ಈ ದರಿದ್ರ

ಭಾರತ ಇನ್ನಾದರೂ ವ್ಯವಸ್ಥೆಯ, ಪ್ರಗತಿಯ ಹಾದಿಯನ್ನು ಹಿಡಿದೀತೇನೋ'' ಎಂದು ಆಸೆಯಿರಿಸಿಕೊಂಡಿದ್ದ ಬುದ್ಧಿಜೀವಿಗಳೂ ಇದ್ದರು. ಆರ್ಥಿಕ ಸ್ಥಿತಿಗತಿಯಲ್ಲಿ ಸುಧಾರಣೆಯಾಗಿ, ದೀನ ದಲಿತರ ಪರಿಸ್ಥಿತಿ ಸುಧಾರಿಸಿ ಬಡ ಕೆಳ ಮಧ್ಯಮ ವರ್ಗಗಳ ಜೀವನ ಹೆಚ್ಚು ಸಭ್ಯವೆನಿಸುವಂಥ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುವಂತಾದರೆ, ಸಾಕ್ಷರತೆಯೂ ಹೆಚ್ಚಿ, ಲೋಕಸತ್ತೆ ನಿಜವಾದ ಅರ್ಥದಲ್ಲಿ ನಮ್ಮ ಸಾಮಾಜಿಕ ಜೀವನದಲ್ಲಿ ಪ್ರಕಟವಾದೀತು ಎಂದು ನಂಬಿದಂಥವರೂ ಇದ್ದರು. ಆದರೆ ಜನತೆಗೆ ಎಂಥ ಯೋಗ್ಯತೆ ಇದೆಯೋ ಅಂಥ ಸರಕಾರವೇ ಅದಕ್ಕೆ ಸಿಗುತ್ತದೆ ಎಂಬ ಇಂಗ್ಲೀಷಿನ ಗಾದೆಯ ಮಾತನ್ನು ಎಷ್ಟು ಜನಸಾಮಾನ್ಯರಾಗಲೀ, ಅಸಾಮಾನ್ಯರಾಗಲೀ, ಬುದ್ಧಿಜೀವಿಗಳಾಗಲೀ, ಬುದ್ಧಿ ಇರದವರಾಗಲೀ ತಿಳಿದಿದ್ದಾರೋ ನನಗೆ ತಿಳಿದಿಲ್ಲ.

ನಮ್ಮ ನಾಡಿಗೆ ಸ್ವಾತಂತ್ರ್ಯ ಬಂದ ಮೇಲೆ ಸ್ವತಂತ್ರ ಭಾರತದ ಇತಿಹಾಸದ ಮೊದಲನೆಯ ಅಧ್ಯಾಯ ಕಾಂಗ್ರೆಸ್ಸಿನ ಆಡಳಿತೆಯ ಅಧ್ಯಾಯ. ಸ್ವಾತಂತ್ರ್ಯ ಬಂದೊಡನೆಯೇ ಕಾಂಗ್ರೆಸ್ಸನ್ನು ವಿಸರ್ಜಿಸಿ ಎಂದು ಗಾಂಧೀಜಿ ಸಲಹೆ ಕೊಟ್ಟಾಗ ಆ ಸಲಹೆಗೆ ಯಾರೂ ಬೆಲೆ ಕೊಡಲಿಲ್ಲ. ವಿಭಜನೆಯ ಅನಂತರದ ಭಾರತದ ಅಂದಿನ ಪರಿಸ್ಥಿತಿಯಲ್ಲಿ ವ್ಯಾವಹಾರಿಕವಾಗಿ ಆ ಸಲಹೆಗೆ ಆಗ ಬೆಲೆ ಕೊಡುವುದು ಸಾಧ್ಯವೂ ಇರಲಿಲ್ಲ. ಮುಂದೆ ಬೆಲೆ ಕೊಡಲು ಸಾಧ್ಯವಾಗಬಹುದು ಎನ್ನುವಂಥ ಪರಿಸ್ಥಿತಿ ಬಂದಾಗ, ಕಾಂಗ್ರೆಸ್ಸು ಭದ್ರವಾದ ಅಧಿಕಾರದ ಪಕ್ಷವಾಗಿ ತನ್ನ ಸ್ವಾರ್ಥವನ್ನು ಕಾಪಾಡಿಕೊಳ್ಳುವ ಆವಶ್ಯಕತೆಯಿದ್ದುದರಿಂದ ಬೆಲೆ ಕೊಡಬೇಕು ಎನ್ನುವ ಯೋಚನೆಯೂ ಯಾರಿಗೂ ಬರುವಂತಿರಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ಸಿಗೆ ಇದ್ದ ಆದರ್ಶವೊಂದೇ – ನಾಡಿನ ಬಂಧವಿಮೋಚನೆ. ಈ ಹೋರಾಟದ ಕಾಲದಲ್ಲೇ ಅಲ್ಪಾವಧಿಯ ಅಧಿಕಾರವಹಿಸುವ ಹೊಣೆ ಬಂದಾಗಲೇ ಪಾಕಿಸ್ತಾನದ ಹುಟ್ಟಿನ ಕೂಗಿಗೆ ಜೀವ ಬಂದಿದ್ದು ಎಂಬುದನ್ನು ಇತಿಹಾಸಕಾರ ಹೇಳಬಹುದು. ಆದರೆ ನಾಡಿನ ವಿಭಜನೆಯಾಗಿ ಕಾಂಗ್ರೆಸ್ಸೇ ಅಧಿಕಾರ ನಡೆಸುವಂತಾದಾಗ ಹಳೆಯ ಇತಿಹಾಸವನ್ನು ವಿಮರ್ಶಿಸುವ ಗೊಡವೆಯೇಕೆ? ಅಧಿಕಾರವೆಂದರೆ ಕಾಂಗ್ರೆಸ್ಸು, ಕಾಂಗ್ರೆಸ್ಸೆಂದರೆ ಅಧಿಕಾರವೆನ್ನುವ ಭಾವನೆ ಯಾಕೆ ಬೆಳೆಯಿತೆನ್ನುವ ವಿಚಾರವನ್ನು ವಿಮರ್ಶಿಸುವ ವಿದ್ಯಾರ್ಥಿ ನಮ್ಮ ಸಾಮಾಜಿಕ ಜೀವನದ ಸ್ಥಿತಿಗತಿಗಳನ್ನೂ ಅವುಗಳಿಗೆ ಕಾರಣರಾದ ನಾಗರಿಕರ ಮೂಲ ಪ್ರವೃತ್ತಿಗಳನ್ನೂ ವಿಶ್ಲೇಷಿಸಬೇಕಾಗಿರುತ್ತದೆ.

ನೆಹರೂ, ಶಾಸ್ತ್ರಿ, ಇಂದಿರಾ ಗಾಂಧಿಯವರ ಅಧಿಕಾರದ ಅವಧಿಯ ಕಾಂಗ್ರೆಸ್ಸಿನ ಇತಿಹಾಸದ ವಿವೇಚನೆ ಈ ಲೇಖನಗಳ ಉದ್ದೇಶವಲ್ಲ. ಶ್ರೀಮತಿ ಗಾಂಧಿಯವರ ಸರ್ವಾಧಿಕಾರ ಪ್ರವೃತ್ತಿಯ ಅಥವಾ ಅದಕ್ಕೆ ಕಾರಣರಾದ, ಹಿನ್ನೆಲೆಯಲ್ಲಿದ್ದ ವ್ಯಕ್ತಿಗಳಿಂದಾದ ಅನಾಹುತವನ್ನು ಚರ್ಚಿಸುವುದೂ ಈ ಲೇಖನಗಳ ಉದ್ದೇಶವಲ್ಲ. ಈ ವಿಚಾರಗಳಿಗೆ ಸಂಬಂಧಿಸಿದ ಲೇಖನಗಳು, ಗ್ರಂಥಗಳು ಸ್ವತಂತ್ರ ಭಾರತದ ಇತಿಹಾಸದ ಎರಡನೆಯ ಅಧ್ಯಾಯ ಆರಂಭವಾದ ಮೇಲೆ, ಎಂದರೆ ಮಾರ್ಚ್ 22, 1977ರ ಅನಂತರ ಜನತಾ ಸರಕಾರ ಅಧಿಕಾರಾರೂಢವಾದ ಮೇಲೆ, ಸಾಕಷ್ಟು ಪ್ರಮಾಣದಲ್ಲಿ

ಬಂದಿವೆ. ಈ ಲೇಖನಗಳ ಸೀಮಿತ ಉದ್ದೇಶ ನಾವು ಪಡೆದು ಬಂದ ಬಗೆಯಲ್ಲಿ ಒಂದು ಅಧ್ಯಾಯದಿಂದ ಇನ್ನೊಂದು ಅಧ್ಯಾಯಕ್ಕೆ ಪುಟ ತಿರುವಿದ ಒಂದು ಪೀಳಿಗೆಯ ಇತಿಹಾಸದ ಕಾಲದಲ್ಲಿ, ನಮ್ಮ ಸಾಮಾಜಿಕ ಸ್ಥಿತ್ಯಂತರಗಳಿಗೆ ನಮ್ಮ ರಾಜಕೀಯ ಮುಖಗಳಿಗೆ, ಮುಖವಾಡಗಳಿಗೆ ನಾವೇ ಎಡೆಮಾಡಿಕೊಟ್ಟ ಅಧಿಕಾರದ ವರ್ಚಸ್ಸಿಗೆ ನಾವು ಕಾರಣರೇ ಎನ್ನುವ ಕುತೂಹಲವಷ್ಟೆ.

1975ರ ಜೂನ್ ತಿಂಗಳಲ್ಲಿ ಆರಂಭವಾದ ನಮ್ಮ ಇತಿಹಾಸದ ಕರಿಯ ಹಾಳೆಗಳಲ್ಲಿ, ಅವು ಕರಿಯ ಹಾಳೆಗಳಲ್ಲ ಬಿಳಿ ಚುಕ್ಕೆಗಳು ಎಂದು ಸಾರುವಂಥ ಹಲವಾರು ಮುಖವಾಡಗಳಿದ್ದವು. 'ಅರಾಜಕತೆ' ಒಮ್ಮಿಂದೊಮ್ಮೆಗೇ ಸ್ತಬ್ಧವಾಗಲಿಲ್ಲವೆ! ಅಥವಾ ಅಂಥ ತಿಳಿವಳಿಕೆ ಬರಲಿಲ್ಲವೆ! 'ಶಿಸ್ತಿ'ನ ಸಮವಸ್ತ್ರ ಧರಿಸಿ ಎಲ್ಲ ತಿರುಗಾಡುವಂತಾಗಲಿಲ್ಲವೆ! 'ಮೋರ್ಚಾ' ಮುಷ್ಕರ ಪ್ರತಿಭಟನೆಗಳೆಲ್ಲ ಮುಗಿದು ಸಮಯದ ಬೆಲೆಯನ್ನು ಎಲ್ಲ ಅರಿತುಕೊಳ್ಳುವಂತಾಗಲಿಲ್ಲವೆ! ವಾಹನ ಸಂಚಾರ ಸುಗಮವಾಗಲಿಲ್ಲವೆ! ಕಳ್ಳಸಾಗಾಣಿಕೆಯ ಖದೀಮರೆಲ್ಲ ಸರಕಾರ ಕಟ್ಟಿಸಿದ ಗೂಡು ಸೇರುವಂತಾಗಿಲಿಲ್ಲವೆ! ಇನ್ನು ಬಡ ಬೋರೇಗೌಡನ, ಕಾರ್ಖಾನೆಯ ಕೂಲಿಕಾರನ ಬದುಕು ಹಸನಾಗಿ, ಎಲ್ಲ ಅವರವರ ಕರ್ತವ್ಯವನ್ನು ಪಾಲಿಸಿಕೊಂಡು 'ಕಟ್ಟುವೆವು ಹೊಸ ನಾಡೊಂದನು' ಎಂದು ಹಾಡಬಹುದು ಎನ್ನುವಂಥ ಆವರಣ ನಿರ್ಮಾಣವಾಗುತ್ತಿದೆ ಯೆಂಬ ಭ್ರಾಂತಿ ಬರಲು ಯಾರು ಕಾರಣ! ಶ್ರೀಮತಿ ಗಾಂಧಿಯವರ ಕಾಂಗ್ರೆಸ್ ಸರಕಾರದ ತುರ್ತುಪರಿಸ್ಥಿತಿಯ ಸರ್ವಾಧಿಕಾರಿ ಆಡಳಿತೆಯೆ! ಅಥವಾ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲೇ, ಸಾಮಾಜಿಕ ಪ್ರವೃತ್ತಿಗಳಲ್ಲಿ ಅಡಗಿರುವ ಮೂಲಭೂತವಾದ ಶಕ್ತಿಹೀನತೆಯೇ! ಈ ವಿಚಾರ ದ್ವಂದ್ವವನ್ನು ಪ್ರಾಮಾಣಿಕವಾದ ನಾಯಕತ್ವವನ್ನು ಒದಗಿಸಬೇಕಾದ ಬುದ್ಧಿಜೀವಿಗಳೆನಿಸಿಕೊಳ್ಳುವವರ ಬುದ್ಧಿಮತ್ತೆಯ ಅಂತರಂಗದಲ್ಲಿ ನಾವು ಹುಡುಕಬೇಕಾಗಿದೆ.

ತುರ್ತುಪರಿಸ್ಥಿತಿ ಬಂದರೂ ಸಬರ್ಬನ್ ಗಾಡಿಗಳೂ, ಎಲ್ಲ ಗಾಡಿಗಳೂ ತಿರುಗುತ್ತಲೇ ಇದ್ದವು. ಗಾಡಿಗಳ ನಿಯಮಿತತೆ, ಅಧಿಕಾರಿಗಳ ದಕ್ಷತೆ ಹೆಚ್ಚಾಯಿತು ಎನ್ನುವ ತಿಳಿವಳಿಕೆ ಬರತೊಡಗಿತು. ನನ್ನ ಮಿತ್ರರು ನನ್ನ ಜತೆಗೇ ವಿ. ಟಿ. ಪ್ರಯಾಣ ಬೆಳೆಸುತ್ತಿದ್ದರು. ಅವರ ಪತ್ರಿಕೆಗಳು ಎಂದಿನಂತೆ ಪ್ರಕಟವಾಗುತ್ತಿದ್ದವು. ಪ್ರಸಾರದ ಸಂಖ್ಯೆ ಕಡಿಮೆಯಾಗಲಿಲ್ಲ. ಈ ತುರ್ತುಪರಿಸ್ಥಿತಿಯಿಂದ ದೇಶದ ಉದ್ಧಾರ ಮಾಡ (!) ಹೊರಟ ಸರಕಾರದ ಬತ್ತಳಿಕೆಯಿಂದ ಒಂದೊಂದೇ ಬಾಣಗಳು ಬರತೊಡಗಿದರೂ "ವ್ಯವಹಾರವೆಲ್ಲ ಎಂದಿನಂತೆ – ಆದರೆ ಹೆಚ್ಚು ದಕ್ಷವಾಗಿ, ಹೆಚ್ಚು ವ್ಯವಸ್ಥಿತವಾಗಿ" ಈ ಬಾಣಗಳೆಲ್ಲ ಅದೇ ಉದ್ದೇಶದಿಂದ ಬಂದವು ಎನ್ನುವಂಥ ಭ್ರಾಂತಿಯನ್ನು ಸಾಮಾನ್ಯವಾಗಿ ಎಲ್ಲ ಬೆಳೆಸಿಕೊಳ್ಳುವಂತಾಯಿತು. ಆದರೆ ಬಹಳಷ್ಟು ಜನರಿಗೆ, ಪ್ರಾಯಶಃ ನನ್ನಂತೆಯೇ, ರಾತ್ರಿ ಒಂಭತ್ತರ ಆಕಾಶವಾಣಿಯ ಸುದ್ದಿಗಳನ್ನು ಕೇಳುವ ಅಭ್ಯಾಸ ನಿಂತುಹೋಯಿತು. ರೇಲ್ವೆ ಗಾಡಿಗಳಲ್ಲಿ ಪ್ರಯಾಣಿಸುವಾಗ ರಾಜಕೀಯ ರಾಜಕಾರಣ ಸಹಜವಾಗಿ ಚರ್ಚೆಗೆ ಸಿಗುವಂಥ, ಚರ್ಚೆಗೆ ಬರುವಂಥ ವಿಚಾರಗಳು ....

ನಾನೂ ನನ್ನ ಮಿತ್ರರೂ ಮಾತನಾಡುತ್ತಿದ್ದಾಗ, ಈ ತುರ್ತುಪರಿಸ್ಥಿತಿ ಭದ್ರವಾಗಿ ನೆಲೆನಿಂತ ಮೇಲೆ ಪಕ್ಕದಲ್ಲಿ ಯಾರಿದ್ದಾರೆ ? ಎಂದು ನೋಡುವ ಪ್ರವೃತ್ತಿ ನಮಗೆ ಬಂದಿದೆಯೆಂಬ ತಿಳಿವಳಿಕೆ ನಮ್ಮಲ್ಲೆ ಮೂಡಿದಾಗ, ನಮ್ಮ ವೈಚಾರಿಕತೆ, ಕ್ರಿಯಾಶೀಲ ವೈಚಾರಿಕತೆಯಲ್ಲ; ಆರಾಮ ಕುರ್ಚಿಯ ವೈಚಾರಿಕತೆ ಎನ್ನುವ ಸತ್ಯವನ್ನು ಅರಿತುಕೊಳ್ಳಲು ತಡವಾಗಲಿಲ್ಲ. ಅಲ್ಲೇ ಅಡಗಿತ್ತು ಭಯದ ಹುಟ್ಟು .....

ಎರಡನೆಯ ಮಹಾಯುದ್ಧದ ಕಾಲದಲ್ಲಿ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಹೇಳಿದ ಮಾತಿದು: ''ಎಲ್ಲಕ್ಕಿಂತ ಹೆಚ್ಚು ನಾವು ಭಯಪಡಬೇಕಾದುದು ಭಯದ ಕುರಿತೆ'' ಎಂದು. ತುರ್ತುಪರಿಸ್ಥಿತಿಯ ತುರಂಗವಾಸ ಮುಗಿಸಿ ಬಂದ ಮೊರಾರ್ಜಿ ದೇಸಾಯಿಯವರು ಕೂಡ ಹೇಳತೊಡಗಿದುದು ಈ ಮಾತನ್ನೇ: 'ಭಯದ ಸಂಕಲೆಗಳನ್ನೆಲ್ಲ ಕಳಚಿಕೊಳ್ಳಿ' ಎಂದು. ಪ್ರಧಾನ ಮಂತ್ರಿಯಾದ ಮೇಲೂ ಅವರು ಇದೇ ಮಾತನ್ನು ಮತ್ತೆ ಮತ್ತೆ ಹೇಳುತ್ತಿದ್ದರು. ಆದರೆ ಅವಕಾಶ ಒದಗಿ ಬಂದಾಗಲಾದರೂ ಭಯವನ್ನು ಬಿಡಬಹುದು ಎಂದು ತೋರಿಸಿಕೊಟ್ಟದು ಉತ್ತರಾಪಥದ ಬಡ ಬೋರೇಗೌಡ ಮಾತ್ರ; ವೈಚಾರಿಕತೆಯನ್ನೆ ಆಶ್ರಯಿಸಿರುವ ಬುದ್ಧಿಜೀವಿಯಲ್ಲ. ಇಲ್ಲಿ ಇನ್ನೂ ಆಶ್ಚರ್ಯದ ಮಾತೊಂದಿದೆ. ಮಹಾತ್ಮಾ ಗಾಂಧಿಯವರ ಆದರ್ಶವಾದವು ವೈಚಾರಿಕತೆಯನ್ನೆ ಕುಂಠಿತಗೊಳಿಸುವಷ್ಟು ಪರಿಣಾಮಕಾರಿಯಾಗಿತ್ತು ಎನ್ನುವುದೊಂದು ಆಕ್ಷೇಪವನ್ನು ಸಾಮಾನ್ಯವಾಗಿ ಬುದ್ಧಿಜೀವಿಗಳೆನಿಸಿಕೊಳ್ಳುವವರು ಬಳಸುತ್ತಾರೆ. ಆದರೆ ಅವೈಚಾರಿಕವೆನಿಸಬಹುದಾದ (!) ಅವರ ಆದರ್ಶದ ವರ್ಚಸ್ಸು ಹರಡಿದ್ದ ಕಾಲದಲ್ಲಿ, ಬ್ರಿಟಿಷ್ ಸರಕಾರದ ದಬ್ಬಾಳಿಕೆಯ ಇದಿರು ಅಂದಿನ ಲೇಖಕರು, ಸಂಪಾದಕರು ತೋರಿಸಿದ್ದ ಧೈರ್ಯವನ್ನು ತುರ್ತುಪರಿಸ್ಥಿತಿಯ ಕಾಲದಲ್ಲಿ ನಮ್ಮ ಲೇಖಕರು, ಸಂಪಾದಕರು ತೋರಿಸಲಿಲ್ಲ, ಪ್ರಜಾಸತ್ತಾತ್ಮಕವೆನಿಸುವ ಯಾವ ಸೋಗನ್ನೆ ಹಾಕಿದರೂ, ಒಂದು ನಿರಂಕುಶ ಆಡಳಿತೆಯನ್ನು ಮುಂದುವರಿಸುವ ಉದ್ದೇಶದಿಂದ ಪ್ರೇರಿತವಾದ ತುರ್ತುಪರಿಸ್ಥಿತಿಯನ್ನು ಪ್ರತಿಭಟಿಸಲು ಮುಂದಾಗಬೇಕು ಎನ್ನುವ ಭಾವನೆ ಬೆಳೆಯಲೇ ಇಲ್ಲ, ಯಾಕೆ !

ಆಗಸ್ಟ್ 15, 1947ರ ಮೇಲೆ ಸ್ವಾತಂತ್ರ್ಯ ನಮಗೆ ಆದರ್ಶವಾಗಿ ಉಳಿಯಲಿಲ್ಲ. ವ್ಯವಹಾರದ ಬದುಕಿನಲ್ಲಿ ಇದನ್ನು ಹೇಗೆ ಹೊಂದಿಸಿಕೊಳ್ಳಬೇಕೆಂಬುದು ನಮಗೆ ತಿಳಿಯಲಿಲ್ಲ. ದೇಶದ ಗಾತ್ರ, ವಿಸ್ತಾರ, ಭಾಷೆಗಳು, ಜನಾಂಗೋಪಜನಾಂಗ ಸಂಸ್ಕಾರ ಪ್ರಭೇದಗಳು ಇವುಗಳನ್ನೆಲ್ಲ ಗಮನಿಸಬೇಕಾದ ಬುದ್ಧಿಜೀವಿಗೆ, ಲೇಖಕನಿಗೆ, ಪತ್ರಿಕಾಕರ್ತನಿಗೆ, ಹೊಸ ಸಮಾಜದ, ಹೊಸ ಬದುಕಿನ ನೆಲೆಗಟ್ಟನ್ನು ಭದ್ರಪಡಿಸುವ ಕೆಲಸ ಒಂದು ಪಂಥಾಹ್ವಾನವಾಗಬೇಕಿತ್ತು. ಆದರೆ ಎರವಲು ವಿಚಾರಗಳಿಂದಲೇ ನಮ್ಮ ವೈಚಾರಿಕತೆಗೆ ಸಮರ್ಥನೆಯನ್ನು ಹುಡುಕುವ ನಮ್ಮ ಹಲವಾರು ವಿಚಾರವಾದಿಗಳಿಗೆ ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಕೆಲಸಕ್ಕೆ ಹೊಣೆಗಾರಿಕೆ ನಮ್ಮದಲ್ಲ ವೆಂದು ಕಾಣಿಸಿತೋ, ಅಥವಾ ಇದೆಲ್ಲ ರಾಜಕಾರಣಿಗಳ ಕೆಲಸವಾದುದರಿಂದ ನಾವು ತೆಪ್ಪಗೆ ಕುಳಿತು ಕಾಲ ಕಾಲಕ್ಕೆ ''ಇದು ಸರಿಯಲ್ಲ; ಇದು ಸರಿಯಲ್ಲ'' ಎಂದು

ಫರ್ಮಾನು ಹೊರಡಿಸಿದರೆ ಸಾಕು ಎಂದು ತೋರಿತ್ತೋ – ನಾವೆಲ್ಲ ಚಿಂತಿಸಬೇಕಾದ ವಿಚಾರ. ಅಮೆರಿಕದ ಸ್ವಾತಂತ್ರ್ಯ ಯುದ್ಧದ ಕಾಲದಲ್ಲಿ, ಆ ಹೋರಾಟದ ಸೈನಿಕರನ್ನು ಹುರಿದುಂಬಿಸಲು ಟಾಂಪೇನ್ ಹೇಳಿದ್ದ ಮಾತೊಂದು ಹೀಗಿದೆ: ''ನಮ್ಮ ಆತ್ಮಪರೀಕ್ಷೆಯ, ಸತ್ವಪರೀಕ್ಷೆಯ ಗಳಿಗೆಗಳಿವು. ಹಗಲಲ್ಲಿ ಮಾತ್ರ ದೇಶಭಕ್ತಿಯನ್ನು ಪ್ರದರ್ಶಿಸಬೇಕೆನ್ನುವ ಉತ್ಸಾಹದ ದೇಶಭಕ್ತನಿಗೂ, ಬೇಸಿಗೆಯಲ್ಲಿ ಮಾತ್ರ ಯುದ್ಧ ಮಾಡುತ್ತೇವೆನ್ನುವ ಸೈನಿಕನಿಗೂ ಇಲ್ಲಿ ಅವಕಾಶವಿಲ್ಲ ....'' ಎಂದು. ''ಎರಡನೆಯ ಮಹಾಯುದ್ಧದ ಅವಧಿ ಯುರೋಪಿಯನ್ ಲೇಖಕರು ಕಳೆದುಕೊಂಡ ಮಹತ್ವದ ಅವಕಾಶಗಳಲ್ಲೊಂದು....'' ಎಂದು ಅಂದಿನ ಬುದ್ಧಿಜೀವಿಗಳಲ್ಲೇ ಶ್ರೇಷ್ಠ ವರ್ಗ ದಲ್ಲಿರುವ ಸಾರ್ತ್ರೆ ಎಷ್ಟೋ ವರ್ಷಗಳ ಹಿಂದೆ ಬರೆದಿದ್ದ ಮಾತೊಂದು ನೆನಪಿಗೆ ಬರುತ್ತಿದೆ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಎಷ್ಟೋ ಜನ ಲೇಖಕರು ಶಸ್ತ್ರಧಾರಿಗಳಾಗಿಯೂ, ಭೂಗತ ಹೋರಾಟದಲ್ಲಿ ಭಾಗವಹಿಸಿಯೂ ಮಾನವೀಯ ಮೌಲ್ಯಗಳ ರಕ್ಷಣೆಗೆ ಧಾವಿಸಿದ್ದ ದಾಖಲೆಗಳಿದ್ದೂ, ಐತಿಹಾಸಿಕವಾಗಿ ಇದು ಬುದ್ಧಿಜೀವಿಗಳು ಕಳೆದುಕೊಂಡಂಥ ಅವಕಾಶವೆಂಬ ಭಾವನೆ ಹಿರಿಯ ದಾರ್ಶನಿಕ ರೊಬ್ಬರಿಗೆ ಬರುವಂತಾಗಿದ್ದರೆ, ನಮ್ಮ ಇತಿಹಾಸವನ್ನು ವಿಮರ್ಶಿಸಲು ಯಾವ ದಾರ್ಶನಿಕನ ನೆರವೂ ಅಗತ್ಯವಿಲ್ಲ. ನಮಗೆ ಕನ್ನಡಿಯ ಅಗತ್ಯವೇ ಇಲ್ಲ.

ಮುಂಬಯಿ ಮಹಾ ಶಹರದೊಂದಿಗೆ ದೀರ್ಘ ಕಾಲದ ಸಂಬಂಧವಿರುವ ನಾಗರಿಕನಿಗೆ ಈ ಶಹರದ ಕುರಿತು ಒಂದು ಪ್ರೇಮ-ದ್ವೇಷ (love-hate) ಸಂಬಂಧ ಬೆಳೆಯುವುದು ಸಾಮಾನ್ಯವಾದ ಅನುಭವದ ಮಾತು. ಆತ ಮುಂಬಯಿಯ ಜೀವನವನ್ನು ದಿನವೂ ಸಾವಿರ ಬಾರಿ ಶಪಿಸುತ್ತಲೇ ಇರುತ್ತಾನೆ. ಆದರೆ ಮುಂಬಯಿಯನ್ನು ಬಿಟ್ಟು ಹೋಗಲೊಲ್ಲ. ಬಿಟ್ಟು ಹೋಗುವ ಸಂದರ್ಭ ಬಂದರೂ ಆತ ಮರಳಿ ಮುಂಬಯಿಗೇ ಬರಲಿಚ್ಛಿಸುತ್ತಾನೆ. 'ವ್ಯವಸ್ಥೆ'ಯನ್ನು ದ್ವೇಷಿಸುವ ಭಾರತೀಯ ಬುದ್ಧಿಜೀವಿಯ ವ್ಯವಸ್ಥೆಯ ಕುರಿತು ಒಲವನ್ನು ಮತ್ತೆ ಮತ್ತೆ ಪ್ರದರ್ಶಿಸುತ್ತಲೇ ಇರುತ್ತಿರುವ ಬಗೆಯನ್ನು ವಿಮರ್ಶಿಸುವ ವಿಚಾರವಾದಿ ಮುಂಬಯಿ ನಾಗರಿಕನ ಮುಂಬಯಿಯ ಕುರಿತಾದ ಒಲವನ್ನೇ ನೆನಪಿಸಿಕೊಳ್ಳಬಹುದು. ನಮ್ಮ ತುರ್ತು ಪರಿಸ್ಥಿತಿ ಮುಗಿದೊಡನೆಯೇ ''ಈಗ ನರಕದಿಂದ ಬಿಡುಗಡೆ'' ಎಂದು ನಮ್ಮ ನಾಡಿನ ಒಬ್ಬ ಪ್ರಸಿದ್ಧ ಸಂಪಾದಕರು ಸಾರಿದರು. ಆದರೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಎಂಥ ಅಂಧಃತ ಮನಸ್ಸಿನಲ್ಲಿ ಅವರಿದ್ದರೆಂದು ಅವರನ್ನೇ ಕೇಳಬೇಕು. ಅವರು ಆಗಲೂ ಸಂಪಾದಕೀಯಗಳನ್ನು ಬರೆಯುತ್ತಿದ್ದರು ರಾಜಕೀಯ ಆರ್ಥಿಕ ಪರಿಸ್ಥಿತಿಗಳ ವಸ್ತುನಿಷ್ಠ (!) ಸಮೀಕ್ಷೆಗಳನ್ನು ನಡೆಸುತ್ತಲೇ ಇದ್ದರು – ಸರಕಾರ ಈ ವಿಚಾರದಲ್ಲಿ ಹಾಕಿದ್ದ ಲಕ್ಷ್ಮಣ ರೇಖೆಯನ್ನು ದಾಟದೇನೇ. ದಾಟಿದರೆ ಏನಾಗಬಹುದು ಎನ್ನುವ ಯೋಚನೆ ಬಹಳ ಮುಂದಿಗಿದ್ದುದರಿಂದಲೇ, ವಿಚಾರಕ್ಕೂ – ಕ್ರಿಯೆಗೂ ಪ್ರಾಮಾಣಿಕ ಸಂಬಂಧ ಬೇಕೇ ಎನ್ನುವ ಪ್ರಶ್ನೆಯನ್ನು ದೂರವಿರಿಸಿದರೆ ಕ್ಷೇಮ ಎನ್ನುವ ತಿಳಿವಳಿಕೆ (!) ಯಿತ್ತು. ನಮ್ಮ ವಿಚಾರಗಳಿಗೆ ನಮ್ಮ ವೈಯಕ್ತಿಕವಾದ ಬದುಕಿನಲ್ಲಿ, ತೀರ ಆತ್ಮೀಯವಾದ

ಪ್ರಪಂಚದಲ್ಲಿ ಉತ್ತರ ಹುಡುಕಬೇಕಾಗುವುದು ಎನ್ನುವ ಸಮಸ್ಯೆ ನಮಗೆ ಭಯ ಪಡಿಸುವಾಗ ನಮ್ಮ ವಿಚಾರವಾದಿಗಳ ಬದ್ಧತೆ ಯಾವ ಮೌಲ್ಯಗಳಿಗೆ ಎಂದು ನಾವು ಪ್ರಶ್ನಿಸಬೇಕಾಗುತ್ತದೆ.

ತುರ್ತುಪರಿಸ್ಥಿತಿಯ ಆರಂಭದ ದಿನಗಳಲ್ಲೆ ಮುಂಬಯಿಯ ಕರ್ನಾಟಕ ಸಂಘ / ಸಾಹಿತ್ಯ ಕೂಟ ಏರ್ಪಡಿಸಿದ್ದ ಒಂದು ಸಭೆ. ಶ್ರೋತೃಗಳು ಇಪ್ಪತ್ತೈದೋ ಮೂವತ್ತೋ ಮಂದಿ. ಉಪನ್ಯಾಸಕರು ವಿದೇಶ ಪ್ರವಾಸ ಮುಗಿಸಿಬಂದಿದ್ದ ಡಾ॥ ಶ್ರೀನಿವಾಸ ಹಾವನೂರು ಅವರು. ಅವರ ಉಪನ್ಯಾಸದ ವಿಷಯ ಅವರ ಪ್ರವಾಸಕ್ಕೆ ಸಂಬಂಧಪಟ್ಟದ್ದು; ಮುಖ್ಯವಾಗಿ ಸಾಹಿತ್ಯಕ್ಕೆ, ಗ್ರಂಥಾಲಯಗಳಿಗೆ, ಮ್ಯೂಸಿಯಂಗಳಿಗೆ ಸಂಬಂಧಿಸಿದಂಥ ಅನುಭವಗಳು. ಸಭೆ ಆರಂಭವಾಗುವುದಕ್ಕೆ ಮೊದಲು ಬಂದು ಒಂದು ಕುರ್ಚಿಯನ್ನು ಸ್ವಲ್ಪ ದೂರಕ್ಕೆಳೆದು ಕುಳಿತ ಪೋಲಿಸು ಸಬ್‌ಇನ್ಸ್‌ಪೆಕ್ಟರ್ ಒಬ್ಬರನ್ನು ಕಂಡಾಗ ಈ ಲೇಖಕ ದಂಗಾಗಿದ್ದ. ''ಇವರಿಗೂ ಈ ಉಪನ್ಯಾಸದಲ್ಲಿ ಆಸಕ್ತಿಯೆ ?'' ಎಂದು ಆ ಸಭೆಯ ಸಂಘಟಕರನ್ನು ಕೇಳಿದಾಗ ಅವರು ನಕ್ಕು ಉತ್ತರ ಹೇಳಿದ್ದರು : ''ಈಗ ಅವರಿಗೆ ತಿಳಿಸದೆ ಯಾವ ಸಭೆಯನ್ನೂ ನಡೆಸುವಂತಿಲ್ಲ'' ಎಂದು. ಇದು ಒಂದು ಉದಾಹರಣೆ. ಸರ್ವಾಧಿಕಾರದ ಅಹಂಕಾರದ ಪ್ರಜ್ಞೆ ತುರ್ತು ಪರಿಸ್ಥಿತಿಯ ನೆಪದಿಂದ ಆರಂಭದಲ್ಲಿ ಹೊರಡಿಸಿದ ಆದೇಶದಲ್ಲಿ ಯಾವ ತಾರತಮ್ಯ ಜ್ಞಾನವೂ ಇರಲಿಲ್ಲ; ಎಂಥ ಅಭಿಪ್ರಾಯವೂ ಭಿನ್ನಾಭಿಪ್ರಾಯವಾಗಬಹುದು. ಎಂಥ ಅಭಿಪ್ರಾಯವೂ ಅರಾಜಕತೆ (!)ಯನ್ನೇ ಪ್ರಚೋದಿಸಬಹುದು ಎನ್ನುವ ತಿರಸ್ಕಾರ ಭಾವವಷ್ಟೆ ಇಲ್ಲಿ ಮುಖ್ಯ. ಇದಕ್ಕೆ ನಮ್ಮ ಪ್ರತಿಕ್ರಿಯೆಯೇನಿತ್ತು ? ''ನೀವು ಇಲ್ಲಿಂದ ಹೊರಡದೆ ನಾವು ಸಭೆ ನಡೆಸುವುದಿಲ್ಲ'' ಎಂದು ಸಭೆಯನ್ನೆ ಬರಖಾಸ್ತು ಮಾಡಿಯೇವು ಎಂದು ಹೇಳುವ ಚೈತನ್ಯವನ್ನು ತಂದುಕೊಳ್ಳಲಿಲ್ಲ. ಈ ಆದೇಶ ನಮ್ಮ ಅಂದಿನ ಸಭೆಯ ವಿಚಾರಗಳಿಗೆ ಸಂಬಂಧಿಸಿಲ್ಲವಾದ ಕಾರಣ ನಾವೇಕೆ ಯೋಚನೆ ಮಾಡಬೇಕು ಎನ್ನುವ ಔದಾಸೀನ್ಯವೇ, ಅಥವಾ ನಮ್ಮ ನಿರುಪದ್ರವಿ ಸಭೆಗೂ ಗೌರವ ಕೊಡುವಂಥ ಬುದ್ಧಿ ಸರಕಾರಕ್ಕೆ ಬಂತು ಎನ್ನುವ ಪ್ರಜ್ಞೆ ನಮ್ಮ ಅಹಂಕಾರದೊಂದಿಗೆ ಕಚಕುಳಿಯಾಡಿತೆ ! ಕಾರಣವೇನಿದ್ದರೂ, ಪ್ರಜಾಸತ್ತಾತ್ಮಕವೆನಿಸುವ ಲೋಕನೀತಿಗೆ ತೀರ ವಿರುದ್ಧವಾದ ಅಧಿಕಾರಶಾಹಿಯೇ ಒಂದು ಪ್ರಬಲ ವ್ಯವಸ್ಥೆ ಯಾಗಿರುತ್ತದೆ ಎನ್ನುವ ಭಾವನೆ ಬಂದಂಥ ಸಂದರ್ಭದಲ್ಲೂ ನಾವು ನಮ್ಮ ವೈಚಾರಿಕತೆ ಕ್ರಿಯಾಶೀಲವೆನ್ನುವುದನ್ನೇ ತೋರಿಸಿ ಕೊಟ್ಟದ್ದೇವೆ.

ತುರ್ತುಪರಿಸ್ಥಿತಿ ಹೇರಲ್ಪಟ್ಟ ಗಳಿಗೆಯಲ್ಲಿ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಬೇಡಿ ಬಿದ್ದಾಗ, ಭಾರತೀಯ ಪತ್ರಿಕೆಗಳು ನಡೆದುಕೊಂಡ ರೀತಿಯನ್ನು (ಕೆಲವು ಆಕ್ಷೇಪಗಳನ್ನುಳಿದು) ಈಗ ಅಧಿಕಾರದಲ್ಲಿರುವ ಸರಕಾರದ ಮಂತ್ರಿಯೊಬ್ಬರು ಚೆನ್ನಾಗಿ ವಿವರಿಸಿದ್ದಾರೆ; ''ಬಗ್ಗಿ ಎಂದಾಗ ಡೊಗ್ಗು ಸಲಾಂ ಹಾಕಲೂ ಹಿಂಜರಿಯಲಿಲ್ಲ'' ಎಂದು. ''ಬಗ್ಗು'' ಎಂದು ಹೇಳುವಂಥ ಅಧಿಕಾರವೇ ನಿಮಗಿಲ್ಲವೆಂದು ಅನ್ಯಾಯದ ಅಧಿಕಾರಕ್ಕೆ ತಿಳಿಸಿ ಹೇಳುವಂಥ ಎದೆಗಾರಿಕೆಯನ್ನು ಪತ್ರಿಕೆಗಳು ತೋರಲಿಲ್ಲ. ಜೂನ್

1975ರಿಂದ ಒಂದು ತಿಂಗಳ ಕಾಲ ಭಾರತದ ಎಲ್ಲ ಪ್ರಮುಖ ದೈನಿಕಗಳೂ ಈ ರೀತಿಯ ಪ್ರತಿಭಟನೆಯನ್ನು ತೋರಿಸಿದ್ದರೆ, ತುರ್ತುಪರಿಸ್ಥಿತಿ 'ನರಕ' ವಾಗುತ್ತಿರಲಿಲ್ಲವೇನೊ. ಒಂದು ತಿಂಗಳ ಮಾತೇಕೆ, ಎರಡು ವಾರಗಳ ಕಾಲ ಸರಕಾರದ ಅನ್ಯಾಯದ ಆಜ್ಞೆಗಳ ವಿರುದ್ಧ ಪ್ರತಿಭಟನೆಯನ್ನು ತೋರಲು ಯಾವ ಪತ್ರಿಕೆಯೂ ಪ್ರಕಟ ವಾಗುವುದಿಲ್ಲವೆಂದಾಗಿದ್ದರೆ, ಅಂದಿನ ಕಂಗಾಲ ಅವಸ್ಥೆಯಲ್ಲಿ ಜನತೆಗೆ ನಿಜಸ್ಥಿತಿಯ ಅರಿವಾದರೂ ಆಗುತ್ತಿತ್ತು. ಆದರೆ ಹೀಗಾಗಲಿಲ್ಲ. ಹೆಚ್ಚಿನ ಪತ್ರಿಕೆಗಳೆಲ್ಲ ಸ್ಥಾಪಿತ ಹಿತಾಸಕ್ತಿಗಳ ಕೈಗೂಸುಗಳಾಗಿದ್ದುದರಿಂದ ಇದು ಕಷ್ಟದ ಕೆಲಸವಾಗಬಹುದಿತ್ತು. ಆದರೆ ಅಭಿಪ್ರಾಯ ಸ್ವಾತಂತ್ರ್ಯದ ಕುರಿತು ಉದ್ದುದ್ದ ಸಂಪಾದಕೀಯ ಬರೆಯುವ ಸಂಪಾದಕರಿಗೂ ಕೆಲಸಕ್ಕೆ ತಿಲಾಂಜಲಿ ಕೊಟ್ಟಾದರೂ, ಸೆರಮನೆ ಸೇರಿಯಾದರೂ ಈ ಅಗ್ನಿಪರೀಕ್ಷೆಯಲ್ಲಿ ಗೆದ್ದು ಬರಬೇಕು ಎಂದು ತೋರಲಿಲ್ಲ. ಆಗ ಉಳಿದಿದ್ದುದು ಅದೊಂದೇ ದಾರಿ ಎನ್ನುವ ಭಾವನೆ ಬರಲಿಲ್ಲ. ಅಧಿಕಾರಶಾಹಿಯೇ ಒಂದು ಪ್ರಬಲ ವ್ಯವಸ್ಥೆ ಯಾದಂಥ ಸಂದರ್ಭದಲ್ಲೂ ವ್ಯವಸ್ಥೆಯೊಂದಿಗೆ ಹೊಂದಿಕೊಳ್ಳದೆ ವಿಧಿಯಿಲ್ಲವೆನ್ನುವ ಭಾವನೆಯನ್ನು ನಮ್ಮ ಸಾಮಾಜಿಕ ಆಗುಹೋಗುಗಳ ವಸ್ತುನಿಷ್ಠ ವಿಮರ್ಶೆಯನ್ನು ಮಾಡುವ ಹೊಣೆಗಾರಿಕೆಯನ್ನು ವಹಿಸಿದವರೂ ಆಶ್ರಯಿಸುವಂತಾದರೆ, ನಮ್ಮ ದೇಶಕ್ಕೆ ದೇವರೇ ಗತಿಯೆನ್ನಬೇಕು.

ಈ ದುರಂತಕ್ಕೆ ಮುಖ್ಯ ಕಾರಣವನ್ನು ನಮ್ಮ ಪತ್ರಿಕೆಗಳ ಸಂಚಾಲಕ/ಸಂಪಾದಕ ವರ್ಗಗಳ ಮನೋಧರ್ಮದಲ್ಲಿ ಹುಡುಕಬೇಕಾಗಿದೆ. ಅವರಿಗೆ ಅಭಿಪ್ರಾಯ ಸ್ವಾತಂತ್ರ್ಯ ಆದರ್ಶವಾಗುವುದು ಅವರ ವೈಯಕ್ತಿಕ ಹಿತಗಳಿಗೆ ಧಕ್ಕೆ ತಾರದಾಗ ಮಾತ್ರ. ಈ ಸ್ವಾತಂತ್ರ್ಯವನ್ನು ಕಾಯಲು ಎಂಥ ತ್ಯಾಗಕ್ಕೂ ಸಿದ್ಧರಾಗಬೇಕಾಗಬಹುದು ಎನ್ನುವ ಭಾವನೆಯೂ ಅವರಲ್ಲಿಲ್ಲ. ಅಷ್ಟೇ ಅಲ್ಲದೆ ಈ ಸ್ವಾತಂತ್ರ್ಯವನ್ನು ಕಾಯುವ ಹೊಣೆಗಾರಿಕೆಯಂತೆಯೇ ಈ ಸ್ವಾತಂತ್ರ್ಯವನ್ನು ಪ್ರಕಟಿಸುವ ಕೆಲಸವೂ ತುಂಬ ಜವಾಬ್ದಾರಿಯದ್ದು ಎನ್ನುವ ವಿಚಾರದ ಬಗೆಗೂ ಅವರಲ್ಲಿ ಸ್ಪಷ್ಟ ತಿಳಿವಳಿಕೆಯಿದ್ದಂತಿಲ್ಲ. ನಮ್ಮ ಕೆಲವು ಸಾಹಿತ್ಯ ವಿಮರ್ಶಕರಂತೆಯೇ ನಮ್ಮ ಹೆಚ್ಚಿನ ಸಂಪಾದಕರೂ ನಮ್ಮ ಪರಿಸರವನ್ನೂ, ಆ ಪರಿಸರಕ್ಕಿರುವ ಐತಿಹಾಸಿಕ ಆವಶ್ಯಕತೆಗಳನ್ನೂ ಗಮನಿಸದೇನೇ ಪಶ್ಚಿಮದಲ್ಲಿ ಪ್ರಚಲಿತವಿರುವ, ಅಲ್ಲಿನ ಸಮಾಜದ ಬೆಳವಣಿಗೆಯಲ್ಲೆ ಮೂಡಿ ಬಂದಿರುವ ವೈಚಾರಿಕ ತತ್ವಗಳನ್ನು ಇಲ್ಲಿಯೂ ಬಳಸಿಕೊಳ್ಳುತ್ತಾರೆ; ಹೀಗೆ ಬಳಸಿಕೊಳ್ಳು ವುದರಿಂದ ಅದರ ಪರಿಣಾಮ ಹಿತವಾಗದು ಎಂಬ ಎಚ್ಚರವಿರದೇನೇ. ಇಲ್ಲಿ ಒಂದು ಸಣ್ಣ ಉದಾಹರಣೆಯಿದೆ. ಹಿಂದೆ, ಎಷ್ಟೋ ವರ್ಷಗಳ ಹಿಂದೆ, ಮುಂಬಯಿಯಲ್ಲಿ 'ಶಿವಸೇನೆ'ಯ ಆರಂಭದ ದಿನಗಳಲ್ಲಿ, ಈ ಸಂಸ್ಥೆಯ ಚಟುವಟಿಕೆಗಳಿಗೆ ಅನಗತ್ಯ ವೆನಿಸುವಷ್ಟು ಪ್ರಚಾರವನ್ನು ಒಂದು ಹಿರಿಯ ಆಂಗ್ಲ ದೈನಿಕ ಕೊಡುತ್ತಿದ್ದಾಗ, ನಾನು ಈ ಪತ್ರಿಕೆಯ ಸಂಪಾದಕ ವರ್ಗದಲ್ಲಿದ್ದ ಒಬ್ಬರು ಮಿತ್ರರೊಡನೆ "ಈ ಪ್ರಚಾರವೇ ಈ ಸಂಸ್ಥೆಯನ್ನು ಬೆಳೆಸುವುದಿಲ್ಲವೆ?" ಎಂದು ಕೇಳಿದ್ದೆ. ಅದಕ್ಕೆ ಅವರು ಕೊಟ್ಟಿದ್ದ ಉತ್ತರ ಇದು. "ಯಾವುದೇ ಸಂಸ್ಥೆಯ ಚಟುವಟಿಕೆ ಸುದ್ದಿಯಾದಾಗ ನಮಗೆ ಅದನ್ನು

ಕಡೆಗಣಿಸಲಾಗುವುದಿಲ್ಲ'' ಎಂದು. ಇದು ಪಶ್ಚಿಮದ ಪತ್ರಿಕಾಧರ್ಮ. ಇಲ್ಲಿ ನಾವು ಗಮನಿಸಬೇಕಾದ ವಿಚಾರ ಇದು: ಭಾರತದಲ್ಲಿ ಆಂಗ್ಲ ಪತ್ರಿಕೆಗಳಿಗೆ ಅಸ್ವಾಭಾವಿಕವೆನಿಸುವ ಹಿರಿತನದ ಪಟ್ಟವಿದೆ. ಸಾಕ್ಷರತೆ ಕಡಿಮೆಯಿರುವ ನಮ್ಮ ನಾಡಿನಲ್ಲಿ, ಹಲವಾರು ಭಾಷೆಗಳನ್ನಾಡುವ ಜನರಿರುವ ನಮ್ಮ ನಾಡಿನಲ್ಲಿ, ಇಂಗ್ಲೀಷೇ ಸಂಪರ್ಕ ಭಾಷೆಯಾಗಿರುವಾಗ, ದ್ವೇಷವನ್ನೇ ಪ್ರಚೋದಿಸಬಹುದಾದಂಥ ಒಂದು ಸಂಸ್ಥೆಯ ಚಟುವಟಿಕೆಗಳಿಗೆ 'ಸುದ್ದಿ'ಯ ಹೆಸರಿನಲ್ಲಿ ಅವಾಸ್ತವ ಮಹತ್ವ ಕೊಡುವುದು ಸರಿಯೇ? ಎಂದು. ಬಹುಭಾಷಾ ನಗರವಾದ ಮುಂಬಯಿಯಲ್ಲಿ ಇತರ ಭಾಷೆಗಳನ್ನಾಡುವ ಜನರು ಇಂಗ್ಲೀಷಿನ ಪತ್ರಿಕೆಗಳನ್ನೇ ಆಶ್ರಯಿಸುವಾಗ, ಪರಸ್ಪರ ದ್ವೇಷವನ್ನು ಪ್ರೋತ್ಸಾಹಿಸುವ ಇಂಥ ಸುದ್ದಿಗಳಿಗೆ ಅತ್ಯಂತ ಕಡಿಮೆ ಮಹತ್ವವನ್ನು ಕೊಡುವುದರಲ್ಲಿ ಪ್ರಕಟಣಾ ಸ್ವಾತಂತ್ರ್ಯಕ್ಕೆ ಚ್ಯುತಿ ಬರುತ್ತಿರಲಿಲ್ಲ. ಆದರೆ ಹಾಗಾಗಲಿಲ್ಲ. ಮುಂದೆ 1975ರಲ್ಲಿ ಎಲ್ಲ ರೀತಿಯ ಅಭಿಪ್ರಾಯ ಸ್ವಾತಂತ್ರ್ಯಕ್ಕೂ ಚ್ಯುತಿಯಿದೆ ಎಂದು ಅಧಿಕಾರ ಹಾಗೆ ಸಾರಿದಾಗ, ಇದೇ ಪತ್ರಿಕೆಗೆ 'ಸುದ್ದಿ'ಯನ್ನು ಸುದ್ದಿಯಾಗಿಯೇ ಪ್ರಕಟಿಸಬೇಕು ಎನ್ನುವ ಧೈರ್ಯ ಬರಲಿಲ್ಲ. ಇದಕ್ಕೆ ಬೇರೆ ಟೀಕೆ ಬೇಕೇ!

ಆಂಗ್ಲ ಭಾಷೆಗೂ ನಮಗೂ ಇರುವ ಸಂಬಂಧದಲ್ಲಿ ಸ್ವಲ್ಪ ಮಟ್ಟಿನ ಚಿತ್ತದಾಸ್ಯ ಬೆರೆತಿರುವಂತೆಯೇ, ಅಧಿಕಾರದ ಕುರಿತ ಚಿತ್ತದಾಸ್ಯ, ತುರ್ತುಪರಿಸ್ಥಿತಿಗೆ ಕಾರಣವಾದ ನಮ್ಮ ಸಾಮಾಜಿಕ ದುರಂತದ ಇನ್ನೊಂದು ಮುಖ. ಶ್ರೀಮತಿ ಇಂದಿರಾ ಗಾಂಧಿ ಎಲ್ಲಿ ಎಡವಿಬಿದ್ದರು ಎಂದು ಈಗ ಸಾಕಷ್ಟು ಟೀಕಿಸುವ ಟೀಕಾಕಾರರು ಅವರ ಅಧಿಕಾರದ ಅವಧಿಯಲ್ಲಿ ಅಂಥ ನಿರ್ಭೀತ(!) ಟೀಕೆಗೆ ಮನಗೊಡಲಿಲ್ಲ. ಇದು ತುರ್ತು ಪರಿಸ್ಥಿತಿಯ ಅನಂತರದ ಮಾತ್ರವಲ್ಲ, ಅದಕ್ಕೂ ಮೊದಲು ಇಂಥ ಟೀಕೆ ಬರುತ್ತಿದ್ದುದು ತೀರ ಅಪರೂಪವಾಗಿ. ಸ್ವಂತ ಹಿತಕ್ಕೆ ಘರ್ಷಣೆ ಬರುವಂಥ ಟೀಕೆಯಿಂದ ಪ್ರಯೋಜನವಿಲ್ಲವೆನ್ನುವುದು ಅನುಭವದ ಮಾತಾಗಿತ್ತೇನೋ. ಇಲ್ಲವಾದರೆ, ಇಂದು ಬೆಳಕಿಗೆ ಬರುತ್ತಿರುವಂಥ ಅಧಿಕಾರದ ದುರುಪಯೋಗದ ನಿದರ್ಶನಗಳು, ತುರ್ತು ಪರಿಸ್ಥಿತಿಯ ಹಿಂದೆಯೂ ಇರಲಿಲ್ಲವೆ! ಆಗ ಅವುಗಳನ್ನು ಬಯಲಿಗೆಳೆದು ಟೀಕಿಸುವುದು ಪತ್ರಿಕಾಧರ್ಮವಾಗಿರಲಿಲ್ಲವೆ! ಈಗ ಒಮ್ಮಿಂದೊಮ್ಮೆಗೇ ಸಾವಿರ ತಪ್ಪುಗಳು ಕಾಣಿಸುವಾಗ, ಇಂಥ ತಪ್ಪುಗಳನ್ನು ಬೆಳೆಸಲು ತಮ್ಮ ಕರ್ತವ್ಯಲೋಪವೂ ಕಾರಣವೆನ್ನುವ ಪ್ರಜ್ಞೆ ಇನ್ನೂ ಹೆಚ್ಚಿನ ಪತ್ರಿಕಾಕರ್ತರಲ್ಲಿ ಬಂದಂತಿಲ್ಲ.

ಅಧಿಕಾರದ ವರ್ಚಸ್ಸಿಗೆ ಅತಿಯಾದ ಮಹತ್ವ ಕೊಡುವಾಗಲೂ ಕರ್ತವ್ಯಲೋಪದ ಆಕ್ಷೇಪ ಬರುವುದು ಎನ್ನುವ ಹೊಣೆಗಾರಿಕೆಯನ್ನೂ ಪ್ರದರ್ಶಿಸದ ಪತ್ರಿಕೆಗಳು ತಮ್ಮ ಸ್ವಾತಂತ್ರ್ಯಕ್ಕೆ ಬಂದ ಕೊಡಲಿಯೇಟಿನ ಬಗ್ಗೆ ಕಣ್ಣೀರು ಸುರಿಸಿ ಪ್ರಯೋಜನವೂ ಇಲ್ಲ. ಸಂಜಯ ಗಾಂಧಿಯಯವರ ಅಧಿಕಾರ ಬಾಹ್ಯ ವರ್ಚಸ್ಸಿಗೂ ನಮ್ಮ ಪತ್ರಿಕೆಗಳ ಹೊಣೆಗಾರಿಕೆಯೆಷ್ಟು ಎಂಬುದನ್ನು ವಿಮರ್ಶಿಸುವುದು ಅಗತ್ಯ. ಸರಕಾರದ ಪ್ರಚಾರ ಮಾಧ್ಯಮಗಳನ್ನು ಕಡೆಗಣಿಸಿದರೂ, ಇತರ ಪತ್ರಿಕೆಗಳು ಅವಾಸ್ತವ ಮಹತ್ವವನ್ನು ಕೊಟ್ಟುದು ಅವರ ವೈಯಕ್ತಿಕ ಪ್ರತಿಭೆಯ ಹಿನ್ನೆಲೆಯಲ್ಲೆ? ಕಾರ್ಯಕ್ರಮಗಳ

ಹಿನ್ನೆಲೆಯಲ್ಲಿ? ಅವರ ರಾಜಕೀಯ ಜೀವನದ ಆರಂಭದ ದಿನಗಳಲ್ಲಿ ನಮ್ಮದೇ ಆದ ವಾರ್ತಾ ಸಂಸ್ಥೆಯೊಂದು ಒಂದು ಸುದ್ದಿಯನ್ನು ಪ್ರಕಟಿಸಿತ್ತು; ಬಿಹಾರ ರಾಜ್ಯ ನೆರೆಯ ಉಪದ್ರವವನ್ನು ಅನುಭವಿಸುತ್ತಿದ್ದಾಗ – ಆ ಸುದ್ದಿ ಹೀಗಿತ್ತು : ''ಶ್ರೀಮಾನ್ ಸಂಜಯ ಗಾಂಧಿಯವರು, ಬಿಹಾರದ ಮುಖ್ಯಮಂತ್ರಿಗಳ ಜತೆಗೆ ನೆರೆಯಿಂದ ಪೀಡಿತವಾದ ಪ್ರದೇಶಗಳನ್ನು ವಿಮಾನದ ಮೂಲಕ ಪರೀಕ್ಷಣೆ ನಡೆಸಿದರು'' ಎಂದು. ಪ್ರಜಾಸತ್ತಾತ್ಮಕ ನೀತಿಗನುಗುಣವಾಗಿ ಚುನಾಯಿತರಾಗಿ ಮಿಲಿಯಗಟ್ಟಲೆ ಜನರಿರುವ ಒಂದು ರಾಜ್ಯದ ಮಂತ್ರಿ, ಅಧಿಕಾರವಿರುವ ಒಂದು ವ್ಯಕ್ತಿಯ ಜತೆಗೆ, (ಎಂದರೆ ಎರಡನೆಯ ಸ್ಥಾನದಲ್ಲಿ) ನೆರೆಯಿಂದ ಪೀಡಿತವಾದ ಜಾಗಗಳ ಪರೀಕ್ಷಣೆ ನಡೆಸಿದರು ಎನ್ನುವಂಥ ಅರ್ಥ ಬರುವ ಸುದ್ದಿಯನ್ನು ಪ್ರಕಟಿಸಲು ನಮ್ಮ ಪತ್ರಿಕೆಗಳಿಗೆ ಕೆಡುಕೆನಿಸಲಿಲ್ಲ. ಪಶ್ಚಿಮದಲ್ಲಾದರೆ, ಇಂಥ ಸುದ್ದಿಯನ್ನು 'ಸಂಪಾದಿಸಿ'ದ ಸುದ್ದಿಗಾರನಿಗೆ ಕೂಡಲೇ ಕೆಲಸದಿಂದ 'ಅರ್ಧಚಂದ್ರ' ಸಿಗುತ್ತಿತ್ತು ಎಂಬ ತಿಳುವಳಿಕೆಯೂ ಅವರನ್ನು ಕಾಡಲಿಲ್ಲ. ಇದೇ ಸುದ್ದಿ ಪ್ರಕಟವಾದಾಗ, ಹಿಂದೆ ಸರಕಾರದ ಪ್ರಕಟನ ವಿಭಾಗದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಮಿತ್ರರೊಬ್ಬರು ಈ ಲೇಖಕನೊಡನೆ "This is dangerous" ಎಂದಿದ್ದರು. ಎಲ್ಲರಿಗೂ ಇದು ಒಳ್ಳೆಯ ಶಕುನವಲ್ಲವೆಂಬುದು ತಿಳಿದಿದ್ದರೂ ತಮ್ಮ ಅಸಹಾಯಕತೆಯ ಬಹಿರಂಗ ಪ್ರದರ್ಶನವನ್ನೆ ಮಾಡಿದ್ದ ಪತ್ರಿಕೆಗಳಿಂದ, ನಿರ್ಭೀತವೂ, ಸ್ವತಂತ್ರವೂ, ಬಲಿಷ್ಠವೂ ಆದ ಒಂದು ಸಾಮಾಜಿಕ ವ್ಯವಸ್ಥೆ ಬೆಳೆಯಬೇಕು ಎನ್ನುವ ಕಳಕಳಿಯ ಹಿನ್ನೆಲೆಯಲ್ಲಿ, ಅಭಿಪ್ರಾಯ ಸ್ವಾತಂತ್ರ್ಯದ ರಕ್ಷಣೆ ಎಷ್ಟರ ಮಟ್ಟಿಗೆ ಆದೀತು ಎಂಬುದನ್ನು ನಾವು ಚಿಂತಿಸಬೇಕಾಗಿದೆ.

ಒಬ್ಬ ಪತ್ರಿಕಾಕರ್ತ, ಅರ್ಥಶಾಸ್ತ್ರಜ್ಞ, ಲೇಖಕ, ಬುದ್ಧಿಜೀವಿ, ವಿಜ್ಞಾನಿ, ಇವರೆಲ್ಲ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಿರಬಹುದು. ಆದರೆ ಸ್ವತಂತ್ರವು, ಸದೃಢವೂ, ಆರೋಗ್ಯವಂತವೂ ಆದ ಸಾಮಾಜಿಕ ವ್ಯವಸ್ಥೆ ಬೇಕೆನ್ನುವ ಕಳಕಳಿ ಇವರಿಗೆಲ್ಲ ಇದೆಯಾದರೆ, ಇವರಿಗೆಲ್ಲ, ಮೂಲಭೂತವೆನಿಸುವ್ವ ಮಾನವೀಯ ಹಕ್ಕುಗಳಿಗಿಂತಲೂ ಮೂಲಭೂತವಾದ ಮಾನವೀಯ ಮೌಲ್ಯಗಳ ಬಗೆಗೆ ನಿರ್ದುಷ್ಟವೂ, ನಿರ್ದಿಷ್ಟವೂ, ಪ್ರಾಮಾಣಿಕವೂ ಆದ ಕಳಕಳಿಯಿರಬೇಕಾಗುತ್ತದೆ. ಹಾಗಿದ್ದರೆ ಮಾತ್ರ ಅವರ ವೈಚಾರಿಕತೆಗೆ ಬೆಲೆ ಬರುವುದು. ಇಂಥ ವೈಚಾರಿಕತೆ ಯಾವ ಕಾಲಕ್ಕೂ 'ತಟಸ್ಥ' ವಾಗಿರುವುದಿಲ್ಲ. ಅದು ಸತತ ಕ್ರಿಯಾಶೀಲವಾದುದು. 'ಸಂದರ್ಭ ಬಂದಾಗ ಶಸ್ತ್ರ ಹಿಡಿಯಲು ಕೂಡ ಹಿಂಜರಿಯದಂಥ' ಕ್ರಿಯಾಶೀಲತೆ ಅದರ ಮುಖ್ಯ ಗುಣವೆಂದೇ, ಬಾಂಗ್ಲಾ ದೇಶದಲ್ಲಿ ಮಾನವೀಯ ಮೌಲ್ಯಗಳ ಕೊಲೆಯಾಗುತ್ತಿದ್ದ ಕಾಲದಲ್ಲಿ ಸುಪ್ರಸಿದ್ಧ ಫ್ರೆಂಚ್ ಲೇಖಕ ದಿ|| ಆಂದ್ರ ಮಾಲರಕ್ಸ್, ತನ್ನ ಮುದಿ ವಯಸ್ಸಿನಲ್ಲೂ ಮಾನವೀಯ ಮೌಲ್ಯಗಳ ರಕ್ಷಣೆಗೆಂದೆ ನಡೆಯುತ್ತಿರುವ 'ಬಾಂಗ್ಲಾ ಯುದ್ಧ'ದಲ್ಲಿ ಭಾಗವಹಿಸಲು ತಾನು ಸಿದ್ಧನಿದ್ದೇನೆ ಎಂದದ್ದು. ಭಾರತದ ಎಷ್ಟು ಜನ ಬುದ್ಧಿಜೀವಿಗಳು ಈ ರೀತಿಯ ಧೈರ್ಯವನ್ನು 1971ರಲ್ಲಿ ಪ್ರಕಟಿಸಿದ್ದರೆಂದು ನಾವು ನಮ್ಮನ್ನೇ ಕೇಳಬೇಕು; ತುರ್ತುಪರಿಸ್ಥಿತಿಯ ದಿನಗಳನ್ನು ಮರೆತರೂ.

ತುರ್ತುಪರಿಸ್ಥಿತಿಯ ದುರಂತದ ದಿನಗಳಲ್ಲಿ ಭಾರತದ ಬುದ್ಧಿಜೀವಿ

ಗಳೆನಿಸುವವರಲ್ಲಿ ಬಹು ಮಂದಿ ನಡೆದುಕೊಂಡ ರೀತಿ, ಹಿಂದೆ ನಡೆದುಕೊಳ್ಳುತ್ತಿದ್ದ ರೀತಿಗಳಿಗಿಂತ. ಪ್ರಾಯಶಃ ಇನ್ನು ಮುಂದೆಯೂ ನಡೆದುಕೊಳ್ಳಬಹುದಾದ ರೀತಿಗಿಂತ, ಭಿನ್ನವಾಗಿರಲಿಲ್ಲವೆಂದೆ ಹೇಳಬಹುದೇನೋ. ಯಾಕೆಂದರೆ ನಮ್ಮ ಸಮಾಜ, ಅದರ ಐತಿಹಾಸಿಕ ಗತಿಗನುಗುಣವಾಗಿ ಜಲಸ್ತಂಭಿತ ಅಲೆಗಳಲ್ಲಿ ಸುಳಿದಾಡುತ್ತಿರುವಂತೆಯೇ, ನಮ್ಮ ಚಿಂತನೆ ಕೂಡ ಸಂಕುಚಿತ ಕ್ಷೇತ್ರಗಳಲ್ಲಿಯೇ ಸುಳಿದಾಡುತ್ತಿದೆ. ಇದರ ಉಪಯೋಗ ಪಡೆದವರು ರಾಜಕಾರಣಿಗಳು. 'ರಾಜಾ ಪ್ರತ್ಯಕ್ಷ ದೇವತಾ' ಎಂದು ನಂಬಿಕೊಂಡಿದ್ದ ನಾಡಲ್ಲಿ ದೇಶೀಯ ಸಂಸ್ಥಾನದ ಪ್ರಜೆಗಳ ಪರಿಸ್ಥಿತಿ ಯಾವ ಗತಿಗಿಳಿದಿತ್ತು ಎಂದು ನಮ್ಮ ಸ್ವಾತಂತ್ರ್ಯಪೂರ್ವದ ಇತಿಹಾಸ ಸಾರಿ ಹೇಳಿದರೂ, ಸ್ವಾತಂತ್ರ್ಯ ಬಂದ ಮೇಲೂ ಈ ಭಾವನೆ ದೇಶೀಯ ಸಂಸ್ಥಾನಗಳಲ್ಲಷ್ಟೇ ಅಲ್ಲ, ಭಾರತದಾದ್ಯಂತ ಹರಡಿದೆಯೇನೋ ಎನ್ನುವಂಥ ತಿಳಿವಳಿಕೆ ಬರುವಂತಿದೆ. ಒಂದು ಸಣ್ಣ ಬದಲಾವಣೆಯೆಂದರೆ, ಹಿಂದಿನ ರಾಜ ಈಗಿನ ರಾಜಕಾರಣಿಯಾಗಿದ್ದಾನೆ, ಅಷ್ಟೆ. ಈ ಅಹಂಕಾರ ರಾಜಕಾರಣಿಗಳಲ್ಲಿ ಮೊಳೆಯಲು, ಸಾಕ್ಷರತೆ ಕಡಿಮೆಯಿರುವ ನಮ್ಮ ನಾಡಲ್ಲಿ ದಿನವೂ ಅರೆಹೊಟ್ಟೆ ಉಪವಾಸಗಳಿಂದಲೇ ದಿನ ಕಳೆಯುತ್ತಿರುವ, ಸ್ವಾತಂತ್ರ್ಯ ಬಂತೆಂದು ಮತದಾನದ ಅಧಿಕಾರವನ್ನು ಮಾತ್ರ ಗಳಿಸಿಕೊಂಡಿರುವ ಮಿಲಿಯಗಟ್ಟಲೆ ಬಡಪಾಯಿ ಪ್ರಜ್ಞೆಗಳಷ್ಟೇ ಕಾರಣರಲ್ಲ. ರಾಜಕಾರಣಿಗಳ ಮೇಲೆ ಅಂಕುಶವಿಡಬೇಕಾದಂಥ ಪತ್ರಿಕೆಗಳೂ, ಬುದ್ಧಿಜೀವಿಗಳೂ ಕಾರಣರಾಗಿದ್ದಾರಾದ ಕಾರಣ, ತುರ್ತು ಪರಿಸ್ಥಿತಿಗೆ ನಮ್ಮ ಹೊಣೆಗಾರಿಕೆಯೂ ಎಷ್ಟೆಂದು ಯೋಚಿಸುವುದು ಅಗತ್ಯವಲ್ಲವೆ! ಇಲ್ಲಿ ಕೂಡ ಪತ್ರಿಕೆಗಳ ಮನೋಧರ್ಮಕ್ಕೆ ಕನ್ನಡಿ ಹಿಡಿಯುವ ಒಂದು ಉದಾಹರಣೆಯನ್ನು ಪ್ರಸ್ತಾಪಿಸುವ ಮನಸ್ಸಾಗುತ್ತಿದೆ. ಎಷ್ಟೋ ವರ್ಷಗಳ ಹಿಂದೆ ಮುಂಬಯಿಯ ಕನ್ನಡಿಗರು, ಕನ್ನಡದ ಹಿರಿಯ ಲೇಖಕ ಬುದ್ಧಿಜೀವಿ ಕಾರಂತರಿಗೆ, ಅವರ 'ಯಕ್ಷಗಾನ ಬಯಲಾಟ'ಕ್ಕೆ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ದೊರಕಿದ ಸಂದರ್ಭದಲ್ಲಿ, ಒಂದು ಸತ್ಕಾರ ಸಮಾರಂಭವೇರ್ಪಡಿಸಿದ್ದರು. ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದುದು ಮುಂಬಯಿಯ ಶಿಕ್ಷಣ ತಜ್ಞ ಕನ್ನಡಿಗರೊಬ್ಬರು. ಅಭಿನಂದನ ಭಾಷಣ ಮಾಡಿದವರಲ್ಲಿ ಒಬ್ಬ ಕನ್ನಡಿಗರು ಮಾತ್ರ ಮುಂಬಯಿ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದವರು. ಉಳಿದ ಮೂವರು ಸಾಹಿತಿಗಳು/ಪ್ರಾಧ್ಯಾಪಕರು, ಇತ್ಯಾದಿ .... ಸಭೆ ಮುಗಿದ ಮೇಲೆ, ಈ ಸಭೆಯ ವರದಿ ಬರೆಯಲು ಉತ್ಸುಕರಾಗಿದ್ದ ಪಿ.ಟಿ.ಐ. ಪ್ರತಿನಿಧಿಯೊಬ್ಬರು (ಅವರೂ ಕನ್ನಡಿಗರೇ) ಈ ಲೇಖಕನ ಬಳಿ ಬಂದು ಭಾಷಣ ಮಾಡಿದವರೆಲ್ಲರ ವಿವರ ಕೇಳಿದ್ದರು ..... ಎಂದರೆ ಅವರು ವಿವರ ಕೇಳಿದ್ದದು, ಬಿ.ಪಿ.ಸಿ.ಸಿ.ಯ ಅಧ್ಯಕ್ಷರ ಹೊರತು ಭಾಷಣ ಮಾಡಿದವರಲ್ಲಿ ಬೇರೆ ಗಣ್ಯ ರಾಜಕಾರಣಿಗಳು ಯಾರಾದರೂ ಇದ್ದಾರೆಯೇ ಎಂಬ ಸಂದೇಹವನ್ನು ಪರಿಹರಿಸಿಕೊಳ್ಳಲು ಮಾತ್ರ. ನಾನು ಹೆಸರು ವಿವರ ಹೇಳತೊಡಗಿದಾಗ ಅವರು ಯಾವ ಸಂಕೋಚವೂ ಇಲ್ಲದೆ ಹೇಳಿದ್ದರು : "No, no, we are not interested in Professors and others" ಎಂದು. ಮರುದಿನ ಪ್ರಕಟವಾದ ವರದಿಯಲ್ಲೂ ''ಬಿ.ಪಿ.ಸಿ.ಸಿ.ಯ ಅಧ್ಯಕ್ಷರೂ ಇತರರೂ ಮಾತನಾಡಿದರು'' ಎಂದಿಷ್ಟೆ ಪ್ರಕಟವಾಗಿತ್ತು.

ಇದು ಒಂದು ಸಣ್ಣ ಉದಾಹರಣೆಯಷ್ಟೆ. ಒಂದು ಸಾರ್ವಜನಿಕ ಸಮಾರಂಭಕ್ಕೆ ಕಳೆಬರುವುದು ರಾಜಕಾರಣಿಯಿದ್ದರೆ ಮಾತ್ರ; ಹಾಗಿದ್ದರಷ್ಟೆ ಆ ಸಭೆ ವರದಿಗೆ ಯೋಗ್ಯವೆನ್ನುವಂಥ ಮನೋಭಾವವನ್ನು ನಮ್ಮ ಸ್ವಾತಂತ್ರ್ಯದ ಐತಿಹಾಸದಲ್ಲಿ ಹೇಸಿಕೆ ಬರಿಸುವಷ್ಟು ಪ್ರಕಟಿಸಿರುವ ಪತ್ರಿಕೆಗಳಿಗೆ, ಪತ್ರಿಕಾಕರ್ತರಿಗೆ, ತುರ್ತುಪರಿಸ್ಥಿತಿಯ ನಿರಂಕುಶಾಡಳಿತೆ ತಾವೇ ತಂದುಕೊಂಡ ಚಡಿಯೇಟು ಎಂದು ಏಕೆ ತಿಳಿಯುವುದಿಲ್ಲ! ಇದು ಪತ್ರಿಕೆಗಳಿಗಷ್ಟೆ ಅಂಟಿದ ರೋಗವಲ್ಲ. ನಮ್ಮ ಸಾರ್ವಜನಿಕ ಜೀವನಕ್ಕೇ ಅಂಟಿರುವ ಪಿಡುಗು.... ಯಾವ ಸಭೆ ಸಮಾರಂಭ ಜರುಗಿದರೂ ರಾಜಕೀಯ ವ್ಯಕ್ತಿಗಳನ್ನು (ಅಧಿಕಾರದಲ್ಲಿರುವವವರನ್ನು) ಕರೆದು ವಿಘ್ನೇಶ್ವರ ಪೂಜೆ ಮಾಡುವ ದುರ್ಬುದ್ಧಿ ನಮ್ಮ ಜೀವನಕ್ರಮ ಎನಿಸುವಮಟ್ಟಿಗೆ ನಾವು ನೆಚ್ಚಿಕೊಂಡಿರುವಾಗ, ಅಧಿಕಾರ ಅಧಿಕಾರವಾಗಿಯೇ ಉಳಿದು, ಬೆಳೆದು ಸರ್ವಾಧಿಕಾರವಾಗುತ್ತದೆ. ನಮಗೆ ವರ್ಷದ ಆರಂಭದಲ್ಲಿ ಪ್ರತಿ ವರ್ಷ ಜರಗುವ ವಿಜ್ಞಾನಿಗಳ ಪರಿಷತ್ತಿಗೂ ಪ್ರಧಾನ ಮಂತ್ರಿಯೇ ಉದ್ಘಾಟಕರಾಗಿ ಬರಬೇಕು. ಜವಾಹರಲಾಲ ನೆಹರೂರವರಿಗೆ ವಿಜ್ಞಾನದಲ್ಲಿದ್ದ ಆಸಕ್ತಿಯನ್ನು ಗುರುತಿಸಿ ಗೌರವಿಸಬೇಕೆಂದು ಒಮ್ಮೆ ಕರೆದರೂ, ಅದೇ ಸಂಪ್ರದಾಯ ವಾಗಿ ಮುಂದುವರಿಯಬೇಕೇ! ಶ್ರೀಮತಿ ಗಾಂಧೀಯವರ ವೈಜ್ಞಾನಿಕ ಕುತೂಹಲ ಪ್ರಕಟವಾಗತೊಡಗಿದುದು ಅವರು ಅಧಿಕಾರಕ್ಕೆ ಬಂದ ಮೇಲಷ್ಟೆ; ಅದರ ಮೊದಲಲ್ಲ. ಇದು ವಿಜ್ಞಾನಿಗಳ ಪರಿಷತ್ತಿಗಷ್ಟೆ ಸಂಬಂಧಿಸಿದುದಲ್ಲ. ವಾಣಿಜ್ಯೋದ್ಯಮಿಗಳ ವಾರ್ಷಿಕ ಅಧಿವೇಶನಕ್ಕೂ ಪ್ರಧಾನ ಮಂತ್ರಿಯೇ ಆಗಮಿಸಬೇಕು. ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಅಧಿವೇಶನಗಳಾದರೆ, ರಾಜ್ಯದ ಮುಖ್ಯಮಂತ್ರಿ ಬಂದರೇನೇ ಭೂಷಣ. ಅವರಿಗೆ ಸಾಧ್ಯವಾಗದೆ ಹೋದರೆ ಇತರ ಮಂತ್ರಿಗಳು, ಅವರವರ ಯೋಗ್ಯತೆ, ಪ್ರಯೋಜನಗಳಿಗೆ ಸಂಬಂಧಿಸಿದಂತೆ, ಇಂಥವರು ಬಾರದೆ ಹೋದರೆ ಸಭೆಯ ಯೋಗ್ಯತೆ ಹೆಚ್ಚುವುದಿಲ್ಲ, ಪತ್ರಿಕೆಗಳು ವರದಿ ಮಾಡುವುದಿಲ್ಲ; ಆ ಕಾರಣ ಸಭೆ ಸಮಾರಂಭ ನಡೆದರೂ ನಡೆಯದಂತೆಯೇ ಎನ್ನುವ ಭಾವನೆ ಸಾರ್ವತ್ರಿಕವಾಗಿದೆ. ನಮ್ಮೆಲ್ಲ ಕೆಲಸಗಳಿಗೂ ಸರಕಾರದ ನೆರವು ಬೇಕಿರುವಾಗ, ಇದನ್ನು ಸಾಧ್ಯ ಮಾಡಿಸಿಕೊಡಬೇಕಾದವರನ್ನು ನಮ್ಮ ಸಭೆ ಸಮಾರಂಭಗಳಿಗೆ ಕರೆತಂದರೇನೇ ಕೆಲಸ ಸಾರ್ಥಕವಾಗುತ್ತದೆನ್ನುವ ಅವಿವೇಕವನ್ನು ಸ್ವಾತಂತ್ರ್ಯ ಬಂದಂದಿನಿಂದಲೂ ಪ್ರದರ್ಶಿಸುತ್ತಲೇ ಬಂದಿರುವ ನಮಗೆ ಸ್ವಾತಂತ್ರ್ಯದ ಬೆಲೆಯೇ ತಿಳಿದಿಲ್ಲವೆನ್ನುವುದು ಸರಿಯಾದ ಮಾತಾದೀತು. ಆದರೆ ಬ್ರಿಟಿಷರು ಬಿಟ್ಟುಹೋದ ಅಧಿಕಾರದ ದರ್ಪದ ಬಳುವಳಿಯನ್ನು ಪಡೆದು, ಅದು ಸರಿಯೇ ಎಂದು ವಿಮರ್ಶಿಸುವ ಪ್ರಜ್ಞೆಯನ್ನು ಬಿಟ್ಟುಕೊಟ್ಟಿರುವ ನಮಗೆ, ಪರಂಪರಾಗತವಾದ, ಪಿತೃಪ್ರಧಾನ ಕುಟುಂಬ ಪದ್ಧತಿಯ ವಿಧೇಯತೆಯ ಗುಣವನ್ನೇ ರಕ್ತಗತ ಮಾಡಿಕೊಂಡಿರುವ ನಮಗೆ, ವೈಚಾರಿಕ ಸ್ವಾತಂತ್ರ್ಯ ಇನ್ನೂ ಕನಸಿನ ಗಂಟಾಗಿಯೇ ಉಳಿದಿದೆ. ಈ ದೌರ್ಬಲ್ಯವೇ ಸರ್ವಾಧಿಕಾರಕ್ಕೆ ಎಡೆಮಾಡಿಕೊಡುವಂಥದು ಎಂಬ ತಿಳಿವಳಿಕೆ ನಮಗೆ ಇನ್ನೂ ಮೂಡಿದಂತಿಲ್ಲ.

ಆರ್ಥಿಕವಾಗಿ, ಸಾಮಾಜಿಕವಾಗಿ ನಮ್ಮಲ್ಲಿರುವ ವರ್ಗ ಭೇದಗಳಿಗಿಂತಲೂ ಹೆಚ್ಚಿನ

ವರ್ಗಭೇದಗಳನ್ನು ಇಂದು ನಾವೇ ಸೃಷ್ಟಿಸಿಕೊಂಡಿದ್ದೇವೆ. ಪ್ರತಿಯೊಂದು ವರ್ಗಕ್ಕೂ, ಪ್ರತಿಯೊಂದು ಗುಂಪಿಗೂ ತನ್ನ ಸ್ವಾತಂತ್ರ್ಯದ ಅರ್ಥ ತನ್ನ ಹಿತರಕ್ಷಣೆಯಷ್ಟೆ ಎಂದು ಹೊಳೆಯತೊಡಗುವಾಗ, ಸಾಮಾಜಿಕ ಹಿತವೂ ತನ್ನ ಸ್ವಾರ್ಥದ ಕೈಗೂಸೆಂದೇ ಭಾಸವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಯಾವಾಗಲೂ, ಪ್ರಬಲವಾದ ವರ್ಗದ, ಗುಂಪಿನ ಸ್ವಾರ್ಥದ್ದೇ ಮೇಲುಗೈ ....

ನಮ್ಮ ರಾಜಕಾರಣಿಗಳಿಗೆ ಎಲ್ಲಿಯತನಕ ಲೋಕಸತ್ತಾತ್ಮಕವೆನಿಸುವ ರಾಜ್ಯ ಪದ್ಧತಿಯಲ್ಲಿ ಪ್ರಧಾನ ಪಾತ್ರಧಾರಿಗಳು ತಾವೇ ಎಂಬ ಭಾವನೆ ತೊಲಗುವುದಿಲ್ಲವೋ, ಅಥವಾ ಅದನ್ನು ತೊಲಗಿಸಲು ನಮ್ಮ ಪತ್ರಿಕೆಗಳು, ಬುದ್ಧಿಜೀವಿಗಳು, ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳು ಕಾರಣರಾಗುವುದಿಲ್ಲವೋ ಅಲ್ಲಿಯತನಕ ನಮ್ಮ ಸ್ವಾತಂತ್ರ್ಯಕ್ಕೂ ವೈಚಾರಿಕ ಸ್ವಾತಂತ್ರ್ಯಕ್ಕೂ ಅರ್ಥವಿಲ್ಲ. ಹಿಂದೆಯೇ ಹೇಳಿದಂತೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಬುದ್ಧಿಜೀವಿಗಳೆನಿಸಿಕೊಂಡವರ ಸಾಹಿತ್ಯಿಕ ಸಭೆಗಳಿಗೂ, ತುರ್ತುಪರಿಸ್ಥಿತಿಗೆ ಕಾರಣರಾದ ಮುಖಂಡರನ್ನೇ ಕರೆಸುವ ದುರ್ಬುದ್ಧಿ ಬಂದಿತ್ತು. ಅಂಥವರ ಪ್ರಾಮಾಣಿಕತೆಗೆ ಬೆಲೆ ಕಟ್ಟುವುದು ಹೇಗೆ? ಸರ್ವಾಧಿಕಾರದ ಶಕ್ತಿಯನ್ನೆ ದುರ್ಗಾಮಾತೆಯ ಶಕ್ತಿಯೆಂಬಂತೆ ಚಿತ್ರಿಸಿ ಅದರ ಪ್ರಚಾರ ಸರಕಾರದ ವಾರ್ತಾ ಮಾಧ್ಯಮಗಳ ಮೂಲಕ ಆಗತೊಡಗಿದಾಗ, ಇಂಥ ಸುದ್ದಿಗಳಿಗೆ 'ಕತ್ತರಿ' ಪ್ರಯೋಗವನ್ನಾದರೂ ಮಾಡೋಣವೆಂದೂ ನಮ್ಮ ಪತ್ರಿಕೆಗಳಿಗೆ ಹೊಳೆಯಲಿಲ್ಲ. ಹಾಗೆಯೇ ಒಂದು ಸಾಹಿತ್ಯ ಸಮಾರಂಭದಲ್ಲಿ ತುರ್ತುಪರಿಸ್ಥಿತಿಗೆ ಕಾರಣರಾದ ಮುಖಂಡರೇ ಮುಖ್ಯ ಅತಿಥಿಯಾಗಿ ಬಂದಿದ್ದಾಗ, ಮಹಾರಾಷ್ಟ್ರದ ಪ್ರಸಿದ್ಧ ಲೇಖಕಿ/ವಿದುಷಿ ಶ್ರೀಮತಿ ಭಾಗವತ್ ಆಗ ಇದ್ದಂಥ ನಮ್ಮ ಸಾಮಾಜಿಕ ಪರಿಸ್ಥಿತಿಯನ್ನು ಖಂಡಿಸಿದಾಗ, ಒಕ್ಕೊರಲಿನಿಂದ ಅವರನ್ನು ಸಮರ್ಥಿಸೋಣವೆನ್ನುವ ಬುದ್ಧಿ ಆ ಲೇಖಕ ಸಮುದಾಯಕ್ಕೆ ಬರಲಿಲ್ಲ. ನಮ್ಮವರೇ ಆದ ಕಾರಂತರು ಸರ್ವಾಧಿಕಾರದ ವಿರುದ್ಧ ಪ್ರತಿಭಟನೆಯೆಂದು ತನಗೆ ಸರಕಾರ ಕೊಟ್ಟಿದ್ದ ಗೌರವ ವಿಶೇಷವಾದ 'ಪದ್ಮಭೂಷಣ'ವನ್ನು ಹಿಂದಿರುಗಿಸಿದಾಗ, ಕನ್ನಡದ ಲೇಖಕ ವರ್ಗ ಸಂತೋಷವನ್ನು ಪ್ರಕಟಿಸುವ ಯಾವ ಚಿಹ್ನೆಯನ್ನೂ ತೋರಲಿಲ್ಲ. ಕನ್ನಡದ್ದೇ ಆದ ಪ್ರಯೋಗ 'ರಾಷ್ಟ್ರೋತ್ಥಾನ ಪರಿಷತ್ತಿ'ನ ಪ್ರಕಟಣೆಗಳಿಗೆ ಸರಕಾರದ ಬೀಗಮುದ್ರೆ ಬಿದ್ದಾಗ, ಅದು ನಮ್ಮೆಲ್ಲರ ಬುದ್ಧಿಗೇ ಬಿದ್ದಿರುವ ಬೀಗ ಮುದ್ರೆಯೆಂಬ ವಿಚಾರವೂ ಹೊಳೆಯಲಿಲ್ಲ. ಶ್ರೀಮತಿ ಭಾಗವತರ ಬಂಧನದ ನಂತರ ಅವರ ಬಿಡುಗಡೆಯನ್ನು ಬೇಡುವ ಮನವಿಯೊಂದನ್ನು ಆಗಿನ ಪ್ರಧಾನ ಮಂತ್ರಿಯವರಿಗೆ ಕಳುಹಿಸುವ ಒಂದು ಸಾರ್ವತ್ರಿಕ ಪ್ರಯತ್ನವಾದರೂ ನಡೆದಿತ್ತು. ಆದರೆ ಎಷ್ಟು ಮಂದಿ 'ಸಹಿ ಮಾಡಿ ಕಳುಹಿಸಿ' ಎಂದು ಬಂದಿದ್ದ ಇಂಥ ಕಾಗದಕ್ಕೆ ಸಹಿ ಮಾಡಿ ಕಳುಹಿಸಿದರೋ, ಅಥವಾ ನಮಗೇಕೆ ವೃಥಾ ತೊಂದರೆ ಎಂದು ಅದನ್ನು ಹರಿದು ಬಿಸುಡಿದರೋ ದೇವರಿಗೇ ಗೊತ್ತು. ಆದರೆ 'ರಾಷ್ಟ್ರೋತ್ಥಾನ'ದ ವಿಚಾರ ಇಂಥದೊಂದು ಮನವಿ ಕೂಡ ಹೊರಡಲಿಲ್ಲ.

ತುರ್ತುಪರಿಸ್ಥಿತಿಯ ದುರ್ದಿನಗಳ ಇತಿಹಾಸದ ಹಿನ್ನೆಲೆಯಲ್ಲಿ ನಮ್ಮ ಸ್ವಾತಂತ್ರ್ಯದ

ಇತಿಹಾಸದ ಮೂವತ್ತು ವರ್ಷಗಳಲ್ಲಿ ಅಧಿಕಾರದ ಮತ್ತು ಬೌದ್ಧಿಕ ನಾಯಕತ್ವವನ್ನು ಒದಗಿಸಿಕೊಡಬೇಕಾದ ಬುದ್ಧಿಜೀವಿಗಳೆನಿಸಿಕೊಳ್ಳುವವರ ಪರಸ್ಪರ ಸಂಬಂಧವನ್ನು ವಿಮರ್ಶಿಸುವ ಅಗತ್ಯವಿದೆ. ಈ ಸಂಬಂಧದ ಹಿನ್ನೆಲೆಯಲ್ಲಿ ಅವರ ಪ್ರಾಮಾಣಿಕತೆಯನ್ನು ವಿಮರ್ಶಿಸಬೇಕಾಗಿದೆ. ನಮ್ಮ ಸಾಹಿತ್ಯ, ಸಂಗೀತ, ನಾಟಕ, ಕಲೆಗಳಿಗೆ ಸಂಬಂಧಿಸಿದ ಅಕಾಡೆಮಿಗಳಾಗಲೀ, ಸರಕಾರದ ನೆರವಿನಿಂದ ದೂರವಿದ್ದು ಮುಂದುವರಿಯುತ್ತಿರುವ ಸಾಹಿತ್ಯಿಕ ಅಥವಾ ಲಲಿತ ಕಲೆಗಳಿಗೆ ಸಂಬಂಧಿಸಿದ ಸಂಸ್ಥೆಗಳಾಗಲೀ ನಿರ್ಭೀತವೂ ಸ್ವತಂತ್ರವೂ ಆದ ವಿಚಾರದ ಆಗರಗಳಾಗಿ ಬೆಳೆದೇ ಇಲ್ಲ. ಹೀಗೆಂದೇ ತುರ್ತು ಪರಿಸ್ಥಿತಿಯ ಕಾಲದಲ್ಲಿ ''ನಮ್ಮ ನೆರವಿನಿಂದ ಬದುಕುತ್ತಿರುವವರು ನೀವು ಬೇರೆ ದೇಶಗಳಲ್ಲಾದರೆ ವಿರೋಧದ ದನಿಯೆತ್ತುವ ನಿಮ್ಮಂಥವರಿಗೆ ಗುಂಡಿನೇಟೇ ಸಿಗುತ್ತಿತ್ತು'' ಎಂಬರ್ಥದ ಮಾತನ್ನಾಡುವ ಧೈರ್ಯ ಒಬ್ಬ ಮುಖ್ಯಮಂತ್ರಿಗೆ ಬಂದಿತ್ತು. ಅವರ ಹುಚ್ಚಿನ ಮಾತು ಕೇಳಿ ರೊಚ್ಚಿಗೇಳುವ ಮೊದಲು, ಅವರ ಮಾತಿನ ಪೂರ್ವಾರ್ಧದಲ್ಲಿ ಸತ್ಯಾಂಶವೆಷ್ಟು, ಉತ್ತರಾರ್ಧದಲ್ಲಿ ಸತ್ಯಾಂಶವೆಷ್ಟು ಎಂದು ನಾವೇ ಯೋಚಿಸುವುದೊಳಿತು. ಸರಕಾರದ ಪುರಸ್ಕಾರಗಳಿಗಾಗಿ, ಸರಕಾರದ ನೆರವಿನ ಸಂಸ್ಥೆಗಳ ಕೃಪಾಶ್ರಯಕ್ಕಾಗಿ ಏನನ್ನೂ ಬರೆಯಲು, ಏನನ್ನೂ ಮಾಡಲು ಸಿದ್ಧರಿರುವ ಲೇಖಕರ ತಂಡಗಳೇ ಇರುವಾಗ, ಈ ಆರ್ಥಿಕ ಪ್ರಯೋಜನ ನಮ್ಮ ಬದುಕಿಗೆ ಎಷ್ಟು ಹಿತವಾಗುತ್ತದೆ ಎಂಬ ಸ್ವಾರ್ಥದ ಬೆಳಕಿನಲ್ಲೇ ನಾವು ಜೀವನವನ್ನು ವಿಮರ್ಶಿಸುವಾಗ, ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೌಲ್ಯಗಳ ಗೊಡವೆ ನಮಗೇಕೆ? ಇನ್ನು ವಿರೋಧದ ದನಿ: ಬೌದ್ಧಿಕ ವಿಚಾರ ಗಳನ್ನು ಬೌದ್ಧಿಕ ಮಾನದಂಡದಿಂದಲೇ ವಿಮರ್ಶಿಸಬೇಕಾದ ಅಗತ್ಯವಿರುವಾಗ, ಹೊಲಸು ರಾಜಕಾರಣಕ್ಕೆ ಸಾಹಿತಿಗಳೇಕೆ ಇಳಿಯಬೇಕು ? ಆ ಕಾರಣ ವಾದ ವಿವಾದಗಳಿರುವಲ್ಲಿ ದೂರವಿದ್ದು ಸ್ವಾರ್ಥ ಸಾಧಿಸಿಕೊಳ್ಳುವುದರಲ್ಲಿ ಕ್ಷೇಮ ಎಂದು ನಮ್ಮ ಬುದ್ಧಿಜೀವಿಗಳು ಅರಿತಿರುವಾಗ ವಿರೋಧದ ದನಿಯೆಲ್ಲಿ? ಒಬ್ಬ ದೇಶಪಾಂಡೆ, ಅಂಥ ಇನ್ನೊಬ್ಬರೋ ಎರಡು ಜನರೋ ವಿರೋಧದ ದನಿಯೆತ್ತಬಹುದು. ಸಾರ್ವತ್ರಿಕ ವಿರೋಧ ಯಾವ ಕರ್ಮಕ್ಕೆ? ಎಂದು ಬುದ್ಧಿಜೀವಿಗಳು ಭಾವಿಸಿದುದರಿಂದಲೇ, ಆ ಮುಖ್ಯಮಂತ್ರಿಯ ಅಂಥ ಹೇಳಿಕೆ ಒಂದೆರಡು ದಿನ ಕೆಲವು ಪತ್ರಿಕೆಗಳ ಕೆಲವು 'ಕಾಲಂ'ಗಳಿಗೆ ವಸ್ತುವಾಯಿತು ಅಷ್ಟೆ. ಇದು ಭಾರತೀಯ ಲೇಖಕ ವರ್ಗಕ್ಕೇ ಅಪಮಾನವೆನ್ನುವ ಭಾವನೆ ಆ ಸಂದರ್ಭದಲ್ಲಿ ಪ್ರಕಟವಾಗಲಿಲ್ಲ; ಆಮೇಲೆಯೂ ಪ್ರಕಟವಾಗಲಿಲ್ಲ. ಈ ಒಂದು ಸಣ್ಣ ಸನ್ನಿವೇಶವನ್ನೆ ಮತ್ತೆ ನೆನಪಿಸಿಕೊಳ್ಳುವಾಗಲೂ ಭಾರತೀಯ ಲೇಖಕನಾರು, ಭಾರತೀಯ ಬುದ್ಧಿಜೀವಿ ಯಾರು – ಭಾರತವೆಂದರೇನು ಎಂದು ಕೇಳುವ ಮನಸ್ಸೂ ಆಗುತ್ತಿದೆ.

●

ಸ್ವಾತಂತ್ರ್ಯಕ್ಕೆ ಐವತ್ತು ವರ್ಷಗಳಾಗಿವೆ. ಈ ಅವಧಿಯಲ್ಲಿ ನಮ್ಮ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕ – ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿ ಸಾಧನೆಯಾಗಿದೆ. ನಮ್ಮ ಶಕ್ತಿಯನ್ನು, ಪ್ರಯತ್ನಗಳನ್ನು ನಿರಂತರ ಮುಂದುವರಿಯುತ್ತಿರುವ ದೇಶ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ.

ಆದರೆ ನಮ್ಮ ಆದರ್ಶಗಳು ಸಾಕಾರಗೊಂಡಿವೆಯೆ? ರಾಷ್ಟ್ರೀಯ ವೆನಿಸುವ ಪರಿಕಲ್ಪನೆಗಳನ್ನು ಯುಕ್ತ ರೀತಿಯಲ್ಲಿ ರೂಪಿಸಿದ್ದೇವೆಯೆ! ನಮ್ಮ ಕಾರ್ಮಿಕರ, ರೈತರ, ಸರ್ಕಾರಿ ನೌಕರರ, ಅಧಿಕಾರಿಗಳ, ಹಣವಂತರ ದೃಷ್ಟಿಯಲ್ಲಿರುವ ರಾಷ್ಟ್ರೀಯ ಪರಿಕಲ್ಪನೆ ಯಾವ ರೀತಿಯದು ? ಪ್ರಜಾಪ್ರಭುತ್ವವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮ ಹೊಣೆಯನ್ನು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೆ ? ನಮ್ಮದೇ ಗುಂಪು, ಜಾತಿ, ಸಮೂಹದ ಹಿತರಕ್ಷಣೆ ಮಾಡುತ್ತ, ಮಾನವೀಯತೆಯನ್ನು ದೂರ ಸರಿಸು ತ್ತಿದ್ದೇವೆಯೆ ? ಮೇಲ್ನೋಟಕ್ಕೆ ಒಂದಾಗಿ ಬಾಳುತ್ತಿರುವ ನಾವು ನಮ್ಮ ಮಧ್ಯೆ ಬೆಳೆಯುತ್ತಿರುವ ಗೋಡೆಯನ್ನು ಉರುಳಿಸಲು ಸಮರ್ಥ ರಾಗಿದ್ದೇವೆಯೆ ? ನಮ್ಮದೇ ರಾಷ್ಟ್ರೀಯ ಸ್ವಭಾವವನ್ನು, ಅಸ್ಮಿತೆಯನ್ನು ರೂಪಿಸಿ ಬೆಳೆಸಿಕೊಂಡಿದ್ದೇವೆಯೆ? ನಮ್ಮ ನಾಗರಿಕ ಪ್ರಜ್ಞೆ ಯಾವ ಬಗೆಯದು ?

ಈ ಸಂದರ್ಭದಲ್ಲಿ ಇಂಥ ಅತಿ ಮುಖ್ಯವಾದ ಪ್ರಶ್ನೆಗಳನ್ನು ನಮ್ಮ ಮುಂದಿರಿಸಿ ನಮ್ಮನ್ನು ಆಲೋಚನೆಗೆ ತೊಡಗುವಂತೆ ಮಾಡುತ್ತಾರೆ, ನಮ್ಮ ಹಿರಿಯ ಪ್ರಜ್ಞಾವಂತ ಲೇಖಕರಾದ ಶ್ರೀ ವ್ಯಾಸರಾಯ ಬಲ್ಲಾಳರು. ಅವರದು ಸೂಕ್ಷ್ಮವಾದ ವಿಚಾರವನ್ನು ಪ್ರಚೋದಿಸುತ್ತ, ಆತ್ಮಾವಲೋಕನಕ್ಕೆ ಪ್ರೇರೇಪಿಸುವ ಲೇಖನಿ. ಸ್ವಾತಂತ್ರ್ಯೋತ್ತರ ಅವಲೋಕನ ಮಾಲೆಯಲ್ಲಿ ಇದು ಪ್ರಕಟವಾಗುತ್ತಿರುವುದು ಉಪಯುಕ್ತವಾಗಿದೆ, ಸೂಕ್ತವಾಗಿದೆ.

ರೂ. 35

ISBN 81-7302-330-1